ಸಂಪುಟ ೧

ಸಂಚಿಕೆ ೨

ಮಾನವಿಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜುಲೈ, ೧೯೭೭

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ, ಹಾಗೂ ಅನುವಾದಿತ ಲೇಖನಗಳನ್ನು 'ಮಾನವಿಕ ಭಾರತಿ'ಯಲ್ಲಿ ಪ್ರಕಟಿಸಲಾಗುವುದು. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ, ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

೨ ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು. ಲೇಖಕರು ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಬೇಕು. ಲೇಖನವನ್ನು ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೩ ಲೇಖನಕ್ಕೆ ಅವಶ್ಯವಾದ ಚಿತ್ರಗಳಿದ್ದರೆ ಅವನ್ನು ಕಲಾಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಯಿಸಿ ಕಳುಹಿಸಬೇಕು.

೪ ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

೫ ಲೇಖಕರಿಗೆ ಅಚ್ಚಾದ ಅವರ ಲೇಖನದ ೨೫ ಪ್ರತಿಗಳನ್ನು ಒದಗಿಸಲಾಗುವುದು. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

೬ ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಮಾನವಿಕ ಭಾರತಿ', ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸಬಯಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೭ ಮಿಕ್ಕ ವಿವರಗಳಿಗೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ–ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦೦೦೩** ಇವರಿಗೆ ಬರೆಯಬೇಕು.

ಮಾನವಿಕ ಭಾರತಿ

ಷಾಣ್ಮಾಸಿಕ ಪತ್ರಿಕೆ

ಸಂಪುಟ : ೧ ಸಂಚಿಕೆ : ೨

ಪ್ರಧಾನ ಸಂಪಾದಕರು :

ಡಾ. ಎ. ಎಂ. ರಾಜಶೇಖರಯ್ಯ

ಸಹಾಯಕ ಸಂಪಾದಕರು :

ಡಾ. ಕೆ. ಜಿ. ಗುರುಮೂರ್ತಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾನವಿಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ಷಾಣ್ಮಾಸಿಕ ಪತ್ರಿಕೆ

ಸಂಪುಟ : ೧ ಸಂಚಿಕೆ : ೨

ಜುಲೈ, ೧೯೭೭

ಸಂಪಾದಕ ಮಂಡಲ :

ಡಾ॥ ಎ. ಎಂ. ರಾಜಶೇಖರಯ್ಯ (ಪ್ರಧಾನ ಸಂಪಾದಕರು)
ಡಾ॥ ಎಸ್. ಶೆಟ್ಟರ
ಡಾ॥ ಎಸ್. ಎಚ್. ರಿತ್ತಿ
ಡಾ॥ ಟಿ. ಕೆ. ನೋಟಿ
ಶ್ರೀ ಜಿ. ಎಸ್. ಬಿದರಕೊಪ್ಪ
ಶ್ರೀ ಸಿ. ಎಸ್. ಕಣವಿ (ಕಾರ್ಯದರ್ಶಿಗಳು)
ಡಾ॥ ಕೆ. ಜಿ. ಗುರುಮೂರ್ತಿ (ಸಹಾಯಕ ಸಂಪಾದಕರು)

ಪ್ರಕಾಶಕರು :

ಶ್ರೀ ಸಿ. ಎಸ್. ಕಣವಿ
ನಿರ್ದೇಶಕರು, ವ್ಯಾಸಂಗವಿಸ್ತರಣ–ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಶ್ರೀ ಜಿ. ಬಿ. ಮನ್ವಾಚಾರ
ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ – ೫೮೦೦೦೩

ಪರಿವಿಡಿ

ಮಾನವನ ವಿಕಾಸ

● ಎಸ್. ಎ. ಅವರಾದಿ

ಮನುಷ್ಯ ಎಂದರೆ ಯಾರು? ಎಲ್ಲಿಂದ ಮತ್ತು ಹೇಗೆ ಹುಟ್ಟಿಬಂದನು? ಎಂಬ ಪ್ರಶ್ನೆಗಳು ಆದಿಕಾಲದಿಂದಲೂ ಬುದ್ಧಿಜೀವಿಗಳನ್ನು, ತತ್ವಜ್ಞಾನಿಗಳನ್ನು ಮತ್ತು ಧರ್ಮಗುರುಗಳನ್ನು ಬಾಧಿಸುತ್ತಲೇ ಬಂದಿವೆ. ಪೃಥ್ವಿಯ ಮೇಲಿನ ಅಖಂಡ ಕೋಟಿ ಜೀವರಾಶಿಯಲ್ಲಿ ಮಾನವನೂ ಒಂದು ಪ್ರಾಣಿ. ಆದರೆ ಇವನು ಬುದ್ಧಿಜೀವಿ ಎನಿಸಿಕೊಂಡು ಉಳಿದ ಪ್ರಾಣಿಗಳಿಂದ ಭಿನ್ನವಾಗಿದ್ದಾನೆ. ಕೋತಿ ಮತ್ತು ವಾನರಗಳು ಮಾನವನ ಅತಿ ಸಮೀಪದ ಬಂಧುಗಳಾಗಿದ್ದು, ಇವುಗಳೊಂದಿಗೆ ಮಾನವನು "ಉಚ್ಚ ವರ್ಗ" (primate) ಎಂಬ ಗುಂಪಿ (order)ಗೆ ಸೇರಿದ್ದಾನೆ. ಮನುಷ್ಯನು ಇಂದು ಭೂಮಿಯ ಮೇಲೆ ಶಕ್ತಿಶಾಲಿ ಮತ್ತು ಜಯಶೀಲ ಪ್ರಾಣಿಯಾಗಿದ್ದಾನೆ. ಅವನ ಈ ಶಕ್ತಿಯು ಬೌದ್ಧಿಕ ಶಕ್ತಿಯಾಗಿರದೆ ಬುದ್ಧಿಶಕ್ತಿಯಾಗಿರುವದು. ಇಂದು ಮನುಷ್ಯನಲ್ಲದೆ ಯಾವ ಪ್ರಾಣಿಯು ಸೃಷ್ಟಿಯನ್ನು ಬದಲಿಸಬಹುದು? ಯಾವ ಪ್ರಾಣಿಯು ಬೇರೆ ಬೇರೆ ಗ್ರಹಗಳಿಗೆ ಪ್ರಯಾಣ ಮಾಡಬಹುದು? ಇಂತಹ ವಿಚಿತ್ರ ಪ್ರಾಣಿಯಾದ ಮನುಷ್ಯನು ಹೇಗೆ ತನ್ನ ಅಸ್ತಿತ್ವವನ್ನು ಪಡೆದನು ಎಂಬ ಪ್ರಶ್ನೆಗಳಿಗೆ ಧಾರ್ಮಿಕ ಮತ್ತು ವೈಜ್ಞಾನಿಕ ರಂಗಗಳಿಂದ ಪರಸ್ಪರ ವಿರುದ್ಧ ಉತ್ತರಗಳನ್ನು ಕೊಡಲಾಗಿದೆ. ಮನುಷ್ಯ ದೇವರಿಂದ ಪರಿಪೂರ್ಣ ರೀತಿಯಲ್ಲಿ ಸೃಷ್ಟಿಯಾದ ಪ್ರಾಣಿ. ಅವನ ಬುದ್ಧಿಶಕ್ತಿಯು ದೇವರ ಕೊಡುಗೆ ಎಂಬ ವಾದವನ್ನು ಧರ್ಮಗುರುಗಳು ಕೊಡುತ್ತಿದ್ದರು. ಈ

ವಾದದ ವಿರುದ್ಧವಾಗಿ ಚಾರ್ಲಸ್ ಡಾರ್ವಿನ್ ಮತ್ತು ಥಾಮಸ್ ಹಕ್ಸಲೆ ಎಂಬ ಜೀವವಿಜ್ಞಾನಿಗಳು ವಿಕಾಸ ವಾದ (theory of evolution)ನ್ನು ಮೊದಲ ಬಾರಿಗೆ ಮಂಡಿಸಿದರು. ಅವರ ವಾದವು ಇಂದು ವೈಜ್ಞಾನಿಕವಾಗಿದ್ದು ಹೆಚ್ಚು ಹೆಚ್ಚು ಸಾಕ್ಷಿ-ಪುರಾವೆಗಳಿಂದ ಸತ್ಯವೆಂದು ಸಾಧಿಸಲ್ಪಟ್ಟಿದೆ.

ಜೀವಿಯು ದಿಢೀರನೇ ತಮ್ಮ ಇಂದಿನ ರೂಪವನ್ನು ತಾಳದೆ ಕೋಟ್ಯಾಂತರ ವರ್ಷಗಳ ರೂಪಾಂತರಗಳಿಂದ ಹಂತಹಂತವಾಗಿ, ಸುಧಾರಿಸಿ ಬೆಳೆದುಬಂದಿವೆ ಎಂಬುವು ವಿಕಾಸವಾದದ ತಿರುಳು. ಈ ವಾದದಂತೆ ಮೊದಲು ಏಕಕೋಶ ಜೀವಿಗಳು ಅಸ್ಥಿತ್ವಕ್ಕೆ ಬಂದವು. ಅವು ವಿಕಾಸ ಹೊಂದಿ ಬಹುಕಣ ಜೀವಿಗಳು ಜನ್ಮತಾಳಿದವು. ಸುಮಾರು ೧೫೦೦ ಮಿಲಿಯನ್ ವರ್ಷಗಳ ಹಿಂದೆ ಏಕಕೋಶ ಜೀವಿಗಳು ಹುಟ್ಟಿಕೊಂಡವು ಎಂದು ನಂಬಲಾಗಿದೆ. ಸುಮಾರು ೧೬೫ ಮಿಲಿಯನ್ ವರ್ಷಗಳ ಹಿಂದೆ ಸಸ್ತನಿ (mammals) ವರ್ಗದ ಪ್ರಾಣಿಗಳು ಕಾಣಿಸಿಕೊಂಡವು. ನಂತರ ಸಸ್ತನಿ ವರ್ಗದ ಉಚ್ಚ ಪ್ರಾಣಿಗಳು (primates) ಸುಮಾರು ೭೫ ಮಿಲಿಯ ವರ್ಷಗಳ ಹಿಂದೆ, ಅಸ್ತಿತ್ವ ಪಡೆದವು. ಈ ಉಚ್ಚ ಪ್ರಾಣಿಗಳ ವಿಕಾಸದಿಂದ ಅತ್ಯುಚ್ಚ ಪ್ರಾಣಿಯಾದ ಮನುಷ್ಯನ ಜನನವಾಯಿತು. ಇಂದು ಕೋತಿಗಳು (apes) ಮನುಷ್ಯನನ್ನು ಬಹಳಮಟ್ಟಿಗೆ ಹೋಲುವದರಿಂದ ಮನುಷ್ಯನು ಕೋತಿಗಳ ಕೂಸು (off sooot) ಎಂದು ತಿಳಿಯಲಾಗಿತ್ತು. ಆದರೆ ಕೋತಿಗಳು ಮನುಷ್ಯನ ನೇರ ಪಿತೃಗಳಾಗಿರದೆ, ಮಾನವ ಮತ್ತು ಕೋತಿಗಳು ಒಂದೇ ಪಿತೃ ಬೊಡ್ಡೆ (parental stalk) ಯಿಂದ ಜನಿಸಿ ಬೇರೆ ಬೇರೆ ಮಾರ್ಗವಾಗಿ ವಿಕಾಸಹೊಂದಿ ಇಂದಿನ ಕೋತಿ ಮತ್ತು ಮನುಷ್ಯರಾಗಿದ್ದಾರೆ. ಆದುದರಿಂದ ಕೋತಿಗಳು ನಮ್ಮ ನೇರ ಪಿತೃಗಳಾಗಿರದೆ ಅಣ್ಣ ತಮ್ಮಂದಿ (cousins)ರಾಗಿದ್ದಾರೆ.

ಮಾನವನ ನಿಜವಾದ ಪಿತೃ ಯಾರು ಮತ್ತು ಅವನ ಕಾಲ ಯಾವದು? ಎಂಬ ವಿಷಯಗಳು ಇನ್ನೂ ನಿರ್ದಿಷ್ಟವಾಗಿ ತಿಳಿದಿಲ್ಲವಾದರೂ ಇಂದಿನ ವರೆಗೆ ದೊರೆತ ಸಾಕ್ಷಿಗಳ ಆಧಾರದ ಮೇಲಿಂದ ಮಾನವಶಾಸ್ತ್ರಜ್ಞರು ತಾತ್ಕಾಲಿಕ ಉಪಪತ್ತಿಗಳನ್ನು ಮಂಡಿಸಿದ್ದಾರೆ. ಒಂದು ವಾದದ ಪ್ರಕಾರ ಮಾನವ ಕುಟುಂಬವು (huminoid family) ಸುಮಾರು ೨೦ ಮಿಲಿಯನ್ ವರ್ಷಗಳ ಹಿಂದೆ ತನ್ನ ಪಿತೃ ಬೊಡ್ಡೆಯಾದ ಡ್ರೈಯೋಪಿಥೆಕಸ್ (Doyopithecus) ದಿಂದ ಬೇರೆಯಾಗಿ ಪ್ರೋಕನ್‌ಸಲ್ (Proconsul) ಎಂಬ ಪ್ರಾಣಿಯಿಂದ ಆರಂಭಿಸಿ ವಿಕಾಸ ಮಾರ್ಗವನ್ನು ಮುಂದುವರೆಸಿತು. ಆದರೆ ಗ್ರಾಹಂ ಕ್ಲಾರ್ಕ (G. Clark), ವಿಲಿಯಂ ಲೀಕಿ (W.Leaky) ಮತ್ತು ಸೈಮನ್ಸ (Simons)

ಮೊದಲಾದವರು ಪ್ರೋಕನ್‌ಸಲ್‌ದ ಪಳವುಳಿಕೆಗಳನ್ನು ಅಭ್ಯಾಸ ಮಾಡಿದಾಗ ಈ ಪ್ರಾಣಿಯು ತನ್ನ ಬಾಹು (Limbs) ಗಳ ರಚನೆಯ ವಿಷಯದಲ್ಲಿ ಮಾತ್ರ ಮಾನವ ಕುಟುಂಬವನ್ನು ಬಹಳವಾಗಿ ಹೋಲುತ್ತಿದ್ದರೂ ದಂತ ರಚನೆಯಲ್ಲಿ ಕೋತಿಗಳನ್ನು ಹೋಲುವದನ್ನು ಕಂಡುಕೊಂಡರು. ಹೀಗಾಗಿ ವಿಜ್ಞಾನಿಗಳು ಇನ್ನೂ ಹಿಂದಿನ ಕಾಲದ ಅವಶೇಷಗಳಿಗೆ ಗಮನಹರಿಸತೊಡಗಿದರು. ಸುಮಾರು ೩೦ ಮಿಲಿಯನ್ ವರ್ಷಗಳ ಹಿಂದೆ (Oligocene periodನಲ್ಲಿ) ಜೀವಿಸಿದ ಪ್ರೋಪ್ಲೈಯೋಪಿಥೆಕಸ್ (Propliopithecus)ವು ಮಾನವ ಕುಟುಂಬದ ಪಿತೃವಾಗಿರಬೇಕೆಂದು ಕ್ಯಾಂಪಬೆಲ್ಲರು (೧೯೬೭) ಅಭಿಪ್ರಾಯಪಡುತ್ತಾರೆ.

ಹಲವು ಮಹತ್ವದ ಸಂಗತಿಗಳಲ್ಲಿ ಮಾನವನಿಗೆ ಬಹುಮಟ್ಟಿಗೆ ಹೋಲಿಕೆಯನ್ನು ತೋರಿಸುವ ರಾಮಾಪಿಥೆಕಸ್ ಪಂಜಾಬಿಕಸ್ (Ramapithecus Punjabicus) ಎಂಬ ಪ್ರಾಣಿಯು ಸುಮಾರು ೧೭ ಮಿಲಿಯನ್ ವರ್ಷಗಳ ಹಿಂದೆ ಜೀವಿಸುತ್ತಿತ್ತು. ಲೆವ್ವಿಸರು ಪಂಜಾಬಿನ ಸಿವಾಲಿಕ್ ಗುಡ್ಡದಲ್ಲಿ ರಾಮಾಪಿಥೆಕಸ್‌ದ ದವಡೆ ಮತ್ತು ಕೆಲವು ಹಲ್ಲುಗಳನ್ನು ದೊರಕಿಸಿದರು. ಈ ಜೀವಿಯನ್ನು ಹೋಲುವ ಪ್ರಾಣಿಗಳ ಅವಶೇಷಗಳನ್ನು ಆಫ್ರಿಕಾದಲ್ಲಿಯೂ ಶೋಧಿಸಲಾಗಿದೆ. ಇದರಿಂದ ರಾಮಾಪಿಥಿಕಸ್‌ವು ವಿವಿಧ ಖಂಡಗಳಲ್ಲಿ (Widely distributed) ಜೀವಿಸುತ್ತಿತ್ತು ಎಂಬುದು ತಿಳಿಯುವದು. ಇದು ತನ್ನ ಪ್ರೈಮೇಟ (Primate) ಬಂಧುಗಳಿಗಿಂತ ಮುಂದುವರೆದುದಿದ್ದು ಎರಡೇ ಕಾಲುಗಳ ಮೇಲೆ ನಡೆಯುತ್ತಿತ್ತು. ಇದು ಸಣ್ಣ ಗಾತ್ರದ ಕೋರೆ ಹಲ್ಲುಗಳನ್ನು (Canine teeth) ಹೊಂದಿದೆ ಎಂಬ ಆಧಾರದ ಮೇಲಿಂದ ರಾಮಾಪಿಥಿಕಸ್‌ವು ಮಾಂಸ ಮುಂತಾದ ಜಿಗುಟಾದ ಆಹಾರ ಪದಾರ್ಥಗಳನ್ನು ಹರಿಯಲು ಆಯುಧಗಳನ್ನು ಉಪಯೋಗಿಸಿರಬೇಕು. ಏಕೆಂದರೆ ಕೋತಿಗಳಂತೆ ರಾಮಾಪಿಥಿಕಸ್‌ವು ದೊಡ್ಡ ದೊಡ್ಡ ಕೋರೆ ಹಲ್ಲುಗಳನ್ನು ಪಡೆದಿಲ್ಲ. ಕೋರೆ ಹಲ್ಲಿನ ಕಾರ್ಯವನ್ನು ಆಯುಧಗಳ ಸಹಾಯದಿಂದ ಮಾಡಲಾಗುತ್ತಿತ್ತು. ರಾಮಾಪಿಥಿಕಸ್‌ವು ಎರಡೇ ಕಾಲುಗಳ ಮೇಲೆ ನಡೆಯುತ್ತಿದ್ದುದರಿಂದ ಸ್ವತಂತ್ರವಾದ ಅದರ ಕೈಗಳು ಆಯುಧಗಳನ್ನು ಹಿಡಿಯಲು ಉಪಯೋಗವಾಗುತ್ತಿದ್ದವು. ಇದರ ಸೊಂಟದ (Pelvic) ಎಲಬುಗಳು ಇನ್ನೂ ದೊರೆತಿಲ್ಲ. ಇದು ದೊರೆತ ನಂತರ ಮಾತ್ರ ಈ ಮಾನವಪ್ರಾಣಿಯು ಎರಡು ಕಾಲಮೇಲೆ ನಿಲ್ಲುತ್ತಿತ್ತು ಎಂಬ ಈ ಅಭಿಪ್ರಾಯವನ್ನು ಎತ್ತಿಹಿಡಿಯಬಹುದು.

ಮಾನವನ ವಿಕಾಸದಲ್ಲಿ ಕೆಲವು ನಿರ್ದಿಷ್ಟವಾದ ಒಲವು (Trends) ಗಳಿರುವವು. ಎರಡೇ ಕಾಲುಗಳ ಮೇಲೆ ನಡೆಯುವದು; ದೊಡ್ಡ ಗಾತ್ರದ ಮೆದುಳನ್ನು ಪಡೆಯುವದು; ಕಣ್ಣುಗಳು ಮುಖದ ಮಗ್ಗಲುಗಳಿಂದ ಮುಂದೆ ಬರು

ವದು (Binocular vision) ಹಾಗೂ ಇತರ ಜ್ಞಾನೇಂದ್ರಿಗಳ ವಿಕಾಸ ಬೆಳವಣಿಗೆ ಮತ್ತು ಸಂಸ್ಕೃತಿ (Cnlture) ಯನ್ನು ಹೊಂದುವದು. ಈ ಎಲ್ಲ ಒಲವುಗಳ ನಿರ್ದಶನದಲ್ಲಿ ಮಾನವ ಪ್ರಾಣಿಯು ವಿವಿಧ ಜೈವಿಕ (Biological) ಮತ್ತು ಸಾಮಾಜಿಕ ಬೆಳವಣಿಗೆಗಳನ್ನು ಹೊಂದಿ ಮನುಷ್ಯನಾದನು.

ಮಂಗನಿಂದ ಮಾನವ :

ಮಾನವನ ವಿಕಾಸದಲ್ಲಿ ಅವನು ತನ್ನ ಎರಡೇ ಕಾಲುಗಳ ಮೇಲೆ ನಡೆಯುವ ಗುಣ ಅಥವಾ ಸಾಧನೆಯು (Habit) ಅತಿ ಮುಖ್ಯ ಪಾತ್ರವಹಿಸಿದೆ. ಈ ಸಾಧನೆಯು ಪ್ರಾರಂಭ ಹೇಗಾಯಿತು ಮತ್ತು ಅದರ ಪರಿಣಾಮಗಳಾವವು? ಎಂಬ ಪ್ರಶ್ನೆಗಳಿಗೆ ಉತ್ತರ ದೊರಕಿಸಿದರೆ, ಮಂಗನಿಂದ ಮಾನವನಾದ ಬಗ್ಗೆ ತಿಳಿಯಬಹುದು. ಇಂದು ಕೋತಿಗಳಾದ ಚಿಂಪಾಂಜಿ (Chimpanzee), ಗೋರಿಲ್ಲಾ (Gorilla), ಉರಂಗುಟಾನ್ (Urangutan), ಗಿಬ್ಬನ್ (Gibbon) ಗಳು ನಾಲ್ಕು ಕಾಲುಗಳ ಮೇಲೆ ನಡೆಯುತ್ತಿದ್ದು ಕೆಲವು ಕಾಲ ಮತ್ತು ಸ್ವಲ್ಪ ದೂರದ ವರೆಗೆ, ಎರಡೇ ಕಾಲುಗಳ ಮೇಲೆ ನಡೆಯುವ ಸಾಮರ್ಥ್ಯವನ್ನು ಹೊಂದಿವೆ. ಒಂದು ವೇಳೆ ಮಾನವನ ಪಿತೃಗಳು ಇಂದಿನ ಕೋತಿಗಳಂತೆ ದಟ್ಟವಾದ ಅರಣ್ಯಗಳಲ್ಲಿ ವಾಸಿಸುತ್ತಾ ಬಂದಿದ್ದರೆ ಇಂದು ಮಾನವ ಎಂಬ ಪ್ರಾಣಿಯು ಮನುಷ್ಯನಾಗಿರದೆ ಬಾಲ ಇಲ್ಲದ ಕೋತಿಯಾಗಿಯೇ ಉಳಿಯುತ್ತಿದ್ದ! ಆದರೆ ಅದೃಷ್ಟವಶಾತ್ ಅವರು ದಟ್ಟ ಅಡವಿಯನ್ನು ತೊರೆದು ಹುಲ್ಲುಗಾವಲನ್ನು (Savanna) ಸೇರಿದರು. ಅವರ ಈ ಜಾಣತನಕ್ಕೆ ನಿರ್ದಿಷ್ಠ ಕಾರಣಗಳು ಗೊತ್ತಿಲ್ಲವಾದರೂ ಆಗಿನ ಸೃಷ್ಟಿಯ ಅಭ್ಯಾಸ ಮಾಡಿದರೆ ಕಾರಣ ಅರಿಯಬಹುದು.

ನೈಸರ್ಗಿಕ ಬದಲಾವಣೆಗಳಿಂದ ದಟ್ಟವಾದ ಅರಣ್ಯಗಳು ಕಡಿಮೆಯಾಗತೊಡಗಿದಂತೆ ಅರಣ್ಯದಲ್ಲಿ ಆಹಾರಕ್ಕಾಗಿ ತೀವ್ರ ಸ್ಪರ್ಧೆಗಳು ನಡೆಯತೊಡಗಿದವು. ಅರಣ್ಯ ನಾಶವಾದ್ದರಿಂದ ಹುಲ್ಲುಗಾವಲು ಮತ್ತು ಬಯಲು ಪ್ರದೇಶಗಳು ಹೆಚ್ಚು ಬೆಳೆಯತೊಡಗಿದವು. ಆಗ ಮಾನವರು (ಆಧುನಿಕ ಮಾನವನಂತೆ) ಸಾಹಸ ಪ್ರವೃತ್ತಿಯಿಂದ ಹೊಸ ಜಗತ್ತಿನಲ್ಲಿ ಬಾಳಲು ಪ್ರಯತ್ನಿಸಿದರು. ಆದರೆ ಈ ಹೊಸ ಜಗತ್ತಿನಲ್ಲಿ ಮಾನವನ ಪೂರ್ವಜರು ಹೊಸ ಹೊಸ ಕುತ್ತುಗಳನ್ನು ಎದುರಿಸಬೇಕಾಯಿತು. ಇಲ್ಲಿ ಶತೃಗಳಿಂದ ತಪ್ಪಿಸಿಕೊಳ್ಳಲು ಮರ ಏರಲು ಮರಗಳೇ ಇರಲಿಲ್ಲ. ಅದಕ್ಕಾಗಿ ಶತೃಗಳನ್ನು ಬಹುದೂರದಿಂದಲೇ ಗುರುತಿಸಬೇಕಾಗುತ್ತಿತ್ತು. ಈ ಕಾರಣದಿಂದ ಹಿಂದಣ ಎರಡು ಕಾಲುಗಳ ಮೇಲೆಯೇ ನಿಂತು ದೂರದ ವರೆಗೂ ನೋಡುವ ಅಭ್ಯಾಸವು ರೂಢಿಯಾಯಿತು. ಯಾವ ಯಾವ ಗುಂಪುಗಳು ಹೆಚ್ಚು ಹೆಚ್ಚು ದೂರದವರೆಗೆ ಎರಡೇ ಕಾಲುಗಳ ಮೇಲೆ

ನಡೆಯಲು ಸಮರ್ಥವಾದವೋ ಅವೇ ಸೃಷ್ಟಿಯ ಐಕ್ಯದಲ್ಲಿ ಜಯಶೀಲರಾಗಿ ತಮ್ಮ ವಂಶದ ಕುಡಿಯನ್ನು ಮುಂದುವರಿಸಲು ಸಾಧ್ಯವಾಯಿತು. ಈ ಸಮರ್ಥತೆಯನ್ನು ಹೊಂದದವರು ಶತ್ರುಗಳಿಗೆ ತುತ್ತಾಗಿ ತಮ್ಮ ವಂಶವನ್ನು ಬೆಳೆಸದೇ ನಿರ್ನಾಮವಾಗಬೇಕಾಯಿತು.

ಎರಡೇ ಕಾಲುಗಳ ಮೇಲೆ ನಡೆಯುವದರಿಂದ ಶತ್ರುಗಳನ್ನು ಬೇಗ ಪತ್ತೆಹಚ್ಚುವದಲ್ಲದೇ ಅವುಗಳೊಡನೆ ಹೋರಾಡಲು ಹೆಚ್ಚು ಅನುಕೂಲವಾಯಿತು. ಉದಾಹರಣೆಗೆ, ಸಾಮಾನ್ಯವಾಗಿ ನಾಲ್ಕು ಕಾಲುಗಳ ಮೇಲೆ ಚಲಿಸುವ ಬಬೂನ್ (Baboon) ಮತ್ತು ಚಿಂಪಾಂಜಿಗಳು ವೈರಿಗಳೊಂದಿಗೆ ಹೋರಾಡುವಾಗ ತಮ್ಮ ಮುಂದಿನ ಕಾಲುಗಳನ್ನು ಎತ್ತಿ ಹಿಂದಿನ ಕಾಲುಗಳ ಮೇಲೆ ಎದ್ದು ನಿಲ್ಲುವವು. ಟಗರುಗಳೂ ಕಾದಾಡುವಾಗ ತಮ್ಮ ಮುಂದಿನ ಕಾಲುಗಳನ್ನು ಎತ್ತಿ ಜೋರಿನಿಂದ ತಮ್ಮ ವೈರಿಯನ್ನು ಇರಿಯುವದನ್ನು ಕಾಣಬಹುದು. ಹುಂಜಗಳು ಕೂಡ ಕಾದಾಡುವಾಗ ನೆಲದಿಂದ ಸ್ವಲ್ಪ ಮೇಲೆ ಹಾರಿ ಶತ್ರುವಿನ ಮೇಲೆ ಬೀಳುವವು. ಇವೆಲ್ಲವುಗಳ ಉದ್ದೇಶ ವೈರಿಗಳಿಗೆ ತಮ್ಮ ಭೀಕರ ಆಕೃತಿಯನ್ನು ತೋರಿಸಿ ಹೆದರಿಸುವದೇ ಆಗಿದೆ. ಸಾಮಾನ್ಯವಾಗಿ ನಾಲ್ಕು ಕಾಲುಗಳ ಮೇಲೆ ನಡೆಯುವ ಪ್ರಾಣಿಯು ಎರಡೇ ಕಾಲುಗಳ ಮೇಲೆ ನಿಲ್ಲಲಾರದ ಶತ್ರುವಿಗೆ ಭಯಾನಕವಾಗಿ ತೋರಿ ಅದನ್ನು ಅಲ್ಲಿಂದ ಕಾಲ್ತೆಗೆಯುವಂತೆ ಮಾಡಬಹುದು. ಪಕ್ಷಿಗಳು ಕಾದಾಡುವಾಗ ತಮ್ಮ ಗರಿಗಳನ್ನು ಕೆದರಿ ನಿಲ್ಲುವವು. ಇದರಿಂದ ಅವುಗಳ ಆಕೃತಿಯು ದೊಡ್ಡದಾಗಿ ತೋರುವದು. ಇದೇ ರೀತಿ ಯಾವುದಾದರೊಂದು ಭಯಂಕರವಾದ ಸುದ್ದಿಯನ್ನು ಕೇಳಿದಾಗ ಅಥವಾ ನೋಡಿದಾಗ ಮೈಮೇಲಿನ ಕೂದಲುಗಳು ನಿಮಿರಿ ನಿಲ್ಲುವದನ್ನು ಎಲ್ಲರೂ ಅನುಭವಿಸುತ್ತೇವೆ. ಹೀಗೆ ಆಪತ್ಸ್ಥಿತಿಗಳನ್ನು ಎದುರಿಸಲು ತಮ್ಮ ಸಾಮಾನ್ಯ ಆಕೃತಿಯನ್ನೇ ದೊಡ್ಡದಾಗಿ ಮಾಡಿ ತೋರಿಸುವ ಗುಣವು ಇಂದಿಗೂ ಮಾನವನಲ್ಲಿ ಉಳಿದುಕೊಂಡಿದೆ.

ಎರಡೇ ಕಾಲುಗಳ ಮೇಲೆ ನಡೆಯುವದರಿಂದ ಬರುವ ಹಲವು ತೊಂದರೆಗಳನ್ನು ಮಾನವನ ಮೂಲ ವಂಶಜರು ಅನುಭವಿಸಬೇಕಾಯಿತು. ಈ ತರಹದ ನಡಿಗೆಯು ವೈರಿಗಳನ್ನು ಗುರುತಿಸಲು ಹೇಗೆ ಸಹಾಯವಾಯಿತೋ ಅದೇ ರೀತಿಯಲ್ಲಿ ವೈರಿಗಳು ಇವರನ್ನು ಗುರುತಿಸಲು ಅನುಕೂಲವಾಯಿತು. ಮೊದಮೊದಲಿಗೆ ಎರಡು ಕಾಲುಗಳ ಮೇಲೆ ನಡೆಯುವದು ಅಷ್ಟು ಸುಲಭವಾಗಿರಲಿಲ್ಲ ಮತ್ತು ವೇಗವಾಗಿ ಓಡುವಾಗ ಅಥವಾ ನಿಂತಾಗ ಸರಿಯಾದ ಸಮತೂಕ (Balance) ದೊರೆಯದೇ ಬೀಳುವ ಸಂಭವವಿತ್ತು. ಒಂದು ಕಾಲಿಗೆ ಏನಾದರೂ ಸಂಭವಿಸಿದರೆ, ನಡೆಯುವದು ತುಂಬ ಕಷ್ಟವಾಗುತ್ತಿತ್ತು. ಇವೆಲ್ಲ ಬಾಧಕ

ಗಳಿದ್ದರೂ ಎರಡೇ ಕಾಲುಗಳ ಮೇಲೆ ನಡೆಯುವದು ಮಾನವನ ವಿಕಾಸದಲ್ಲಿ
ಒಂದು ಒಲವು (Trend) ಆಗಿರುವದರಿಂದ ಆಗ ಅವನಿಗೆ ತೊಂದರೆಗಳಿಗಿಂತ
ಅನುಕೂಲಗಳೇ ಹೆಚ್ಚಾಗಿರಬೇಕು. ಅವನ ರಕ್ಷಣೆಯಲ್ಲಿ ಸಹಾಯಕವಾದು
ದಲ್ಲದೆ ಮಾನವನಲ್ಲಿ ಸಾಮಾಜಿಕ ಪ್ರಜ್ಞೆ ಬೆಳೆಯಲು ಎರಡು ಕಾಲುಗಳ ಮೇಲೆ
ನಡೆಯುವದು ಅನೇಕ ರೀತಿಯಲ್ಲಿ ಕಾರಣವಾಯಿತು. ಮೊದಲಿಗೆ ಪ್ರಾಣಿಗಳಂತೆ
ಆಹಾರ ಸಿಕ್ಕ ಸ್ಥಳದಲ್ಲಿಯೇ ಸಾಕಾಗುವಷ್ಟು ತಿಂದು ಮುಂದೆ ಹೋಗುವ
ಗುಣವು ಮಾನವನಿಂದ ಮರೆಯಾಗತೊಡಗಿತು. ಕೈಗಳು ನಡೆಯುವಲ್ಲಿ
ಉಪಯೋಗಿಸಲ್ಪಡದೆ ಸ್ವತಂತ್ರವಾದ್ದರಿಂದ ಬೇಟೆ ಮಾಡಿದ ಆಹಾರವನ್ನು ಈ
ಕೈಗಳಲ್ಲಿ ತೆಗೆದುಕೊಂಡು ತಮ್ಮ ವಾಸಸ್ಥಳಗಳಿಗೆ ಹೋಗಲು ಅನುಕೂಲ
ವಾಯಿತು. ಇದರಿಂದ ಮಾನವರು ಸೃಷ್ಟಿಯ ಪ್ರಕೋಪಗಳಾದ ಬರಗಾಲ, ನೆರೆ
ಹಾವಳಿ, ಮುಂತಾದವುಗಳಿಂದ ರಕ್ಷಿಸಿಕೊಳ್ಳಲು ಸಾಧ್ಯವಾಯಿತು. ಸ್ವತಂತ್ರ
ವಾದ ಕೈಗಳಿಂದ ತಾಯಿಯು ತನ್ನ ಕೂಸನ್ನು ತನ್ನೊಂದಿಗೆ ಸಾಗಿಸಲು
ಅನುಕೂಲವಾಯಿತು. ಆದರೆ ಇಂದಿನ ಮಂಗಗಳ ಮರಿಗಳು ತಾಯಿಯ
ಹೊಟ್ಟೆಯ ಭಾಗದಿಂದ ತಾವೇ ಜೋತುಬೀಳುವದನ್ನು ಕಾಣಬಹುದು.
ಏಕೆಂದರೆ ಮುಂದಿನ ಕಾಲುಗಳು ಸ್ವತಂತ್ರವಿಲ್ಲದ್ದರಿಂದ ತಾಯಿಯು ಮರಿ
ಯನ್ನು ಆಸರೆಕೊಟ್ಟು ರಕ್ಷಿಸುವದು ಅಸಾಧ್ಯ. ಮರಿಯು ತಾಯಿಯ
ಹೊಟ್ಟೆಯ ಕೆಳಭಾಗದಿಂದ ಭೂಮಿಗೆ ಸಮಾಂತರವಾಗಿ ನೇತಾಡುವದರಿಂದ ಕೆಳಗೆ
ಬೀಳುವ ಸಂಭವವೂ ಉಂಟು. ಆದರೆ ಮಾನವರು ನೇರವಾಗಿ ನಡೆಯುವವ
ರಿಂದ ಮಕ್ಕಳು ಭೂಮಿಗೆ ಲಂಬವಾಗಿ, ತಾಯಿಯ ಕೈಗಳಿಂದ ಆಶ್ರಯಿಸಲ್ಪ
ಡುತ್ತವೆ. ಇದೇ ರೀತಿಯಲ್ಲಿ ಸೃಷ್ಟಿಯಲ್ಲಿಯ ಯಾವದೇ ವಸ್ತುವನ್ನು ಪ್ರಾಣಿ
ಗಳಂತೆ ಕಣ್ಣಿನಿಂದ ಮಾತ್ರ ಅದು ಇದ್ದಲ್ಲಿಂದಲೇ ನೋಡದೆ ತನ್ನ ಕೈಗಳಿಂದ
ಅದನ್ನು ಹೊರಳಿಸಿ ಹೊರಳಿಸಿ ಚೆನ್ನಾಗಿ ನೋಡಿ ಸೃಷ್ಟಿಯನ್ನು ಚೆನ್ನಾಗಿ
ಅರಿಯಲು ಸಾಧ್ಯವಾಯಿತು.

ಎರಡು ಕಾಲುಗಳ ಮೇಲೆ ನಡೆಯುವ ಗುಣವು ಒಮ್ಮಿಂದೊಮ್ಮೆಲೆ ಬರದೇ
ಮಾನವನ ವಂಶಜರು ಮರಗಳ ಮೇಲೆ ಇದ್ದಾಗಿನಿಂದಲೇ ಇದನ್ನು ಪ್ರಾರಂಭಿ
ಸಿರಬೇಕು. ಕೋತಿಗಳು ಟೊಂಗೆಯಿಂದ ಟೊಂಗೆಗೆ ಹಾರುವಾಗ, ಕೊಂಬೆ
ಗಳಿಂದ ನೇತಾಡುವ ನೇರ (Erect) ಆಸನ (Pose) ವನ್ನು ಹೊಂದುವವು.
ಕೋತಿಗಳು ಭಾರವಾದ ಪ್ರಾಣಿಗಳಾಗಿದ್ದರೂ ಸಣ್ಣ ಸಣ್ಣ ಟೊಂಗೆಗಳ ತುದಿಯ
ಲ್ಲಿಯ ಹಣ್ಣುಗಳನ್ನು ಹರಿದುಕೊಳ್ಳುವವು. ಏಕೆಂದರೆ ಹಿಂದಿನ ಕಾಲುಗಳ
ಮೇಲೆ ನಡೆಯುತ್ತಾ ಮುಂದಿನ ಕಾಲುಗಳಿಂದ ಮೇಲಿನ ಟೊಂಗೆಯನ್ನು ಹಿಡಿದು
ನೇರವಾಗಿ ನಡೆಯುವದರಿಂದ ಆದರ ದೇಹದ ಭಾಗವು ಎರಡೂ ಟೊಂಗೆಗಳಿಗೆ

ಹಂಚಿಹೋಗಿ ಕೊಂಬೆ ಮುರಿಯುವದಿಲ್ಲ. ಮಾನವನ ವಂಶಜರು ಹುಲ್ಲು ಗಾವಲುಗಳಲ್ಲಿ ವಾಸವಾಗಿದ್ದಾಗ ಹಿಂದಿನ ಕಾಲುಗಳ ಮೇಲೆ ನಡೆಯಲು ಕಲಿತು ಕೊಂಡದ್ದರಿಂದ ಕಾಲುಗಳ ಎಲಬುಗಳು ಕೈ ಎಲಬುಗಳಿಗಿಂತ ಹೆಚ್ಚು ಬಲಿಷ್ಠ ವಾಗಿ ಬೆಳೆದವು. ಸೊಂಟದ ಎಲುಬಿನ ಇಲಿಯುಮ್ (Ilium) ಭಾಗವು ಉದ್ದವಾಗಿ ಉಳಿಯದೆ ಕಿರಿ ಮತ್ತು ಅಗಲವಾಯಿತು. ಎದೆ ಮತ್ತು ಹೊಟ್ಟೆ ಗಳು ಚಪ್ಪಟೆಯಾದವು. ಉದ್ದ ಮುಖವು (Prognathic) ಕಡಿಮೆಯಾಗ ತೊಡಗಿತು. ಭಾರವಾದ ಕೆಳ ದವಡೆಯು ಸಣ್ಣದಾಯಿತು. ಇದರಿಂದ ತಲೆಯು ಹೆಚ್ಚು ಸರಿಯಾದ ಸಮತೂಕವನ್ನು ಪಡೆಯಿತು. ಉದ್ದವಾದ ಮತ್ತು ಭಾರವಾದ ಕೆಳದವಡೆಯು ನೇರ ಆಸನದಲ್ಲಿ ತೊಂದರೆಕೊಡುತ್ತಿತ್ತು. ಕೆಳದವಡೆಯು ಹಗುರವಾದುದರಿಂದ ಅದನ್ನು ಚಲಿಸುವ ಸ್ನಾಯುಗಳು ಕಡಿಮೆ ಯಾದವು. ಮೊದಲು ಮುಂದೆ ಜೋತುಬಿದ್ದ ತಲೆಯನ್ನು ಆಧರಿಸಲು ಉಪಯೋಗವಾಗುತ್ತಿದ್ದ ದೊಡ್ಡ ದೊಡ್ಡ ಕುತ್ತಿಗೆ ಸ್ನಾಯುಗಳು ಕಡಿಮೆಯಾ ದುದರಿಂದ ತಲೆಯ ಚಲನೆಯ ವೃತ್ತವೂ ವೃದ್ಧಿಯಾಗಿ ಹೆಚ್ಚು ಪ್ರದೇಶ (Area) ವನ್ನು ವೀಕ್ಷಿಸಲು ಕಣ್ಣುಗಳಿಗೆ ಅನುಕೂಲವಾಯಿತು.

ತನ್ನ ಸ್ವತಂತ್ರವಾದ ಕೈಗಳಿಂದ ಮಾನವನು ಸಿಕ್ಕ ವಸ್ತುಗಳನ್ನು ಆಯುಧ ಗಳನ್ನಾಗಿ ಉಪಯೋಗಿಸತೊಡಗಿದನು. ನಂತರ ತನಗೆ ಬೇಕಾದ ಆಯುಧ ಗಳನ್ನು ತಾನೇ ತಯಾರಿಸಿಸುವದನ್ನು ಕಲಿತುಕೊಂಡನು.

ದಕ್ಷಿಣ ಆಫ್ರಿಕೆಯ ಟಾಂಗ (Taung) ಪ್ರದೇಶದಲ್ಲಿ ಸಂಶೋಧನೆ ಮಾಡು ತ್ತಿದ್ದ ಪ್ರೊ. ರೇಮಂಡ ಡಾರ್ಟರು (Prof. Ramond Dart) ಕೆಲವು ಎಲುಬಿನ ಅವಶೇಷಗಳನ್ನು ದೊರಕಿಸಿದರು. ಇವು ಆಸ್ಟ್ರಾಲೋಫಿಥೆಕಸ್ (Australo-pithecus) ಎಂಬ ಜೀವಿಗೆ ಸೇರಿದ್ದು, ಅದನ್ನು "ಕಳೆದಹೋದ ಕೊಂಡಿ" ಎಂದು ಕರೆಯಲಾಯಿತು. ಕೋತಿಯ ಲಕ್ಷಣಗಳಾದ ಅಗಲವಾದ ಸೊಂಟದ ಎಲಬು (Pelvic bones) ಲಿನಿಯಾ ಅಸ್ಪೆರಾ (Linea aspera) ವನ್ನು ಪಡೆದ ತೊಡೆ ಎಲಬು (Femur); ೬೦೦–೭೫೦ c.c. ಯ ಸಾಮರ್ಥ್ಯ (Cranirl capality) ವನ್ನು ಪಡೆದ ತಲೆಬುರುಡೆ (ಕೋತಿಗಳ ತಲೆಬುರುಡೆ ಸಾಮರ್ಥ್ಯವು ೪೫೦–೬೦೦ c.c. ಮಾತ್ರ ಇರುವದು) ಮತ್ತು ನೆತ್ತಿಯ ಶಿಖರ (Sagittal crest) ವನ್ನು ಹೊಂದವ ಆಸ್ಟ್ರಾಲೋಪಿಥೆಕಸ್‌ವು ಕೋತಿ ಮತ್ತು ಮಾನವನ ನಡುವಿನ ಜೋಡನೆ ಎಂದು ತಿಳಿಯಲಾಯಿತು. ನಂತರದ ಸಂಶೋ ಧನೆಗಳಿಂದ ಆಸ್ಟ್ರಾಲೋಪಿಥಿಕಸ್‌ವು ಮಾನವನ ವಿಕಾಸದಲ್ಲಿ ಒಂದು ಹಂತ ಎಂಬ ಪ್ರೊ. ಡಾರ್ಟರ ಅಭಿಪ್ರಾಯವು ಸತ್ಯ ಎಂದು ತಿಳಿದುಬಂದಿತು. ಈ

ಪ್ರಾಣಿಯು ಜೀವಿಸಿದ ಕಾಲವು ಹೊಸ ಸಂಶೋಧನೆಗಳ ಪ್ರಕಾರ ೩ ಮಿಲಿಯನ್ ವರ್ಷಗಳ ಹಿಂದಿನದು. ಹೀಗೆ ರಾಮಾಪಿಥಿಕಸ್ ಮತ್ತು ಆಸ್ಟ್ರಾಲೋಪಿಥಿಕಸ್ ಗಳ ನಡುವೆ ಸುಮಾರು ೧೪ ಮಿಲಿಯನ್ ವರ್ಷಗಳ ಅಂತರವಿದೆ. ಈ ಅವಧಿಯಲ್ಲಿ ಜೀವಿಸಿದ ಪ್ರಾಣಿಗಳ ಅವಶೇಷಗಳು ದೊರೆತಿಲ್ಲವಾದ್ದರಿಂದ ಮಾನವನ ವಿಕಾಸಪಥದಲ್ಲಿ ಇದು ಅಜ್ಞಾತವಾಸವಾಗಿದೆ.

ಆಸ್ಟ್ರಾಲೋಪಿಥೆಕಸ್‌ವು ಆಸ್ಟ್ರಾಲೋಪಿಥೆಕಸ್ ಆಫ್ರಿಕಾನಸ್ (A. africanus) ಮತ್ತು ಆ. ರೋಬಸ್ಟಸ್ (A. robustus) ಎಂಬ ಎರಡು ರೂಪಗಳನ್ನು ಹೊಂದಿದ್ದು, ಆ. ಆಫ್ರಿಕಾನಸ್‌ವು ಸಣ್ಣ ಗಾತ್ರದಾಗಿದ್ದು ಮಾನವವಿಕಾಸದಲ್ಲಿ ನೇರ ಪಾತ್ರವಹಿಸಿದೆ. ಆ ರೋಬಸ್ಟಸ್‌ವು ವಿಕಾರ ರೂಪವನ್ನು ಪಡೆದಿದ್ದು ವಂಶವನ್ನು ಮುಂದುವರಿಸದೇ ನಿರ್ನಾಮವಾಯಿತು ಎಂದು ತಿಳಿಯಲಾಗಿದೆ. ಈ ಎರಡು ಜೀವಿಗಳು ಸಮಕಾಲಿಕವಾದರೂ ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಅವು ಒಂದನ್ನೊಂದು ಸಂಧಿಸುವ ಅವಕಾಶ ಸಿಗದೇ ಹೋಗಿ ಬೇರೆ ಬೇರೆಯಾಗಿ ವಿಕಾಸಹೊಂದಿದವು. ಲೀಕಿಯವರು ಓಲ್ಡುವಾಯು ಗಾರ್ಜ (Oldiuva Gorge) ನಲ್ಲಿ ಮಾನವನ ವಿಕಾಸದ ಮೆಟ್ಟಲುಗಳನ್ನು ಪ್ರತಿನಿಧಿಸುವ ಅವಶೇಷಗಳನ್ನು ಒಂದರ ಮೇಲೊಂದರಂತೆ ಇರುವ ಪದರು ಅಥವಾ ತರ (Strata) ಗಳಲ್ಲಿ ಕಂಡುಕೊಂಡರು. ಲೀಕಿಯವರ ಹೋಮೊ-ಹ್ಯಾಬಿಲಿಸ್ (Homohabilis)ವು ಆ. ಆಫ್ರಿಕಾನಸ್‌ವನ್ನು ಹೋಲುವದು. ಆ. ಆಫ್ರಿಕಾನಸ್‌ವನ್ನು ಪಡೆದ ಪದರಿನ ಮೇಲೆ ಮನುಷ್ಯನ (Homo) ಅವಶೇಷಗಳನ್ನು ಪಡೆದ ಹಾಸಿಗೆ (Stratum) ಇರುವದು. ಈ ರೀತಿಯಾಗಿ ಆಸ್ಟ್ರಾಲೋಪಿಥೆಕಸ್‌ವು ಹೋಮೋ ಆಗಿ ವಿಕಾಸಹೊಂದಿದ್ದನ್ನು ಓಲ್ಡುವಾಯುದಲ್ಲಿ ಮಾರ್ಮಿಕವಾಗಿ ತೋರಿಸಲ್ಪಟ್ಟಿದೆ. ಈ ಎರಡು ಗುಂಪಿನಲ್ಲಿ ಹೆಚ್ಚು ತಾರತಮ್ಯಗಳು ಇಲ್ಲದ್ದರಿಂದ ಎರಡನ್ನೂ ಹೋಮೋಗೆ ಸೇರಿಸಬಹುದೆಂದು ರಾಬಿನ್‌ಸನ್ (೧೯೬೫) ಮುಂತಾದವರು ಅಭಿಪ್ರಾಯಪಡುತ್ತಾರೆ. ಆದರೆ ವ್ಯತ್ಯಾಸವು ಜೆನರಿಕ್ ಮಟ್ಟದ್ದು (Generic level) ಇರುವುದಲ್ಲವೆ ಮಾನವ ಪ್ರಾಣಿಯು ಮನುಷ್ಯನಾಗುವ ಅಂತರವನ್ನು ಸೂಚಿಸುತ್ತದೆ.

ಯುಜಿನ್ ಡುಬಾಸ್ (Eugene Dubois) ಮತ್ತು ವಾನ್ ಕೋನಿಗ್ಸ್-ವಾಲ್ಡ (Van Koenigswald)ರು ಜಾವಾ ಮತ್ತು ಚೀನಾದಲ್ಲಿ ಮಾನವನ ಅವಶೇಷಗಳನ್ನು ದೊರಕಿಸಿದರು. ಈ ಅವಶೇಷಗಳು ಸುಮಾರು ೭೫ ಲಕ್ಷ ವರ್ಷಗಳ ಹಿಂದೆ ಜೀವಿಸುತ್ತಿದ್ದ ಜೀವಿಗಳಿಗೆ ಸೇರಿದವುಗಳೆಂದು ನಂಬಲಾಗಿದೆ. ಪಿಥೆಕಾಂಥ್ರೋಪೈನ್ಸ (Pithecanthropines) ಎಂದು ಕರೆಯಲಾಗುತ್ತಿದ್ದ

ಇವುಗಳನ್ನು ಇಂದು ಹೋಮೊ ಎರೆಕ್ಟಸ್ (Homo erectus) ಗುಂಪಿಗೆ ಸೇರಿಸಲಾಗಿದೆ. ಹೋಮೊ ಎರೆಕ್ಟಸ್ ಗುಂಪಿನ ಜನರು ಕೋತಿಯಂತಹ ತಲೆ, ದೊಡ್ಡ ದೊಡ್ಡ ಕಣ್ಣು ಮತ್ತು ಹುಬ್ಬುಗಳನ್ನು, ಭಾರವಾದ ಕೆಳದವಡೆಯನ್ನು ಮತ್ತು ಮನುಷ್ಯನಂತಹ ಕಾಲು ಮತ್ತು ಸೊಂಟವನ್ನು ಪಡೆದಿದ್ದರು. ಈ ಜನರು ಗುಹೆಗಳಲ್ಲಿ ವಾಸಿಸುತ್ತಿದ್ದು ಸಂಸ್ಕೃತಿಯನ್ನು ಹೊಂದಿದ್ದರು. ಈ ಎಲ್ಲ ಕಾರಣಗಳಿಂದ ಇವರು ನಿಜವಾದ ಮನುಷ್ಯರಾಗಿದ್ದಾರೆಂದು ಹೇಳ ಬಹುದು.

ಮನುಷ್ಯ ಮಾನವನಾದನು (Man became human) :

ಇಂದು ಎಲ್ಲಾ ತರಹದ ಆಹಾರವನ್ನು ಸೇವಿಸುವ (Omnivorous) ಮಾನವನು ಮೂಲತಃ ಸಸ್ಯಾಹಾರಿ ಇದ್ದನು. ಆಧುನಿಕ ಮಾನವನು ಸಸ್ಯಾಹಾರ ವನ್ನು ಸುಲಭವಾಗಿ ಜೀರ್ಣಿಸಿಕೊಂಡಂತೆ ಪ್ರಾಣಿಜನ್ಯ ಪದಾರ್ಥಗಳನ್ನು ಜೀರ್ಣಿಸಿ ಕೊಳ್ಳಲಾರ. ಸಸ್ಯಾಹಾರಿಯಾದ ಮಾನವನು ಮಾಂಸಾಹಾರಿ ಹೇಗೆ ಆದನು? ಶತ್ರುಪ್ರಾಣಿಗಳನ್ನು ಕೊಲ್ಲುವಾಗ ಅವುಗಳ ಮಾಂಸದ ರುಚಿಯನ್ನು ಕಂಡು ಕೊಂಡಿರಬೇಕು ಅಲ್ಲದೇ ಉಳಿದ ಪ್ರಾಣಿಗಳು ತಮ್ಮ ಬೇಟೆಯನ್ನು ತಿನ್ನುತ್ತಿದ್ದು ದನ್ನು ನೋಡಿ ಕಲಿತುಕೊಂಡಿರಬಹುದು. ಮಾನವನು ಮೊದಮೊದಲು ಸಣ್ಣ ಸಣ್ಣ ಪ್ರಾಣಿಗಳನ್ನು ಕೊಂದು ಮಾಂಸವನ್ನು ಸೇವಿಸುತ್ತಿದ್ದನು. ಕಾಲಾನುಕ್ರಮ ದಲ್ಲಿ ದೊಡ್ಡ ದೊಡ್ಡ ಪ್ರಾಣಿಗಳ ಬೇಟೆ ಪ್ರಾರಂಭಿಸಿದನು. ಆದಿಮಾನವನು ಈ ಸಾಹಸವು ಅವನ ಸಮಾಜ ಮತ್ತು ಸಂಸ್ಕೃತಿಯನ್ನು ಬೆಳೆಸಿಕೊಂಡು ಮನುಷ್ಯ ನಾಗಲು ಕಾರಣೀಭೂತವಾಯಿತು. ದೊಡ್ಡ ಪ್ರಾಣಿಗಳನ್ನು ಕೊಲ್ಲಲು ಮಾನವನು ಗುಂಪು ಗುಂಪುಗಳಲ್ಲಿ ಬೇಟೆಯಾಡುವದನ್ನು ಕಲಿತುಕೊಂಡನು. ಬೇಟೆ ಯಾಡುವಾಗ ಗುಂಪಿನ ಜನರು ತಮ್ಮೊಳಗೆ ಹೊಂದಾಣಿಕೆಯನ್ನು ಬೆಳೆಸಿಕೊಂಡು, ಹೆಚ್ಚು ಬುದ್ಧಿವಂತನಾದ ವ್ಯಕ್ತಿಯು ನೇತೃತ್ವದಲ್ಲಿ ಬೇಟೆಯಾಡುವದನ್ನು ಪ್ರಾರಂಭಿಸಿದರು. ಗುಂಪಿನ ಜನರಿಗೆ ತಮ್ಮ ತಮ್ಮ ಅನುಭವ ಮತ್ತು ಸಲಹೆ ಗಳನ್ನು ನೀಡಲು ಭಾಷೆಯು ಅವಶ್ಯಕತೆಯಾಯಿತು. ಮೊದಲು ಸಂಜ್ಞೆಗಳನ್ನು ಉಪಯೋಗಿಸುತ್ತಿದ್ದು ಕ್ರಮೇಣ ಭಾಷೆಯು ಬೆಳವಣಿಗೆಯಾಯಿತು.

ಆನೆಗಳಂತಹ ಭಾರಿ ದೊಡ್ಡ ಪ್ರಾಣಿಗಳ ಬೇಟೆಯಾಡುವಲ್ಲಿ ಕೇವಲ ಭೌತಿಕ ಶಕ್ತಿಯನ್ನು ಮಾತ್ರ ಉಪಯೋಗಿಸದೆ, ಆದಿಮಾನವನು ನಿಸರ್ಗದಲ್ಲಿ ನಡೆ ಯುವ ಕಾರ್ಯಕಲಾಪಗಳನ್ನು ನೋಡಿ ತನ್ನ ಬುದ್ಧಿಶಕ್ತಿಯನ್ನು ಬೆಳೆಸಿ ಕೊಂಡು ಈ ಜ್ಞಾನವನ್ನು ಬೇಟೆಯಲ್ಲಿ ಉಪಯೋಗಿಸತೊಡಗಿದನು. ಆನೆಗಳು

ಕೆಸರಿನಲ್ಲಿ ಸಿಕ್ಕುಹಾಕಿಕೊಂಡಾಗ ಅವುಗಳನ್ನು ಕೊಲ್ಲುವದು ಸುಲಭ ಎಂಬುದನ್ನು ಕಂಡುಕೊಂಡನು. ಆದ್ದರಿಂದ ಆದಿಮಾನವನು ನೀರಿನ ತಾಣಗಳಿಗೆ ಆನೆಗಳು ನೀರು ಕುಡಿಯಲು ಬರುವದನ್ನು ನಿರೀಕ್ಷಿಸುತ್ತಾ ಹೊಂಚುಹಾಕಿ ಕಾಯತೊಡಗಿದನು. ನೈಸರ್ಗಿಕವಾಗಿ ದೊರೆಯುವ ಗವಿಗಳ ಆಶ್ರಯದಲ್ಲಿ ಇದುವರೆಗೆ ಜೀವಿಸುತ್ತಿದ್ದ ಅವನಿಗೆ ಈಗ ಹೊಸ ಆಶ್ರಯದ ಅವಶ್ಯಕತೆಯಾಯಿತು. ಮರದ ಟೊಂಗೆಗಳಿಂದ ಅಥವಾ ಕಲ್ಲು ಬಂಡೆಗಳಿಂದ ಇಂತಹ ಆಶ್ರಯಗಳನ್ನು ನಿರ್ಮಿಸತೊಡಗಿದನು. ರಾತ್ರಿಯ ಕತ್ತಲಿನಲ್ಲಿ ಪ್ರಾಣಿಗಳನ್ನು ನಿರೀಕ್ಷಿಸುತ್ತಿದ್ದಾಗ ಅನುಭವಿಸಿದ ತೊಂದರೆಗಳನ್ನು ಅರಣ್ಯದ ಬೆಂಕಿಯನ್ನು ಕಂಡಾಗ ನೆನೆದು ಅದರ ಬೆಳಕಿನ ಉಪಯೋಗವನ್ನು ಅರಿತುಕೊಂಡನು. ಇದರಿಂದ ಅವನ ಕಾರ್ಯಕಲಾಪಗಳು ಕೇವಲ ಹಗಲಿಗೆ ಸೀಮಿತವಾಗಿ ಉಳಿಯದೆ ಈ ಕೃತಕ ಬೆಳಕಿನ ಸಹಾಯದಿಂದ ರಾತ್ರಿಯಲ್ಲಿ ಕೂಡ ನಡೆಯತೊಡಗಿದವು. ಇದರಿಂದ ಮಾನವನಿಗೆ ಹೆಚ್ಚು ಕಾಲ ಲಭ್ಯವಾಯಿತು.

ಬೇರೆ ಬೇರೆ ಪ್ರಾಣಿಗಳ ಬೇಟೆಯ ಸಲುವಾಗಿ ಆದಿಮಾನವನು ಬೇರೆ ಬೇರೆ ಸ್ಥಳಗಳಲ್ಲಿ ಹೊಂಚುಹಾಕತೊಡಗಿದಾಗ ಅವನಿಗೆ ಜೀವನಕ್ಕೆ ಬೇಕಾಗುವ ಅವಶ್ಯಕತೆಗಳನ್ನು ಪಡೆಯುವ ಮಾರ್ಗಗಳು ತಿಳಿಯತೊಡಗಿದವು. ದೂರ ಅರಣ್ಯದಲ್ಲಿ ಕಾಯತೊಡಗಿದಾಗ ನೀರಿನ ಅವಶ್ಯಕತೆ ಬಂದು ನೀರನ್ನು ಸಂಗ್ರಹಿಸಲು ಉಪಾಯ ಹುಡುಕಿ ಪಾತ್ರೆಗಳನ್ನು ಉಪಯೋಗಿಸತೊಡಗಿದನು. ಒಮ್ಮೆ ದೊಡ್ಡ ಪ್ರಾಣಿಯನ್ನು ಬೇಟೆ ಮಾಡಿದರೆ ಕೆಲವು ದಿನಗಳ ವರೆಗೆ ಆದಿಮಾನವನಿಗೆ ಆಹಾರದ ತೊಂದರೆ ಇರುತ್ತಿರಲಿಲ್ಲ. ಈ ವಿರಾಮಕಾಲದಲ್ಲಿ ಅವನು ಮನೆಯಲ್ಲಿಯೇ ಕುಳಿತು ತನ್ನ ಬೇಟೆಯ ಅಥವಾ ಮತ್ತಿತರ ಅನುಭವಗಳನ್ನು ತನ್ನ ಹೆಂಡತಿ ಮಕ್ಕಳಿಗೆ ಹೇಳತೊಡಗಿದನು. ಬೇಟೆಯಾಡುವದು ಅಪಾಯಕಾರಿಯಾದ್ದರಿಂದ ಹೆಂಗಸರು ಹೆಚ್ಚು ಹೆಚ್ಚು ಕಾಲ ಬೇಟೆಗಳಿಂದ ದೂರ ಉಳಿದು ಮಕ್ಕಳೊಂದಿಗೆ ತಮ್ಮ ಆಶ್ರಯಗಳಲ್ಲಿ ಉಳಿಯತೊಡಗಿದರು. ಗಂಡಸರು ಗುಂಪು ಗುಂಪುಗಳಲ್ಲಿ ಬೇಟೆಯಾಡಲು ಬಹು ದಿನಗಳ ವರೆಗೆ ಹೆಂಗಸರಿಂದ ದೂರ ಇರಬೇಕಾಗಿ ಬರುತ್ತಿತ್ತು. ಇದರಿಂದ ಗಂಡಸರಲ್ಲಿಯೇ ಹೆಚ್ಚು ಸಂಪರ್ಕ ಬೆಳೆಯತೊಡಗಿ ಹೆಂಗಸರನ್ನು ತಾತ್ಕಾಲಿಕವಾಗಿ ಮರೆಯುತ್ತಿದ್ದುದುಂಟು. ಇದು ಮಾನವ ಜಾತಿ ಬೆಳೆಯಲು ಕಂಟಕವಾಗತೊಡಗಿತು. ಇದಕ್ಕಾಗಿ ಸೃಷ್ಟಿಯು ಕೆಲವೊಂದು ಉಪಾಯಗಳನ್ನು ಹುಡುಕಿತು. ಇದರಂತೆ ಹೆಂಗಸರು ಹೆಚ್ಚು ಹೆಚ್ಚು ಆಕರ್ಷಕ ಲಕ್ಷಣಗಳನ್ನು ಹೊಂದತೊಡಗಿದರು. ಹೀಗೆ ಬೇಟೆಯ ಸಲುವಾಗಿ ದೂರ ಹೋದ ಗಂಡಸರನ್ನು ತಮ್ಮ ಆಕರ್ಷಕ ಸೌಂದರ್ಯಗಳಿಂದ ತಮ್ಮೆಡೆಗೆ ಸೆಳೆಯಲು ಹೆಂಗಸರಿಗೆ ಸಹಾಯವಾಯಿತು.

ಮಾನವರನ್ನುಳಿದು ಎಲ್ಲಾ ಪ್ರಾಣಿಗಳಲ್ಲಿ ಗಂಡುಗಳೇ ಹೆಚ್ಚು ಸುಂದರ ಮತ್ತು ಆಕರ್ಷಕವಾಗಿರುವವು. ಉದಾಹರಣೆಗೆ ಹುಂಜ ಮುಂತಾದ ಹಕ್ಕಿಗಳನ್ನು, ಹೋರಿ, ಸಿಂಹ ಮುಂತಾದ ಪ್ರಾಣಿಗಳನ್ನು ತೆಗೆದುಕೊಳ್ಳಬಹುದು. ಆದರೆ ಮಾನವರಲ್ಲಿ ಹೆಂಗಸರು ಗಂಡಸರಿಗಿಂತ ಸುಂದರವಾಗಿರುವದು ಸೃಷ್ಟಿಯ ಕೌಶಲ್ಯ. ಪ್ರಾಣಿಗಳಲ್ಲಿ 'ಬೆದೆ ಕಾಲ' (Breeding season) ಇದ್ದು ಆ ಅವಧಿಯಲ್ಲಿ ಸಬಲ ಪ್ರಾಣಿಗಳಿಗೆ ಮಾತ್ರ ಹುಟ್ಟಿಸುವ ಅವಕಾಶ ಸಿಗುವದು. ದುರ್ಬಲವಾದವುಗಳು ತಮ್ಮ ವಂಶವನ್ನು ಮುಂದುವರೆಸಲು ಸಾಧ್ಯವಾಗಿದೆ ನಾಶವಾಗುತ್ತವೆ. ಆದ್ದರಿಂದ ಹೆಣ್ಣನ್ನು ವಶಮಾಡಿಕೊಳ್ಳಲು ಬಲದ ಜೊತೆಗೆ ಆಕರ್ಷಣೆಯನ್ನು ಪ್ರಾಣಿಗಳಲ್ಲಿ ಗಂಡುಗಳು ಪಡೆದಿರಬೇಕು. ಆದರೆ ಮಾನವ ಜಾತಿಯಲ್ಲಿ ಯಾವದೇ ಸೀಮಿತ ಬೆದೆ ಕಾಲವಿರದೆ ವರ್ಷದ ಯಾವದೇ ಕಾಲದಲ್ಲೂ ಅವನು ತನ್ನ ವಂಶಾಭಿವೃದ್ಧಿ ಮಾಡಲು ಸಮರ್ಥನಿದ್ದಾನೆ. ಇದರಿಂದ ಅನಾವಶ್ಯಕ ಮತ್ತು ಭಯಾನಕ ಸ್ಪರ್ಧೆ ತಪ್ಪಿ ಎಲ್ಲರಿಗೂ ಅವಕಾಶ ದೊರೆಯುವಂತೆ ನಿಸರ್ಗ ಏರ್ಪಾಟು ಮಾಡಿತು.

ಮಾನವ ಜಾತಿಯಲ್ಲಿ ಅಪರೂಪವಾಗಿ ಒಂದೇ ಕಾಲಕ್ಕೆ ಒಂದಕ್ಕಿಂತ ಹೆಚ್ಚು ಮಕ್ಕಳ ಜನನವಾಗುವದು. ಉಳಿದ ಪ್ರಾಣಿಗಳಲ್ಲಿ ಬಹಳಷ್ಟು ಮರಿಗಳನ್ನು ಹೆರುವದು ಸಾಮಾನ್ಯವಿದ್ದು ಈ ಮರಿಗಳಲ್ಲಿ ಕೆಲವಾದರೂ ಬದುಕಲಿ ಎಂದು ನಿಸರ್ಗ ಜೂಜಾಟ (Gamble) ನಡೆಸುವದು ಮಾನವ ಕೂಸುಗಳು ಉಳಿದ ಪ್ರಾಣಿಗಳ ಮರಿಗಳಂತೆ ಬೇಗನೆ ಸ್ವತಂತ್ರವಾಗಿ ಜೀವಿಸಲು ಅಸಮರ್ಥವಾಗಿರುತ್ತವೆ. ಈ ಕಾರಣದಿಂದ ಮಕ್ಕಳ ಪೋಷಣೆಯು ಅವಶ್ಯವಾಯಿತು. ಇಂತಹ ಮಕ್ಕಳ ಸಂಖ್ಯೆ ಹೆಚ್ಚಾದರೆ ಪೋಷಣೆಕಾರ್ಯ ಸೂಕ್ತವಾಗಿ ನಡೆಯಲಾರದು. ಅದಕ್ಕಾಗಿ ಮಾನವರು ಒಂದು ಅಥವಾ ಎರಡು ಮಕ್ಕಳನ್ನು ಮಾತ್ರ ಪಡೆಯುತ್ತಾರೆ. ಮನುಷ್ಯನ ಮೆದುಳಿನ ಸಾಪೇಕ್ಷ ಗಾತ್ರ (Relative volume) ವು ದೊಡ್ಡದಾಗಿದ್ದು ಕೂಸಿನ ಜನನದ ಪೂರ್ವದಲ್ಲಿ ಇದು ಸ್ವಲ್ಪ ಪ್ರಮಾಣದಲ್ಲಿ ಬೆಳವಣಿಗೆಯನ್ನು ಹೊಂದಿರುವದು. ಮೆದುಳಿನ ಉಳಿದ ಬೆಳವಣಿಗೆಯು ಬಾಲ್ಯಾವಧಿಯಲ್ಲಿ ಸಂಪೂರ್ಣವಾಗುವದು. ಇನ್ನುಳಿದ ಪ್ರಾಣಿಗಳಂತೆ ಪೂರ್ಣ ಬೆಳವಣಿಗೆಯು ತಾಯಿಯ ಉದರದಲ್ಲಿಯೇ ಆಗುತ್ತಿದ್ದರೆ ಸೊಂಟದ ಎಲಬುಗಳ ಅಗಲವು ತಾಯಿಗೆ ನಡೆಯಲು ತೊಂದರೆಯಾಗುವಷ್ಟು ದೊಡ್ಡದಾಗಬೇಕಾಗುತ್ತಿತ್ತು. ಇದು ಹೆಣ್ಣುಜಾತಿಯು ಬದುಕಲು ಮಾರಕವಾಗುತ್ತಿತ್ತು. ಆದರೆ ನಿಸರ್ಗವು ಮೆದುಳಿನ ಬೆಳವಣಿಗೆಯನ್ನು ಎರಡು ಹಂತಗಳಲ್ಲಿ—ತಾಯಿಯ ಉದರದಲ್ಲಿ ಮತ್ತು ಬಾಲ್ಯಾವಸ್ಥೆಯಲ್ಲಿ ನೆರವೇರಿಸುವಂತೆ ಮಾಡಿ ತಲೆಯ ಗಾತ್ರವನ್ನು ಕಡಿಮೆ ಮಾಡಿ ಹೆರಿಗೆಯನ್ನು ಸುಲಭಮಾಡಿದೆ. ಸಾಮಾನ್ಯವಾಗಿ ಒಂದು

ಹೆರಿಗೆಗೆ ಒಂದೇ ಮಗುವಿನ ಜನನ, ಸುಮಾರು ೫ – ೬ ವರ್ಷಗಳವರೆಗೆ ಮಗುವಿನ ಸಂಪೂರ್ಣ ಪೋಷಣೆ, ದೊಡ್ಡ ಗಾತ್ರದ ಮೆದುಳು ಹಂತ ಹಂತವಾಗಿ ಬೆಳೆಯುವದು ಮೊದಲಾದ ಮಾನವ ಜಾತಿಯ ಲಕ್ಷಣಗಳು ಅವನು ವಿಕಾಸ ಹೊಂದುತ್ತಾ ಬಂದಂತೆ ಬೆಳೆದುಕೊಂಡಡವು.

ಮಾನವ ವಿಕಾಸದಲ್ಲಿ ಎರಡನೆಯ ಹಂತವಾದ ಹೋಮೋ ಎರೆಕ್ಟಸ್ (Homo erectus)ವು ಮನುಷ್ಯಸ್ಥಾನ (Status) ಪಡೆದಿದ್ದರೂ ಅದು ಇಂದಿನ ಮನುಷ್ಯ (Homo sapiens) ನಿಗಿಂತ ಭಿನ್ನವಾಗಿದ್ದಿತು. ಕ್ರಿ. ಶ. ೧೮೫೬ ರಲ್ಲಿ ಜರ್ಮನಿಯ ನಿಯಾಂದ್ರೆಥಾಲ್ ಕೊಳ್ಳ (Neanderthal valley) ದಲ್ಲಿ ಮಾನವನ ಅವಶೇಷಗಳನ್ನು ದೊರಕಿಸಲಾಯಿತಲ್ಲದೇ ಯುರೋಪದ ಬೇರೆ ಬೇರೆ ಭಾಗಗಳಲ್ಲಿ ಕೂಡ ಇಂತಹ ಅವಶೇಷಗಳನ್ನು ಶೋಧಿಸಲಾಯಿತು. ಮೊದಲಿಗೆ ಈ ಅವಶೇಷಗಳ ಮಾನವರನ್ನು ನಿಯಾಂದ್ರರ್ಥಾಲ್ ಮನುಷ್ಯ (Neanderthal man) ಎಂದು ಕರೆಯಲಾಯಿತು. ಇಂದು ಈ ಮಾನವರನ್ನು ಹೋಮೋ ಎಂಬ ಜಿನಸ್ (Genus) ಗೆ ಸೇರಿಸಿ ಹೋಮೋ ನಿಯಾಂದ್ರೆಥಾಲೆನಿಸ್(Homo Neanderthalensis) ಎಂದು ಕರೆಯಲಾಗಿದೆ. ಮಾನವನ ವಿಕಾಸದಲ್ಲಿ ನಿಯಾಂದ್ರಥಾಲ್ ಮನುಷ್ಯನ ಪಾತ್ರ ವಿವಾದಾಸ್ಪದವಾಗಿದ್ದು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ನಿಯಾಂದ್ರೆಥಾಲ್ ಮನುಷ್ಯರನ್ನು ಅವರ ಅಸ್ಥಿ ರಚನೆ (Skeletal structure)ಯ ಪ್ರಕಾರ ಅಭಿವೃದ್ಧಿಪರ (Progressive) ಮತ್ತು ಶಾಸ್ತ್ರೀಯ (Classical) ಎಂದು ಎರಡು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಮೊದಲಿನ ಗುಂಪಿಗೆ ಸ್ವಾನ್ಸ ಕೊಂಬೆ (Swans Combe), ಗ್ಯಾಲಿ ಹಿಲ್ (Galley Hill), ಫೊಂಟೆ ಚಿವಡೆ (Fontechevade), ಎರಿಂಗ್ಸ ಡೋರ್ಫ (Ehringsdorf), ಸ್ಟೇನಹೈಮ (Steinheim), ಕ್ರಪಿನಾ (Krapina), ಟಾಬುನ್ (Tabun) ಮನುಷ್ಯರನ್ನು ಸೇರಿಸಲಾಗಿದೆ. ಶಾಸ್ತ್ರೀಯ (Classical) ಗುಂಪಿಗೆ ನಿಯಾಂದ್ರಥಾಲ್ (ಜರ್ಮನಿ), ಲೇ ಮುಸ್ಟೀರ್ (Le musteir), ಲಾ ಕ್ವೀನಾ, ಜಿಬ್ರಾಲ್ಟರ್ (Gibraltor), ಶನಿದರ್ (Shanidar) ಮುಂತಾದ ಮನುಷ್ಯರನ್ನು ಸೇರಿಸಲಾಗಿದೆ.

ಮಧ್ಯ ಮತ್ತು ಮೇಲಿನ ಪ್ಲೈಸ್ಟೋಸೀನ (Middle and Upper Pleistocene) ಅವಧಿಯ ಚಳಿಯಿಂದ ರಕ್ಷಿಸಿಕೊಳ್ಳಲು ಶಾಸ್ತ್ರೀಯ ನಿಯಾಂದ್ರಥಾಲ್ ಮನುಷ್ಯರು ವಿಕಾರರೂಪ, ದೊಡ್ಡ ದೊಡ್ಡ ಕಣ್ಣು, ಹುಬ್ಬು (Eye brow ridges), ಉಬ್ಬು ಮುಖ (Prognathism)ಗಳನ್ನು ಪಡೆದರು. ಆದರೆ ಅಭಿವೃದ್ಧಿಪರ ನಿಯಾಂದ್ರಥಾಲ್ ಮನುಷ್ಯರು ಪ್ಲೈಸ್ಟೋಸೀನ್

ಅವಧಿಯ ಹಿಮ ಬಂಡೆಗಳಿಂದ (Ice rocks) ಹೇಗೋ ತಪ್ಪಿಸಿಕೊಂಡು ದೂರ ಹೋಗಿ ಗವಿಗಳಲ್ಲಿ ವಾಸಿಸಿದರು. ಕಾರಣ ಅವರು ಹಿಮ ಕಾಲದ (Ice age) ಗಂಡಾಂತರಕ್ಕೆ ನೇರವಾಗಿ ತುತ್ತಾಗದೆ ಬದುಕಿದುದರಿಂದ ವಿಕಾರ ರೂಪಗಳನ್ನು ಪಡೆಯಲಿಲ್ಲ. ಮುಂದೆ ಈ ಮನುಷ್ಯರು ಆಧುನಿಕ ಮಾನವನಿಗೆ (Homo sapiens) ಜನ್ಮಕೊಟ್ಟರು. ಶಾಸ್ತ್ರೀಯ ಗುಂಪಿನ ಜನರು ತಮ್ಮ ವಂಶವನ್ನು ಬೆಳೆಸದೇ ನಿರ್ನಾಮವಾದರೆಂದು ತಿಳಿಯಲಾಗಿದೆ (Howell, ೧೯೫೧).

ಉಪಸಂಹಾರ

ಮಾನವನು ಸೃಷ್ಟಿಯಲ್ಲಿಯ ಬದಲಾವಣೆಗಳಿಗೆ ತಕ್ಕಂತೆ ವಿಕಾಸಹೊಂದುತ್ತ ಬಂದಲೂ ಅವನು ತನ್ನ ಕಾಲದ ಪರಿಸ್ಥಿತಿಗೆ ಗಟ್ಟಿಯಾಗಿ (Rigidly) ಹೊಂದಿಕೊಳ್ಳದೇ ಮೃದುತ್ವ (Plasticity)ವನ್ನು ಕಾಯ್ದುಕೊಂಡು ಬಂದನು. ಕೋಪ್ (Cope) ರವರ ವಿಕಾಸ ನಿಯಮದ ಪ್ರಕಾರ (Survival of unspecilized) ಮೃದುತ್ವವನ್ನು ಪಡೆದ ಜೀವಿಯು ಸೃಷ್ಟಿಯ ಆಕಸ್ಮಿಕ ಬದಲಾವಣೆಗಳಿಗೆ ಹೊಂದಿಕೊಳ್ಳಬಹುದು. ಆದರೆ ಯಾವುದಾದರೊಂದು ಪರಿಸರಕ್ಕೆ ಗಟ್ಟಿಯಾಗಿ ಹೊಂದಿಕೊಂಡ ಪ್ರಾಣಿಯು ನಿಸರ್ಗದಲ್ಲಾಗಬಹುದಾದ ಕಟುವಾದ ಬದಲಾವಣೆಗಳಿಗೆ ತ್ವರಿತವಾಗಿ ಹೊಂದಿಕೊಳ್ಳಲಾಗದೆ ನಿರ್ನಾಮವಾಗುವದು.

ಇಂದು ಆಧುನಿಕ ಮಾನವನ ಸೃಷ್ಟಿಗೆ ಹೊಂದಿಕೊಳ್ಳದೆ ತನಗೆ ಅನುಕೂಲವಾಗುವಂತೆ ನಿಸರ್ಗವನ್ನೇ ಬದಲಿಸುತ್ತಾ ಹೊರಟಿದ್ದಾನೆ. ಮಾನವನ ಜೈವಿಕ ವಿಕಾಸಕ್ಕೆ (biological evolution) ಅವಕಾಶ ದೊರೆಯದೆ ವೈಜ್ಞಾನಿಕ ಕ್ರಾಂತಿ (Scientific Revolution)ಯು ಅತಿಕ್ರಮಣ ಮಾಡಿದೆ. ಜಾಗತಿಕ ಮಾನವನಿಗೆ ನಿಸರ್ಗದ ಪ್ರಕೋಪಗಳು ಮತ್ತು ಕ್ರೂರ ಪ್ರಾಣಿಗಳು ಶತ್ರುಗಳಾಗಿರದೆ ತನಗೆ ತಾನೇ ವೈರಿಯಾಗಿದ್ದಾನೆ. ಈ ನವೀನ ಕಂಟಕವು ಜೀವವಿಕಾಸದಲ್ಲಿಯೇ (In the evolution of life) ವಿಚಿತ್ರವೆನಿಸಿದೆ. ವೈಜ್ಞಾನಿಕ ಬೆಳವಣಿಗೆಯು ಇಂದು ಮಾನವನಿಗೆ 'ಬಾಬೆಲಿನ ಗೋಪುರ' (Tower of Babel)ವಾಗಿ ಪರಿಣಮಿಸಿದೆ. ಕೋಟ್ಯಾಂತರ ವರ್ಷಗಳ ಹೋರಾಟದ ಫಲವಾಗಿ ಮನುಷ್ಯತ್ವವನ್ನು ಪಡೆದ ಮಾನವನು ಇಂದು ತನ್ನ ಕೈಯಿಂದಲೇ ತಯಾರಾದ ಮಾರಕ ಅಸ್ತ್ರಗಳಿಂದ ನಿಮಿಷಾರ್ಧದಲ್ಲಿ ನಿರ್ನಾಮಹೊಂದಲು ಸಮರ್ಥನಾಗಿದ್ದಾನೆ. ಮಾನವನು ಅಪರಿಚಿತ ಮತ್ತು ಗಂಡಾಂತರವಾದ ವೈಜ್ಞಾನಿಕ ಮಾರ್ಗದಲ್ಲಿ ಭಯಾನಕ ವೇಗದಲ್ಲಿ ಓಡುತ್ತಿರಲು ಅವನ ಬುದ್ಧಿಶಕ್ತಿಯೇ ಕಾರಣ. ಇಂದು

ಆಧುನಿಕ ಮಾನವನ ಜೀವ ವಿಕಾಸವಾಗುತ್ತಿದ್ದರೆ ಅದು ಅವನ ಮೆದುಳಿಗೆ ಸೀಮಿತವಾಗತೊಡಗಿದೆ. ಬುದ್ಧಿ ಬಲದಿಂದ ಎಲ್ಲದಕ್ಕೂ ಕೃತಕ ಉಪಾಯ ಹುಡುಕುತ್ತಿರುವ ಮನುಷ್ಯನು ಮುಂಬರುವ ಯುಗಗಳಲ್ಲಿ ನಿರ್ನಾಮವಾಗದೆ ಬದುಕಿದರೆ ದೊಡ್ಡ ತಲೆ ಮತ್ತು ಸಣ್ಣದಾದ ಶರೀರವನ್ನು ಪಡೆದ ಅತಿಶಯ ಆಧುನಿಕ (U!tra modern) ಮನುಷ್ಯನಾಗುತ್ತಾನೆ.

ಗ್ರಂಥಋಣ

1 John E. Pfeiffer (1969) : **The Emergence of Man.** Myrper and Row publishers, New York, Evanston and London.

2 Louise B. Young (1970) : **Evolution of Man.** Oxford University press.

3 L. S. B. Leaky and Morris Goodhall (1969). : **Unveiling Man's Origins.** Methuen & Co. Ltd. London.

4 Weston La Barre (1960) : **The human animal.** The University of Chicago press.

5 Michael H. Day(1969) : **Guild to Fossil Man.** Cassel London.

6 Bernad G. Campbell (1967) : **Human Evolvtion.** Heinemann Educational Books Ltd. London.

ಭಾರತದಲ್ಲಿ ರಾಷ್ಟ್ರೀಯತೆಯ ವಿಕಾಸ

● ಎನ್. ಎ. ಪಾಟೀಲ

ಸಾಮಾನ್ಯವಾಗಿ ರಾಷ್ಟ್ರೀಯತೆ ಎಂದರೆ ಸ್ವದೇಶಪ್ರೇಮವೆಂದು ಅರ್ಥ. ಆದರೆ ವಿಶಾಲವಾದ ಅರ್ಥದಲ್ಲಿ ಅದು ತನ್ನ ನಾಡಿನ ಪರಂಪರೆ, ಧರ್ಮ, ಭಾಷೆ, ಸಂಸ್ಕೃತಿಗಳ ಬಾಂಧವ್ಯವನ್ನು ಒಳಗೊಳ್ಳುತ್ತದೆ. ಮಾನವನು ಸ್ವಾಭಾವಿಕವಾಗಿ ತನ್ನ ಕುಟುಂಬ, ವಂಶ, ಜಾತಿ ಅಥವಾ ರಾಷ್ಟ್ರ ಮಾನವತೆಯನ್ನೇ ಪ್ರೀತಿಸುತ್ತಾನೆ. ಇವುಗಳಲ್ಲಿ ತನ್ನ ಮನೆತನ ಮತ್ತು ಕುಟುಂಬದ ಮೇಲಿನ ಪ್ರೇಮ ಹೆಚ್ಚು ವಸ್ತುನಿಷ್ಠವಾದದ್ದು; ಆದರೆ ರಾಷ್ಟ್ರೀಯತೆ ಸಂಕೀರ್ಣವಾದದ್ದು ಮತ್ತು ಭಾವನಾತ್ಮಕವಾದದ್ದು. ಆದ್ದರಿಂದ ರಾಷ್ಟ್ರೀಯತೆ ಗುಣದ ದೃಷ್ಟಿಯಿಂದ ತನ್ನ ಕುಟುಂಬದ ಬಾಂಧವ್ಯಕ್ಕಿಂತಲೂ ಭಿನ್ನವಾದದ್ದು. ಹಾಗೆ ನೋಡಿದಲ್ಲಿ ಅದು ಮನುಷ್ಯಕುಲಕ್ಕೆ ಹೆಚ್ಚು ಸಮೀಪವಾದದ್ದು.

ರಾಷ್ಟ್ರೀಯತೆ ಸಮಾಜದ ಐತಿಹಾಸಿಕ ಬೆಳವಣಿಗೆಯ ಫಲ. ಅದರ ತಳಹದಿ ವಂಶ ಅಥವಾ ಜನಾಂಗವೇ ಆಗಿದೆ. ಅದೆಷ್ಟೋ ಗುಣಧರ್ಮಗಳು ಅದರಲ್ಲಿ ಅಡಕವಾಗಿವೆ. ಅವುಗಳಲ್ಲಿ ಸಾಮಾನ್ಯವಾಗಿ ವಂಶ, ಭೂಮಿ, ಧರ್ಮ, ಪರಂಪರೆ ಮತ್ತು ಸಂಸ್ಕೃತಿಗಳನ್ನು ಹೆಸರಿಸಬಹುದು. ಆರ್. ಎನ್. ಗಿಲಕ್ರಿಸ್ತರ ರಾಷ್ಟ್ರೀಯತೆಯ ವಿಚಾರ ಹೀಗಿದೆ: ಒಂದೇ ವಂಶ, ಒಂದೇ ವಾಸಸ್ಥಾನ, ಒಂದೇ ಭಾಷೆ, ಒಂದೇ ಧರ್ಮ, ಒಂದೇ ಇತಿಹಾಸ ಮತ್ತು ಪರಂಪರೆ ಸಮಾನ ಅಭಿರುಚಿಗಳು, ಸಮಾನ ರಾಜಕೀಯ ಪಕ್ಷ–ಪಂಗಡಗಳು ಮತ್ತು ರಾಜಕೀಯ ಒಕ್ಕಟ್ಟಿನ

ವಿಷಯದಲ್ಲಿ ಒಂದೇ ವಿಚಾರಗಳುಳ್ಳ ಜನತೆಯ ಉನ್ನತವಾದ ಮನೋಭಾವನೆ ಅಥವಾ ತತ್ವ ಎಂಬುದು ರಾಷ್ಟ್ರೀಯತೆಯಾಗಿದೆ.

ಬರ್ಟ್ರಾಂಡ ರಸೆಲ್‌ರ ಮಾತುಗಳಲ್ಲಿ ರಾಷ್ಟ್ರೀಯತೆಯ ನಿಜವಾದ ಅರ್ಥವೆಂದರೆ ಅದೊಂದು ಮನೋಭಾವನೆ ಮತ್ತು ಪ್ರವೃತ್ತಿ–ತನ್ನತನದ ಮನೋಭಾವನೆ ಮತ್ತು ಪರಂಪರಾಪ್ರಿಯತೆಯ ಪ್ರವೃತ್ತಿ.

ರಾಷ್ಟ್ರೀಯತೆಯು ಒಂದು ಜನಾಂಗದ ಭಾವನೆಗಳನ್ನು, ಒಕ್ಕಟ್ಟನ್ನು ಪ್ರತಿನಿಧಿಸುತ್ತದೆ. ಒಂದೇ ವಾತಾವರಣದಲ್ಲಿ ಕೂಡಿ ಬಾಳುವ, ಒಂದೇ ಗುರಿಯುಳ್ಳ ಜನತೆಯ ವ್ಯಕ್ತಿತ್ವವು ಎದ್ದುಕಾಣುವಂತೆ ಮಾಡುತ್ತದೆ. ಒಂದೇ ಸಂಕೇತಕ್ಕೆ ವಿಧೇಯರಾಗಿರುವ ಸಾಮಾನ್ಯವಾದ ಜನಾಂಗದ ಭಾವೈಕ್ಯತೆಯ ಪ್ರವೃತ್ತಿಯೆಂದು ಅದನ್ನು ಕರೆಯಬಹುದು. ಅದು ಸಾಮಾನ್ಯ ಭಾಷೆ, ಧರ್ಮ, ಇತಿಹಾಸ, ಪುರಾಣ ಹಿರಿಯಾಸೆಗಳಿಂದ ಉದ್ಭೂತವಾಗಿರಲೂಬಹುದು. ಆದರೆ ಅದಕ್ಕೆ ಸ್ವದೇಶಪ್ರೇಮದ ಆಧಾರವಿರಬೇಕು.

ಎರಡು ಅತ್ಯಂತ ಹಳೆಯ ಉನ್ನತ ಭಾವನೆಗಳಾದ ರಾಷ್ಟ್ರೀಯತೆ ಮತ್ತು ಸ್ವದೇಶ ಪ್ರೇಮಗಳನ್ನು ಕರಗಿಸಿ ಮಾಡಿದ ಆಧುನಿಕ ಮನೋದ್ರಾವಣವೇ ರಾಷ್ಟ್ರೀಯತೆ ಎಂದು ಕಾರ್ಲಟನ್ ಹೇಯ್ಸ್ ಹೇಳುತ್ತಾರೆ.

ಫ್ರಾನ್ಸ ದೇಶದ ಘನತತ್ವಜ್ಞಾನಿಗಳಾದ ಅರ್ನೆಸ್ಟ ರೆನನ್‌ರು ಜನಾಭಿಪ್ರಾಯಕ್ಕೆ ಹೆಚ್ಚಿನ ಮಹತ್ವಕೊಟ್ಟು ಹೀಗೆ ಹೇಳಿದ್ದಾರೆ :

ವಂಶ, ಧರ್ಮ, ಭಾಷೆ, ರಾಷ್ಟ್ರ ನಾಗರಿಕತೆ ಅಥವಾ ಆರ್ಥಿಕ ಅಭಿರುಚಿ ಇವು ಯಾವೂ ಜನಾಂಗವಲ್ಲ. ಜನಾಂಗದ ಇರುವಿಕೆಯು ದಿನಾಲು ಅಭಿವ್ಯಕ್ತವಾಗುವ ಜನಾಭಿಪ್ರಾಯವನ್ನೇ ಹೋಲುತ್ತದೆ.

ರಾಷ್ಟ್ರೀಯ ಭಾವನೆ ಅದೊಂದು ಮಾನಸಿಕ ಹಾಗೂ ಸ್ಥಿತಿ. ಆದರೆ ಹಾನ್ಸ ಕೊಹ್ನ ಹೀಗೆ ಹೇಳಿದ್ದಾರೆ—ರಾಷ್ಟ್ರೀಯ ಭಾವನೆಯು ಸತ್ಯ ಮತ್ತು ವಸ್ತುನಿಷ್ಠತೆಗಿಂತ ಹೆಚ್ಚಾಗಿ ಮಾನಸಿಕ ಮತ್ತು ಭಾವನಾತ್ಮಕವಾದ ಅನಿಸುವಿಕೆಯೆಂದು ನಂಬಲಾಗಿದೆಯೆಂದು ಹೇಳಿದ್ದಾರೆ.

ಇತ್ತೀಚಿನ ರಾಷ್ಟ್ರೀಯ ಭಾವನೆಯು ಉದಯಕ್ಕಿಂತಲೂ ಮುಂಚೆ ಧರ್ಮವೇ ಪ್ರಭಾವಶಾಲಿಯಾದ ಶಕ್ತಿಯಾಗಿತ್ತು. ಪಾಶ್ಚಿಮಾತ್ಯ ಕ್ರಿಶ್ಚಿಯನ್ ಧರ್ಮದಲ್ಲಿಯಂತೂ ಇದು ಸತ್ಯ ಸಂಗತಿ. ಭಿನ್ನತೆಯ ಭಾವನೆಗಳನ್ನೇ ಅವಲಂಬಿಸದೆ ಧಾರ್ಮಿಕ ನಾಗರಿಕತೆಗಳನ್ನು ಅವಲಂಬಿಸಿತ್ತು. ರಾಷ್ಟ್ರೀಯ ಭಾವನೆ ಹಾಗೂ ರಾಷ್ಟ್ರೀಯತೆಗಳು ಜನತೆಯ ಧಾರ್ಮಿಕ ಮನೋಭಾವನೆಗಳಿಗನುಗುಣವಾಗಿ

ಬದಲಾವಣೆ ಹೊಂದುತ್ತ ಮುನ್ನಡೆದವು. ರಾಷ್ಟ್ರೀಯ ಚರ್ಚುಗಳು ಮೇಲಿಂದ ಮೇಲೆ ರಾಷ್ಟ್ರೀಯ ಭಾವನೆಗಳನ್ನು ಬಡಿದೆಬ್ಬಿಸಿವೆ. ಆಯರ್ಲಂಡದಲ್ಲಿ ಕ್ಯಾಥೊಲಿಕ್ ಮನೋಭೂಮಿಕೆಯು ಮೂಡಿದಂತೆ ಧರ್ಮವು ರಾಷ್ಟ್ರೀಯ ಭಾವನೆಯನ್ನು ಸಂರಕ್ಷಿಸುವದರಲ್ಲಿ ಮಹತ್ವದ ಪಾತ್ರವನ್ನು ಆಡಿತು. ಧರ್ಮದ ಪ್ರಭಾವವು ರಾಷ್ಟ್ರೀಯ ಭಾವನೆ ಬೆಳೆಯುವದಕ್ಕೆ ಮೇಲಿಂದ ಮೇಲೆ ಸಹಕಾರಿಯಾಗಿದೆ.

ರಾಷ್ಟ್ರೀಯತೆಯ ನಿರ್ಮಾಣಕ್ಕೆ ಪರಿಸರ, ಸಮಾಜ, ಐತಿಹಾಸಿಕ ಘಟನೆಗಳು, ಪರಂಪರೆ ಮುಂತಾದವು ಕಾರಣವಾಗಿವೆ. ಫ್ರಾನ್ಸ ದೇಶದಲ್ಲಿ ಜನರು ಎಬ್ಬಿಸಿದ ಕ್ರಾಂತಿ ಕ್ರಿ. ಶ. ೧೭೮೯ರಲ್ಲಿ ರಾಷ್ಟ್ರೀಯತೆಯ ಉದಯಕ್ಕೆ ಕಾರಣವಾಯಿತು. ರುಸ್ಸೋನೂ ಕೂಡಾ ಸಂಪ್ರದಾಯ ಹಾಗೂ ಪರಂಪರೆಗಳ ಮಹತ್ವವನ್ನು ಒತ್ತಿಹೇಳಿದನು. ಪ್ರತಿಯೊಂದು ಜನಾಂಗವೂ ನಿಸ್ಸಂಶಯವಾಗಿ ತನ್ನದೇ ಆದ ಸಂಪ್ರದಾಯ, ಪರಂಪರೆ ಹಾಗೂ ಸಂಸ್ಥೆಗಳನ್ನು ಹೊಂದಿರುತ್ತವೆ. ಇವೇ ಜನರು ಒತ್ತಟ್ಟಿಗೆ ಬಂದು ಒಕ್ಕಟ್ಟಾಗಿ ಬಾಳಲು ಕಾರಣವಾಗುತ್ತವೆ.

ಮಾನವನು ತನ್ನ ವಿಚಾರಗಳನ್ನು ಮಾತುಗಳಲ್ಲಿ ಅಭಿವ್ಯಕ್ತಗೊಳಿಸುತ್ತಾನೆ. ಅಂತೆಯೇ ಭಾಷೆಯು ವಿಚಾರದ ವಾಹನವಾಗಿದೆ. ಆದ್ದರಿಂದ ಒಂದು ಭಾಷೆಯು ಜನರನ್ನು ಒಂದುಗೂಡಿಸುತ್ತದೆ. ಹೀಗೆ ವಿಶಿಷ್ಟ ಭಾಷೆಯ ಜನರು ತಾವು ಒಂದೆಂಬ ಭಾವನೆಯನ್ನು ತಮ್ಮಲ್ಲಿಯೇ ಬೆಳೆಸಿಕೊಳ್ಳುತ್ತಾರೆ. ಇದೇ ಮುಂದೆ ರಾಷ್ಟ್ರೀಯ ಭಾವನೆಯು ಮೊಳಕೆಯೊಡೆಯುವಂತೆ ಮಾಡುತ್ತದೆ. ಈ ಮಾತು ಅನೇಕ ರಾಷ್ಟ್ರಗಳ ವಿಷಯದಲ್ಲಿ ನಿಜವಾಗಿದೆ. ಆದರೆ ಅದೆಷ್ಟೋ ರಾಷ್ಟ್ರೀಯತೆಗಳಿಗೆ ಸಾಮಾನ್ಯವಾದ ಭಾಷೆಯೇ ಇರುವದಿಲ್ಲ. ಆದರೂ ಅವರು ತಮ್ಮಲ್ಲಿ ತಮ್ಮದೇ ಆದ ರಾಷ್ಟ್ರೀಯ ಭಾವನೆಯನ್ನು ಬೆಳೆಸಿಕೊಂಡಿರುತ್ತಾರೆ. ಇದಕ್ಕೆ ಒಂದೇ ವಂಶ, ಕುಲ, ಒಂದೇ ರಾಜಕೀಯ ಹೆಬ್ಬಯಕೆಗಳಂಥ ಪ್ರಭಾವೀ ಸಂಗತಿಗಳೇ ಕಾರಣವಾಗಿವೆ. ಸ್ವಿತ್ಝರ್ಲಂಡದಲ್ಲಿ ನಾಲ್ಕು ರಾಷ್ಟ್ರೀಯ ಭಾಷೆಗಳಿದ್ದರೂ ಅದು ತನ್ನದೇ ಆದ ರಾಷ್ಟ್ರೀಯತೆಯನ್ನು ಬೆಳೆಸಿಕೊಂಡು ಬಂದಿದೆ. ಇದಕ್ಕೆ ನಾವು ಹಿಂದೆ ನಮೂದಿಸಿದ ಬೇರೆ ಕಾರಣಗಳೂ ಇವೆ. ಭಾರತದಲ್ಲಿಯೂ ಇವೇ ಅಂಶಗಳನ್ನು ಕಾಣಬಹುದು.

ಒಂದೇ ಬಗೆಯ ರಾಜಕೀಯ ಪ್ರವೃತ್ತಿ ಮತ್ತು ಸಾಮಾನ್ಯ ರಾಜಕೀಯ ಹಿರಿಯಾಸೆಗಳು ಜನತೆಯಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ನಿರ್ಮಿಸುತ್ತವೆ. ಸುರಕ್ಷಿತತೆ, ಭದ್ರತೆ ಮತ್ತು ಸಂರಕ್ಷಣೆಗಳು ಬೇರೆ ಬೇರೆ ಜನಾಂಗಗಳಲ್ಲಿ ಒಕ್ಕ

ಟ್ಟಿನ ಭಾವನೆಯನ್ನು ಉಂಟುಮಾಡಿ ರಾಷ್ಟ್ರೀಯತೆಯ ಉಗಮಕ್ಕೆ ಸಹಕಾರಿಯಾಗುತ್ತವೆ.

ಕಲೆ ಮತ್ತು ಶಿಕ್ಷಣದ ಪುನರುಜ್ಜೀವನವು ಬೌದ್ಧಿಕ, ಸಾಮಾಜಿಕ, ವೈಜ್ಞಾನಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಚಮತ್ಕಾರಿ ಬೆಳವಣಿಗೆಯನ್ನು ಉಂಟುಮಾಡಿತು. ಈ ಬೆಳವಣಿಗೆಗಳು ಮಾನವನ ಜೀವನದ ಪ್ರತಿಯೊಂದು ಹಂತದಲ್ಲಿಯೂ ಪರಿಣಾಮವನ್ನುಂಟುಮಾಡಿದವು; ಮತ್ತು ಅವನನ್ನು ಮಧ್ಯಯುಗದ ವಿಚಾರಸರಣಿಯ ಬಂಧನದಿಂದ ಮುಕ್ತನನ್ನಾಗಿ ಮಾಡಿದವು. ಈ ಪುನರುಜ್ಜೀವನವು ಸ್ವತಂತ್ರವಾದ ಕುತೂಹಲ ಪ್ರವೃತ್ತಿಯನ್ನು ನಿರ್ಮಿಸುವದರ ಜೊತೆಗೆ ವಿಚಾರ ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸಿತು. ವ್ಯಾಪಾರ ಹಾಗೂ ಉದ್ಯೋಗಗಳ ಬೆಳವಣಿಗೆಯ ಫಲವಾಗಿ ನಿರ್ಮಾಣಗೊಂಡ ಮಧ್ಯಮ ವರ್ಗವು ಊಳಿಗಮಾನ್ಯದ ಬಂಧನಗಳನ್ನು ಕಳಚಿ ಒಗೆಯಿತು. ಸಿಡಿಮದ್ದಿನ ಸಂಶೋಧನೆಯು ಯುದ್ಧಕಲೆಯಲ್ಲಿ ಕ್ರಾಂತಿಯನ್ನುಂಟುಮಾಡಿತು. ಅದು ಸೈನ್ಯದ ಹಾಗೂ ಸರದಾರರ ಮಹತ್ವವನ್ನು ಕಡಿಮೆ ಮಾಡಿತು. ರಾಜನ ಮಹತ್ವ ಮತ್ತು ಅಧಿಕಾರವನ್ನು ಅಧಿಕಗೊಳಿಸಿತು.

ಚಕ್ರಾಧಿಪತ್ಯಗಳ ಉದಯದೊಂದಿಗೆ ಪ್ರತಿಯೊಂದು ರಾಷ್ಟ್ರದಲ್ಲಿಯ ರಾಷ್ಟ್ರೀಯ ಭಾವನೆಗಳ ಜೊತೆಯಲ್ಲಿ ವರ್ಗ ಹಾಗೂ ಸ್ಥಾನಿಕ ಪ್ರಯೋಜನಗಳ ನಡುವೆ ತಾಕಲಾಟವಾಗುತ್ತಿದ್ದರೂ ಈ ರಾಷ್ಟ್ರೀಯ ಭಾವನೆ ಹಾಗೆಯೇ ಬೆಳೆಯುತ್ತಲೇ ಹೋಯಿತು. ಪ್ರಾಮುಖ್ಯವಾದ ಜಹಗೀರುದಾರಿಕೆಯು ಕಳೆಗುಂದುತ್ತಿದ್ದಂತೆಯೇ ಜನರಲ್ಲಿ ಆತ್ಮ-ಸಮ್ಮಾನದ ಹಾಗೂ ರಾಷ್ಟ್ರೀಯತೆಯ ಭಾವನೆಗಳು ಮೂಡಿಬಂದವು. ಮೊದಲು ವಿಚ್ಛಿನ್ನವಾಗಿದ್ದ ಜನಾಂಗಗಳಲ್ಲಿ ಸಾಮಾನ್ಯವಾದ ಅಭಿರುಚಿಗಳನ್ನುಂಟುಮಾಡಲು ಈ ಬದಲಾವಣೆಯು ಅನುಕೂಲವಾಯಿತು. ವರ್ಗಗಳು ಜನಾಂಗಗಳಲ್ಲಿಯೂ ಸ್ಥಾನಿಕ ಅಭಿರುಚಿಗಳು ರಾಷ್ಟ್ರೀಯ ಭಾವನೆಗಳಲ್ಲಿಯೂ ಪರಿವರ್ತನೆ ಹೊಂದಿದವು. ಈ ರಾಷ್ಟ್ರೀಯ ಭಾವೈಕ್ಯತೆಯು ಮಧ್ಯಯುಗದ ವರ್ಗ ಪ್ರಾಧಾನ್ಯತೆಯನ್ನು ಉಚ್ಚಾಟನೆಗೊಳಿಸಿ ಅದರ ಸ್ಥಾನದಲ್ಲಿ ರಾಷ್ಟ್ರೀಯತೆಯ ಮನೋಭಾವನೆಯ ಶ್ರೇಷ್ಠತೆಯನ್ನು ಪ್ರತಿಷ್ಠಾಪಿಸಿತು. ಈ ಕಾರಣದಿಂದ ಉಂಟಾಗುತ್ತಿರುವ ಈ ರಾಷ್ಟ್ರೀಯ ಜಾಗೃತಿಯಲ್ಲಿ ಸಾಮಾನ್ಯವಾದ ಸಾಮಾಜಿಕ, ಆರ್ಥಿಕ, ರಾಜಕೀಯ ಹೆಬ್ಬಯಕೆಗಳು ನಿಜವಾಗಿಯೂ ಪ್ರಧಾನ ಪಾತ್ರವನ್ನಾಡಿದವು.

ಭಾರತೀಯ ರಾಷ್ಟ್ರೀಯತೆಯು ವಿಭಿನ್ನ ಸಂಗತಿಗಳಿಂದ ಒಡಮೂಡಿದುದಾಗಿದೆ. ಪಾಶ್ಚಿಮಾತ್ಯರಲ್ಲಿ ಎದ್ದುಕಾಣುವ ಕೆಲವು ವಿಶಿಷ್ಟ ಅಂಶಗಳಿಂದ ಇದು

ಭಿನ್ನವಾಮುದು. ವ್ಹಿ.ಪಿ.ಎಸ್. ರಘುವಂಶಿಯವರು ಪ್ರೊ. ಹಕ್ಸಲೆಯವರ ಶಬ್ದಗಳನ್ನು ಹೀಗೆ ಉದಾಹರಿಸುತ್ತಾರೆ:

ಭಾರತದ ಪ್ರಾಕೃತಿಕ ರಚನೆ ಚೌಕೋನದಂತಿದ್ದು, ಅದರ ಉತ್ತರದ ಮೂಲೆ ಲಡಾಖಿನಲ್ಲಿದ್ದರೆ ದಕ್ಷಿಣದ ಮೂಲೆ ಕನ್ಯಾಕುಮಾರಿಯಲ್ಲಿದೆ. ಅದರ ಕ್ಷೇತ್ರ ಎರಡು ದಶಲಕ್ಷ ಚದುರು ಮೈಲುಗಳು. ಇತಿಹಾಸದಾದ್ಯಂತ ಅದು ಸಮೃದ್ಧ ನಾಗರಿಕತೆಯನ್ನೇ ಹೊಂದಿದೆ. ಭಾರತದ ರಾಷ್ಟ್ರೀಯತೆಯಲ್ಲಿಯ ಭಿನ್ನತೆಯ ವಿಷಯವಾಗಿಯೂ ಮತ್ತು ಭಾರತೀಯರೆಂದರೆ ಅರಣ್ಯ ನಿವಾಸಿಗಳೆಂದು ಪಾಶ್ಚಿಮಾತ್ಯ ವಿಮರ್ಶಕರು ಸಾಮಾನ್ಯವಾಗಿ ನುಡಿದಿದ್ದಾರೆ. ಅವರಲ್ಲಿ ಬಹಳಷ್ಟು ಜನರು ಭಾರತವೆಂಬ ದೇಶವೇ ಇಲ್ಲ; ಭಾರತೀಯರೆಂಬ ಜನಾಂಗವೇ ಇಲ್ಲವೆನ್ನುವಷ್ಟರ ಮಟ್ಟಿಗೆ ತಪ್ಪು ಭಾವನೆಯುಳ್ಳವರಾಗಿದ್ದಾರೆ. ಭಾಷೆ, ವಂಶ ಮತ್ತು ಧರ್ಮಗಳಲ್ಲಿಯ ಅಂತರವನ್ನು ಅಲ್ಲಗಳೆದು ಕೇವಲ ಸಾಂಸ್ಕೃತಿಕ ಸಮತೆಯೊಂದನ್ನೇ ರಾಷ್ಟ್ರೀಯ ತಳಹದಿಯೆಂದು ಪರಿಗಣಿಸುವದಾದರೆ ಅಂಥದು ಭಾರತದಲ್ಲಿ ಅಷ್ಟೇ ಏಕೆ ಜಗತ್ತಿನ ಯಾವ ಮೂಲೆಯಲ್ಲಿಯೂ ಇದ್ದಿರಲಾರದು. ಭೌಗೋಲಿಕ ಹಾಗೂ ಇತರ ಸಾವಿರಾರು ವರ್ಷಗಳ ಅಂಶಗಳನ್ನು ಅವಲೋಕಿಸಿ ಖಂಡಿತವಾಗಿಯೂ ಭಾರತ ಅದೊಂದು ರಾಷ್ಟ್ರವೆಂದು ಹೇಳಬಹುದು. ಪ್ರಾಚೀನ ಋಷಿಮುನಿಗಳು ಸುಂದರವಾದ ಆರ್ಯಾವರ್ತದ ಬಯಲಿನಲ್ಲಿ ಮಂತ್ರಗಳನ್ನು ರಚಿಸುತ್ತಿದ್ದ ಕಾಲದಿಂದಲೂ ಧರ್ಮವು ಭಾರತದ ಐಕ್ಯತೆಯ ಅಡಿಯಲ್ಲಾಗಿದೆ. ಭಾರತೀಯ ಸಮಾಜದ ಜನಾಂಗಿಕ; ಧಾರ್ಮಿಕ; ಭಾಷಿಕ ಭಿನ್ನತೆಗಳು ಎದ್ದು ಕಾಣುತ್ತಿದ್ದರೂ ಅವುಗಳಲ್ಲಿ ಮೂಲಭೂತವಾದ ಏಕತೆ ನೆಯ್ದುಕೊಂಡಿದೆ. ಇದುವೇ ಅದರ ವೈಶಿಷ್ಟ್ಯ.

ಅವರು ಮತ್ತೆ ಹೀಗೆ ಹೇಳುತ್ತಾರೆ: ಬ್ರಿಟಿಶರು ಭಾರತಕ್ಕೆ ಬರುವದಕ್ಕಿಂತ ಮೊದಲು ಭಾರತದಲ್ಲಿ ರಾಷ್ಟ್ರೀಯ ಭಾವನೆಯೇ ಮೂಡಿರಲಿಲ್ಲವೆಂಬ ಪಾಶ್ಚಿಮಾತ್ಯರ ಅಭಿಪ್ರಾಯ ಸತ್ಯವಾಗಿರಲೂಬಹುದು. ಮಧ್ಯಯುಗದ ಊಳಿಗಮಾನ್ಯದ ವಾತಾವರಣದಲ್ಲಿ ಅದು ಸಾಧ್ಯವಾಗದೇ ಹೋಗಿರಬಹುದು. ಧರ್ಮ ಹಾಗೂ ರಾಜಕಾರಣಗಳ ಮಧ್ಯಯುಗದಲ್ಲಿ ಸರ್ವತೋಮುಖತೆ ಅಥವಾ ಸಾರ್ವತ್ರಿಕತೆಯು ಧರ್ಮ ಹಾಗೂ ರಾಜಕಾರಣಗಳ ಆದರ್ಶವಾಗಿದ್ದಿತು.

ರಾಷ್ಟ್ರೀಯತೆಯ ವಿಚಾರ ಪ್ರಮುಖವಾಗಿ ಆಧುನಿಕ ಕಾಲದ್ದು. ತನ್ನದೇ ಆದ ನೆಲವನ್ನು ಹೊಂದಿದ, ಪರಮಾಧಿಕಾರವುಳ್ಳ, ಸ್ವತಂತ್ರವಾದ ರಾಜಕೀಯ ಜನಾಂಗದ ಕಲ್ಪನೆಯೇ ಈ ರಾಷ್ಟ್ರೀಯತೆ. ಒಂದು ದೇಶದ ಜನತೆ ತಮ್ಮಲ್ಲಿ

ಮೂಡಿಸಿಕೊಂಡ ಸಾಮಾನ್ಯವಾದ ರಾಜಕೀಯ ಜಾಗೃತಿ ಅಥವಾ ಸ್ವದೇಶ ಪ್ರೇಮವೇ ರಾಷ್ಟ್ರೀಯ ಭಾವನೆಯ ಅರ್ಥ ಕೊಡುತ್ತದೆ. ಭೌತಿಕ ಉನ್ನತಿಯ ಮುಂದಿನ ಮೆಟ್ಟಲಿನಲ್ಲಿದ್ದ ಜನತೆಯ ಜಾಗೃತ ಸ್ಥಿತಿಯನ್ನು ಅದು ಪ್ರತಿನಿಧಿಸು- ತ್ತದೆ. ಅದು ದೇಶವ್ಯಾಪಿ ರಾಜಕೀಯ ಆರ್ಥಿಕ ಹಾಗೂ ವ್ಯವಹಾರಿಕ ಒಗ್ಗೂಡು ವಿಕೆಯನ್ನು ಸೂಚಿಸುತ್ತದೆ. ಆಧುನಿಕ ತಳಹದಿಯ ಮೇಲೆ ತನ್ನ ಸಮಾಜವು ಬೆಳೆದಂತೆಲ್ಲ ೧೯ನೇ ಶತಮಾನದಲ್ಲಿ ಪರಕೀಯ ಆಡಳಿತೆಯ ಅಪ್ರತ್ಯಕ್ಷ ಪರಿಣಾಮ ವಾಗಿ ಉಂಟಾದ ರಾಜಕೀಯ ಹಾಗೂ ಆರ್ಥಿಕ ಸಂಘಟನೆಯ ಕಾರಣದಿಂದ ಭಾರತವು ಇಂಥ ಜಾಗೃತ ಮನೋಭಾವನೆಯನ್ನು ತಳೆಯಿತು. ಪರಕೀಯ ಆಡಳಿತದ ವಿರುದ್ಧದ ರೋಷ ಈ ಜಾಗೃತ ಮನೋಭಾವನೆಯನ್ನು ಇನ್ನೂ ಹದನ ಗೊಳಿಸಿತು; ಮತ್ತು ರಾಷ್ಟ್ರೀಯ ಹೋರಾಟಕ್ಕೆ ಜನ್ಮವಿತ್ತಿತು.

ಜಯಪ್ರಕಾಶ ನಾರಾಯಣರ ಮಾತುಗಳಲ್ಲಿ ಹೇಳುವದಾದರೆ ಭಾರತದ ರಾಷ್ಟ್ರೀಯ ಭಾವನೆಯು ತುಂಟತನದ ಬ್ರಿಟಿಶ್ ಸಾರ್ವಭೌಮತ್ವಕ್ಕೆ ಪ್ರತಿಕ್ರಿಯೆ ಯಾಗಿ ಬೆಳೆದುಬಂದಿತು. ಆದರೆ ದುರ್ದೈವದಿಂದ ಭಾರತೀಯರೆಲ್ಲರನ್ನೂ ಮಾನಸಿಕವಾಗಿ ಒಂದು ರಾಷ್ಟ್ರೀಯರಂತೆ ಬೆಸೆಯಲು ಅದು ಸಮರ್ಥವಾಗಲಿಲ್ಲ.

ರಾಷ್ಟ್ರೀಯತೆಯು ೧೯ನೆಯ ಶತಮಾನದ ಯುರೋಪದಲ್ಲಿ ಪ್ರಬಲವಾಯಿತು. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಇತರ ಸಮಸ್ಯೆಗಳು ಈ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದವು. ೧೯ನೆಯ ಶತಮಾನದ ಮೊದಲಿನ ಕಾಲುಭಾಗದಲ್ಲಿ ಯುರೋಪಖಂಡದಲ್ಲಿ ಬೀಸಿದ ಸ್ವಾತಂತ್ರ್ಯದ ಗಾಳಿಯು ಭಾರತದ ಮೇಲೆಯೂ ಪರಿಣಾಮ ಮಾಡಿತು. ಭಾರತದ ಸುಶಿಕ್ಷಿತ ಜನತೆಯು ತಾವು ಬಾಳುವ ಆ ಸ್ಥಿತಿಯಿಂದ ಬದಲಾವಣೆಗಳನ್ನು ಬಯಸಿತು. ಭಾರತವು ಪರಕೀಯ ಸಾಮ್ರಾಜ್ಯ ಶಾಹಿಯ ಆಡಿಯಲ್ಲಿ ಪ್ರಸವವೇದನೆಯನ್ನು ಅನುಭವಿಸುತ್ತಿದ್ದುದರಿಂದ ಜನತೆಯ ಆಕಾಂಕ್ಷೆಗಳು ಪೂರೈಸಲ್ಪಡಲಿಲ್ಲ. ಜನರು ಆಗಿಂದಾಗ್ಗೆ ಕ್ಷಾಮ-ಬರ ಗಾಲಗಳಿಂದ ತೊಳಲಾಡುತ್ತಿದ್ದರು. ಹಳ್ಳಿಯ ಹೋರೆಗಳು ಹಾಳಾದವು. ಉನ್ನತ ದರ್ಜೆಗಳಲ್ಲಿ ಸೇವೆಗೈಯುವ ಸದವಕಾಶಗಳನ್ನು ಭಾರತೀಯರಿಗೆ ನಿರಾಕರಿ ಸಲಾಯಿತು. ಉನ್ನತ ಹುದ್ದೆಗಳ ನೇಮಕದಲ್ಲಿ ಜನಾಂಗೀಯ ವೈಷಮ್ಯ ಆಧಾರವಾಯಿತು. ೧೮೫೭ರ ಸಿಪಾಯಿ ಬಂಡಾಯದ ನಂತರ ಬ್ರಿಟಿಷರು ಭಾರತೀಯರಲ್ಲಿ ಧಾರ್ಮಿಕ ಅನೈಕ್ಯತೆಯನ್ನುಂಟುಮಾಡಿದರು. ಇಲ್ಬರ್ಟ ಬಿಲ್‌ನ್ನು ವಿರೋಧಿಸಿದರು. ಬ್ರಿಟಿಷ್ ಆಡಳಿತಗಾರರಿಂದ ಸಮಾನತೆಯು ದೊರೆಯ ಲಾರದೆಂದು ಭಾರತೀಯರು ಭಾವಿಸಿದರು. ಲಾರ್ಡ ಲಿಟನ್‌ನ ಯೋಜನೆ ಗಳು ಬ್ರಿಟಿಷ್ ಸರಕಾರದ ವಿರುದ್ಧ ಅತೃಪ್ತಿಯು ವೃದ್ಧಿಸುವಂತೆ ಮಾಡಿದವು.

ಇಂಗ್ಲಿಷ ಕಲಿತ ಭಾರತೀಯ ಜನರ ಅಪರೋಕ್ಷ ಅತೃಪ್ತಿಯು ಕೂಡಲೇ ಹೋರಾಟದಲ್ಲಿ ಪರ್ಯವಸಾನಹೊಂದಿತು.

ಜನರು ತೊಳಲಾಡುತ್ತಿರುವ ತಾಪತ್ರಯಗಳ ವಿಷಯದಲ್ಲಿ ಸಾರ್ವತ್ರಿಕ ಅಭಿಪ್ರಾಯವನ್ನು ಕ್ರೋಢೀಕರಿಸುವದರಲ್ಲಿ ಪತ್ರಿಕೆಗಳು ಮಹತ್ವದ ಪಾತ್ರವನ್ನಾಡಿದವು. ಇದು ಕ್ರಾಂತಿಯ ಮಹತ್ವವುಳ್ಳ ಘಟನೆಯಾಗಿತ್ತು ಮತ್ತು ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಯು ಜಾಗೃತವಾಗುವಂತೆ ಮಾಡಿತು. ೧೯ನೆಯ ಶತಮಾನದ ಆದಿಭಾಗದಲ್ಲಿ ಸ್ಥಾಪಿತವಾದ ಮುದ್ರಣ ಯಂತ್ರವು ಭಾರತೀಯ ಭಾಷೆಗಳಲ್ಲಿ ಪುಸ್ತಕಗಳು ಹೊರಬರಲು ಮತ್ತು ಮುದ್ರಣ ಸಾಹಿತ್ಯವು ಉಂಟಾಗಲು ಕಾರಣವಾಯಿತು; ಇದು ಬೌದ್ಧಿಕಜೀವನದಲ್ಲಿ ಹೊಸ ಬೆಳವಣಿಗೆಯಾಯಿತು; ಏಕೆಂದರೆ ಇಲ್ಲಿಯ ವರೆಗೆ ಭಾರತೀಯ ಸಾಹಿತ್ಯವು ಪಾರಮಾರ್ಥಿಕ ಅಥವಾ ಧಾರ್ಮಿಕ ವಿಷಯಗಳನ್ನೊಳಗೊಂಡ ಛಂದೋಬದ್ಧವಾದ ಕಾವ್ಯವೇ ಆಗಿತ್ತು.

ಬೇರೆ ಬೇರೆ ಪ್ರಾಂತಗಳಿಗೆ ಸೇರಿದ ಸುಶಿಕ್ಷಿತ ಭಾರತೀಯರ ನಡುವಣ ಸಂಪರ್ಕ ಭಾಷೆ ಇಂಗ್ಲೀಷ್ ಭಾಷೆಯಾಯಿತು. ಅದು ಸಾಮಾಜಿಕ, ರಾಜಕೀಯ ಹಾಗೂ ವೈಜ್ಞಾನಿಕ ವಿಷಯಗಳ ಅಭಿವ್ಯಕ್ತಿಯ ಮಾಧ್ಯಮವಾಯಿತು. ಪರಸ್ಪರ ಸಂಬಂಧ ನಿರ್ಮಾಣಕ್ಕೆ ಮತ್ತು ವಿಚಾರಗಳ ವಿನಿಮಯಕ್ಕೆ ರೇಲ್ವೆಯೂ ಕೂಡಾ ಸಹಾಯಮಾಡಿತು. ರೇಲ್ವೆ, ತಂತಿ ಮತ್ತು ಅಂಚೆ ಸೌಕರ್ಯಗಳು ಅಂತರವನ್ನು ಕಡಿಮೆಮಾಡಿದವು. ಮತ್ತು ಬ್ರಿಟಿಷ್ ಆಡಳಿತೆಯಿಂದ ಉದ್ಭವಿಸಿದ ಬಾಳಿನ ಹೊಸ ರೂಪದ ವಿಷಯವಾಗಿ ಜನರಲ್ಲಿ ಸಾಮಾನ್ಯವಾದ ತಿಳುವಳಿಕೆಯನ್ನು ವೃದ್ಧಿಗೊಳಿಸಿದವು. ಸಿವ್ಹಿಲ್ ಸರ್ವಿಸ್ ಪರೀಕ್ಷೆಗಳಿಗೆ ವಯಸ್ಸಿನ ನಿರ್ಬಂಧವನ್ನು ೨೧ ರಿಂದ ೧೯ಕ್ಕೆ ಇಳಿಸಿದ್ದರ ವಿರುದ್ಧವಾಗಿ ಉತ್ತರ ಮತ್ತು ಪಶ್ಚಿಮ ಭಾರತಗಳಲ್ಲಿ ಬಿರುಗಾಳಿಯಂಥ ಆಂದೋಲನವನ್ನು ಸಂಘಟಿಸಲು ಸುರೇಂದ್ರನಾಥ ಬ್ಯಾನರ್ಜಿಯವರಿಗೆ ಸಹಾಯ ಮಾಡಿದ್ದು ರೇಲ್ವೆಯೇ. ಅವರ ಚಳವಳಿಯು ಅತ್ಯಂತ ಯಶಸ್ವಿಯಾಯಿತು.

ಅವರು ಕಲಕತ್ತೆಯಲ್ಲಿ ಕ್ರಿ. ಶ. ೧೮೭೬ ರಲ್ಲಿ ಭಾರತೀಯ ಸಂಸ್ಥೆಯನ್ನು ಸಂಘಟಿಸಿದರು. ನೇರವಾದ ಮನವಿಗಳಿಂದ ಜನರ ಅಭಿಪ್ರಾಯವನ್ನು ಕ್ರೋಢೀಕರಿಸಲು ಕೇವಲ ಸುಶಿಕ್ಷಿತ ಮಧ್ಯಮ ವರ್ಗದವರೇ ಅಲ್ಲಿ ಕೂಡಿದ್ದರು. ಧರ್ಮದ, ಭಾಷೆಯ ಭಿನ್ನತೆ ಇದ್ದರೂ ಭಾರತೀಯರು ಒಕ್ಕಟ್ಟಾಗಿ ದುಡಿಯಬಲ್ಲರೆಂಬುದನ್ನು ತೋರಿಸುವದಕ್ಕಾಗಿಯೇ ಅಲ್ಲಿ ಈ ರಾಷ್ಟ್ರೀಯ ಚಳವಳಿಯನ್ನು ಸಂಘಟಿಸಲಾಗಿತ್ತು. ಲಾರ್ಡ ಲಿಟನ್‌ರಿಂದ ಪಾಸಾದ ಆರ್ಮ್ಸ್ ಆ್ಯಕ್ಟ ಮತ್ತು

ವ್ಹರ್ನ್ಯಾಕ್ಯುಲರ್ ಪ್ರೆಸ್ ಆ್ಯಕ್ಟುಗಳು ಭಾರೀ ವಿರೋಧವನ್ನು ಪ್ರಚೋದಿಸಿದವು; ಮತ್ತು ಭಾರತೀಯ ರಾಷ್ಟ್ರೀಯ ಜೀವನವು ರೂಪುಗೊಳ್ಳಲು ದಾರಿ ಮಾಡಿ ಕೊಟ್ಟವು. ಪ್ರತಿಗಾಮಿ ಆಡಳಿತೆಯು ಆಗಿಂದಾಗ್ಗೆ ಜನತಾ ಚಳವಳಿಗಳನ್ನು ನಿರ್ಮಿಸುತ್ತಿದೆಯೆಂಬುದನ್ನು ಇತಿಹಾಸವು ಕಲಿಸುತ್ತಲೇ ಬಂದಿದೆ. ಭಾರತೀಯ ಧಾರ್ಮಿಕ ಸುಧಾರಕರಾದ ರಾಜಾರಾಮ ಮೋಹನರಾಯ, ಸ್ವಾಮಿ ದಯಾನಂದ ಸರಸ್ವತಿ ಮತ್ತು ಸ್ವಾಮಿ ವಿವೇಕಾನಂದರು ಜನರಿಗೆ ಆಶೆಯ ಹೊಸ ಸಂದೇಶ ವನ್ನು ಕೊಟ್ಟದ್ದಲ್ಲದೆ ಧರ್ಮದ ಶಕ್ತಿಸಾಮರ್ಥ್ಯಗಳ ವಿಷಯದಲ್ಲಿ ನಂಬುಗೆ ಯನ್ನುಂಟುಮಾಡಿದರು. ಸಂಕ್ಷಿಪ್ತವಾಗಿ ವಿವರಿಸುವದಾದರೆ ತಮ್ಮ ವಂಶದ ವಿಷಯವಾಗಿ ಬ್ರಿಟಿಶರಲ್ಲಿಯ ಉಚ್ಚಭಾವ, ರಾಷ್ಟ್ರ ವಿರೋಧಿ ಧೋರಣೆ ಮತ್ತು ಇವುಗಳಿಂದ ಉದ್ಭವಿಸಿದ ಆರ್ಥಿಕ ಮುಗ್ಗಟ್ಟುಗಳು, ಭಾರತೀಯ ರಾಷ್ಟ್ರೀಯ ತೆಯ ಬೆಳವಣಿಗೆಗೆ ಪ್ರಮುಖ ಕಾರಣಗಳಲ್ಲಿ ಕೆಲವು.

ಮೇಲ್ಮಟ್ಟದ ಸೇವೆಗಳಲ್ಲಿ ಪಾಲ್ಗೊಳ್ಳುವದಷ್ಟೇ ಭಾರತೀಯರಿಗೆ ಬೇಕಾಗಿರ ಲಿಲ್ಲ. ಅವರಿಗೆ ಇಡೀ ಆಡಳಿತೆಯನ್ನೇ ಜನತೆಯ ಅಧೀನಕ್ಕೆ ತರುವದು ಬೇಕಾಗಿತ್ತು. ರಾಷ್ಟ್ರೀಯ ಕಾಂಗ್ರೆಸ್ಸಿನ ಪಿತನೆಂದು ಪರಿಗಣಿಸಲ್ಪಟ್ಟ ಎ. ಓ. ಹ್ಯೂಮರು ಕ್ರಿ. ಶ. ೧೮೮೩ ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದ ಪದವೀಧರರಿಗೆ ಬಹಿರಂಗ ಪತ್ರ ಬರೆದು ಬೌದ್ಧಿಕ, ನೈತಿಕ, ಸಾಮಾಜಿಕ ಮತ್ತು ರಾಜಕೀಯ ಪುನರುಜ್ಜೀವನಕ್ಕಾಗಿ ಭಾರತೀಯರ ಒಂದು ಸಂಸ್ಥೆಯನ್ನು ಸಂಘಟಿಸ ಬೇಕೆಂದು ಕರೆಯಿತ್ತರು. ಸರ್ ಹ್ಯೂಮ, ವೆಡರಬರ್ನ ಮತ್ತು ಆ್ಯನಿ ಬೆಸೆಂಟ ರಂಥ ಬ್ರಿಟಿಶ ರಾಜನೀತಿ ನಿಪುಣರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ತಳಹದಿ ಹಾಕಿದರೆಂಬುದು ಸಂತೋಷದಾಯಕವಾದುದು. ಹೀಗೆ ಅಧಿಕಾರಿಗಳ ಸಹಾಯ ಸಹಕಾರಗಳೊಂದಿಗೆ ಭಾರತದ ಮುಖಂಡರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸನ್ನು ಕ್ರಿ. ಶ. ೧೮೮೫ ರಲ್ಲಿ ಮುಂಬೈಯಲ್ಲಿ ಪ್ರಾರಂಭಿಸಿದರು. ಸುಪ್ರಸಿದ್ಧ ವಕೀಲರಾದ ಡಬ್ಲ್ಯು. ಸಿ. ಬೊನರ್ಜಿಯವರು ಆಗ ಅದರ ಅಧ್ಯಕ್ಷರಾಗಿದ್ದರು. ಅಂದಿನಿಂದ ಕಾಂಗ್ರೆಸ್ಸು ಪ್ರತಿವರ್ಷವೂ ಅಧಿವೇಶನವನ್ನು ನೆರವೇರಿಸುತ್ತ ಬಂತು; ಮತ್ತು ಅದು ಪ್ರಾಮುಖ್ಯವಾಗಿ ಸರಕಾರದ ಧೋರಣೆಗಳನ್ನು ದೃಢೀಕರಿಸುತ್ತ ಹಾಗೂ ಕೆಲವು ತೊಂದರೆಗಳ ಸುಧಾರಣೆಗೆ ಮನವಿ ಮಾಡುತ್ತ ಮುಂದೆ ಸಾಗಿತು.

ಪ್ರಾರಂಭದಲ್ಲಿ ಸರಕಾರವು ಕಾಂಗ್ರೆಸ್ಸನ್ನು ಸಹಾನುಭೂತಿಯಿಂದ ಕಂಡು ಅವರ ಅಧಿವೇಶನಗಳಲ್ಲಿ ಭಾಗವಹಿಸುತ್ತ ನಡೆಯಿತು. ನಂತರ ಕಾಂಗ್ರೆಸ್ಸು ಸರಕಾರವನ್ನು ಟೀಕಿಸಲು ಪ್ರಾರಂಭಿಸಿದಂತೆಲ್ಲ ಸರಕಾರಿ ಅಧಿಕಾರಿಗಳು ತಮ್ಮ

ವಿಚಾರಗಳನ್ನು ಬದಲಿಸಿ ಸಾವಕಾಶವಾಗಿ ಅವರು ಈ ಕಾಂಗ್ರೆಸ್ ಚಳವಳಿಯಿಂದ ದೂರ ಸರಿದರು. ತನ್ನ ನಿವೃತ್ತಿಯ ಕಾಲದಲ್ಲಿ ಲಾರ್ಡ ಡಫರಿನ್‌ರು ಕಾಂಗ್ರೆಸ್ಸಿನ ನೀತಿ ಹಾಗೂ ಧೋರಣೆಗಳ ವಿಷಯದಲ್ಲಿ ಅಸಮ್ಮತಿಯನ್ನು ಸೂಚಿಸಿದರು. ಕಾಂಗ್ರೆಸ್ ಅಧಿವೇಶನಗಳು ನಡೆಯುದಂತೆ ಸರಕಾರವು ಎಲ್ಲ ರೀತಿಯ ತೊಂದರೆಗಳನ್ನು ಮಾಡಹತ್ತಿತು. ಸರಕಾರದ ವೈರತ್ವವು ದಿನದಿನಕ್ಕೂ ವರ್ಧಿಸುತ್ತಲೇ ನಡೆಯಿತು; ಅದರಂತೆ ಕಾಂಗ್ರೆಸ್ಸಿನ ಗೊತ್ತುವಳಿಗಳು ಸರಕಾರದ ಗಮನ ಸೆಳೆಯುವದರಲ್ಲಿ ಯಶಸ್ವಿಯಾಗುತ್ತಿದ್ದವು. ಜನತೆಯ ಅಭಿಪ್ರಾಯವನ್ನು ಕ್ರೋಢೀಕರಿಸಿ ಸರಕಾರದ ಮೇಲೆ ಒತ್ತಾಯ ತರಲು ಅದು ನಿರ್ಧರಿಸಿತು. ಹೀಗೆ ಕಾಂಗ್ರೆಸ್ಸಿನ ರಾಜಕೀಯ ಚಳವಳಿಯು ಕ್ರಿ. ಶ. ೧೮೯೨ ರ ಕಾಯ್ದೆಯು ಪಾಸಾಗಲು ಕಾರಣವಾಯಿತು.

೨೦ನೇ ಶತಮಾನದ ಆದಿಭಾಗವು ರಾಷ್ಟ್ರೀಯ ಚಳವಳಿಯ ಇತಿಹಾಸದಲ್ಲಿ ಒಂದು ಮಹತ್ವದ ಘಟ್ಟವೆಂದು ಹೇಳಬಹುದು. ಸಣ್ಣ ರಾಷ್ಟ್ರವಾದ ಜಪಾನವು ದೊಡ್ಡ ರಾಷ್ಟ್ರವಾದ ರಶಿಯದ ಮೇಲೆ ಕ್ರಿ. ಶ. ೧೯೦೪-೫ ರಲ್ಲಿ ಗಳಿಸಿದ ಗೆಲುವಿನಿಂದ ಈ ಚಳುವಳಿಗೆ ಉತ್ತೇಜನ ದೊರೆಯಿತು. ಅದರಂತೆ ಕ್ರಿ. ಶ. ೧೯೦೫ ರಲ್ಲಿ ಲಾರ್ಡ ಕರ್ಝನನು ಬಂಗಾಲದ ವಿಭಜನೆ ಮಾಡಿದುದೂ ಕೂಡ ಈ ಚಳವಳಿಗೆ ಪುಟಕೊಟ್ಟಂತಾಯಿತು. ಅತ್ಯಂತ ಅಸಹನೀಯವಾದ ಕರ್ಝನನ ಈ ಕೃತಿಯು ಕೇವಲ ಬಂಗಾಲದಲ್ಲಿ ಅಷ್ಟೇ ಅಲ್ಲ ಇಡೀ ದೇಶದ ತುಂಬ ಕಾಡಿನ ಬೇಗೆಯಂತೆ ಹಬ್ಬಿತು. ಕ್ರಿ. ಶ. ೧೯೦೫ ರಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷತೆ ವಹಿಸಿದ್ದ ಶ್ರೀ ಗೋಖಲೆಯವರು ಆಗಿನ ಸ್ಥಿತಿಯನ್ನು ಚೆನ್ನಾಗಿಯೇ ಅಳೆದಿದ್ದಾರೆ. ಬಂಗಾಲದ ವಿಭಜನೆಯ ಪರಿಣಾಮವಾಗಿ ಜನತೆಯಲ್ಲಿ ಉಂಟಾದ ಜಾಗೃತಿಯು ರಾಷ್ಟ್ರೀಯ ಚಳವಳಿಯ ಇತಿಹಾಸದಲ್ಲಿ ಒಂದು ಮೈಲುಗಲ್ಲು. ಇಡೀ ಪ್ರಾಂತದಲ್ಲಿ ರಾಷ್ಟ್ರೀಯ ಜಾಗೃತಿಯ ಅಲೆಯು ಬೀಸುತ್ತಿದೆ. ಒರಟು ಹಾಗೂ ಅನಿಯಂತ್ರಿಕ ನೌಕರಶಾಹಿಯ ದಬ್ಬಾಳಿಕೆಯ ವಿರುದ್ಧ ಬಂಗಾಲದ ಶೂರ ನಿರ್ಧಾರವು ಇಡೀ ಭರತಖಂಡವೇ ಬೆರಳು ಕಚ್ಚುವಂತೆ ಮಾಡಿತು. ಅವರು ದೇಶದ ಎಲ್ಲ ಭಾಗಗಳ ಜನರ ಸಹಾನುಭೂತಿಯನ್ನು ಮತ್ತು ಹಿರಿಯಾಸೆಗಳನ್ನು ಒಂದುಗೂಡಿಸಲು ಸಹಾಯ ಮಾಡಿದ್ದಾರೆಂಬುದನ್ನು ಅರಿತರೆ ಪಟ್ಟ ಕಷ್ಟ ವ್ಯರ್ಥವಾಗಲಿಲ್ಲವೆಂದು ಹೇಳಬೇಕಾಗುತ್ತದೆ.

ಜನತೆಯನ್ನು ತುಳಿಯುವ ಸರಕಾರದ ಧೋರಣೆಯನ್ನು ಬಂಗಾಲಿಗಳು ಬಹಿರಂಗವಾಗಿಯೇ ತಿರಸ್ಕರಿಸಿದರು. ಆದರೆ ಸರಕಾರಕ್ಕೆ ರಾಷ್ಟ್ರೀಯ ಚಳವಳಿಯನ್ನು ಹತ್ತಿಕ್ಕುವದು ಸಾಧ್ಯವಾಗಲಿಲ್ಲ. ಕ್ರಿ. ಶ. ೧೯೦೬ರ ವರೆಗೆ ಕಾಂಗ್ರೆಸ್ಸಿನ

ಬೆಳವಣಿಗೆ ಮತ್ತು ರಾಷ್ಟ್ರೀಯತೆಯ ಬೆಳವಣಿಗೆಗಳು ಒಂದೇ ಆಗಿದ್ದವು. ನಂತರ ಮಂದಗಾಮಿ ಮತ್ತು ತೀವ್ರಗಾಮಿಗಳಲ್ಲಿ ಕಾಂಗ್ರೆಸ್ಸು ಇಬ್ಭಾಗವಾಯಿತು. ಈ ಒಡಕು ಭಾರತದಲ್ಲಿ ತೀವ್ರಗಾಮಿತ್ವ ಬೆಳೆಯಲಿಕ್ಕೆ ಕಾರಣವಾಯಿತೆಂದು ಸಾಮಾನ್ಯವಾಗಿ ಭಾವಿಸಲಾಗುತ್ತಿದೆ. ತೀವ್ರಗಾಮಿತ್ವದ ಪ್ರಥಮ ದರ್ಜೆಯ ನಾಯಕರೆಂದರೆ ಪಂಜಾಬಿನ ಲಾಲಾಲಜಪತರಾಯ, ಮಹಾರಾಷ್ಟ್ರದ ಬಾಳಗಂಗಾಧರ ತಿಲಕ ಮತ್ತು ಬಂಗಾಲದ ಬಿಪಿನಚಂದ್ರ ಪಾಲ ಅವರು ಲಾಲ-ಬಾಲ-ಪಾಲ ಎಂದು ಪ್ರಸಿದ್ಧರಾಗಿದ್ದಾರೆ. ತಿಲಕರು ತಮ್ಮ ಕ್ರಾಂತಿಕಾರಿ '**ಕೇಸರಿ**' ಪತ್ರಿಕೆಯ ಮುಖಾಂತರ ವಿದೇಶಿ ಆಳಿಕೆಯಿಂದ ಮುಕ್ತವಾಗುವ ದಿಶೆಯಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವದರಲ್ಲಿ ಯಶಸ್ವಿಯಾದರು. ಆ ಕಾಲದಲ್ಲಿ ಅವರು ಭಾರತದ ರಾಜಕಾರಣದ ಕೇಂದ್ರ ವ್ಯಕ್ತಿಗಳಾಗಿದ್ದರು.

ಕ್ರಿ. ಶ. ೧೯೦೯ ರಲ್ಲಿ ಮೊರ್ಲೆಮಿಂಟೋ ಸುಧಾರಣೆಗಳನ್ನು ತಂದು ಸರಕಾರವು ಮಂದಗಾಮಿಗಳನ್ನು ತೃಪ್ತಿಪಡಿಸಲು ಪ್ರಯತ್ನಿಸಿತು. ಆದರೆ ಅದು ಭಾರತೀಯರ ನಿರೀಕ್ಷಣಾ ಮಟ್ಟಕ್ಕೆ ಬರಲಿಲ್ಲ. ಅವರ ಅತೃಪ್ತಿಯು ಹಾಗೆಯೇ ಮುಂದುವರಿಯಿತು. ವಿಶ್ವದ ಮೊದಲನೇ ಮಹಾಯುದ್ಧವು ಪ್ರಾರಂಭವಾದಾಗ ಅವರು ತಮ್ಮ ಬೇಡಿಕೆಗಳಿಗೆ ಹೊಸ ಸ್ವರೂಪ ಕೊಟ್ಟರು. ಘಟನಾತ್ಮಕ ಬದಲಾವಣೆಗಳನ್ನು ಮಾಡಿ ಬ್ರಿಟಿಶ್ ಸರಕಾರವು ಉದಾರ ಸುಧಾರಣೆಗಳನ್ನು ಮಾಡಲು ಬಯಸಿತು. ಭಾರತದ ಸೆಕ್ರೆಟರಿಯೆಂದು ಕೆಲಸ ಮಾಡುತ್ತಿದ್ದ ಲಾರ್ಡ ಮೊಂಟೇಗ್ಯೂ ಕ್ರಿ.ಶ. ೧೯೧೭ ನೆಯ ಇಸ್ವಿಯ ಅಗಸ್ಟ ೨೦ ರಂದು ಇಂಗ್ಲಂಡಿನ ಹೌಸ್ ಆಫ್ ಕಾಮನ್ಸ ಸಭೆಯಲ್ಲಿ ಒಂದು ಮಹತ್ವದ ಘೋಷಣೆಯನ್ನು ಮಾಡಿದರು. ಮಾಂಟೇಗ್ಯೂ-ಚೇಮ್ಸಫೊರ್ಡ ಸುಧಾರಣೆಗಳ ವರದಿಯ ಪ್ರಕಟಣೆಯು ಕಾಂಗ್ರೆಸ್ಸನ್ನು ಒಡೆಯಿತು. ಮ. ಗಾಂಧಿಯವರು ಕ್ರಿ.ಶ. ೧೯೨೦ ರಲ್ಲಿ ಕಲಕತ್ತೆಯಲ್ಲಿ ಅಸಹಕಾರ ಚಳವಳಿಯನ್ನು ೧೯೪೨ ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ಪ್ರಾರಂಭಿಸಿದರು. ಭಾರತೀಯರು ವಿಧಾನಸಭೆಗಳನ್ನು ಶೈಕ್ಷಣಿಕ ಸಂಸ್ಥೆಗಳನ್ನು ಕಾಯ್ದೆ ಕೋರ್ಟುಗಳನ್ನು ಬಹಿಷ್ಕರಿಸಿದರು. ಸರಕಾರದ ಪದವಿಗಳನ್ನು ಬಿಟ್ಟುಕೊಟ್ಟರು. ಈ ಚಳವಳಿಯು ಅತ್ಯಂತ ಉತ್ಸಾಹದಿಂದ ಸ್ವಾಗತಿಸಲ್ಪಟ್ಟಿತು ಮತ್ತು ದೇಶದ ಪ್ರತಿಯೊಂದು ಮೂಲೆಯಿಂದ ಪ್ರಚಂಡ ಬೆಂಬಲವನ್ನು ಪಡೆಯಿತು. ಗಾಂಧಿಯವರು ರಾಷ್ಟ್ರೀಯ ಹೋರಾಟವನ್ನು ಕೇವಲ ಕ್ರಾಂತಿಯ ಹೋರಾಟವನ್ನಾಗಿ ಮಾರ್ಪಡಿಸದೆ ಅದನ್ನು ಜನತಾ ಹೋರಾಟವನ್ನಾಗಿ ಮಾಡಿದರೆಂದು ಒಬ್ಬ ಬ್ರಿಟಿಶ್ ಬರಹಗಾರರು ಹೇಳುವುದು ಸತ್ಯವೇ ಆಗಿದೆ. ೧೯೨೦ ಮತ್ತು ೧೯೪೨ ನೇ ಇಸ್ವಿಯು ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಚಿರಸ್ಮರಣೀಯ. ಹೀಗೆ ಕಾಂಗ್ರೆಸ್ಸಿನ ಬಾಲ್ಯ

ದಿಂದಲೂ ಹಿಡಿದು ೧೯೪೭ ರ ವರೆಗೆ ಕಾಂಗ್ರೆಸ್ಸು, ಸ್ವಾತಂತ್ರ್ಯ ಪಡೆಯುವ ವರೆಗೆ ಬಿರುಸಿನ ಹೋರಾಟವನ್ನೇ ಮಾಡಿತು. ಭಾರತದ ಸ್ವಾತಂತ್ರ್ಯವು ಬಹು ಮಟ್ಟಿಗೆ ರಾಷ್ಟ್ರೀಯ ಕಾಂಗ್ರೆಸ್ಸಿನ ಸಾಧನೆಯೇ ಆಗಿದೆಯೆಂದು ಹೇಳಬಹುದು.

ಗ್ರಂಥಋಣ

೧ ಹಾನ್ ಕೋಹ್ನ : ನ್ಯಾಶನ್ಯಾಲಿಸಂ ಆ್ಯಂಡ ಲಿಬರ್ಟಿ: ಲಂಡನ್ ಅಲನ್ ಆ್ಯಂಡ ಅನ್‌ವಿನ್, ೧೯೫೬.

೨ ಆರ್. ಡಬ್ಲ್ಯು ಕಾರ್ಲ್ಯಾಲ್ ಮತ್ತು ಎ. ಜೆ. ಕಾರ್ಲ್ಯಾಲ್. ಎ ಹಿಸ್ಟರಿ ಆಫ್ ಪೊಲಿಟಿಕಲ್ ಥೇರೀ ಇನ್ ದ ವೆಸ್ಟ. ಲಂಡನ್: ವಿಲಿಯಂ ಬ್ಲ್ಯಾಕ್‌ವುಡ್ ಆ್ಯಂಡ ಸನ್ಸ, ೧೯೫೦.

೩ ಎಫ್. ಜಿ. ಪಿಯರ್ಸ. ಆ್ಯನ ಔಟಲಾಯಿನ್ ಹಿಸ್ಟರೀ ಆಫ್ ಸಿವಿಲಿಜೇ-ಶನ್ (ದ್ವಿತಿಯ ಮುದ್ರಣ) (ಬಾಂಬೆ: ಆಕ್ಸಫರ್ಡ ಯುನಿವ್ಹರ್ಸಿಟಿ ಪ್ರೆಸ್, ೧೯೬೫.

೪ ಎಂ. ವ್ಹಿ. ಕೃಷ್ಣರಾವ್: ದಿ ಗ್ರೋಥ್ ಆಫ್ ಲಿಬರ್ಯಾಲಿಜಂ ಇನ್ ದ ನೈಂಟೀಂತ್ ಸೆಂಚರಿ ಮೈಸೂರ : ದಿ ಮೈಸೂರ ಪ್ರಿಂಟಿಂಗ ಆ್ಯಂಡ ಪಬ್ಲಿಶಿಂಗ ಹೌಸ್, ೧೯೫೧.

೫ ವ್ಹಿ. ಪಿ. ಎಸ್. ರಘುವಂಶಿ: ಇಂಡಿಯನ್ ನ್ಯಾಶಲ್ಯಾಸ್ಟ ಮೂವ್ಹಮೆಂಟ ಆ್ಯಂಡ ಥಾಟ್ (ದ್ವಿತೀಯ ಮುದ್ರಣ) ಆಗ್ರಾ; ಲಕ್ಷ್ಮಿ ನರೇನ್ ಅಗರವಾಲ ಎಜ್ಯುಕೇಶನಲ್ ಪಬ್ಲಿಶರ್ಸ, ೧೯೫೯.

೬ ಸಿ. ಯಾಜ್ಞೇಶ್ವರಿ ಚಿಂತಾಮಣಿ: ಇಂಡಿಯನ್ ಪೊಲಿಟಿಕ್ಸ ಸಿನ್ಸ ಮ್ಯುಟಿನಿ ಅಲ್ಹಾಬಾದ: ಕಿತಬಿಸ್ತಾನ, ೧೯೪೭.

೭ ಎಸ್. ಎಸ್. ಬೋಸ, ದಿ ಇಂಡಿಯನ್ ಅವೇಕನಿಂಗ ಆ್ಯಂಡ ಬೆಂಗಾಲ. ಕಲಕತ್ತಾ: ಫರ್ಮಾ ಕೆ. ಎಲ್., ೧೯೬೦.

೮ ಜಿ. ಎಸ್. ಹಾಲಪ್ಪ (ಸಂ) ಹಿಸ್ಟರೀ ಆಫ್ ಫ್ರೀಡಂ ಮೂವ್ಹಮೆಂಟ ಇನ್ ಕರ್ನಾಟಕ; ಸಂಪುಟ ೨ ಗವ್ಹರ್ನಮೆಂಬ ಆಫ್ ಮೈಸೂರ ಪಬ್ಲಿಕೇಶನ್, ೧೯೬೪.

೯ ಕೃಷ್ಣರಾವ್ ಆ್ಯಂಡ ಹಾಲಪ್ಪಾ. ಹಿಸ್ಟರಿ ಆಫ್ ಫ್ರೀಡಂ ಮೂವ್ಹಮೆಂಟ ಇನ್ ಕರ್ನಾಟಕ; ಸಂಪುಟ ೧ ಗವ್ಹರ್ನಮೆಂಟ ಆಫ್ ಮೈಸೂರ ಪಬ್ಲಿ-ಕೇಶನ್, ೧೯೬೨.

೧೦ ಎ. ಎಸ್. ನಂಜುಂಡಸ್ವಾಮಿ. ಭಾರತೀಯ ರಾಷ್ಟ್ರೀಯತೆಯ ವಿಕಾಸ ಮೈಸೂರ: ಯುನಿವ್ಹರ್ಸಿಟಿ ಆಫ್ ಮೈಸೂರ ಪಬ್ಲಿಕೇಶನ್, ೧೯೬೦.

೧೧ ವ್ಹಿ. ಡಿ. ಸಾವರಕರ: ದಿ ಇಂಡಿಯನ್ ವಾರ್ ಆಫ್ ಇಂಡಿಪೆಂಡನ್ಸ.

೧೨ ಇಶ್ವರಿ ಪ್ರಸಾದ: ಎ ನ್ಯೂ ಹಿಸ್ಟರಿ ಆಫ್ ಇಂಡಿಯಾ ಅಲ್ಹಾಬಾದ: ದಿ ಇಂಡಿಯನ್ ಪ್ರೆಸ್ ಪಬ್ಲಿಕೇಶನ್, ೧೯೬೭.

೧೩ ಎಂ. ಕೆ. ಗಾಂಧಿ. ಲಿಂಗ್ವಿಸ್ಟಿಕ್ ಪ್ರೂವ್ಹಿನ್ಸಿಸ್ ಅಹ್ಮದಾಬಾದ: ನವಜೀವನ ಪಬ್ಲಿಶಿಂಗ ಹೌಸ, ೧೯೫೬.

೧೪ ಸೋರ್ಸ ಮಟೀರಿಯಲ್ ಫಾರ್ ಎ ಹಿಸ್ಟರಿ ಆಫ ಫ್ರೀಡಂ ಮೂವ್ಹಮೆಂಟ ಇನ್ ಇಂಡಿಯಾ (ಮುಂಬೈ ಸರಕಾರದ ರೆಕಾರ್ಡಗಳಿಂದ ಸಂಗ್ರಹಿತ) ೨ನೇ ಗ್ರಂಥ ೧೮೮೫–೧೯೨೦ ಮುಂಬಯಿ: ೧೯೫೮.

ದ್ವಯುಗಳು ಮತ್ತು ತ್ರಯುಗಳು

ಹಾ. ನಂ. ನಾಗೇಶ

— ೧ —

'ದ್ವಯು' (Dyad) ಎಂಬುದು ಇಬ್ಬರೇ ವ್ಯಕ್ತಿಗಳಿರುವ ಸುಪರಿಚಿತವಾದ ಸಮೂಹ. ಇವನ್ನು ಜೋಡಿ (Pair), ಜೋಡಿಗುಂಪು ಅಥವಾ ಜೊತೆ ಗುಂಪು ಎಂದು ಕರೆಯುವುದು ವಾಡಿಕೆ. ಪ್ರಸಂಗವಶಾತ್ ಎಲ್ಲೋ ಒಮ್ಮೆ ಸಂಧಿಸುವ, ಸಂಭಾಷಿಸುವ ಇಬ್ಬರನ್ನು ನಾವು ಜೋಡಿ ಎಂದು ಕರೆಯುವದಿಲ್ಲ. ಉದಾಹರಣೆಗೆ, ಸರಕುಗಳನ್ನು ಮಾರುವ ವ್ಯಾಪಾರಿ ಹಾಗೂ ಸರಕು ಕೊಳ್ಳುವ ಗಿರಾಕಿ ಕ್ಷಣವೆರಡು ಕ್ಷಣ ತಮ್ಮೊಳಗೆ ಸಂಬಂಧ-ಸಂಪರ್ಕ ಹೊಂದಬಹುದು; ಆದರೆ ಅವರದು ಒಂದು ಜೋಡಿ ಅಥವಾ ದ್ವಯು ಆಗುವುದಿಲ್ಲ. ಹಾದಿಯಲ್ಲಿ ಅಕಸ್ಮಾತ್ತಾಗಿ ಸಂಧಿಸುವ ಇಬ್ಬರು ಜೋಡಿಯಲ್ಲ. ಕ್ಯೂದಲ್ಲಿ ಒಬ್ಬರ ಹಿಂದೊಬ್ಬರು ನಿಂತ ಇಬ್ಬರೂ ಜೋಡಿಯಲ್ಲ. ಜೋಡಿಯಾಗಬೇಕಾದರೆ ನಿರಂತರವಾದ ಸಂಪರ್ಕ ಬೇಕು; ಸಾಹಚರ್ಯ ಮತ್ತು ಸಂಬಂಧಗಳು ಬೇಕು. ಒಟ್ಟಿನಲ್ಲಿ ನಿರಂತರವಾಗಿ ಸಂಪರ್ಕ ಹೊಂದಿದ, ನಿಕಟಸಂಬಂಧವುಳ್ಳ ಇಬ್ಬರು ಮಾತ್ರ ಜೋಡಿಯಾಗುತ್ತಾರೆ. ವಿವಾಹಿತ ದಂಪತಿಗಳು, ವಿವಾಹಕ್ಕೆ ಅಣಿಯಾಗಿ ನಿಂತ ಪ್ರೇಮಿಗಳು, ಆತ್ಮೀಯ ಗೆಳೆಯರಿಬ್ಬರು, ಅಣ್ಣ-ತಮ್ಮ, ಅಕ್ಕ-ತಂಗಿ, ತಾಯಿ-ಮಗ, ತಂದೆ-ಮಗ ವೃತ್ತಿ ಪಾಲುಗಾರರಾದ ಇಬ್ಬರು ವೈದ್ಯರು,

ವ್ಯಾಪಾರದ ಪಾಲುಗಾರರು, ಇಸ್ಪೀಟು ಆಟದ ಗೆಳೆಯರು, ಅವಳಿ-ಜವಳಿ ಮುಂತಾದ ನೂರಾರು ದ್ವಯುಗಳು ನಮಗೆ ಸುಪರಿಚಿತವಾಗಿವೆ.

'ತ್ರಯ' (Triad) ಎಂಬುದು ಆ ಹೆಸರೇ ಸೂಚಿಸುವಂತೆ ಮೂವರು ಸದಸ್ಯರಿರುವ ಸಮೂಹ. ಸದಾ ಒಟ್ಟಿಗೆ ಇರುವ ಹಾಗೂ ನಿಕಟವಾದ ಸಂಬಂಧ ವನ್ನು ಹೊಂದಿರುವ ಮೂವರ ಕೂಟ. ತಂದೆ-ತಾಯಿ-ಮಗ, ಅತ್ತೆ-ಸೊಸೆ-ಮಗ, ಮೂವರು ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಆಟದ ಗೆಳೆಯರು, ವ್ಯಾಪಾರದ ಪಾಲುಗಾರರು, ತ್ರಿ-ಸದಸ್ಯ ಸಮಿತಿ ಇವೆಲ್ಲ ಪರಿಚಿತವಾದ ಉದಾ ಹರಣೆಗಳು.

ದ್ವಯಗಳು ಹಾಗೂ ತ್ರಯುಗಳು ನಮಗೆ ಪರಿಚಿತವಷ್ಟೇ ಅಲ್ಲ, ಅವು ಮಹತ್ವಪೂರ್ಣವಾದ ಗುಂಪುಗಳೂ ಹೌದು. ಚಾರ್ಲ್ಸ್ ಹಾರ್ಟನ್ ಕೂಲೆ ಎಂಬ ಸಮಾಜಶಾಸ್ತ್ರಜ್ಞನು ಹೇಳುವ 'ಪ್ರಾಥಮಿಕ ಸಮೂಹ' (Primary group)ದ ಜಾತಿಗೆ ಅವು ಸೇರಿವೆ. ಇಂಥ ಗುಂಪುಗಳನ್ನು ನಾವು ನಮ್ಮ ಜೀವನದ ಪ್ರಾರಂಭದಲ್ಲೇ ಸೇರುತ್ತೇವೆ. ಅಷ್ಟೇ ಅಲ್ಲ, ಅವುಗಳಿಂದ ಬಹುವಿಧವಾಗಿ ಪ್ರಭಾವಿತರಾಗುತ್ತೇವೆ. ಹೀಗೆ ಅವು ಕಾಲ ಹಾಗೂ ಮಹತ್ವ ಇವೆರಡೂ ದೃಷ್ಟಿ ಗಳಿಂದ 'ಪ್ರಾಥಮಿಕ'ವೆನ್ನಿಸುತ್ತವೆ.

ಇಷ್ಟಿದ್ದರೂ ಈ ಎರಡು ಪ್ರಕಾರದ ಸಮೂಹಗಳ ಬಗ್ಗೆ ನಾವು ಅಷ್ಟಾಗಿ ಗಮನ ಕೊಟ್ಟಿಲ್ಲ ಎಂದರೆ ತಪ್ಪಾಗಲಾರದು. ಜರ್ಮನ್ ಸಮಾಜವಿಜ್ಞಾನಿ ಜಾರ್ಜ ಸಿಮೆಲ್ (೧೮೫೮-೧೯೧೮) ಇಂಥ ಚಿಕ್ಕ ಗುಂಪುಗಳ ಅಧ್ಯಯನಕ್ಕೆ ಶ್ರೀಕಾರ ಹಾಕಿದವನು. ಇವನ ನಂತರ ವಿವಿಧ ಪ್ರಾಥಮಿಕ ಸಮೂಹಗಳ ಅಧ್ಯಯನಕ್ಕೆ ತಳಪಾಯ ಹಾಕಿದವನೆಂದರೆ ಅಮೇರಿಕೆಯ ಸಮಾಜಶಾಸ್ತ್ರಜ್ಞ ನಾದ ಚಾರ್ಲ್ಸ್ ಹಾರ್ಟನ್ ಕೂಲೆ (೧೮೬೪-೧೯೨೯). ಜಾರ್ಜ ಸಿಮೆಲ್ ದ್ವಯ ಮತ್ತು ತ್ರಯಗಳ ಕೌತುಕಪೂರ್ಣವಾದ ಲೋಕದ ಕಿರುಪರಿಚಯವನ್ನು ಮಾಡಿ ಸುತ್ತಾನೆಂಬುದು ನಿಜವಾದರೂ ಅವನ ಗಮನವು ಹೆಚ್ಚಾಗಿ ಸಮೂಹದ ಸದಸ್ಯರ ಸಂಖ್ಯೆ ಎಷ್ಟಿದೆ ಹಾಗೂ ಆ ಸಂಖ್ಯೆಯು ಸಮೂಹ ರಚನೆಯನ್ನು ಹೇಗೆ ನಿರ್ಧರಿಸುತ್ತವೆ ಎಂಬ ವಿಷಯದ ಕಡೆಗಿವೆ.[೧] ಕೂಲೆ ಪ್ರಾಥಮಿಕ ಸಮೂಹಗಳ ವಿವಿಧ ಗುಣಲಕ್ಷಣಗಳನ್ನು ಚೆನ್ನಾಗಿ ವಿವರಿಸಿದ್ದಾನಾದರೂ ಅವನಿಗೆ ದ್ವಯು

---

೧. ಸಿಮೆಲ್ ತನ್ನ ಪ್ರಬಂಧಕ್ಕೆ ಅರ್ಥಪೂರ್ಣವಾಗಿ 'ಸಮೂಹದ ಪರಿಮಾಣಾತ್ಮಕ ಮುಖಗಳು' ಎಂದು ಕರೆದಿದ್ದಾನೆ. ನೋಡಿ: Wolff, Kurt H. (Ed.): The Sociology of Georg Simmel (Free Press, Glencoe, 1950) pp. 87-177.

ಮತ್ತು ತ್ರಯಗಳ ಬಗ್ಗೆ ವಿಶೇಷವಾದ ಮಮತೆಯೇನೂ ಇಲ್ಲ. ಆ ನಂತರದ ಲೇಖಕರು ಚಿಕ್ಕ ಸಮೂಹಗಳ ಬಗ್ಗೆ ಅನೇಕ ಸಂಶೋಧನಾತ್ಮಕ ಪ್ರಬಂಧಗಳನ್ನು ಬರೆದಿದ್ದಾರೆ. ಇವರಲ್ಲಿ ಕೆಲವರಾದರೂ ದ್ವಯ ಮತ್ತು ತ್ರಯಗಳ ಅದ್ಭುತ ಲೋಕಗಳನ್ನು ಅಷ್ಟಿಷ್ಟಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಒಟ್ಟಿನಲ್ಲಿ, ಇದಿನ್ನೂ ಹೆಚ್ಚಾಗಿ ತುಳಿಯದ ಹಾದಿ. ಈ ತುಳಿಯದ ಹಾದಿಯನ್ನು ತುಳಿಯುವ ಹಾಗೂ ತಿಳಿದ ಕೆಲವು ಮೌಲಿಕ ಅಂಶಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

— ೧ —

ದ್ವಯವು ಹುಟ್ಟುವುದು ಹೇಗೆ? ಎಲ್ಲ ವಿಧದ ಸಮೂಹಗಳು ಹುಟ್ಟುವ ರೀತಿಯಲ್ಲಿಯೇ ಅದು ಹುಟ್ಟುತ್ತದೆ. ಇಬ್ಬರು ವ್ಯಕ್ತಿಗಳ ಸಾಮಾನ್ಯ ಆಸ್ಥೆ ಆಸಕ್ತಿಗಳನ್ನು ಅದು ತೃಪ್ತಿಪಡಿಸುತ್ತದೆ. ವಿವಾಹೇಚ್ಛು ಗಂಡು-ಹೆಣ್ಣು, ವ್ಯಾಪಾರದ ಪಾಲುಗಾರರು, ಮೊದಲಾದವರು ತಮ್ಮ ಸಮಾನ ಉದ್ದೇಶಗಳನ್ನು ಆಕಸ್ಮಿಕವಾಗಿ ಗುರುತಿಸಿಕೊಂಡು ಮುಂದೆ ದೀರ್ಘಕಾಲದ ಒಡನಾಡಿಗಳಾಗಬಹುದು. ಅಥವಾ ನೆರೆಹೊರೆಯಲ್ಲಿ ಬೆಳೆದು ದೊಡ್ಡವರಾದ ಗೆಳೆಯರು, ಒಡಹುಟ್ಟಿದ ಅಣ್ಣತಮ್ಮಂದಿರು, ಅಕ್ಕತಂಗಿಯರು ತಮಗೆ ಗೊತ್ತಿಲ್ಲದಂತೆಯೇ ಆತ್ಮೀಯ ಜೊತೆಗುಂಪನ್ನು ಸೃಷ್ಟಿಸಬಹುದು. ಈ ಜೋಡಿಗಳಲ್ಲಿ ಹೆಚ್ಚಿನವು ತಮ್ಮ ಸಮಾನ ಆಸಕ್ತಿ, ಆಸ್ಥೆ ಅಥವಾ ಉದ್ದೇಶಗಳಿಂದ ಪ್ರೇರಿತವಾಗಿರುತ್ತವೆ. ಉದಾಹರಣೆಗೆ, ಇಸ್ಪೀಟು ಆಡುವ ಅಭಿರುಚಿಯುಳ್ಳ ಇಬ್ಬರು ಕಾಲಕ್ರಮೇಣ ಬಿಡಲಾರದ ಜೋಡಿಯಾಗುತ್ತಾರೆ. ನಾವು ನಮ್ಮ ದೈನಂದಿನ ಜೀವನದಲ್ಲಿ ಆಟಗಾರರ ಜೋಡಿಗಳನ್ನೂ, ಗೆಳೆಯರ ಜೋಡಿಗುಂಪುಗಳನ್ನೂ, ಸಮಾನ ಧರ್ಮಿಗಳ ಅನೇಕಾನೇಕ ದ್ವಯಗಳನ್ನೂ ಕಂಡಿದ್ದೇವೆ.

ದ್ವಯಗಳಲ್ಲಿ ಕೆಲವು ಇನ್ನೊಂದು ರೀತಿಯಲ್ಲಿ ಹುಟ್ಟಬಹುದು. ಇಬ್ಬರು ವ್ಯಕ್ತಿಗಳು ತಾವು ಒಬ್ಬರಿಗೊಬ್ಬರು ಪೂರಕವಾಗಿರುವದನ್ನು ಗ್ರಹಿಸಿ ಜೋಡಿಗುಂಪನ್ನು ಸೃಷ್ಟಿಸಬಹುದು. ಉದಾಹರಣೆಗೆ, ದಾಂಪತ್ಯದ ಗಂಡು-ಹೆಣ್ಣು ಜೋಡಿ ಹೀಗೆ ಸೃಷ್ಟಿಯಾಗುತ್ತದೆ. ಸಂಗೀತ ಲೋಕದ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಅಲ್ಲಿ ಗಾಯಕನಿಗೆ ಅವನ ಅಚ್ಚುಮೆಚ್ಚಿನ 'ಸಾಥಿ' ಇದ್ದಾನೆ. ಹಾಗೆಯೇ ವ್ಯಾಪಾರ ವಾಣಿಜ್ಯದಲ್ಲಿ ಹೆಚ್ಚು ಬಂಡವಾಳ ತೊಡಗಿಸುವ ಒಬ್ಬನಿಗೆ ವ್ಯವಹಾರಚತುರನಾದ ಪಾಲುಗಾರನೊಬ್ಬನಿರುವುದನ್ನು ಕಾಣುತ್ತೇವೆ. ಅನೇಕ ಕೆಳೆಗುಂಪು (Friendship group) ಗಳನ್ನು ನಾವು ಒಳಹೊಕ್ಕು

ನೋಡಿದರೆ ಕಾಣುವ ಒಂದು ವಿಷಯುವೆಂದರೆ ಆ ಜೋಡಿಗಳಲ್ಲಿ ಒಬ್ಬನು ಸಿದ್ಧಾಂತಪ್ರಿಯನಾದರೆ ಇನ್ನೊಬ್ಬ ಕರ್ತವ್ಯಶಾಲಿಯಾಗಿರುತ್ತಾನೆ. ಒಬ್ಬನು ಮಿದುವಿದ್ದರೆ ಇನ್ನೊಬ್ಬ ಗಡುಸು. ಪ್ರಸಿದ್ಧವಾದ 'ಹಯವದನ' ನಾಟಕದಲ್ಲಿ ಬರುವ ಕಪಿಲ ಮತ್ತು ದೇವದತ್ತರು 'ಜೀವ-ಕೊರಳ' ಗೆಳೆಯರು. ಆ ಜೋಡಿಯಲ್ಲಿ ಮೊದಲನೆಯವನು ಮೈಯಲ್ಲಿ ಗಟ್ಟಿಗನಾದರೆ ಎರಡನೆಯವನು ಮಿದುಳಲ್ಲಿ ಗಟ್ಟಿಗನು. ಜನರು ಮೆಚ್ಚುವ ವಿದೂಷಕರ ಜೋಡಿಯಲ್ಲಿ ಒಬ್ಬನು ಉದ್ದಾನೆ ಆಳು, ಇನ್ನೊಬ್ಬ ಗಿಡ್ಡರಲ್ಲಿ ಗಿಡ್ಡ ಅಥವಾ ಅಡ್ಡಗಲ ಅಸಡ್ಡಾಳ ಬೆಳೆದ ಆಸಾಮಿ. ಸಿನಿಮಾ ಪ್ರಪಂಚದ ಲಾರೆಲ್-ಹಾರ್ಡಿ ಜೋಡಿ ಇಂಥ ಪೂರಕ ತತ್ವದ ಮೇಲೆಯೇ ಅವಲಂಬಿಸಿದೆ.

ದ್ವಯದ ವಿಶೇಷ ಗುಣವೇನು? ಅಥವಾ ವಿಶೇಷ ಗುಣಗಳಾವವು? ಎಲ್ಲಕ್ಕೂ ಮೊದಲು ಒಂದು ವಿಶೇಷ ಗುಣವನ್ನು ಎತ್ತಿಹೇಳಬಹುದು. ಅದೇನೆಂದರೆ ಬೇರೆಲ್ಲ ಪ್ರಕಾರದ ಗುಂಪುಗಳಲ್ಲಿ ಗುಂಪಿನ ಯಾವನೇ ಒಬ್ಬ ಸದಸ್ಯನು ಹೊರಗುಳಿದರೂ ಗುಂಪಿಗೆ ಸ್ವತಂತ್ರವಾದ ಅಸ್ತಿತ್ವವಿದೆ. ಉದಾಹರಣೆಗೆ, ನಟನೊಬ್ಬ ಹೊರಗೆ ಬಂದರೂ ನಾಟಕ ಕಂಪೆನಿ ಉಳಿಯುತ್ತದೆ. ದೊಡ್ಡ ಕುಟುಂಬದಲ್ಲಿ ಯಾವನೊಬ್ಬ ಹೊರಗೆ ಬಂದರೆ ಅಥವಾ ತೀರಿಕೊಂಡರೆ ಕುಟುಂಬವು ಅಳಿದುಹೋಗುವದಿಲ್ಲ. ಕೆಲವು ವ್ಯಕ್ತಿಗಳು ಪಕ್ಷ ಬದಲಾಯಿಸಿ ದರೂ ರಾಜಕೀಯ ಪಕ್ಷವು ಮುಂದುವರಿಯುವುದನ್ನು ಕಾಣುತ್ತೇವೆ. ಹೀಗೆ ಬೇರೆ ಎಲ್ಲ ರೀತಿಯ ಸಮೂಹಗಳಿಗೆ ಒಬ್ಬ ಅಥವಾ ಕೆಲವು ಸದಸ್ಯರನ್ನು ಮೀರಿ ನಿಲ್ಲುವ ಅತಿ-ವೈಯಕ್ತಿಕ ಅಸ್ತಿತ್ವವಿದೆ. ಆದರೆ ದ್ವಯಕ್ಕೆ ಇಂಥ ಅಸ್ತಿತ್ವವಿಲ್ಲ. ಜೋಡಿಯಲ್ಲಿಯ ಒಬ್ಬನು ಹೊರಗೆ ಬಂದರೆ ಅಥವಾ ಸತ್ತರೆ ಆ ಗುಂಪು ಅಳಿಯಿತು. ಒಂದು ದಾಂಪತ್ಯದ ಜೋಡಿ ಅಥವಾ ಇಬ್ಬರು ಆತ್ಮೀಯ ಗೆಳೆಯರ ಜೋಡಿ ಅಥವಾ ಮತ್ತಾವುದೇ ಉದಾಹರಣೆಯನ್ನು ತೆಗೆದುಕೊಂಡರೂ ಈ ಮಾತು ಸ್ಪಷ್ಟವಾಗಿ ಗೋಚರಿಸುತ್ತದೆ. ಯಾರೇ ಒಬ್ಬರು ಇಲ್ಲವಾದಾಗ ಗುಂಪೇ ಇಲ್ಲವಾಗುತ್ತದೆ. ಈ ಕಾರಣದಿಂದಲೇ ಸಿಮೆಲ್ "ದ್ವಯಕ್ಕೆ ಅದರ ಉಳಿವಿಗೆ ಇಬ್ಬರು ಬೇಕು, ಆದರೆ ಅದರ ಅಳಿವಿಗೆ ಒಬ್ಬರೇ ಸಾಕು" ಎಂದು ಹೇಳಿದ್ದು.[೧]

ದ್ವಯದ ಸದಸ್ಯರಿಗೆ ಅತಿ-ವೈಯಕ್ತಿಕವಾದ ಮತ್ತೊಂದು ಅಸ್ತಿತ್ವ ವಿಲ್ಲೆಂದು ನೋಡಿದೆವು. ಈ ಕಾರಣದಿಂದಾಗಿ ದ್ವಯವು ಬೇರೆ ಗುಂಪುಗಳು ಹೇರುವ ನಿರ್ಬಂಧಗಳನ್ನು ಹೇರಲಾರದು ಎಂಬ ಮಾತನ್ನು ನಾವು ಗಮನಿಸ

೧. ಅದೇ, ಪು. ೧೨೪.

ಬೇಕು. ರಾಷ್ಟ್ರದ ಹಿತ, ಪಕ್ಷದ ಹಿತ, ಸಮುದಾಯದ ಹಿತ ಮೊದಲಾದ ವ್ಯಕ್ತಿಗೆ ಮೀರಿದ ಗುರಿ-ಗಮ್ಯಗಳ ಗೊಂದಲವಿಲ್ಲ. ಅಲ್ಲದೆ ಗೆಲುವು ನನ್ನಿಂದಾಯಿತು, ಸೋಲು ಇನ್ನೊಬ್ಬನಿಂದಾಯಿತು ಎಂಬ ಜಗಳವಿಲ್ಲ. ಇಲ್ಲಿ ಹೊಣೆಗಾರಿಕೆಗಳು ಇಬ್ಬರವು; ಯಶಸ್ಸು ಅಪಯಶಸ್ಸು ಇಬ್ಬರವು.

ದ್ವಯವು ಪ್ರಚೋದಿಸುವ ಭಾವನೆಗಳಾವುವು? ಸದಸ್ಯರ ಸಂಬಂಧಗಳು ಯಾವ ರೀತಿಯವು? ಈ ಬಗ್ಗೆ ಕೆಲವು ಸಂಗತಿಗಳು ನಮಗೆಲ್ಲ ಗೊತ್ತು. ಜೋಡಿಯು ನಿಕಟವಾದ, ಅನ್ಯೋನ್ಯವಾದ, ತೀವ್ರವಾದ, ಭಾವನಾತ್ಮಕವಾದ ಸಂಬಂಧಗಳಿಂದ ಕೂಡಿದೆ. 'ತನುವೆರಡು ಮನವೊಂದು' ಎಂಬ ಕಾವ್ಯದ ಮಾತು ಎಲ್ಲಾದರೂ ಅನ್ವಯಿಸುವದಾದರೆ ಅದು ದ್ವಯಕ್ಕೆ ಅನ್ವಯಿಸಲೇಬೇಕು. ಸಮಭಾವ, ಪರಸ್ಪರಾಶ್ರಯ, ಆತ್ಮೀಯತೆ, ಅನನ್ಯತೆ ಇವೆಲ್ಲ ಪದಗಳು ಸದಸ್ಯರ ಸಂಬಂಧಗಳನ್ನು ಸೂಚಿಸುತ್ತವೆ. ಸಾವು, ಅಗಲುವಿಕೆ, ಶಿಕ್ಷೆ ಅಥವಾ ಬೇರಾವುದೇ ಕಾರಣದಿಂದ ಜೋಡಿಗುಂಪು ಒಡೆದುಹೋದರೆ ವ್ಯಕ್ತಿಗಳು ಎಷ್ಟು ದುಃಖಪಡುತ್ತಾರೆ ಎಂಬುದನ್ನು ಕಾವ್ಯಗಳು ವರ್ಣಿಸಿ ಹೇಳಿವೆ. ಬಹು ದೀರ್ಘ ದಾಂಪತ್ಯದ ನಂತರ ಗಂಡ ಅಥವಾ ಹೆಂಡತಿ ತೀರಿಕೊಂಡಾಗ ಆಗುವ ವೇದನೆ ತೀವ್ರವಾದುದು. ಹಾಗೆಯೇ ಆತ್ಮೀಯ ಗೆಳೆಯನು ಇಲ್ಲದಾದಾಗ ಜೀವನವೆಲ್ಲ ಶೂನ್ಯ ಎಂದು ಹಲುಬಿದ ಗೆಳೆಯರಿದ್ದಾರೆ.

ಜೋಡಿ ಅಥವಾ ದ್ವಯಗಳು ವ್ಯಕ್ತಿತ್ವದ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತವೆ. ಗಂಡ-ಹೆಂಡತಿ, ತಾಯಿ-ಮಗ, ತಂದೆ-ಮಗ, ಅಣ್ಣ-ತಮ್ಮ, ಅಕ್ಕ-ತಂಗಿ, ಆತ್ಮೀಯ ಗೆಳೆಯರ ಗುಂಪುಗಳು ಇವೆಲ್ಲ ಎಲ್ಲಾ ಸಮಾಜಗಳಲ್ಲಿಯೂ ವ್ಯಕ್ತಿತ್ವವನ್ನು ರೂಪಿಸುವ ಗುಂಪುಗಳು. ಒಬ್ಬನಿಗಾಗಿ ಇನ್ನೊಬ್ಬನು ಸರ್ವಸ್ವವನ್ನು ಧಾರೆಯೆರೆದು ಕೊಡಬಲ್ಲ ಪರಸ್ಪರ ಪ್ರೇಮ, ಬಂಧುತ್ವ, ಸಹಕಾರ, ತ್ಯಾಗ ಇಂಥ ಗುಂಪುಗಳಲ್ಲಿ ಮಾತ್ರ ಸಾಧ್ಯ ಎಂದರೆ ಅತಿಶಯೋಕ್ತಿಯಲ್ಲ.

ದ್ವಯವು ಸೃಷ್ಟಿಸುವ ಗಾಢಸ್ನೇಹ ಪ್ರೇಮಗಳು ಎಷ್ಟು ಸತ್ಯವೋ ಅದು ಸೃಷ್ಟಿಸುವ ಈರ್ಷ್ಯೆ, ಕ್ರೋಧಗಳು ಅಷ್ಟೇ ಸತ್ಯ. ಸದಸ್ಯರ ಸಂಬಂಧಗಳು ಕೆಟ್ಟರೆ ಉಂಟಾಗುವ ಕಹಿ ಅಷ್ಟಿಷ್ಟಲ್ಲ. ಸಂಬಂಧಗಳು ಮಧುರವಾಗಿದ್ದಾಗ ಸರ್ವತ್ಯಾಗಕ್ಕೆ ಸಿದ್ಧವಿರುವ ಆತ್ಮೀಯ ಗೆಳೆಯರಿಬ್ಬರು ಯಾವದೋ ಕಾರಣದಿಂದ ವಿರಸ ಉಂಟಾದಾಗ ಪರಸ್ಪರರ ಸರ್ವನಾಶಕ್ಕೂ ಸಿದ್ಧರಾಗುವದನ್ನು ನಾವು ವ್ಯಾವಹಾರಿಕ ಜೀವನದಲ್ಲಿ ಕಾಣುತ್ತೇವೆ. ಅವರು ಆಜನ್ಮ ವೈರಿಗಳಂತೆ ವರ್ತಿಸುತ್ತಾರೆ. ಅದೇ ರೀತಿಯಲ್ಲಿ ವಿವಾಹಿತ ದಂಪತಿಗಳ ಸಂಬಂಧಗಳಿಗೆ ಹುಳಿಹಿಂಡಿದಾಗ ಅವರ ಬಾಳು ನರಕಸದೃಶವಾಗುವುದನ್ನೂ ನಾವು ಕಾಣುತ್ತೇವೆ. ಇಂಥ ಜೋಡಿಗಳು ಮುಂದುವರಿಯುವದಕ್ಕಿಂತ ಮುರಿದುಹೋಗುವುದೇ ವಾಸಿ.

ನಾವು ಗಮನಿಸಬಹುದಾದ ಇನ್ನೊಂದು ವಿಷಯವೆಂದರೆ ಈ ಜೋಡಿಗಳ ಹುಟ್ಟನ್ನೂ, ಮುಕ್ತಾಯವನ್ನೂ ಸಮುದಾಯಗಳು ನಿಯಂತ್ರಿಸುವದಿದೆ. ಉದಾಹರಣೆಗೆ, ವಿವಾಹಿತ ದಂಪತಿಗಳ ಜೋಡಿ ಸೃಷ್ಟಿಯಾಗಲು ಸಮಾಜದ ಅನುಮತಿ ಆಶೀರ್ವಾದ ಬೇಕು. ವ್ಯಾಪಾರದ ಪಾಲುಗಾರಿಕೆ ನಿರಂತರವಾಗಿ ಮುಂದುವರಿಯಲು ಸಮಾಜದ ಮನ್ನಣೆ ಬೇಕು. ಅದೇ ರೀತಿ ದಾಂಪತ್ಯದ ಜೋಡಿಯನ್ನು ಮುರಿಯುವದಕ್ಕೂ ಸಮಾಜ ಪ್ರಣೀತವಾದ ನಿಯಮಗಳು ನಿರ್ಬಂಧನೆಗಳೂ ಇವೆ. ಪಾಲುಗಾರರು ಬೇರೆಯಾಗುವವನ್ನು ಸಮಾಜಗಳು ನಿಯಮಬದ್ಧಗೊಳಿಸಿವೆ. ಯಾವ ಜೋಡಿಯು ಪ್ರಶಸ್ತವೆಂಬುದನ್ನೂ ಯಾವುದು ನಿಷಿದ್ಧವೆಂಬುದನ್ನೂ ಸಮುದಾಯಗಳು ನಿರ್ಧರಿಸಬಹುದು. ಮ್ಯಾಲಿನಾಫ್-ಸ್ಕಿಯ ಪ್ರಕಾರ ಕೆಲವು ಆದಿವಾಸಿ ಸಮಾಜಗಳಲ್ಲಿ ವ್ಯಕ್ತಿಗಳು ಯಾರೊಡನೆ ಜೋಡಿಗುಂಪನ್ನು ನಿರ್ಮಿಸಬಹುದೆಂಬ ಬಗ್ಗೆ ಕಟ್ಟುನಿಟ್ಟಾದ ನಿಯಮಗಳಿವೆ. ರಕ್ತಸಂಬಂಧಿಗಳು, ದಾಯಾದಿಗಳು, ವಚನಬದ್ಧರಾದ ಸ್ನೇಹಿತರು ಮಾತ್ರ ಜೋಡಿಯನ್ನು ಕಟ್ಟಲು ಸಾಧ್ಯವಿದೆ. ಕೆಲವು ಆದಿವಾಸಿ ಜನಾಂಗಗಳು 'ಕುಲಾ' ವಿನಿಮಯ ಪದ್ಧತಿಯ ಪ್ರಕಾರ ಯಾರು ಯಾರ ಜೋಡಿಯಾಗಬೇಕೆಂಬುದನ್ನು ವಿಧಿಸುತ್ತವೆ.[೧]

— ೩ —

ತ್ರಯವು ದ್ವಯದಂತೆಯೇ ಬಹಳ ಸ್ವಾರಸ್ಯಕರವಾದ ಇನ್ನೊಂದು ಪ್ರಕಾರ. ಹಿಂದೆ ಹೇಳಿದಂತೆ ಅದು ಮೂವರು ಸದಸ್ಯರಿರುವ ಸಮೂಹ. ದ್ವಯಕ್ಕೆ ಮೂರನೆಯವನೊಬ್ಬನು ಸೇರಿಕೊಂಡಾಗ ಅದು ತ್ರಯವಾಗುತ್ತದೆ ಎಂಬುದು ಬಹಳ ಸರಳವಾದ ಹೇಳಿಕೆ. ಮೇಲುನೋಟಕ್ಕೆ ಈ ಮೂರನೆಯವನ ಪ್ರವೇಶ ಅಷ್ಟೇನು ಮಹತ್ವದ್ದಲ್ಲ ಎನ್ನಿಸಬಹುದು. ಆದರೆ ಕೂಲಂಕಷವಾಗಿ ನೋಡಿದರೆ ಇಂಥ ಪ್ರವೇಶದಿಂದ ಸಮೂಹದಲ್ಲಿ ಗುಣಾತ್ಮಕವಾದ ಪರಿವರ್ತನೆ ಉಂಟಾಗುವುದನ್ನು ನಾವು ಕಾಣಬಹುದು.

ದ್ವಯಗಳ ಒಂದು ವಿಶೇಷ ಲಕ್ಷಣವನ್ನು ಹಿಂದೆ ಗುರುತಿಸಿದ್ದೇವೆ. ಅದೇನೆಂದರೆ ದ್ವಯದ ಸದಸ್ಯರಲ್ಲಿ ಯಾರೇ ಒಬ್ಬರು ಹೊರಗೆ ಬಂದರೆ ದ್ವಯವೇ ಇಲ್ಲವಾಗುತ್ತದೆ. ಅಲ್ಲಿನ ವ್ಯಕ್ತಿಗಳಿಗೆ ಅತಿ-ವೈಯಕ್ತಿಕ ಅಸ್ತಿತ್ವವಿಲ್ಲ. ಆದರೆ ದ್ವಯವು ತ್ರಯವಾದಾಗ ಕೆಲವು ನೂತನ ಲಕ್ಷಣಗಳು ಕಂಡುಬರುವವು.

೧. ನೋಡಿ: Malinowski, Bronislaw : Crime and Custom in Savage Society (Harcourt & Brace, N.Y., 1932) P. 25.

ತ್ರಯದ ಯಾವುದೇ ಒಬ್ಬ ಸದಸ್ಯನು ಗುಂಪಿನಿಂದ ಹೊರಗೆ ಬಂದರೂ ತ್ರಯವು ಒಂದು ಗುಂಪಾಗಿ (ಈಗ ಹೊಸದಾದ ದ್ವಯವಾಗಿ) ಮುಂದುವರೆಯಬಲ್ಲುದು. ಅಲ್ಲದೆ ಮೊದಲ ಬಾರಿಗೆ ವ್ಯಕ್ತಿಗೆ ತಾನು ಗುಂಪಿನಿಂದ ಅಥವಾ ಬಹುಮತದಿಂದ ಹೊರತಳ್ಳಲ್ಪಡಬಹುದೆಂಬ ಅರಿವು ಮೂಡುತ್ತದೆ. ತಾನು ಮೂವರಲ್ಲಿ ಒಬ್ಬ ಸದಸ್ಯ; ತಾನು ವ್ಯಕ್ತಿ; ಉಳಿದಿಬ್ಬರು ಕೂಡಿದ ಗುಂಪೊಂದು ಇದೆ ಹಾಗೂ ಆ ಗುಂಪು ತನ್ನನ್ನು ಮೀರಿ ಇರಬಲ್ಲುದು, ಕೆಲಸ ಮಾಡಬಲ್ಲುದು, ಮುಂದುವರಿಯಬಲ್ಲುದು ಎಂಬ ಭಾವನೆ ಬರುತ್ತದೆ. ಅಂದರೆ ತನ್ನನ್ನು ಮೀರಿದ ಗುಂಪಿದೆ; ಅದು ತನ್ನ ಮೇಲೆ ಒತ್ತಡ ಹೇರಬಲ್ಲುದು ಎಂಬುದನ್ನು ವ್ಯಕ್ತಿಯು ಗ್ರಹಿಸುತ್ತಾನೆ. ಈ ಭಾವನೆ ದ್ವಯಗಳಲ್ಲಿ ಇರುವುದಿಲ್ಲ. ಅದು ತ್ರಯದಲ್ಲಿ ಕಾಣಿಸಿಕೊಳ್ಳುತ್ತದೆ ಹಾಗೂ ಹೆಚ್ಚು ಸದಸ್ಯರಿರುವ ಎಲ್ಲ ಗುಂಪುಗಳಲ್ಲಿ ಇರುತ್ತದೆ.

ಮೂರನೆಯ ಸದಸ್ಯನ ಪ್ರವೇಶವಾದಾಗ ಉಂಟಾಗುವ ಸಮೂಹ ಪ್ರಕ್ರಿಯೆಗಳನ್ನು ಸಿಮೆಲ್ ಸಾದ್ಯಂತ ವಿವರಿಸಲಿಲ್ಲ. ಅವನು ಮುಖ್ಯವಾಗಿ ಮೂರು ಬಗೆಯ ಸಾಧ್ಯತೆಗಳನ್ನು ಗುರುತಿಸಿದ್ದಾನೆ.

೧. ಮೊದಲನೆಯದಾಗಿ, ಮೂರನೆಯವನು ಉಳಿದಿಬ್ಬರ ಜೊತೆಗೆ ತ್ರಯಸ್ಥನಾಗಿ ನಿಲ್ಲಬಹುದು. ನಿರ್ಣಯಕಾರ (Umpire) ತೀರ್ಪುಗಾರ ಅಥವಾ ನ್ಯಾಯಾಧೀಶನಂತೆ ವರ್ತಿಸಬಹುದು. ಕೆಲವೊಮ್ಮೆ ರಾಜಿಮಾಡಿಸುವ ಪಾತ್ರ ವಹಿಸಬಹುದು. ಗುಂಪು ಒಡೆಯುವುದನ್ನು ತಡೆಯಬಹುದು. (ನೋಡಿ : ಚಿತ್ರ ೧–ಅ)

೨. ಎರಡನೆಯದಾಗಿ, ಆ ಮೂರನೆಯವನು 'ಇಬ್ಬರ ನ್ಯಾಯ ಮೂರನೆಯವನ ಆದಾಯ' ಎಂಬಂತೆ ವರ್ತಿಸಬಹುದು. ಅವನು ಉಳಿದಿಬ್ಬರನ್ನು ಜಗಳಕ್ಕೆ ಹಚ್ಚಿ ತಾನು ಲಾಭ ಪಡೆಯುತ್ತಾನೆಂದಲ್ಲ; ಆದರೆ ಅವರ ಜಗಳವನ್ನು ಸುಮ್ಮನೆ ನೋಡುತ್ತಿದ್ದು ತನ್ನ ಬೇಳೆ ಬೇಯಿಸಿಕೊಳ್ಳಬಹುದು. ಹಳೆಯ ಕತೆಯೊಂದರಲ್ಲಿ ಎರಡು ಬೆಕ್ಕುಗಳು ಬೆಣ್ಣೆ ಪಾಲು ಮಾಡಿಕೊಳ್ಳಲು ಅಸಮರ್ಥರಾಗಿ ಕೋತಿಯೊಂದನ್ನು ಮೊರೆಹೊಕ್ಕು ಮೋಸ ಹೋದ ಪ್ರಸಂಗ ಇದೆಯಷ್ಟೆ. ಹಾಗೆ ಈ ಪರದುಃಖ ಸಂತೋಷ (Tertius Gaudens) ಲಾಭ ಪಡೆಯಬಹುದು. (ನೋಡಿ : ಚಿತ್ರ ೧–ಬ)


೩. ಮೂರನೆಯದಾಗಿ, ಅವನು ಉದ್ದೇಶಪೂರ್ವಕವಾಗಿ 'ವಿಭಜಿಸಿ ಆಳು' (**Divide et impera**) ಎಂಬ ತತ್ವವನ್ನು ಅನುಸರಿಸಬಹುದು. ತನ್ನ ಸ್ವಂತ

ಚಿತ್ರ -೧



(ಅ) (ಬ) (ಕ)

ಚಿತ್ರ -೨



ಲಾಭಕ್ಕಾಗಿ ಅಥವಾ ತನ್ನ ಸ್ಥಾನಭದ್ರತೆಗಾಗಿ ಅವನು ಉಳಿದಿಬ್ಬರನ್ನು ಸದಾ ದೂರವಿಡಲು ಯತ್ನಿಸುತ್ತಾನೆ, ವಿಭಜಿಸಿ ಆಳಲು ಯತ್ನಿಸುತ್ತಾನೆ. (ನೋಡಿ : ಚಿತ್ರ ೧-ಕ)

ಸಿಮೆಲ್ ಕೇವಲ ಮೂರು ಸಾಧ್ಯತೆಗಳನ್ನು ಮಾತ್ರ ವಿವರಿಸಿದ್ದರೂ ಬೇರೆ ಅನೇಕ ಸಾಧ್ಯತೆಗಳಿವೆಯೆಂದು ಒಪ್ಪಿಕೊಂಡಿದ್ದಾನೆ. ಅವನ ನಂತರದ ಲೇಖಕರು ಅಂಥ ಅನೇಕ ಸಾಧ್ಯತೆಗಳನ್ನು ತೋರಿಸಿದ್ದಾರೆ.

ದ್ವಯಗಳ ಸದಸ್ಯರಲ್ಲಿರುವ ಐಕ್ಯಭಾವನೆ ಸಹಕಾರಗಳ ಬಗ್ಗೆ ಹಿಂದೆ ಪ್ರಸ್ತಾಪಿಸಲಾಗಿದೆ. ಅಂಥ ಐಕಮತ್ಯ ತ್ರಯಗಳಲ್ಲಿ ಕಂಡುಬರುವುದು ವಿರಳ. ಅಥವಾ ಅದಕ್ಕೆ ಅಷ್ಟು ಐಕಮತ್ಯ ಬೇಕಾಗಿರಲಿಕ್ಕಿಲ್ಲ. ಮೂವರಲ್ಲಿ ಒಬ್ಬ ಹೊರಗುಳಿದರೂ ಇಬ್ಬರ ಜೋಡಿಗುಂಪು ಉಳಿಯಲು ಸಾಧ್ಯವಿರುವುದರಿಂದ ಮುಕ್ಕೂಟದ ಮೂವರು ಐಕಮತ್ಯದಿಂದ ಇರುವುದು ಅತ್ಯಾವಶ್ಯಕವೆಂದೇನೂ ಅಲ್ಲ. ಹೀಗಾಗಿ ಎಷ್ಟೋ ತ್ರಯಗಳು ಹೆಚ್ಚಾಗಿ ಒಬ್ಬನ ವಿರುದ್ಧವಿರುವ ಇಬ್ಬರ ತಾತ್ಪೂರ್ತಿಕ ಒಕ್ಕೂಟಗಳಂತೆ ಕಾಣುತ್ತವೆ. (ನೋಡಿ : ಚಿತ್ರ ೨) ತಾಯಿ-ಮಗ ಬಲು ಸೊಗಸಾದ ದ್ವಯ. ಹೊಸದಾಗಿ ಬಂದ ಮನೆಯ ಸೊಸೆ ಮೂರನೆಯವಳು. ಇವಳ ಪ್ರವೇಶದ ನಂತರ ತ್ರಯದಲ್ಲಿ ಹೊಸ ಜೋಡಿಗುಂಪು ನಿರ್ಮಾಣವಾಗುವುದನ್ನು ಊಹಿಸಿಕೊಂಡರೆ ಈ ಮಾತಿನ ಅರ್ಥವಾದೀತು.[೧]

ತ್ರಯವೆಂದರೆ ಯಾವಾಗಲೂ ಒಬ್ಬನ ವಿರುದ್ಧ ಒಗ್ಗೂಡಿದ ಇಬ್ಬರ ಗುಂಪೆಂದು ಭಾವಿಸಬಾರದು. ಅದೂ ದ್ವಯದಂತೆ ಸದಸ್ಯರ ಸಾಮಾನ್ಯ ಅಸ್ಥೆ ಆಸಕ್ತಿಗಳನ್ನು ಪೂರೈಸಲೆಂದು ಹುಟ್ಟುವ ಸಮೂಹ. ಅದು ದ್ವಯವಾಗಿ ಪರ್ಯವಸಾನಗೊಳ್ಳುವ ಸಂದರ್ಭಗಳು ಅನೇಕವಿರಬಹುದೇನೋ ನಿಜ. ಆದರೂ ಎಷ್ಟೋ ತ್ರಯಗಳು ತ್ರಯಗಳಾಗಿಯೇ ಬಹುಕಾಲ ಬಾಳಬಲ್ಲವು. ಐಕ್ಯಮತ್ಯದಿಂದ ಇರಬಲ್ಲವು.

ತುಲನಾತ್ಮಕವಾಗಿ ನೋಡಿದರೆ ಜೋಡಿಗುಂಪುಗಳಲ್ಲಿ ಮುಕ್ಕೂಟಗಳಿಗಿಂತ ಹೆಚ್ಚಿನ ಐಕಮತ್ಯ ಸಾಧ್ಯ ಎಂದು ಕಂಡುಬರುತ್ತದೆ. ಅದೇ ರೀತಿಯಲ್ಲಿ ಕಾರ್ಯಸಾಧನೆ ಅಥವಾ ಕ್ಷಮತೆಯ ದೃಷ್ಟಿಯಿಂದಲೂ ಜೋಡಿಯೇ ಮೇಲೆಂದು ವಿವಿಧ ಪ್ರಯೋಗಗಳು ತೋರಿಸುತ್ತವೆ. ಆದರೆ ತ್ರಯಗಳು ದ್ವಯಗಳಿಗಿಂತ

೧. ಮಹತ್ವದ ಅನೇಕ ಉದಾಹರಣೆಗಳಿಗಾಗಿ ನೋಡಿ : Caplow, Theodore : Two against One : Coalition in Triads (Prentice Hall, N. J., 1969.)

ಕೆಲವು ವಿಷಯಗಳಲ್ಲಿ ಮೇಲು ಎಂಬುದನ್ನು ಮರೆಯಬಾರದು. ಉದಾಹರಣೆಗೆ, ಅವು ಚರ್ಚೆ, ಪರಾಮರ್ಶೆ, ಜಾಗರೂಕತೆಗಳಲ್ಲಿ ಜೋಡಿಗಳಿಗಿಂತ ಮಿಗಿಲು. ಪ್ರಾಯಶಃ ಇದಕ್ಕಾಗಿಯೇ ಸಮಿತಿಗಳನ್ನು ನಿರ್ಮಿಸುವಾಗ ಮೂವರು ಸದಸ್ಯರನ್ನು ನೇಮಿಸುವುದು ಸರ್ವಸಾಮಾನ್ಯವಾಗಿದೆ. ಪರೀಕ್ಷಕರ ಸಮಿತಿಗಳು ಹೆಚ್ಚಾಗಿ ತ್ರಿ-ಸದಸ್ಯ ಸಮಿತಿಗಳು. ನ್ಯಾಯ ನಿರ್ಣಯದಲ್ಲಿ ಇಬ್ಬರಿಗಿಂತ ಅಥವಾ ನಾಲ್ವರಿಗಿಂತ ಮೂವರು ವಾಸಿ ಎಂಬುದು ಸಾಮಾನ್ಯ ಅನುಭವ.

— ೪ —

ಈ ಕೆಲವು ಪುಟಗಳಲ್ಲಿ ನಾವು ದ್ವಯ ಮತ್ತು ತ್ರಯಗಳೆಂಬ ಎರಡು ಪ್ರಕಾರದ ಸಾಮಾಜಿಕ ಸಮೂಹಗಳ ಬಗೆಗೆ ಸಮಾಜಶಾಸ್ತ್ರಜ್ಞರ ಗಮನಸೆಳೆದ ಕೆಲವು ವಿಷಯಗಳನ್ನು ಅವಲೋಕಿಸಿದೆವು. ಇಂಥ ಅಧ್ಯಯನವು ಎರಡು ರೀತಿಗಳಲ್ಲಿ ಉಪಯುಕ್ತವಾಗಿದೆ. ಮೊದಲನೆಯದಾಗಿ, ಇಬ್ಬರು ಮತ್ತು ಮೂವರಿಂದ ಕೂಡಿದ ದ್ವಯ ಹಾಗೂ ತ್ರಯಗಳು ನಮಗೆ ಅತಿ ಪರಿಚಿತವಾದ ಸಮೂಹಗಳು. ಸಮಾಜ ವಿಜ್ಞಾನಿಗಳು ಅವುಗಳ ಬಗೆಗೆ ಸಾಕಷ್ಟು ತಿಳಿದಿರುವದು ಅವಶ್ಯಕವಾಗಿದೆ. ಅವುಗಳ ಅಧ್ಯಯನ ರೋಚಕವೂ ಹೌದು, ಲಾಭದಾಯಕವೂ ಹೌದು. ಎರಡನೆಯದಾಗಿ, ಈ ಅಧ್ಯಯನವು ಇತರ ಕಿರುಗುಂಪುಗಳ ಸಾರ್ಥಕವಾದ ಅಧ್ಯಯನಕ್ಕೆ ಬುನಾದಿಯನ್ನೊದಗಿಸುತ್ತದೆ. ಅಲ್ಲದೇ ಕಿರುಗುಂಪುಗಳ ಮತ್ತು ವಿಶಾಲ ಸಮೂಹಗಳ ನಡುವಿನ ಸಾಮ್ಯ-ವೈಷಮ್ಯಗಳನ್ನು ತಿಳಿದುಕೊಳ್ಳುವಲ್ಲಿ ಸಹಾಯಮಾಡುತ್ತದೆ.

ಈ ಪ್ರಬಂಧವನ್ನು ಮುಗಿಸುವ ಮೊದಲು ಇನ್ನೊಮ್ಮೆ ಒಂದು ಮಾತನ್ನು ಹೇಳಲೇಬೇಕು. ಸುಮಾರು ಎಂಭತ್ತು ವರ್ಷಗಳ ಹಿಂದೆ ಜಾರ್ಜ ಸಿಮೆಲ್ ಈ ಬಗೆಯ ಅಧ್ಯಯನಕ್ಕೆ ಶ್ರೀಕಾರ ಹಾಕಿದರೂ ಇಂದಿಗೂ ಈ ಕ್ಷೇತ್ರದಲ್ಲಿ ಸಾಕಷ್ಟು ಪರಿಶ್ರಮವಿಲ್ಲ, ಫಲವಿಲ್ಲ. ಇದು ಸಮಾಜವಿಜ್ಞಾನಿಗಳಿಗೊಂದು ಸವಾಲು.

ಆಧಾರ ಸಾಹಿತ್ಯ

ಗ್ರಂಥಗಳು :

1 Caplow, Theodore : **Two Against One** : Coalition in Triads (Prentice Hall, N.J., 1969).

2 Hare, Borgatta & Bales (Eds.) : **Small Groups** (Knoff, N. Y., 1955).

3 Olmstead, Michael : **The Small Group** (Random, N. Y., 1959).

4 Spykman, Nicholas : **The Social Theory of Georg Simmel** (Univ. of Chicago, Chicago, 1925).

5 Wolff, Kurt : **The Sociology of Georg Simmel** (Free Press, Glencoe, 1950).

ಲೇಖನಗಳು :

1 Gamson, William : 'A Theory of Coalition Formation', Am. Soc. Review, Vol. 26 (1961) pp. 373-382.

2 Mills, T. M. : 'The Coalition Patterns in three-persons groups', Am. Soc. Review, Vol. 19 (1954) pp. 657-667.

3 ನಾಗೇಶ್, ಎಚ್. ವಿ. : 'ಗುಂಪುಗಳು' (ಕನ್ನಡ ವಿಶ್ವಕೋಶ, ಸಂಪುಟ ೬, ೧೯೭೩) ಪುಟ ೭೦೬-೭೧೦.

ಬಸವಣ್ಣನವರು ಹಾಗೂ ಆಧುನಿಕ ಸಮಾಜ

● ಕೆ. ಜಿ. ಗುರುಮೂರ್ತಿ

ಯುಗಪುರುಷ, ಕ್ರಾಂತಿಕಾರಿ, ಭಕ್ತಿಭಂಡಾರಿ ಹೀಗೆ ಅನೇಕ ಬಿರುದುಗಳಿಂದ ಪ್ರಸಿದ್ಧವಾಗಿರುವ ಶ್ರೀ ಬಸವಣ್ಣನವರ ವಿಚಾರಗಳು ಎಂದೆಂದಿಗೂ ಅಮರವಾದವುಗಳು ಮತ್ತು ಅನ್ವಯಿಸತಕ್ಕಂತವುಗಳು. ಸುಮಾರು ೮೦೦ ವರ್ಷಗಳ ಹಿಂದೆ, ಅಂದರೆ ೧೨ನೆಯ ಶತಮಾನದಲ್ಲಿದ್ದ ಬಸವಾದಿ ಶಿವಶರಣರು ನಡೆಸಿದಂತಹ ವಿಚಾರಪೂರ್ಣ, ಆದರ್ಶ ತುಂಬುಜೀವನ, ಅವರು ಚರ್ಚಿಸಿದಂತಹ ವಿಚಾರಗಳು ೨೦ನೆಯ ಶತಮಾನದಲ್ಲಿಯೂ ದಾರಿದೀಪವಾಗಿವೆ. ಇವು ಎಷ್ಟರಮಟ್ಟಿಗೆ ಆದರ್ಶಪ್ರಾಯವಾಗಿವೆ ಎಂದರೆ ೧೯೨೪ರಲ್ಲಿ ಬೆಳಗಾವಿಯಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಮಹಾತ್ಮಾ ಗಾಂಧಿಯವರು— "ನಾನು ಬಸವಣ್ಣನವರ ತತ್ವಗಳಲ್ಲಿ ಕೆಲವನ್ನು ಈಗಾಗಲೇ ಕಾರ್ಯರೂಪಕ್ಕೆ ತಂದಿದ್ದೇನೆ, ಇವುಗಳಿಂದ ನನ್ನ ಸಾಮಾಜಿಕ ಕ್ರಾಂತಿಗೆ ಹೆಚ್ಚಿನ ಅನುಕೂಲವಾಗಿದೆ" ಎಂದು ನುಡಿದಿದ್ದಾರೆ. ಬಸವಾದಿ ಶಿವಶರಣರಿದ್ದ ಇದೇ ನಾಡಿನ ಇಂದಿನ ಚಿತ್ರವನ್ನು ನೋಡಿದರೆ ನಾವೆತ್ತ ಸಾಗುತ್ತಿದ್ದೇವೆ? ಈ ಸಮಾಜಕ್ಕೆ ಭವಿಷ್ಯವಿದೆಯೆ? ಎಂಬ ಪ್ರಶ್ನೆಗಳು ಬರುತ್ತವೆ. ನಾವು ಮತ್ತು ನಮ್ಮ ಜನನಾಯಕರು ಆಡುವ ಮಾತುಗಳಿಗೂ ಮತ್ತು ಕೃತಿಗಳಿಗೂ ತಾರತಮ್ಯವಿಲ್ಲ. ಜೀವನದ ನೈತಿಕ ಹಾಗೂ ಧಾರ್ಮಿಕ ಮಟ್ಟಗಳು ದಿನೇದಿನೇ ಕ್ಷಯಿಸುತ್ತಿವೆ. ಸಮಾಜದ ದೀನ ವರ್ಗಗಳು ಮತ್ತೂ ಕನಿಷ್ಠ ಸ್ಥಾನಕ್ಕೆ ಇಳಿಯುತ್ತಿವೆ.

ಎಲ್ಲೆಲ್ಲೂ ಅಸಹಕಾರ ಲಂಚಗುಳಿತನ, ಸ್ವಜನಾನುರಾಗ, ಲಾಭಬಡಕತನ, ಕಾಳಸಂತೆಕೋರತನ ಮುಂತಾದವುಗಳು ತಾಂಡವವಾಡುತ್ತಿವೆ. ಇದಕ್ಕೆ ಪರಿಹಾರವೇನೆಂದು ನೋಡಿದಾಗ ಇದು ಸರಕಾರದಿಂದ, ಕಾನೂನಿನಿಂದ ಸಾಧ್ಯ ವಿಲ್ಲವೆಂದು ಕಂಡುಬರುತ್ತದೆ. ಏಕೆಂದರೆ ಇಂದು ನಾವು ಪ್ರಜಾರಾಜ್ಯದಲ್ಲಿ ದ್ದೇವೆ. ಪ್ರಜೆಗಳಿಂದಲೇ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಕಾನೂನುಗಳನ್ನು ಮಾಡಿ ಅವನ್ನು ಕಾರ್ಯರೂಪಕ್ಕೆ ತರುತ್ತಾರೆ. ತಾವೇ ಸೃಷ್ಟಿಸಿದ ಕಾನೂನು ಗಳನ್ನು ತಾವೇ ರಕ್ಷಿಸುವ ಅವಕಾಶ ಸಿಕ್ಕಿರುವುದರಿಂದ ಇವನ್ನು ಮುರಿಯುವ ಅವಕಾಶವು ಹೆಚ್ಚು ಮತ್ತು ಸುಲಭಸಾಧ್ಯವಾದ ಕೆಲಸ. ಆದ್ದರಿಂದ ಸಮಾಜ ದಲ್ಲಿ ಬಲಾಢ್ಯರಾದವರು ದೀನವರ್ಗದವರ ತೊಂದರೆಗಳನ್ನು ಲಕ್ಷಿಸದೆ ತಮ್ಮ ವೈಯುಕ್ತಿಕ ಏಳಿಗೆಗೆ ಸಾರ್ವಜನಿಕ ಸಂಘ-ಸಂಸ್ಥೆಗಳನ್ನು, ಆಸ್ತಿಯನ್ನು ಉಪ ಯೋಗಿಸುವುದರಿಂದ ಸಮಾಜದಲ್ಲಿ ಆರ್ಥಿಕ, ಧಾರ್ಮಿಕ, ನೈತಿಕ ಜೀವನವು ಕುಂಠಿತವಾಗಿದೆ. ಇದನ್ನು ಪ್ರಜಾರಾಜ್ಯ ರೀತಿಯಲ್ಲಿಯೇ ಸರಿಮಾಡಬೇಕಾದಲ್ಲಿ ಮೊದಲಿಗೆ ಜನಸಾಮಾನ್ಯರ ನೈತಿಕ ಮಟ್ಟವನ್ನು ಹೆಚ್ಚಿಸುವುದೇ ಸೂಕ್ತ ದಾರಿ. ಆದರೆ ಇದನ್ನು ಕಾನೂನು ಮುಂತಾದವುಗಳಿಂದ ಮಾಡಲು ಸಾಧ್ಯವಿಲ್ಲ. ಹೀಗೆ ಜನರನ್ನು ಸುಧಾರಿಸುವಲ್ಲಿ ಬಸವಣ್ಣನವರ ತತ್ವಗಳು ಹೇಗೆ ಸಹಾಯಕವಾಗ ಬಲ್ಲವೆಂಬುದನ್ನು ವಿವೇಚಿಸಬಹುದು.

ಬಸವಣ್ಣನವರಿದ್ದ ಕಾಲದ ಹಿಂದೂ ಸಮಾಜದ ಪರಿಸ್ಥಿತಿ ಅನೇಕ ವಿಧದಲ್ಲಿ ಇಂದಿನ ಸ್ಥಿತಿಯನ್ನು ಹೋಲುತ್ತಿದ್ದಿತು. ಆದರೆ ಅಂದು, ಕೇವಲ ಧಾರ್ಮಿಕ ಅಧಃಪತನವಾಗಿದ್ದರೆ ಇಂದು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಅಂಧಃಪತನವಾಗಿದೆ. ಬಸವಣ್ಣನವರು ಪ್ರವರ್ಧಮಾನಕ್ಕೆ ಬಂದ ಕಾಲದಲ್ಲಿ ಸಮಾಜದಲ್ಲಿ ಎರಡು ಬಗೆಯ ಜನರಿದ್ದರೆನ್ನಬಹುದು-ಒಂದು ಪ್ರವೃತ್ತಿ ಮಾರ್ಗದವರು, ಇನ್ನೊಂದು ನಿವೃತ್ತಿ ಮಾರ್ಗದವರು. ಒಂದು ಲೌಕಿಕ ವ್ಯವಹಾರ ಗಳಲ್ಲಿ ತೊಡಗಿದ್ದರೆ ಇನ್ನೊಂದು ಪಾರಮಾರ್ಥಿಕ ವ್ಯವಹಾರದಲ್ಲಿ ತೊಡಗಿ ಆಕಾಶ ದತ್ತ ನೋಡುತ್ತಿತ್ತು. ಜ್ಞಾನಿಗಳಾದವರು ತಮ್ಮ ಜ್ಞಾನವನ್ನು ಜನಸಾಮಾನ್ಯರಿಗೆ ಹಂಚದೆ ಕಾಡಿನಲ್ಲಿ ಕುಳಿತು ಸದಾಕಾಲ ಮುಕ್ತಿ ಗಳಿಸುವ ಬಗೆಗೆ ಪ್ರಯತ್ನ ನಡೆಸಿ ದ್ದರು. ಇದರಿಂದಾಗಿ ಜನಸಾಮಾನ್ಯರಿಗೆ ಧಾರ್ಮಿಕ ಹಾಗೂ ನೈತಿಕ ವಿಚಾರ ಗಳಲ್ಲಿ ಸೂಕ್ತ ಮಾರ್ಗದರ್ಶನ ನೀಡುವಂತಹ ಜನರು ಇರಲಿಲ್ಲ. ಇನ್ನು ಪ್ರವೃತ್ತಿಮಾರ್ಗದವರು ತಮ್ಮ ಲೌಕಿಕ ಜೀವನವನ್ನು ಅನುಭೋಗಿಸುವುದರಲ್ಲೇ ಮುಳುಗಿಹೋಗಿದ್ದರು. ತಮ್ಮೆಲ್ಲ ಸೌಕರ್ಯಗಳು ಭೋಗಕ್ಕೆ ಎಂದು ಭ್ರಮಿಸಿ ಸದಾಕಾಲ ಸರ್ವಾಂಗ ಭೋಗಕ್ರೀಡೆಗಳಲ್ಲಿ ನಿರತರಾಗಿದ್ದರು. ಎರಡು ತದ್ವಿ ರುದ್ಧ ದಿಕ್ಕಿನತ್ತ ನಡೆದಿದ್ದ ಈ ಗುಂಪುಗಳನ್ನು ಬಸವಣ್ಣನವರು ಕೂಡಿಸಿ,

ಒಬ್ಬರಿಗೊಬ್ಬರು ಸಹಕರಿಸುವಂತೆ ಮಾಡಿ ಅವರನ್ನು 'ಧರ್ಮ' ಮಾರ್ಗಕ್ಕೆ ಹಚ್ಚಿದರು. ಅಂದರೆ ಇದರಿಂದ ಸಂಸಾರಿಗಳಾಗಿದ್ದವರು ವೈರಾಗಿಗಳಾಗದೆ ತಮ್ಮ ಲೌಕಿಕ ವ್ಯವಹಾರಗಳನ್ನು ಲಿಂಗಕ್ಕೆ ಅರ್ಪಿಸಿ ಅವರು ಧಾರ್ಮಿಕ ರಂಗದಲ್ಲಿ ಭಾಗವಹಿಸಿ ಉದ್ಧಾರವಾದರು. ಇದೇ ರೀತಿ ನಿವೃತ್ತಿಯ ಕಡೆಗೆ ನೋಡುತ್ತಿದ್ದವರನ್ನು ಕೂಡ ತಮ್ಮ ಪಾದದ ಬಲದಿಂದ ಜಯಿಸಿ, ಅವರು ತಮ್ಮ ಜ್ಞಾನವನ್ನು ಸಮಾಜದ ಒಳಿತಿಗೆ ಉಪಯೋಗಿಸುವಂತೆ ಮಾಡಿದರು.

ಇಂದು ಕೂಡ ಸಮಾಜದಲ್ಲಿ ಎರಡು ಗುಂಪುಗಳನ್ನು ಕಾಣಬಹುದು—ಸ್ವಾರ್ಥಿಗಳಾದ ವಿದ್ಯಾವಂತರು ಮತ್ತು ಜ್ಞಾನಿಗಳು ಮತ್ತು ಜನಸಾಮಾನ್ಯರು. ಮೊದಲನೆಯ ವರ್ಗದವರು ತಮ್ಮದೇ ಆದ ದಂತಗೋಪುರದಲ್ಲಿ ಕುಳಿತು ಕೆಳ ಜಗತ್ತಿನ ವ್ಯವಹಾರಗಳು ತಮಗೆ ಸಂಬಂಧಿಸಿಲ್ಲವೆನ್ನುವ ಮನೋಭಾವನೆಯನ್ನು ಬೆಳೆಸಿಕೊಂಡಿದ್ದಾರೆ ಎನ್ನಬಹುದು. ಉದಾಹರಿಸುವುದಾದರೆ, ಇವರು ಯಾವೊಂದು ಚುನಾವಣೆಗಳಲ್ಲೂ ಮತ ನೀಡಲೂ ಸಹ ಬರದಷ್ಟು ನಿವೃತ್ತರಿರುವರು. ಹೀಗಾಗಿ ನಿರಕ್ಷರಸ್ಥರು ಮತ್ತು ಹಣ ಮತ್ತಿತರ ಯಾವುದಾದರೂ ಆಸೆಗೆ ಬಲಿಯಾದ ಅವಿದ್ಯಾವಂತರು, ಗುಂಪುಗುಂಪಾಗಿ ಹೋಗಿ ಮತನೀಡುವುದರಿಂದ ವಿಚಾರಶೀಲರಲ್ಲದವರು ನಾಯಕರಾಗಿ ಬರುತ್ತಾರೆ. ಈ ಎರಡು ಗುಂಪುಗಳನ್ನು ಒಂದೆಡೆ ತಂದು ಉಪಯುಕ್ತವಾದ ರೀತಿಯಲ್ಲಿ ಜೀವನ ಮಾಡುವಂತೆ ಮಾಡಲು ನಾವು ಬಸವಣ್ಣನವರ ತತ್ವಗಳನ್ನು ಪ್ರಚಾರಕ್ಕೆ ತರಬೇಕಾಗುತ್ತದೆ.

ಬಸವಣ್ಣನವರು ಮಾಡಿದ ಎರಡನೆಯ ಮಹತ್ಕಾರ್ಯವೆಂದರೆ ಸ್ತ್ರೀಯರ ಉದ್ಧಾರ. ಬಸವಣ್ಣನವರ ಪೂರ್ವದ ಹಿಂದೂ ಸಮಾಜದಲ್ಲಿ ಸ್ತ್ರೀಗೆ ಸೂಕ್ತ ಸ್ಥಾನವಿರಲಿಲ್ಲ. ವೈದಿಕ ಸಮಾಜವು ಸ್ತ್ರೀಯನ್ನು ಮಾಯೆ ಎಂದು ಭ್ರಮಿಸಿ, ಹೆಣ್ಣೆಂದು ಕಡೆಗಣಿಸಿತ್ತು. ಆದರೆ ಶಿವಶರಣರು ಸ್ತ್ರೀಯನ್ನು ಬರೀ ಹೆಣ್ಣೆಂದು ಗಣಿಸದೆ, ಮಾಯೆ ಎಂದು ದೂರವಿಡದೆ, ಸಕಲ ಸಹಕಾರಗಳನ್ನಿತ್ತು ಗೌರವಿಸಿದರು ಎಂಬುದನ್ನು ನಾವು ಈ ಕೆಳಗಿನ ವಚನದಲ್ಲಿ ಕಾಣಬಹುದು :

> "ಜನನಕ್ಕೆ ತಾಯಾದಳು ಮಾಯೆ, ಮೋಹಕ್ಕೆ ಮಗಳಾದಳು ಮಾಯೆ,
> ಕೂಟಕ್ಕೆ ಸ್ತ್ರೀಯಾದಳು ಮಾಯೆ, ನೀವಿಕ್ಕಿದ ಮಾಯೆಯು
> ಪರಿಹರಿಸುವರೆ ಮುನ್ನವೆ ಕೂಡಲ ಸಂಗಮ ದೇವಾ"

ಇದೇ ರೀತಿ ಸ್ತ್ರೀಯನ್ನು ಶಿವಶರಣರು ಪ್ರತ್ಯಕ್ಷ ಪರಮಾತ್ಮ ಸ್ವರೂಪಳೆಂದು ಪ್ರತಿಪಾದಿಸಿರುವುದು ಈ ಮುಂದಿನ ವಚನದಲ್ಲಿ ಕಂಡುಬರುತ್ತದೆ :

"ತಾ ಮಾಡಿದ ಹೆಣ್ಣು ತೊಡೆಯನೇರಿತ್ತು,
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು,
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು,
ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ,
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ"

ಈ ವಚನದಲ್ಲಿ ಶಿವಶರಣರು ಸ್ತ್ರೀಯರಿಗೆ ಎಷ್ಟು ಶ್ರೇಷ್ಠವಾದ ಸ್ಥಾನವನ್ನು ನೀಡಿದ್ದರೆನ್ನುವುದನ್ನು ತೋರಿಸುತ್ತದೆ.

ಆದರೆ ಸಂಪ್ರದಾಯಸ್ಥ ಹಿಂದೂ ಸಮಾಜದಲ್ಲಿ, ವೇದಶಾಸ್ತ್ರ-ಪುರಾಣಗಳಲ್ಲಿ ಸ್ತ್ರೀಗೆ ಧಾರ್ಮಿಕ ಸ್ವಾತಂತ್ರ್ಯವಿಲ್ಲವಾದ್ದರಿಂದ ಆಕೆ ಸ್ವತಂತ್ರವಾಗಿ ಪೂಜೆ ಮಾಡಲಾರಳು. ಇದೂ ಅಲ್ಲದೆ ಆಕೆ ಆರ್ಥಿಕ ರಂಗದಲ್ಲಿಯೂ ಪರಾವಲಂಬಿಯಾಗಿದ್ದಳು. ಸಾಮಾಜಿಕವಾಗಿ ಆಕೆ ತನ್ನ ಯಾವ ಬಾವನೆಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸ್ವತಂತ್ರಳಿರಲಿಲ್ಲ. ಜೈನ ಧರ್ಮದಲ್ಲಿ ಆಕೆಗೆ ಸ್ತ್ರೀ ಜನ್ಮದಿಂದ ಮೋಕ್ಷಪ್ರಾಪ್ತಿ ಇಲ್ಲ. ಆಕೆ ಮುಂದಿನ ಜನ್ಮದಲ್ಲಿ ಪುರುಷನಾಗಿ ಹುಟ್ಟಿ ಬಂದಾಗಲೇ ಆಕೆಗೆ ಮುಕ್ತಿ ಪ್ರಾಪ್ತಿಯಾಗುತ್ತಿದ್ದಿತು. ಹೀಗೆ ಸಮಾಜದ ಅರ್ಧ ಭಾಗವನ್ನು ಅಂಧಕಾರದಲ್ಲಿ, ಪರಾವಲಂಬನೆಯಲ್ಲಿ ಇರುವುದು ಇಡೀ ಸಮಾಜಕ್ಕೆ ಕೆಡುಕೆನ್ನುವುದು ಆ ಕಾಲದ ಸಮಾಜದ ಧುರೀಣರಿಗೆ ತಿಳಿದಿರಲಿಲ್ಲ. ಆದರೆ ಬಸವಣ್ಣನವರು ಈ ಲಿಂಗಭೇದವನ್ನಳಿದು, ಸ್ತ್ರೀ ಪುರುಷರಿಗೆ ಸರಿಸಮಾನವಾದ ಸ್ಥಾನವನ್ನು ನೀಡಿದ್ದರು. ಇದರಿಂದ ಸ್ವತಂತ್ರಳಾದ ಸ್ತ್ರೀಯು ಸಂಸಾರಿಯಾಗಿ ಅಥವಾ ವಿರಹಿಣಿಯಾಗಿ ವೇಷವನ್ನು ಪಡೆಯಬಹುದಾಯಿತು. ಇದರಿಂದ ಸ್ತ್ರೀ ಸಮೂಹಕ್ಕೆ ಎಷ್ಟರ ಮಟ್ಟಿಗೆ ಸಹಾಯವಾಯಿತು ಮತ್ತು ಸ್ತ್ರೀಯರು ಬಸವಣ್ಣನವರಿಗೆ ಹೇಗೆ ಕೃತಾರ್ಥರಾಗಿದ್ದಾರೆಂಬುದನ್ನು ಅಕ್ಕನ ಈ ವಚನದಲ್ಲಿ ಕಾಣಬಹುದು :

"ಅಯ್ಯಾ, ನಿಮ್ಮ ಶರಣರು ಮೆಟ್ಟಿದ ಧರೆ ಪಾವನಯ್ಯ!
ಅಯ್ಯಾ, ನಿಮ್ಮ ಶರಣರು ಇದ್ದ ಪುರವೆ ಕೈಲಾಸವಯ್ಯಾ!
ಅಯ್ಯಾ, ನಿಮ್ಮ ಶರಣರು ನಿಂದುದೆ ನಿಜನಿವಾಸವಯ್ಯಾ!
ಚನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣ ಬಸವಣ್ಣನಿದ್ದ
ಕ್ಷೇತ್ರ ಅವಿಮುಕ್ತ ಕ್ಷೇತ್ರವಾಗಿ, ಆನು ಬಸವಣ್ಣನವರ
ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು".

ಅಣ್ಣನ ಅನುಭವ ಮಂಟಪದಲ್ಲಿ ಅಕ್ಕಮಹಾದೇವಿಯಾದಿಯಾಗಿ ಅನೇಕ ಮಹಿಳೆಯರು ಇವರೊಡನೆ ಕೂಡಿ ಜ್ಞಾನಾರ್ಜನೆಯಲ್ಲಿ, ಧರ್ಮಪ್ರಚಾರದಲ್ಲಿ

ತೊಡಗಿದ್ದುದನ್ನು ನೋಡಿದರೆ ಇದೊಂದು ಕ್ರಾಂತಿಕಾರಿ ವಿಷಯವೇ ಸರಿ ಮತ್ತು ಪ್ರಪಂಚದ ಯಾವ ಕಾಲದಲ್ಲೂ ಇಷ್ಟೊಂದು ಜನ ಸ್ತ್ರೀಯರು ಒಂದೇ ಕಡೆ, ಒಂದೇ ಕಾಲದಲ್ಲಿ ಪ್ರಭುದ್ಧಮಾನಕ್ಕೆ ಬಂದಿರಲಿಕ್ಕಿಲ್ಲ. ಆ ಕಾಲದ ಸ್ತ್ರೀಸಾಮಾನ್ಯ ರಲ್ಲಿಯೂ ಜ್ಞಾನ ಮತ್ತು ವಿಚಾರಶೀಲತೆ ಎಷ್ಟರಮಟ್ಟಿಗೆ ಇತ್ತೆಂಬುದನ್ನು ಶರಣ ಆಯ್ದಕ್ಕಿ ಮಾರಯ್ಯನ ಮಡದಿ ಲಕ್ಷ್ಮಮ್ಮನಲ್ಲಿ ಕಾಣಬಹುದು. ಒಂದು ದಿನ ತನ್ನ ಪತಿ ತಮಗೆ ಆವಶ್ಯಕವಿದ್ದುದಕ್ಕಿಂತಲೂ ಹೆಚ್ಚಿನ ಅಕ್ಕಿಯನ್ನು ಆರಿಸಿ ತಂದಾಗ ಅವನನ್ನು ಬಾಗಿಲಿನಿಂದ ಹೊರಗೆ ನಿಲ್ಲಿಸಿದಾಗ ಅವರಿಬ್ಬರೂ ಮಾಡುವ ಸಂವಾದ ಅಪೂರ್ವವಾದುದಾಗಿದೆ. ವಾದದಲ್ಲಿ ಸೋತ ಪತಿರಾಯ, ಬೇರೆ ಮಾರ್ಗವಿಲ್ಲದೆ, ತಾನು ಪತಿ ಎಂಬ ದರ್ಪನನ್ನು ತೋರಿಸಹೋದಾಗ ಆಕೆ– "ನೀನು ಸಂಗಕ್ಕೆ ಪತಿ, ಜ್ಞಾನಕ್ಕಲ್ಲ" ಎಂದು ಹೇಳುವ ಮಾತು ಅಂದು ಸ್ತ್ರೀ ಸಾಮಾನ್ಯರಲ್ಲಿ ಜ್ಞಾನದ ಮಟ್ಟ ಎಷ್ಟೆತ್ತರವಿತ್ತೆಂಬುದನ್ನು ತೋರಿಸುತ್ತದೆ.

ಶಿವಶರಣರು ಸ್ತ್ರೀಯರ ಧಾರ್ಮಿಕ ಮತ್ತು ಸಾಮಾಜಿಕ ಸ್ವಾತಂತ್ರ ವನ್ನಷ್ಟೇ ಪ್ರತಿಪಾದಿಸದೆ ಅವರ ನೈತಿಕ ಆಚರಣೆಗಳಿಗೂ ಮಹತ್ವ ಕೊಟ್ಟಿದ್ದರು. "ಪರಮ ಪತಿವ್ರತೆಗೆ ಗಂಡನೊಬ್ಬ" ಎಂದು ಸ್ತ್ರೀ ಪಾತಿವ್ರತ್ಯವನ್ನು ಕುರಿತು ಎಚ್ಚರಿಕೆ ನೀಡಿದರು. ಈ ಎಲ್ಲ ಕಾರ್ಯಗಳಿಂದ ಬಸವಣ್ಣನ ಸಮಕಾಲೀನರಾದ ಅನೇಕ ಸ್ತ್ರೀಯರು ಬಸವಣ್ಣನವರನ್ನು ಮುಕ್ತಕಂಠದಿಂದ ಹೊಗಳಿದ್ದಾರೆ.

ಬಸವಣ್ಣನವರ ಈ ವಿಚಾರಗಳು ಇಂದಿನ ನಮ್ಮ ಸಮಾಜದಲ್ಲಿ ಮಹತ್ತರ ವಾದ ಸ್ಥಾನ ಪಡೆದಿವೆ. ಇಂದು ಭಾರತದ ಮಹಿಳೆ ಪುರುಷರಿಗೆ ಯಾವ ರೀತಿ ಯಲ್ಲಿಯೂ ಸರಿಸಮಾನಗಳು—ಜ್ಞಾನಾರ್ಜನೆಯಲ್ಲಿ, ಆರ್ಥಿಕವಾಗಿ, ರಾಜಕೀಯ ರಂಗದಲ್ಲಿ ಸಹ ಕೇವಲ ಈ ಸಮಾನತೆಯಿಂದಲೇ ತೃಪ್ತಿಪಡುವಂತಿಲ್ಲ. ಬಸವಣ್ಣ ನವರ ಈ ವಿಚಾರವನ್ನು ಪ್ರತಿ ಕುಟುಂಬದಲ್ಲೂ ಕಾಣಬೇಕು, ಪ್ರತಿಯೊಂದು ಕಾರ್ಯದಲ್ಲೂ ನೋಡುವಂತಾಗಬೇಕು. ಆದರೆ ಇಂದು ನಮ್ಮ ಸ್ತ್ರೀಯರು ಸ್ವತಂತ್ರರಿದ್ದರೂ ದಾಸ್ಯದಲ್ಲಿದ್ದಾರೆನ್ನಬಹುದು. ವಿವೇಕಾನಂದರು ಈ ಬಗ್ಗೆ ಹೇಳಿರುವ ಒಂದು ಮಾತು —"ದಾಸ್ಯದಲ್ಲಿರುವವರ ಮಕ್ಕಳೂ ದಾಸರೇ. ನಿಮ್ಮ ಮುಂದಿನ ಪೀಳಿಗೆ ಸ್ವತಂತ್ರವಾಗಬೇಕಾದರೆ ಅವರ ತಾಯಂದಿರ ಸೆರೆ ಬಿಡಿಸ ಬೇಕು"—ಸೂಕ್ತವಾಗಿದೆ. ಶಿವಶರಣರು ಈ ವಿಷಯವನ್ನು ೧೨ ನೆಯ ಶತ ಮಾನದಲ್ಲೇ ಮನಗಂಡು ಸ್ತ್ರೀಯರ ಸ್ವಾತಂತ್ರ್ಯಕ್ಕೆ ಸಾಕಷ್ಟು ಶ್ರಮಿಸಿದ್ದಾರೆ.

ಬಸವೇಶ್ವರರ ಮತ್ತೊಂದು ಸಾಮಾಜಿಕ ಸಾಧನೆ ಎಂದರೆ "ಕಾಯಕ"ದ ಕಲ್ಪನೆ. ಕಾಯಕವೆಂದರೆ ಕೇವಲ "ಕೆಲಸ" ಮಾತ್ರವಲ್ಲ. ಇಲ್ಲಿ ಧರ್ಮ

ಕರ್ಮದ ಅರ್ಥವೂ ಇದೆ. ಕಾಯಕದ ಹಿಂದೆ ಧ್ವನಿ ಪೂರ್ಣ ಅರ್ಥವಿದೆ. ಕಾಯಕವೆಂದರೆ ಪ್ರತಿಯೊಬ್ಬರೂ ತಮ್ಮ ತಮ್ಮ ಕೆಲಸವನ್ನು ಸೂಕ್ತವಾದ ರೀತಿಯಲ್ಲಿ ಮಾಡುವದು ಮಾತ್ರವಲ್ಲ, ಅದನ್ನು ಶ್ರದ್ಧೆಯಿಂದ, ಮನಮುಟ್ಟುವಂತೆ ಮಾಡುವದು. ಇದು ಒಂದು ಬಗೆಯ ಮಾನಸಿಕವಾದ ಪೂಜೆಯಾಗುತ್ತದೆ. ಪ್ರತಿಯೊಬ್ಬರೂ ಕಾಯಕವನ್ನು ಮಾಡಲೇ ಬೇಕೆಂಬುದು ಅಣ್ಣನವರ ತತ್ವ. ಅಂದರೆ ಕುಳಿತುಣ್ಣುವವಗೆ, ಸೋಮಾರಿಗೆ ಇಲ್ಲಿ ಸ್ಥಾನವಿಲ್ಲ. ಇದೇ ತರಹ ಅತಿಯಾಗಿ ಗಳಿಸಿ ಆಕ್ರಮವಾಗಿ ಸಂಗ್ರಹಿಸವವರಿಗೂ ಇಲ್ಲಿ ಸ್ಥಾನವಿಲ್ಲ. ಅಂದಿಗೆ ಆಗುವಷ್ಟನ್ನು ಅಂದೇ ದುಡಿಯಬೇಕು. ಅಂದು ಉಪಯೋಗವಾಗದೆ ಮಿಕ್ಕದ್ದು ಎಂಜಲೆಂದು ಪರಿಗಣಿಸಲಾಗುತ್ತಿತ್ತು ಎಂಬುದನ್ನು ಈ ವಾಕ್ಯಗಳಲ್ಲಿ ಕಾಣಬಹುದು:

> "ನೇಮದ ಕೂಲಿ ಅಂದಿನ ನಿತ್ಯಕಾಯಕದಲ್ಲಿ ಸಂದಿರಬೇಕು.
> ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸುವುದು
> ನಷ್ಟಕ್ಕೆ ಕಾರಣ" ಎಂದಿದ್ದಾರೆ ಶರಣರು.

ಆದ್ದರಿಂದ ಹೆಚ್ಚಿಗೆ ಗಳಿಸಿ ಬೇರೆಯವರ ಅನ್ನವನ್ನು ಕಸಿದುಕೊಳ್ಳಬಾರದು. ಮಿಕ್ಕಿದರೆ ಅದನ್ನು ಧರ್ಮಕಾರ್ಯಗಳಿಗೆ ಅಥವಾ ದೀನವರ್ಗದವರ ಬಳಕೆಗೆ ಕೊಡುವುದರ ಮೂಲಕ ಹಂಚಿಕೊಳ್ಳಬೇಕು. ಇದಕ್ಕೆ ತಪ್ಪಿದವರು ಮೃಗಪಕ್ಷಿಗಳಿಗಿಂತಲೂ ಕಡೆಯಾಗುತ್ತಾರೆ ಎಂಬುದು ಬಸವಣ್ಣನವರ ವಾದವಾಗಿತ್ತೆಂಬುದನ್ನು ಅವರ ಈ ವಚನದಲ್ಲಿ ಕಾಣಬಹುದು:

> "ಕಾಗೆ ಒಂದಗುಳ ಕಂಡರೆ ಕರೆಯದೇ ತನ್ನ ಬಳಗವನು;
> ಕೋಳಿ ಒಂದು ಗುಟುಕ ಕಂಡರೆ, ಕೂಗಿ ಕರೆಯದೇ ತನ್ನ
> ಕುಲವೆಲ್ಲವ, ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ,
> ಆ ಕಾಗೆ ಕೋಳಿಗಿಂತ ಕರಕಷ್ಟ ಕೂಡಲಸಂಗಮದೇವ"—

ಎಂದಿದ್ದಾರೆ.

ಕಾಯಕ ಭಾವನೆಯಿಂದ ಬಸವಣ್ಣನವರ ಕಾಲದಲ್ಲಿಜನ ಸಾಮಾನ್ಯರಲ್ಲಿಯೂ ತುಂಬಿತುಳುಕುತ್ತಿದ್ದಿತೆನ್ನುವುದನ್ನು ಅನೇಕ ವಚನಗಳಲ್ಲಿ ನೋಡಬಹುದು. ತಮಗಾಗಿ ತಾವೇ ಹೇಗೆ ಉಣಬೇಕೋ ಹಾಗೆ ಪ್ರತಿಯೊಬ್ಬನೂ ತನ್ನದೇ ಆದ ಕಾಯಕವನ್ನು ಮಾಡಿ ಉಣಬೇಕು. ಕಾಯಕಗಳಲ್ಲಿ ಮೇಲು ಕೀಳೆಂಬ ಭಾವನೆ ಇಲ್ಲ. ಅಣ್ಣನವರೇ ಹೇಳುವಂತೆ—"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ". ಈ ಕಾಯಕದ ದೃಷ್ಟಿಯನ್ನು ಬಸವಣ್ಣನವರು ಪ್ರಧಾನಿಯಾಗಿದ್ದರೂ ತಮಗೂ ಮಾಚಿಗರ ಮಾದಯ್ಯನಿಗೂ ಹೋಲಿಸಿಕೊಂಡು

“ತನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ”—ಎಂದು ಹೇಳುವ ಮಾತಿನಲ್ಲಿ ನೋಡಬಹುದು.

ಅದೇ ತರಹ ಸಿಕ್ಕಿತೆಂದು ಹೆಚ್ಚಿಗೆ ಸಂಗ್ರಹಿಸುವಂತಿರಲಿಲ್ಲ. ಇದನ್ನು ಜನಸಾಮಾನ್ಯರೂ ಮಾನ್ಯಮಾಡಿ ಆಚರಿಸುತ್ತಿದ್ದರೆಂಬುದಕ್ಕೆ ಶರಣೆ ಲಕ್ಷ್ಮಮ್ಮ ತನ್ನ ಗಂಡ ತಂದ ಹೆಚ್ಚಿನ ಅಕ್ಕಿಯನ್ನು ಬಸವಣ್ಣನ ಮನೆಯ ಅಂಗಳದಲ್ಲಿಯೇ ಚಲ್ಲಿಬರಬೇಕೆಂದು ಹೇಳುವ ಮಾತಿನಲ್ಲಿ ನೋಡಬಹುದು.

ಇಂದು ನಮ್ಮ ಸಮಾಜದಲ್ಲಿ ಎಲ್ಲೆಲ್ಲೂ ಅಭಾವ ಪರಸ್ಥಿತಿ ಇರುವದರಿಂದ ಜನಸಾಮಾನ್ಯರಲ್ಲಿಯೂ ಇಂತಹ ಒಂದು ಭಾವನೆ ಬರಬೇಕಾಗಿದೆ. ಪ್ರತಿಯೊಬ್ಬರೂ ತಮಗೆ ಅವಶ್ಯವಿರಲಿ ಬಿಡಲಿ, ಸಿಕ್ಕಿದ ಸಾಮಾನುಗಳನ್ನು ಸಂಗ್ರಹಿಸಿಡುವುದನ್ನು ಕಾಣುತ್ತೇವೆ. ಇದರಿಂದ ಅತ್ಯವಶ್ಯಕವಾಗಿ ಬೇಕಿದ್ದವರಿಗೆ ಇವು ದೊರಕದೆ ತೊಂದರೆಯಾಗುತ್ತದೆ. ಇಂದು ಎಷ್ಟು ಜನ ನಮ್ಮ ತಾಯಂದಿರು ಈ ರೀತಿ ವಿಚಾರಮಾಡಿ ತಮ್ಮ ಪತಿಯಂದಿರನ್ನು ಸುಮಾರ್ಗಕ್ಕೆ ತರುವರು ? ತಮಗೆ ಅದು ಬೇಕು, ಇದು ಬೇಕೆಂದು ಇಲ್ಲದ ವಸ್ತುಗಳಿಗೆ ಆಸೆಪಟ್ಟು ತಮ್ಮ ಗಂಡಂದಿರನ್ನು ಹೆಚ್ಚಿಗೆ ಗಳಿಸುವಂತೆ ಮಾಡಿ ಸಂಗ್ರಹಣೆಯಲ್ಲಿ ತೊಡಗುವರು. ಆದರೆ ಶರಣರ ಈ ಆಚರಣೆಯಿಂದ ಸಮಾಜದ ಈ ತೊಂದರೆಯನ್ನು ನಿವಾರಿಸಬಹುದು ಎಂಬುದನ್ನು ನಾವು ಮನಗಾಣಬಹುದು.

ಇಂದಿನ ಆರ್ಥಿಕ ದೃಷ್ಟಿಯಲ್ಲಿಯೂ ಕಾಯಕದ ಕಲ್ಪನೆ ಮಹತ್ವದ್ದಾಗಿದೆ. ಇಂದು ನಮ್ಮ ಸಮಾಜದಲ್ಲಿ ನಿರುದ್ಯೋಗಿತನ ತಾಂಡವವಾಡುತ್ತಿದೆ. ಅದರಲ್ಲೂ ವಿದ್ಯಾವಂತ, ಪದವೀಧರ ನಿರುದ್ಯೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವದನ್ನು ಕಾಣುತ್ತೇವೆ. ಇದಕ್ಕೆ ಜನಸಾಮಾನ್ಯರಲ್ಲಿ ಕಾಯಕದ ಕಲ್ಪನೆ ಇಲ್ಲದಿರುವದೇ ಕಾರಣವಿದ್ದು ಎಲ್ಲರೂ ಉತ್ತಮವಾದ, ಸಾಹೇಬಗಿರಿಯ ನೌಕರಿ ಬೇಡುವರೇ ವಿನಃ ಕಾಯಕದ ಕಲ್ಪನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮಾಜಸೇವೆಗೆಂದು ಯಾವುದಾದರೊಂದು ವೃತ್ತಿಯನ್ನು ಅನುಸರಿಸಿ, ಕಾಯಕವೇ ಕೈಲಾಸವೆಂದು ಬಗೆದು, ತಮ್ಮ ಹಾಗೂ ಸಮಾಜದ ಉದ್ಧಾರ ಮಾಡಿಕೊಳ್ಳಬಯಸುವುದಿಲ್ಲ. ಇದಕ್ಕೆ ವೃತ್ತಿಗಳಲ್ಲಿ ಮೇಲು-ಕೀಳುಗಳೆಂಬ ಭಾವನೆ ಇರುವದು ಕಾರಣ. ಈ ವೃತ್ತಿಗಳನ್ನು ಕಾಯಕದ ಕಲ್ಪನೆಯ ಮೂಲಕ ನೋಡುವುದರಿಂದ ನಮ್ಮ ಸಮಾಜದಲ್ಲಿನ ನಿರುದ್ಯೋಗಿತನ, ಬಡತನ, ವೃತ್ತಿಗಳಲ್ಲಿ ಮೇಲು ಕೀಳೆಂಬ ಭಾವನೆಗಳನ್ನು ತೊಡೆದುಹಾಕಬಹುದು, ಎಂಬುದನ್ನು ಅಣ್ಣನ ತತ್ವದಿಂದ ಇಂದು ನಾವು ಕಲಿಯಬಹುದಾಗಿದೆ.

ಅಸ್ಪೃಶ್ಯತೆಯು ಹಿಂದೂ ಸಮಾಜಕ್ಕೆ ಒಂದು ಕಳಂಕ. ಇದನ್ನು ನಿವಾರಿಸಲು ಬಸವಣ್ಣನವರು ಮಾಡಿದ ಕಾರ್ಯ ಅಸಾಮಾನ್ಯವಾದುದು. ಅನಾದಿ ಕಾಲದಿಂದಲೂ ಹಿಂದೂ ಸಮಾಜ ಜಾತಿಶ್ರೇಣಿಗಳ ಮೇಲೆ ನಿಂತಿದ್ದು, ಜಾತಿಗಳಲ್ಲಿ ಮೇಲು-ಕೀಳೆಂಬ ಭಾವನೆ ಇದ್ದು, ನಮ್ಮ ಸಮಾಜದಲ್ಲಿ ಆಧಾರ ವೃತ್ತಿಗಳನ್ನು ಮಾಡುವವರು ಅಸ್ಪೃಶ್ಯರಾಗಿದ್ದರು. ಇದರಿಂದಾಗಿ ಅವರಿಗೆ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕವಾದ ಹೆಚ್ಚಿನ ನಷ್ಟವಾಗುತ್ತಿದ್ದಿತು. ಬಸವಣ್ಣನವರು ಎಲ್ಲರನ್ನೂ ಲಿಂಗವಂತ ಗುಂಪಿಗೆ ಸೇರಿಸಿಕೊಂಡಿದ್ದರಿಂದ ಜಾತಿಗಳು ನಶಿಸಿ ಹೋದವು. ವೃತ್ತಿಗಳಲ್ಲಿನ ವಿವಿಧತೆ ಮಾಯವಾಯಿತು. ಇಲ್ಲಿ ಯಾರು ಯಾವ ಕೆಲಸವನ್ನು ಹೇಗೆ ನೀತಿವಂತರಾಗಿ, ಮಾಡುವರೆಂಬುದು ಮುಖ್ಯವಾಗಿತ್ತೇ ವಿನಃ ಅವರು ಹುಟ್ಟಿದ ಜಾತಿಯಾಗಿರಲಿಲ್ಲ. ಇದನ್ನೇ ಬಸವಣ್ಣನವರು :

“ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ,
ಜಲ ಒಂದೇ ಶೌಚಾಚರ್ವಕ್ಕೆ,
ಕುಲ ಒಂದೇ ತನ್ನ ತಾನರಿದವಂಗೆ,
ಫಲ ಒಂದೇ ಷಡುದರ್ಶನ ಮುಕ್ತಿಗೆ,
ನಿಲವೊಂದೇ ಕೂಡಲಸಂಗಮದೇವ ನಿಮ್ಮನರಿದವಂಗೆ”

ಎಂದು ಹೇಳಿದ್ದಾರೆ.

ಅನುಭವಮಂಟಪದಲ್ಲಿ ಎಲ್ಲಾ ವೃತ್ತಿಗೆ ಸೇರಿದ ನೂರಾರು ಜನ ಶರಣರು ವಿರಾಜಿಸುತ್ತಿದ್ದರು ಮತ್ತು ಎಲ್ಲರೂ ಸರಿಸಮಾನ ಸ್ಥಾನವನ್ನು ಪಡೆದಿದ್ದರು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಇವಕ್ಕೆ ಕಾರಣ ಬಸವಣ್ಣನವರು ತಂದ ಕ್ರಾಂತಿಕಾರಿ ಸಾಮಾಜಿಕ ಧೋರಣೆಗಳೇ ಎಂಬುದಕ್ಕೆ ಈ ಕೆಳಗಿನ ವಚನವನ್ನು ನೋಡಬಹುದು :

“ಶೆಟ್ಟಿ ಎಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ ?
ಡೋಹರನೆಂಬೆನೆ ಕಕ್ಕಯ್ಯನ ?
ಮಾದಾರನೆಂಬೆನೆ ಚನ್ನಯ್ಯನ ?
ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ”

ಎಂದಿದ್ದಾರೆ ಬಸವಣ್ಣನವರು.

ಹೀಗೆ ಸಮಾಜದ ಕೆಳಸ್ಥಾನದಲ್ಲಿದ್ದ ಅಸ್ಪೃಶ್ಯರನ್ನು ೮೦೦ ವರ್ಷಗಳ ಹಿಂದೆಯೇ ಬಸವಣ್ಣನವರು ಉದ್ಧಾರ ಮಾಡಿದ್ದಾರೆ. ಅವರ ಈ ತತ್ವಗಳನ್ನೇ

ಮುಂದೆ ಮಹಾತ್ಮ ಗಾಂಧಿಯವರು ಪ್ರಚಾರಕ್ಕೆ ತಂದರಲ್ಲದೆ ಒಂದು ಹೆಜ್ಜೆ ಮುಂದೆ ಹೋಗಿ ಅಧಿಕೃತವಾಗಿ ನಮ್ಮ ಸಂವಿಧಾನದಲ್ಲಿಯೇ ಇವರಿಗೆ ನ್ಯಾಯ ಸಿಗುವಂತೆ ಮಾಡಿದ್ದಾರೆ. ಆದರೂ ಈ ಜನರಿಗೆ ೮೦೦ ವರ್ಷಗಳ ನಂತರವೂ ನ್ಯಾಯ ದೊರೆತಿಲ್ಲ, ದೊರೆಯುತ್ತಿಲ್ಲವೆಂಬುದು ಶೋಚನೀಯವಾದ ಸಂಗತಿ. ಇದು ಕಾನೂನಿನಿಂದ ಮಾಡತಕ್ಕ ಕೆಲಸವಲ್ಲ, ಜನರೇ ಪ್ರೇರಿತರಾಗಬೇಕು. ಆ ದಿಶೆಯಲ್ಲಿ ಬಸವಣ್ಣನವರ ತತ್ವಗಳು ಇಂದಿಗೂ ಸಹಾಯಕವಾಗಿವೆ ಮತ್ತು ಆಗಬಲ್ಲವು.

ಆದರೆ ಇಂದು ಕೆಲವು ಜನ ರಾಜಕೀಯ ಹಾಗೂ ಧಾರ್ಮಿಕ ಮುಖಂಡರು ತಮ್ಮ ಸ್ವಂತ ಲಾಭಕ್ಕೆ ಒಂದೆರಡು ಅಸ್ಪೃಶ್ಯರ ಓಣಿಗಳನ್ನು ಸಂದರ್ಶಿಸಿ, ಅಲ್ಪ ಸ್ವಲ್ಪ ಧನ-ವಸ್ತ್ರಗಳನ್ನು ದಾನ ಮಾಡಿ ತಮ್ಮ ಸೌಹಾರ್ದತೆಯನ್ನು ತೋರಿಸಲಿಚ್ಛಿಸಿದ್ದಾರೆ. ತೋರಿಕೆಯ ಈ ಕೃತಿ ಹೆಚ್ಚು ದಿನ ನಡೆಯಲಾರದು. ಇಂಥವರನ್ನು ಗಮನಿಸಿಯೇ ೮೦೦ ವರ್ಷಗಳ ಹಿಂದೆ ಅಂಬಿಗರ ಚೌಡಯ್ಯ ಈ ರೀತಿ ಹೇಳಿರಬಹುದು ಎನಿಸುತ್ತದೆ:

> “ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ,
> ತಿರುಗಿ ಅವನ ಮನೆಯಲ್ಲಿ ಊಣಬಾರದೆಂದು ಅಕ್ಕಿಯ ಕಣಕವ
> ತಕ್ಕೊಂಡು ಹೋಗುವ ಗುರುವನ್ನು ಕಂಡರೆ, ಕೆಡವಿ ಹಾಕಿ,
> ಮೂಗನೇ ಕೊಯ್ದು ಇಟ್ಟಂಗಿಯ ಕಲ್ಲಲೆ ತಿಕ್ಕಿ, ಸಾಸಿವೆ
> ಹಿಟ್ಟನೆ ತಳಿದು, ಮೇಲೆ ನಿಂಬೆಯ ಹುಳಿಯನೆ ಹಿಂಡಿ,
> ಪಡುವಲ ಗಾಳಿಗೆ ಹಿಡಿ”.

ಆದ್ದರಿಂದ ಅಸ್ಪೃಶ್ಯರ ಸಹಾಯಕ್ಕೆ ಹೋಗುವವರೂ ಶುದ್ಧ ಮನಸ್ಸಿನಿಂದ, ಅನುಕಂಪದಿಂದ ಈ ಸೇವೆಯನ್ನು ಮಾಡಬೇಕು. ಇಂತಹ ದೃಷ್ಟಿಯನ್ನು ಶರಣರ ಮಾರ್ಗದಲ್ಲಿ ನಡೆದರೆ ಮಾತ್ರ ಸಂಪಾದಿಸಬಹುದು ಎಂದಿದ್ದಾರೆ ಶರಣರು.

ಜನಸಾಮಾನ್ಯರಿಗೆ ಅರ್ಥವಾಗುವಂತೆ ವಚನಗಳನ್ನು ರಚಿಸುವುದರ ಮೂಲಕವೂ ಬಸವಣ್ಣನವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪೂರ್ವವಾದದ್ದು. ೧೨ನೆಯ ಶತಮಾನದ ಪೂರ್ವದ ಧರ್ಮಗ್ರಂಥಗಳು, ವಿಚಾರಗಳು ಕ್ಲಿಷ್ಟವಾದ ಸಂಸ್ಕೃತ ಭಾಷೆಯಲ್ಲಿದ್ದು ಇದನ್ನು ಅರ್ಥಮಾಡಿಕೊಳ್ಳಲು ಜನಸಾಮಾನ್ಯರು ಸ್ವತಂತ್ರರಿರಲಿಲ್ಲ. ಸರಳ ವಿಷಯಕ್ಕೆ ಸಂಸ್ಕೃತದ ಬಣ್ಣ ಬಳಿದು, ವ್ಯಾಕರಣದ ಕಗ್ಗಂಟನ್ನಿಟ್ಟು ಕ್ಲಿಷ್ಟವನ್ನಾಗಿ ಮಾಡಿ ಜನಸಾಮಾನ್ಯರಿಂದ ದೂರವಿಟ್ಟಿದ್ದರು. ದೇವರ ಬಗ್ಗೆ ತಿಳಿಯಲೂ ಜನರಿಗೆ ಈ ತೊಂದರೆಯೆ? ಎಂದು

ಮರುಗಿ ಸರಳ ಶೈಲಿಯಲ್ಲಿ ಎಲ್ಲರಿಗೂ ತಿಳಿಯುವಂತೆ ಸ್ಪಷ್ಟವಾಗಿ ಮತ್ತು ಸಂಕ್ಷಿಪ್ತವಾಗಿ ಜೀವನ ರಹಸ್ಯವನ್ನು ಜನತೆಯಲ್ಲಿ ತುಂಬಿದ ಕೀರ್ತಿ ೧೨ನೆಯ ಶತಮಾನದ ಬಸವಾದಿ ಶಿವಶರಣರಿಗೆ ಸಲ್ಲುತ್ತದೆ. ಅವರು ತಮ್ಮ ವಚನಗಳಿಂದ ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯನ್ನೇ ತಂದರೆನಬಹುದು. ದಿವಂಗತ ಶ್ರೀ ಗ. ಸ. ಹಾಲಪ್ಪನವರು ವಚನಗಳ ಬಗ್ಗೆ ಬರೆಯುತ್ತಾ– "ಕನ್ನಡ ಸಾಹಿತ್ಯ ವಚನ ಶೈಲಿಯಿಂದ ಮೆರಗುಗೊಂಡು ಕನ್ನಡ ನುಡಿ ಅಂದವಾಯಿತು. ವಚನಗಳು ಕೇವಲ ವ್ಯಾವಹಾರಿಕ ವಾಕ್ಯಗಳಾಗಿರದೆ ಇವು ಪಾರಮಾರ್ಥವನ್ನು ವಿವರಿಸುತ್ತವೆ. ಜೀವ, ಜಗತ್ತು, ದೇವರು ಮುಂತಾದ ಅಧ್ಯಾತ್ಮಿಕ ವಿಷಯಗಳ ಬಗ್ಗೆ ತಿಳವಳಿಕೆಯನ್ನು ಕೊಡುತ್ತವೆ. ಅನೇಕ ವಚನಗಳಲ್ಲಿ ಜನರ ನಡೆನುಡಿಗಳನ್ನು ತಿದ್ದುವ ನೈತಿಕ ವಿಚಾರಗಳಿವೆ" ಎಂದಿದ್ದಾರೆ. ಈ ದೃಷ್ಟಿಯಲ್ಲಿ ಬಸವಣ್ಣನವರು ಭಾಷಾ ಪಂಡಿತರೆನ್ನುವುದಕ್ಕಿಂತ ಭಾಷಾ ಜನಕರು ಎನ್ನಬಹುದು. ಈ ವಿಷಯವಾಗಿ ಬರೆದ ಕನ್ನಡ ಕುಲಗುರು ಆಲೂರ ವೆಂಕಟರಾಯರು, ವಚನಕಾರರ ಬಗ್ಗೆ ಹೇಳುತ್ತಾ, ವಚನಗಳಲ್ಲಿ ವಚನಕಾರರ "ಹೃದಯವು ಕರಗಿ ನೀರಾಗಿ ಹರಿದಿದೆ. ವಚನ ಪ್ರವಾಹದಲ್ಲಿ ಅವರ ವಿಚಾರಗಳು ಭೋರ್ಗರೆಯುತ್ತಿವೆ. ಅಲ್ಲಿ ಅವರ ಅಂತರಂಗದ ಅಲೆಗಳು ನಲಿಯುತ್ತವೆ, ತೇಜವು ತುಳುಕುತ್ತದೆ. ಅವು ಅವರ ಮಿದುವಾದ ಒಳ ಎದೆಯ ಒಡನುಡಿಗಳು; ನಂಜಿನ ನಾಲಿಗೆಯ ಬಿರುನುಡಿಗಳಲ್ಲ. ಈ ವಚನಗಳಲ್ಲಿ ಅವರ ಅಂತಃಕರಣವು ಹೆಪ್ಪುಗಟ್ಟಿರುತ್ತದೆ. ಸಾಧುವೃತ್ತಿಯ ಸೋನೆಯು ಸುರಿಯುತ್ತಿದೆ, ಅನುಭವದ ಕಾರುಣ್ಯವು ಕಂಗೊಳಿಸುತ್ತಿದೆ"— ಎಂದಿದ್ದಾರೆ. ಹೀಗೆ ದೇವವಾಣಿ ಜನರಿಗೆ ನಿಲುಕದಿದ್ದ ಕಾಲದಲ್ಲಿ ಜನವಾಣಿಯನ್ನೇ ದೇವವಾಣಿಯನ್ನಾಗಿ ಮಾಡಿದವರು ಬಸವಣ್ಣನವರು. ಸರಳವಾದ ವಚನಗಳಲ್ಲಿ ಭಾಷೆಯ ಆತಂಕವಿಲ್ಲದೆ, ಯಾರು ಬೇಕಾದರೂ ತಮಗೆ ವ್ಯಕ್ತವಾದ ವಿಚಾರಗಳನ್ನು ಮುಂದಿಡಲು ಅನುಕೂಲವಾಯಿತು. ಇದರಿಂದ ಜನಸಾಮಾನ್ಯರೂ ಸಾಕಷ್ಟು ಆಧ್ಯಾತ್ಮಿಕ ವಿಚಾರಗಳನ್ನು ತಿಳಿಯಲು ಪ್ರೇರಣೆಯಾಯಿತು. ಹೀಗೆ ಜನಸಾಮಾನ್ಯರಿಗೆ ವೇದ್ಯವಾಗುವಂತೆ ಹೇಳುವ ಈ ಮಾರ್ಗವೊಂದನ್ನು ಬಸವಣ್ಣನವರು ೮೦೦ ವರ್ಷಗಳ ಹಿಂದೆಯೇ ನೀಡಿದ್ದಾರೆ. ಇದರಿಂದ ಬಸವಣ್ಣನವರು ಮಾಡಬೇಕಾದ ಕಾರ್ಯ, ವಿಚಾರಕ್ರಾಂತಿ ಮನೆಮನೆಗೂ ಮುಟ್ಟುವಂತಾಗಿತ್ತು. ಬಸವಣ್ಣನವರ ಈ ಜನಸಾಮಾನ್ಯರ ಸಾಹಿತ್ಯ ದೃಷ್ಟಿಯು ಇಂದಿನ ಸಮಾಜಕ್ಕೆ ಎಷ್ಟರಮಟ್ಟಿಗೆ ಅನ್ವಯಿಸುತ್ತದೆ ಎಂಬುದನ್ನು ನೋಡೋಣ. ಇಂದು ಎಲ್ಲರಿಗೂ ಕ್ಲಿಷ್ಟವಾದ ವಿಷಯಗಳನ್ನು ಓದಿ ಜೀರ್ಣಿಸಿಕೊಳ್ಳುವಷ್ಟು ಪಾಂಡಿತ್ಯವಿರುವುದಿಲ್ಲ. ಇಂದು ನಮ್ಮ ಸರಕಾರದ ಅನೇಕ ಧೋರಣೆಗಳನ್ನು ಮತ್ತು ಯೋಜನೆಗಳನ್ನು ಜನಸಾಮಾನ್ಯರಿಗೆ ವೇದ್ಯವಾಗುವಂತೆ

ತಿಳಿಸಲು ನಮ್ಮ ಸರಕಾರ ಒಂದು ಸುಲಭವಾದ ಮಾರ್ಗವನ್ನು ಹುಡುಕಬೇಕಾಗಿದೆ. ಇದನ್ನು ಬಸವಣ್ಣನವರು ೮೦೦ ವರ್ಷಗಳ ಹಿಂದೆಯೇ ಮಾಡಿತೋರಿಸಿದ ಜನತಾ ಸಾಹಿತ್ಯದಿಂದ ಕಲಿಯಬಹುದು.

ವಿಚಾರಸ್ವಾತಂತ್ರ್ಯದ ಬಗ್ಗೆ ಬಸವಣ್ಣನವರು ಮಾಡಿದ ಕಾರ್ಯವೂ ಮಹತ್ತರವಾದುದು. ಬಸವಣ್ಣನವರ ಭೌದ್ಧಿಕ, ಸಾಮಾಜಿಕ ಕ್ರಾಂತಿ ಅಂದಿನ ಜನತೆಯಲ್ಲಿ ವೈಚಾರಿಕತೆಯನ್ನು ಹೊಡೆದೆಬ್ಬಿಸಿದವು. ಇಷ್ಟೇ ಅಲ್ಲ ಸ್ವತಂತ್ರ ಪ್ರವೃತ್ತಿಯ ಹೊಸ ಬೆಳಕನ್ನು ಅವರ ಅನುಭವ, ಅನುಭಾವಗಳಿಂದ ಹುಟ್ಟಿಸಿಕೊಂಡರು. ಈ ದಿಶೆಯಲ್ಲಿ ಬಸವಣ್ಣನವರು ಅನುಭವ ಮಂಟಪದ ಮುಖಾಂತರ ಎಲ್ಲಾ ವಿಚಾರವಂತರಿಗೂ ತನಗೆ ತಿಳಿದುದನ್ನು ಬೇಕಾದ ರೀತಿಯಲ್ಲಿ ವ್ಯಕ್ತಪಡಿಸುವ ಅವಕಾಶಮಾಡಿಕೊಟ್ಟರು. ಇಲ್ಲಿ ಮೇಲು ಕೀಳೆಂಬ ಭಾವನೆ ಇರಲಿಲ್ಲ. ಸ್ತ್ರೀ ಪುರುಷರು, ಎಲ್ಲಾ ವೃತ್ತಿಯವರು, ಎಲ್ಲಾ ವಯಸ್ಸಿನವರೂ ಕೂಡಿ ತಮಗೆ ಸೂಕ್ತವಾದ ರೀತಿಯಲ್ಲಿ ಧರ್ಮದ ಬಗ್ಗೆ, ಲೌಕಿಕ ಹಾಗೂ ಅಲೌಕಿಕ ವಿಚಾರಗಳ ಬಗ್ಗೆ, ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದರೆಂಬುದು ಅನೇಕ ವಚನಗಳಿಂದ ತಿಳಿದುಬರುತ್ತದೆ. ಬಸವಣ್ಣನವರ ದೃಷ್ಟಿಯಲ್ಲಿ ಶಿವಪಥವನ್ನರಿಯಲು ಎಲ್ಲಾ ವಯೋಗುಂಪುಗಳು ಸೂಕ್ತವಾದವು. ಹಿಂದೂ ಧರ್ಮಶಾಸ್ತ್ರದಂತೆ ವಾನಪ್ರಸ್ಥಾಶ್ರಮದ ಮೂಲಕ ಸನ್ಯಾಸಕ್ಕೆ ಬರಬೇಕೆಂಬ ವಾದವನ್ನು ಬಸವಣ್ಣನವರು ಒಪ್ಪಲಿಲ್ಲವೆಂಬುದನ್ನು ಅವರದೇ ವಚನದಲ್ಲಿ ನೋಡಬಹುದು : "ನೆರೆಕನ್ನೆಗೆ, ತೆರೆಗಲ್ಲಕೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ, ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ, ಪೂಜಿಸು ನಮ್ಮ ಕೂಡಲ ಸಂಗಮದೇವನ"—ಎಂದಿದ್ದಾರೆ.

ಕೊನೆಯದಾಗಿ, ಇಂದು ವಿಚಾರವಿನಿಮಯಕ್ಕೆ, ಅನುಭವಮಂಟಪದಂತಹ ಒಂದು ವೇದಿಕೆ ಇಲ್ಲದಿರುವುದು ವಿಚಾರವಂತರನ್ನು ನಿರ್ವೀರ್ಯರನ್ನಾಗಿ ಮಾಡಿದೆ ಎನ್ನಬಹುದು. ನಮ್ಮಲ್ಲಿಯ ಅನೇಕ ಅನೈತಿಕ ವ್ಯವಹಾರಗಳನ್ನು, ಸಾಮಾಜಿಕ ಕುಂದುಕೊರತೆಗಳನ್ನು ಸರಿಯಾದ ರೀತಿಯಲ್ಲಿ ಚರ್ಚಿಸಿ, ಸೂಕ್ತ ಪರಿಹಾರವನ್ನು ನೀಡುವಂತಹ ಒಂದು ವೇದಿಕೆ ಬೇಕಾಗಿದೆ. ಇದರಲ್ಲಿ ಭಾಗವಹಿಸಿ, ರಾಜಕೀಯ, ಧಾರ್ಮಿಕ ಮತ್ತು ಸ್ಥಾನಮಾನಗಳ ಅಂತರಗಳ ಗೊಂದಲವಿಲ್ಲದೆ ಸೂಕ್ತ ರೀತಿಯಲ್ಲಿ ಚರ್ಚಿಸಿ ಸರಿಯಾದ ಮೌಲ್ಯಗಳನ್ನು ಪಡೆಯಲು ಇಂತಹ ಒಂದು ವೇದಿಕೆಯ ಅವಶ್ಯಕತೆ ಇದೆ. ಇಂದು ತಲೆಗೊಂದು ಸಂಸ್ಥೆ, ಊರಿಗೊಂದು

ವೇದಿಕೆಗಳಿದ್ದು ಎಲ್ಲರೂ ತಮ್ಮ ಮನಬಂದಂತೆ ಅವುಗಳನ್ನು ದುರುಪಯೋಗ ಮಾಡಿಕೊಳ್ಳುವರೇ ವಿನಃ ಉಪಯುಕ್ತ ವಿಷಯಗಳನ್ನು ಯಾರ ಹಂಗೂ ಇಲ್ಲದೆ ಚರ್ಚಿಸುವ ಮನೋಭಾವ ಬೆಳೆಸಿಕೊಂಡಿಲ್ಲ. ಆದ್ದರಿಂದ ಯಾರ ಹಂಗೂ ಇಲ್ಲದೆ ತನ್ನ ಕಾರ್ಯವನ್ನು ಮಾಡಿದ ಬಸವಣ್ಣನವರ ಅನುಭವಮಂಟಪದಂತಹ ಒಂದು ಸಂಸ್ಥೆ ಬೇಕಾಗಿದೆ. ಇದನ್ನು ರೂಪಿಸುವಲ್ಲಿ ವಚನಗಳು ನೆರವಾಗಬಲ್ಲವು. ಹೀಗೆ ೮೦೦ ವರ್ಷಗಳ ಹಿಂದೆ ಬಸವಾದಿ ಶರಣರು ಮಾಡಿದ ಕೃತಿಗಳು, ನುಡಿದ ವಾಣಿ ಇಂದಿಗೂ ಅನ್ವಯಿಸುವಂತಿವೆ. ನಮ್ಮ ಇಂದಿನ ಅನೇಕ ಸಾಮಾಜಿಕ, ಆರ್ಥಿಕ ಮತ್ತಿತರ ಸಮಸ್ಯೆಗಳನ್ನು ಶರಣರು ಕೊಟ್ಟ ದಾರಿಯಲ್ಲಿ ನಿವಾರಿಸಲು ಸಾಧ್ಯವಿದೆ.

ಮತದಾರರ ಮನೋಭಾವ

● ಎ. ಎಂ. ರಾಜಶೇಖರಯ್ಯ

ರಾಜ್ಯಶಾಸ್ತ್ರವು ಒಂದು ಸಹಜ-ಪ್ರವೃತ್ತಿಶಾಸ್ತ್ರ. ಮಾನವ ಮೂಲತಃ ಸಮಾಜ ಜೀವಿ ಎಂದೆನಿಸಿಕೊಂಡಿದ್ದರೂ ಅವನು ರಾಜಕೀಯ ಜೀವಿಯೂ ಹೌದು. ಆದ್ದರಿಂದ ಮಾನವನ ರಾಜಕೀಯ ಒಲವುಗಳು, ಪ್ರವೃತ್ತಿಗಳೇ ಮುಂತಾದ ಇನ್ನೂ ಅನೇಕ ಸಮಸ್ಯೆಗಳನ್ನು ಈ ದೃಷ್ಟಿಯಿಂದ ವಿಶ್ಲೇಷಿಸುವದು ಸಾಧ್ಯ ಮತ್ತು ಅವಶ್ಯವೂ ಕೂಡ. ರಾಜ್ಯಶಾಸ್ತ್ರವು ಸಮಾಜಶಾಸ್ತ್ರಗಳ ಒಂದು ವಿಭಾಗ. ಸಮಾಜ, ರಾಜ್ಯ ಇವೆರಡರಲ್ಲಿಯೂ ಭೇದವನ್ನೇ ಎಣಿಸದ ಗ್ರೀಕ್ ತತ್ವಜ್ಞಾನಿಗಳಾದ ಪ್ಲೇಟೋ, ಅರಿಸ್ಟಾಟಲ್ ಮುಂತಾದವರು ಮಾನವನು ಸಮಾಜದಲ್ಲಿ ಅರ್ಥಾತ್ ರಾಜ್ಯದಲ್ಲಿಯೇ ಜನಿಸಿದ ಜೀವಿ ಎಂದು ಪರಿಗಣಿಸಿದ್ದರು. ಆದ್ದರಿಂದ ಸಮಾಜದ ಅಧ್ಯಯನದ ವಿವಿಧ ಶಾಖೆಗಳಾಗಿರುವ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮಾನವಕುಲ ಶಾಸ್ತ್ರ, ನೀತಿಶಾಸ್ತ್ರ, ಇವೆಲ್ಲವುಗಳಲ್ಲಿ ಮಾನವ ಕೇಂದ್ರಬಿಂದುವಾಗಿದ್ದು ಈ ಪ್ರತಿಯೊಂದು ಶಾಸ್ತ್ರದಲ್ಲಿ ಆಯಾ ದೃಷ್ಟಿಯಿಂದ ಅವನ ಸಮಸ್ಯೆಗಳನ್ನು ಅರಿಯುವ ಮತ್ತು ಅಳೆಯುವ ಪ್ರಯತ್ನ ಮಾಡಿರುವುದಾಗಿದೆ. ಈ ಎಲ್ಲಾ ಸಮಾಜ ಶಾಸ್ತ್ರಗಳು ಮಾನವನ ವಿವಿಧ ರೀತಿಯ ಪ್ರವೃತ್ತಿಗಳನ್ನು

ವಿಶ್ಲೇಷಿಸುವ ಶಾಸ್ತ್ರಗಳಾಗಿವೆ. ಮಾನವನ ಮಾನಸಿಕ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲು ಸಹಾಯಕವಾಗಿರುವ ಶಾಸ್ತ್ರವೇ ಮನಶ್ಶಾಸ್ತ್ರ. ಮನಶ್ಶಾಸ್ತ್ರವು ಸಮಾಜವ ಶಾಸ್ತ್ರಗಳ ಸಮೂಹಕ್ಕೆ ಇತ್ತೀಚೆಗೆ ದೊರೆತ ಅಮೂಲ್ಯ ಸಾಧನವೆನ್ನಬಹುದು. ಇಂದಿನವರೆಗೂ ಬಿಡಿಸಲಾರದ ಒಗಟುಗಳಾಗಿದ್ದ ಅನೇಕ ಸಮಸ್ಯೆಗಳನ್ನು ಇಂದು ಮನಶ್ಶಾಸ್ತ್ರದ ಸಹಾಯದಿಂದ ಬಿಡಿಸಲು ಸಾಧ್ಯವಾಗಿದೆ.

ಮನಶ್ಶಾಸ್ತ್ರವು ಮಾನವನ ಮಾನಸಿಕ ವರ್ತನೆಗಳು, ಪ್ರವೃತ್ತಿ, ಅಭಿವ್ಯಕ್ತಿ ಮತ್ತು ಒಲವುಗಳ ವೈಜ್ಞಾನಿಕ ವಿಶ್ಲೇಷಣೆ ಹಾಗೂ ಅಧ್ಯಯನದ ಶಾಸ್ತ್ರವಾಗಿದೆ. ಇತ್ತೀಚೆಗೆ ಈ ಶಾಸ್ತ್ರದ ಬಳಕೆಯನ್ನು ವ್ಯಾಪಕವಾಗಿ ಮಾಡಲಾಗುತ್ತಿದೆ. ರಾಜ್ಯಶಾಸ್ತ್ರದ ಅನೇಕ ಸಮಸ್ಯೆಗಳನ್ನು ಇಂದು ಮನೋವೈಜ್ಞಾನಿಕ ವಿಶ್ಲೇಷಣೆಗೊಳಪಡಿಸಿ ಅವುಗಳನ್ನೂ ವೈಜ್ಞಾನಿಕವಾಗಿ ಅರಿಯುವ ಸಾಧ್ಯತೆಯಿದೆ ಎಂದು ತಿಳಿದು ಬಂದಿದೆ. ಇದರಿಂದಾಗಿ ರಾಜ್ಯಶಾಸ್ತ್ರದ ಅಧ್ಯಯನವೂ ಕೂಡ ಹೆಚ್ಚು ವೈಜ್ಞಾನಿಕವಾಗುವ ಸಂಭವವಿದೆ. ಮತದಾನವೂ ಕೂಡ ಇಂತಹ ಸಮಸ್ಯೆಗಳಲ್ಲಿ ಒಂದಾಗಿದೆ ಎಂದರೆ ತಪ್ಪಾಗಲಾರದು. ಆದರೂ ಈ ಮನೋವೈಜ್ಞಾನಿಕ ಮಾರ್ಗವು ಮತದಾನ ಸಮಸ್ಯೆಯನ್ನು ವಿಶ್ಲೇಷಿಸುವ ಅನೇಕ ವಿಧಾನಗಳಲ್ಲಿ ಒಂದು ಪ್ರಮುಖ ಹಾಗೂ ಸ್ವಾರಸ್ಯಕರ ವಿಧಾನವಾಗಿದೆ ಎನ್ನುವುದನ್ನು ಮರೆಯಬಾರದು.

ಮನಶ್ಶಾಸ್ತ್ರವು ಮಾನವನ ಮನಸ್ಸು ಮತ್ತು ವರ್ತನೆ ಅಥವಾ ಒಲವುಗಳ ವಿಶ್ಲೇಷಣೆ ಮಾಡುವಾಗ ಅವನನ್ನು ಒಂದು ಕಡೆ ಪ್ರತ್ಯೇಕ ವ್ಯಕ್ತಿಯಾಗಿ ಮತ್ತು ಇನ್ನೊಂದು ಕಡೆ ಸಮಾಜದ ಅಂಗವಾಗಿ ಪರಿಗಣಿಸಿ ಅವನ ವರ್ತನೆಗಳನ್ನು ವಿವರಿಸುವ ಪ್ರಯತ್ನ ಮಾಡುತ್ತದೆ. ಮಾನವನ ವರ್ತನೆಯನ್ನು ಮೂರು ವಿಧಗಳಲ್ಲಿ ವಿಂಗಡಿಸಬಹುದು. ವಿವೇಚನಾಪೂರ್ಣ ವರ್ತನೆ (rational), ಸಹಜ ಪ್ರವೃತ್ತಿ ವರ್ತನೆ (instinctive), ಮತ್ತು ಪರಂಪರಾಗತ ಅಥವಾ ಸಾಂಪ್ರದಾಯಿಕ ವರ್ತನೆ (traditional), ಎಂದರೆ ಮನುಷ್ಯನ ಯಾವುದೇ ಚಟುವಟಿಕೆಯು ಅವನ ಸದ್ವಿವೇಕದಿಂದ ಪ್ರೇರಿತವಾಗಿರಬಹುದು, ಅಥವಾ ಅದು ಅವನಲ್ಲಿ ಅವನ ಸಹಜ ಸ್ವಭಾವದ ಮೇರೆಗೆ ವ್ಯಕ್ತವಾಗಿರಬಹುದು, ಅಥವಾ ಅವನು ಬೆಳೆದು ಬಂದ ಪರಿಸರದ ಪ್ರಭಾವದಿಂದ ಪ್ರಚೋದಿತವಾಗಿರಬಹುದೆಂದಾಯಿತು. ಯಾವ ಸಂದರ್ಭದಲ್ಲಿ ಯಾವ ಪ್ರಭಾವ ಪ್ರಮುಖವಾಗಿರುವುದೆಂಬುದನ್ನು ನಿರ್ಣಯಿಸಲು ಮನಶ್ಶಾಸ್ತ್ರದ ನೆರವು ಅಗತ್ಯ. ಇದೂ ಅಲ್ಲದೇ ಮನಶ್ಶಾಸ್ತ್ರವು ಕೇವಲ ವ್ಯಕ್ತ ವರ್ತನೆಗಳನ್ನೇ ಅಲ್ಲದೇ ಮಾನವನ ಅವ್ಯಕ್ತ ವರ್ತನೆಗಳನ್ನೂ ಅರಿಯುವ ಸಾಧನವಾಗಿದೆ. ಅವನ ಅಂತರಾಳದಲ್ಲಿ ಹುದುಗಿ

ರುವ ಭಾವನೆಗಳು, ವಿಚಾರಗಳು ಮುಂತಾದವುಗಳನ್ನು ಅವು ವ್ಯಕ್ತಗೊಳ್ಳುವ ಮೊದಲೇ ಅರಿಯುವ ಸಾಧ್ಯತೆಗಳನ್ನು ಮನಶ್ಶಾಸ್ತ್ರ ನಮಗೆ ಒದಗಿಸಿಕೊಟ್ಟಿದೆ. ಅದ್ದರಿಂದ ಇಂದಿನ ಸಮಾಜದ ಹಲವಾರು ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸುವ ಮಾರ್ಗದಲ್ಲಿ ಮನಶ್ಶಾಸ್ತ್ರದ ಸಹಾಯ ಮತ್ತು ಸಹಕಾರ ವಿವಿಧ ಸಮಾಜ ಶಾಸ್ತ್ರಗಳಿಗೆ ಅನಿವಾರ್ಯ.

ರಾಜ್ಯಶಾಸ್ತ್ರವು ಮೂಲತಃ ರಾಜ್ಯಕ್ಕೆ ಮತ್ತು ರಾಜ್ಯದ ಸದಸ್ಯನೆನಿಸಿರುವ ವ್ಯಕ್ತಿಗೆ ಸಂಬಂಧಿಸಿದ ಶಾಸ್ತ್ರವಾಗಿದೆ. ರಾಜ್ಯದ ಸುತ್ತು ಹೆಣೆದುಕೊಂಡಿರುವಂತಹ ಸಮಸ್ಯೆಗಳಾದ ರಾಜ್ಯದ ಉಗಮ, ಅದರ ಅವಶ್ಯಕತೆ, ಅದರ ರೂಪರೇಷೆಗಳು. ಅದರ ಅಂಗರಚನೆ ಮುಂತಾದ ವಿಷಯಗಳನ್ನು ಅದು ಶಾಸ್ತ್ರೀಯವಾಗಿ ಪರಿಶೀಲಿಸುವ ಶಾಸ್ತ್ರವಾಗಿದೆ. ತದಂಗವಾಗಿ ರಾಜ್ಯದ ಸದಸ್ಯರುಗಳಾದ ವ್ಯಕ್ತಿಗಳ ಮತ್ತು ರಾಜ್ಯದ ನಡುವಣ ಸಂಬಂಧ ಮತ್ತು ವ್ಯಕ್ತಿ-ವ್ಯಕ್ತಿಯ ನಡುವಣ ಸಂಬಂಧಗಳನ್ನು ವಿವೇಚಿಸುತ್ತದೆ. ಈ ಸಂಬಂಧಗಳನ್ನು ವಿವೇಚಿಸುವಾಗ ರಾಜ್ಯಶಾಸ್ತ್ರವು ಪ್ರಮುಖವಾಗಿ ಪ್ರಜೆಗಳ ನಡುವಣ ಪರಸ್ಪರ ರಾಜಕೀಯ ಸಂಬಂಧಗಳಿಗೆ ಹೆಚ್ಚು ಪ್ರಾಧಾನ್ಯ ಕೊಡುವದು ಸಹಜ ಹಾಗೂ ಅನಿವಾರ್ಯ. ಸಮಾಜ ಜೀವಿಯಾದ ಮಾನವನ ಸಂಬಂಧಗಳನ್ನು ನಾವು ಯಾವುದೇ ದೃಷ್ಟಿಯಿಂದ ನೋಡುವ ಪ್ರಯತ್ನ ಮಾಡಿದರೂ ಅವುಗಳ ಮಾನಸಿಕ ಪರಿಣಾಮಗಳನ್ನು ಕಡೆಗಣಿಸಲು ಬರುವಂತಿಲ್ಲ. ರಾಜ್ಯ ಮತ್ತು ರಾಜಕೀಯ ಸಂಸ್ಥೆಗಳು ಸಮಾಜದಲ್ಲಿನ ಇತರ ಸಂಸ್ಥೆಗಳಂತೆ ಮನುಷ್ಯನ ಮನಸ್ಸಿನಲ್ಲಿಯೇ ಉದ್ಭವವಾಗುವದರಿಂದ ಅವುಗಳನ್ನು ಆ ಮನಸ್ಸಿನ ವಿಶ್ಲೇಷಣೆಯಿಂದಲೇ ಅರಿಯಬೇಕಾಗುತ್ತದೆ. ಆದ್ದರಿಂದಲೇ ಲೇಬಾನ್ (Lebon), ಮ್ಯಾಕಡುಗಲ್ (McDougall), ಗ್ರ್ಯಾಹಂವ್ಯಾಲಸ್ (Graham Wallace), ಬಾಲ್ಡವಿನ್ (Baldwin) ಮತ್ತು ಇತರರು ರಾಜ್ಯಶಾಸ್ತ್ರ ಮತ್ತು ಮನಶ್ಶಾಸ್ತ್ರಗಳ ನಡುವಣ ನಿಕಟ ಸಂಬಂಧವನ್ನು ಒತ್ತಿಹೇಳಿದರು. ಈ ವರ್ಗಕ್ಕೆ ಸೇರಿದ ವೈಚಾರಿಕರ ಅಭಿಪ್ರಾಯದಲ್ಲಿ ಒಂದು ರಾಜ್ಯದ ಸಮಗ್ರತೆ ಮತ್ತು ಅಂಗ ವಿನ್ಯಾಸಗಳು ಆಯಾ ಜನತೆಯ ಮಾನಸಿಕ ಪ್ರವೃತ್ತಿಯನ್ನೇ ಅವಲಂಬಿಸಿರುತ್ತದೆ. ಅದೇ ರೀತಿಯಲ್ಲಿ ಆಯಾದೇಶದ ಸರಕಾರ ಪದ್ಧತಿಯೂ ಕೂಡ ಜನರ ಸ್ವಭಾವಕ್ಕನುಗುಣವಾಗಿಯೇ ರೂಪಿತವಾಗಿರುತ್ತದೆ. ಆದ್ದರಿಂದ ರಾಜಕೀಯ ವರ್ತನೆಗಳು, ಪರಂಪರೆಗಳು ಮತ್ತು ಸಂಸ್ಥೆಗಳು ಮನುಷ್ಯನ ಸ್ವಭಾವಜನ್ಯವಾಗಿವೆ ಎಂದಾಯಿತು. ಒಂದು ದೇಶದ ಸರ್ಕಾರವು ಯಶಸ್ವಿಯಾಗಬೇಕಾದರೆ ಅದು ಆ ದೇಶದ ಜನತೆಯ ಮಾನಸಿಕ ಸ್ಥಿತಿಯೊಂದಿಗೆ ಸಾಮರಸ್ಯ ಹೊಂದಿರಬೇಕಾದುದು ಅವಶ್ಯಕ ಪೂರ್ವ ಸಂಗತಿಯಾಗಿದೆ. ಉದಾಹರಣೆಗಾಗಿ ಬ್ರಿಟನ್ನಿನಲ್ಲಿ ಅರಸೊತ್ತಿಗೆಯ ನಿವರ್ತನ

ವನ್ನೇ ತೆಗೆದುಕೊಳ್ಳೋಣ. ಆ ದೇಶದಲ್ಲಿ ಶತಮಾನಗಳಿಂದ ಅರಸೊತ್ತಿಗೆಯು ಅನೂಚಾನವಾಗಿ ನಡೆದು ಬಂದಿದೆ. ಆ ದೇಶದ ಇತಿಹಾಸದುದ್ದಕ್ಕೂ ಅರಸರ ಆಳ್ವಿಕೆ ಒಂದಲ್ಲ ಒಂದು ರೀತಿಯಲ್ಲಿ ಅಸ್ತಿತ್ವದಲ್ಲಿದೆ. ಅದು ಅನೇಕ ಯುದ್ಧಗಳನ್ನೂ, ಕ್ರಾಂತಿಗಳನ್ನೂ ಮೀರಿ ನಿಂತಿದೆ. ಅದಕ್ಕೆ ಅಲ್ಲಿಯ ಜನರ ಮನೋಪ್ರವೃತ್ತಿಯೇ ಕಾರಣ. ಪ್ರಜಾಪ್ರಭುತ್ವ ತತ್ವ ಮತ್ತು ರಾಜಪ್ರಭುತ್ವ ತತ್ವ ಇವುಗಳನ್ನು ತಮ್ಮದೇ ಆದ ರೀತಿಯಲ್ಲಿ ಇಂಗ್ಲೀಷರು ಒಂದುಗೂಡಿಸಿದ್ದಾರೆ. ಹಾಗೆಯೇ ಇತರ ಸಮಾಜಗಳಲ್ಲಿಯೂ ಕೂಡ ಪ್ರಜಾಪ್ರಭುತ್ವ ಪದ್ಧತಿಯು ಯಶಸ್ವಿಯಾಗಬೇಕಾದರೆ ಅಲ್ಲಿಯ ಜನತೆಯಲ್ಲಿ ಪ್ರಜಾಪ್ರಭುತ್ವವನ್ನು ಮಾನ್ಯ ಮಾಡುವ ಮತ್ತು ನಿರ್ವಹಿಸಿಕೊಂಡು ಹೋಗುವ ಪ್ರವೃತ್ತಿ ಇರಬೇಕಾಗುತ್ತದೆ. ಏಷಿಯಾ ಮತ್ತು ಆಫ್ರಿಕಾದ ಅನೇಕ ರಾಷ್ಟ್ರಗಳಲ್ಲಿ ಪ್ರಜಾಸತ್ತೆ ಅಳಿಯುವದಕ್ಕೆ ಅಲ್ಲಿಯ ಜನರ ಮನೋಭಾವಗಳು ಬಹುಮಟ್ಟಿಗೆ ಕಾರಣ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದಲ್ಲಿ ಜನರಲ್ಲಿ ಮೊದಲು ಅದರ ಬಗೆಗೆ ಅಚಲ ವಿಶ್ವಾಸ ಅಥವಾ ನಂಬುಗೆ ಯಿರುವದು ಅವಶ್ಯ. ಸಂಯಮ, ಪರಸ್ಪರ ವಿಶ್ವಾಸ ಮತ್ತು ತಿಳುವಳಿಕೆ, ಶಿಸ್ತು ಹಾಗೂ ಇತರರ ಅಭಿಪ್ರಾಯಗಳನ್ನು ಗೌರವಿಸುವುದು, ಹಿಂಸಾಚಾರಕ್ಕೆಳಸದಿರುವುದು, ರೂಢಿ ನಿಯಮಗಳನ್ನು ಮನ್ನಿಸುವ ಪ್ರವೃತ್ತಿ ಇವು ಮನೋಜನ್ಯ ಗುಣಗಳಾಗಿವೆ. ಆದ್ದರಿಂದಲೇ "ಜನತೆ ತಮ್ಮ ಭಾವಕ್ಕೆ ತಕ್ಕ ಸರಕಾರವನ್ನು ಪಡೆಯುತ್ತಾರೆ." ಎಂದು ಹೇಳಲಾಗಿದೆ.

ಆಧುನಿಕ ಪ್ರಜಾಸತ್ತಾತ್ಮಕ ರಾಷ್ಟ್ರವ್ಯವಸ್ಥೆಯಲ್ಲಿ ಅತ್ಯಧಿಕ ಸಂಖ್ಯೆಯ ಜನರು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶವನ್ನು ಮತ್ತು ಹಕ್ಕನ್ನು ಪಡೆದಿರುತ್ತಾರೆ. ಆದ್ದರಿಂದ ಹೆಚ್ಚು ಹೆಚ್ಚು ಜನರು ಪಾಲ್ಗೊಳ್ಳುವ ಸರಕಾರ ಪದ್ಧತಿಯಲ್ಲಿ ಸಾರ್ವಜನಿಕರಿಗಾಗಿ ನಿರ್ಣಯಗಳನ್ನು ಹೆಚ್ಚು ಕಡಿಮೆ ಸಾರ್ವಜನಿಕವಾಗಿಯೇ ಕೈಕೊಳ್ಳಬೇಕಾಗುತ್ತದೆ. ಗುಪ್ತ ನಿರ್ಣಯಗಳು ಮತ್ತು ಹಲವೇ ರಾಜಕೀಯ ಪ್ರಮುಖರೇ (elites) ಮಾತ್ರ ನಿರ್ಣಯ ತೆಗೆದುಕೊಳ್ಳುವುದು ಪ್ರಜಾಸತ್ತೆಗೆ ಕೂಡಿಬರದ ಪದ್ಧತಿ. ಇಂಥ ರಾಜಕೀಯ ವ್ಯವಸ್ಥೆಯಲ್ಲಿ ರಾಜಕೀಯ ಜನರ ಮಟ್ಟದಲ್ಲಿ ಜರುಗಬೇಕಾಗಿದೆ. ಯಾವುದೇ ಕ್ರಿಯೆ ಅಥವಾ ಚಟುವಟಿಕೆಗೆ ಮೊದಲು ನಿರ್ಣಯ (decision) ಬೇಕಾಗುತ್ತದೆ. ನಿರ್ಣಯ ಮಾಡುವಾಗ ಆಯ್ಕೆ (choice) ಮಾಡಬೇಕಾಗುತ್ತದೆ. ಆಯ್ಕೆ ಮಾಡುವಾಗ ಮಂತ್ರಾಲೋಚನೆ ಮಾಡಬೇಕಾಗುತ್ತದೆ. ಅದೂ ಸರಿಯಾದ ಮಂತ್ರಾಲೋಚನೆ ಮಾಡಬೇಕಾಗುತ್ತದೆ. ವಿಚಾರಮಾಡಲು ಬುದ್ಧಿ ಅಥವಾ ಜ್ಞಾನ ಅತ್ಯಾವಶ್ಯಕ. ಆದ್ದರಿಂದ ಯಾವುದೇ ನಿರ್ಣಯ ಮಾಡುವಾಗ ಬುದ್ಧಿ ಹಾಗೂ ಮನಸ್ಸಿನ ಪಾತ್ರ ಪ್ರಮುಖವಾದದ್ದು. ಅರ್ಥಾತ್ ಮನುಷ್ಯನ ಪ್ರತಿ

ಯೊಂದು ಕ್ರಿಯೆಗೂ ಮನಸ್ಸೇ ಕಾರಣ. ಅಂತೆಯೇ ಮತದಾನದ ಕ್ರಿಯೆಗೂ ಮನಸ್ಸಿನಲ್ಲಿಯೇ ವಿವರಣೆಯನ್ನು ಪಡೆಯಬಹುದಾಗಿದೆ.

ಮಾನವನಲ್ಲಿರಬಹುದಾದ ಸಕಲಗುಣಗಳೂ ರಾಜಕೀಯ ಪ್ರಕ್ರಿಯೆಯಲ್ಲಿಯೂ ವ್ಯಕ್ತವಾಗುತ್ತವೆ. ಮಹಾದಾಕಾಂಕ್ಷೆ, ಹಂಬಲ, ಪ್ರೇಮ, ಉದ್ರೇಕ, ತಿರಸ್ಕಾರ, ರಾಗ-ದ್ವೇಷ ಹಾಗೂ ಸ್ಮೃತಿ, ಲೆಕ್ಕಾಚಾರ, ಮತ್ತು ತರ್ಕಬದ್ಧ ವಿಚಾರ ಮುಂತಾದವು ಮೂಲಭೂತ ಮಾನವ ಗುಣಗಳಾಗಿವೆ. ಎಂದರೆ ಮಾನವನಲ್ಲಿ ವಿವೇಚನೆ ಮತ್ತು ಅಸಂಬದ್ಧತೆ ಈ ಎರಡೂ ವಿರೋಧಾಭಾಸಗಳು ಅಡಗಿವೆ. ಹಲವೊಮ್ಮೆ ಅವನು ವಿವೇಕಯುತವಾಗಿ, ವಿಚಾರಪೂರಿತವಾಗಿ ವರ್ತಿಸಿದನೆಂದರೆ ಯಾವಾಗಲೂ ಅವನು ಅದೇ ರೀತಿ ವರ್ತಿಸುವನೆಂಬ ಭರವಸೆ ಇಲ್ಲ. ಅತ್ಯಂತ ವಿವೇಕಶಾಲಿ ಎಂದು ಕರೆಯಿಸಿಕೊಂಡ ವ್ಯಕ್ತಿಯೂ ಕೂಡ ಕೆಲವೊಂದು ಸಂದರ್ಭಗಳಲ್ಲಿ ಅವಿವೇಕತನದಿಂದ ವರ್ತಿಸಬಹುದು. ಆದ್ದರಿಂದ ಮಾನವನ ವರ್ತನೆಗಳು ವಿರೋಧಾಭಾಸಗಳ ಸಂಗಮವಾಗಿವೆ. ಅಂದಮಾತ್ರಕ್ಕೆ ಅವನ ವರ್ತನೆಗಳನ್ನು ವಿಚಾರಯುತವಾಗಿ ವಿಶ್ಲೇಷಿಸಲು ಬಾರದು ಎಂದು ಅರ್ಥವಲ್ಲ. ಮನುಷ್ಯನ ಅನೇಕ ವರ್ತನೆಗಳ ವಿಚಾರಯುತ ವಿಶ್ಲೇಷಣೆ ಸಾಧ್ಯ ಎಂದು ಮನಶ್ಶಾಸ್ತ್ರಜ್ಞರು ಪದೇ ಪದೇ ತೋರಿಸಿಕೊಟ್ಟಿದ್ದಾರೆ.

ಮನೋ ವಿಶ್ಲೇಷಣೆಯ ಆಧುನಿಕ ವಿಧಾನಗಳ ಸಹಾಯದಿಂದ ವಿವೇಕಯುತವಾದುದನ್ನು ಅವಿವೇಕಯುತವಾದದ್ದರಿಂದ ಬೇರ್ಪಡಿಸುವ ಸಾಧ್ಯತೆಯಿದೆ. ಈ ದಿಶೆಯಲ್ಲಿ ಜಗದ್ವಿಖ್ಯಾತ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯಡ್ (Sigmond Freud) ಮತ್ತು ಕಾರ್ಲ್ ಜಂಗ್ (Carl Jung) ಇವರ ಕೊಡುಗೆ ಸಾಮಾನ್ಯವಾದುದೇನಲ್ಲ.

ಮಾನವನ ಅನೇಕ ಕ್ರಿಯೆಗಳಲ್ಲಿ ಮತದಾನವೂ ಒಂದು. ಇತರ ಕ್ರಿಯೆಗಳಂತೆ ಮತದಾನ ಕ್ರಿಯೆಯೂ ಕೂಡ ವಿವೇಕಯುತ ಮತ್ತು ಅವಿವೇಕಯುತ ಪ್ರಭಾವಗಳಿಗೆ ಒಳಗಾಗಿದ್ದು ವಿವೇಕಪ್ರಮುಖಗಳಿಗಿಂತ ಹೆಚ್ಚು ಅವಿವೇಕದ ಅಂಶಗಳೇ ಕಂಡು ಬರುತ್ತದೆ. ಆದರೂ ಕೂಡ ಇಂತಹ ಪ್ರತಿಕ್ರಿಯೆಯನ್ನು ಅರ್ಥಪೂರ್ವಕವಾಗಿ ಮತ್ತು ಸಾಧ್ಯವಾದಷ್ಟುಗೆ ವೈಜ್ಞಾನಿಕವಾಗಿಯೂ ವಿವರಿಸಲು ಸಾಧ್ಯ. ಮನೋವೈಜ್ಞಾನಿಕ ತಂತ್ರಗಳು ಈ ದಿಶೆಯಲ್ಲಿ ಅತ್ಯಂತ ಸಹಕಾರಿಯಾಗಿವೆ.

ರಾಜಕೀಯ ಪ್ರಕ್ರಿಯೆಯು ಮಾನವ ಸ್ವಭಾವದ ಗುಣಧರ್ಮಗಳಿಂದಲೇ ಪ್ರಭಾವಿತವಾಗುತ್ತದೆಂದು ಹೇಳಬಹುದು. ಉದಾಹರಣೆಗೆ "ಸಮಾನಾಂಶಗಳನ್ನೊಳಗೊಂಡ ಪರಿಸ್ಥಿತಿಯಲ್ಲಿ ಒಂದು ಗುಂಪಿನ ಎಲ್ಲಾ ಜನರು ಸಮಾನ ರೀತಿಯಲ್ಲಿ ವರ್ತಿಸುವರು" ಎಂಬ ಒಂದು ಹೇಳಿಕೆಯಿದೆ. ಏಕರೀತಿಯ ಆರ್ಥಿಕ,

ಸಾಮಾಜಿಕ, ರಾಜಕೀಯ ಪರಿಸರವಲ್ಲಿ ಬೆಳೆದು ಬಂದ ಜನರ ರಾಜಕೀಯ ಪ್ರಕ್ರಿಯೆಯು ಸ್ಥೂಲವಾಗಿ ಒಂದೇ ರೀತಿಯದಾಗಿರುತ್ತದೆ, ಎಂದು ಹೇಳ ಬಹುದೇನೋ. ರಾಜಕೀಯ ಕ್ಷೇತ್ರದಲ್ಲಿ ಗಣನೀಯ ಸಂಖ್ಯೆಯ ಸಂಗತಿಗಳನ್ನು ಕ್ರಿಯೆಗಳನ್ನು ವೀಕ್ಷಿಸುವ ಮೂಲಕ ಕೆಲವು ಸಾಮಾನ್ಯ ಸೂತ್ರ ನಿರೂಪಣೆ ಮಾಡಬಹುದು. ಹೀಗೆ ನಿರೂಪಿತವಾದ ಸಾಮಾನ್ಯ ಸೂತ್ರಗಳ ಸಹಾಯದಿಂದ ಜನರ ಸಾಮಾನ್ಯ ವರ್ತನೆಯ ರೀತಿಯನ್ನು ವಿವರಿಸಬಹುದಾಗಿದೆಯಲ್ಲದೇ ಅವರು ಮುಂದೆಯೂ ಕೂಡಾ ನಿರ್ದಿಷ್ಟ ಪರಿಸರದಲ್ಲಿ ಹೇಗೆ ವರ್ತಿಸಬಹುದು ಎಂಬುದನ್ನು ಸಮಯೋಚಿತ ಖಚಿತತೆಯಿಂದ ಭವಿಷ್ಯ ನುಡಿಯಬಹುದು. ಹೀಗೆ ಸಾಮಾನ್ಯ ವೀಕ್ಷಣೆಯಿಂದ ನಿರೂಪಿತವಾದ ಸೂತ್ರಗಳೇ ರಾಜಕೀಯ ಸೂತ್ರಗಳು ಎನಿಸಿಕೊಳ್ಳುತ್ತವೆ.

ಮತದಾನದ ಒಲವು ಅಥವಾ ಮತದಾರರ ವರ್ತನೆಯನ್ನು ಅನೇಕ ರೀತಿಯ ಆಂತರಿಕ ಮತ್ತು ಬಾಹ್ಯ ಪರಿಸ್ಥಿತಿ ಒತ್ತಡಗಳು, ಪ್ರಭಾವಗಳ ವಿಶ್ಲೇಷ ಣೆಯ ಮೂಲಕ ಅಧ್ಯಯನ ಮಾಡಬಹುದು. ಇಂತಹ ವಿಶ್ಲೇಷಣೆಯ ಸಹಾಯ ದಿಂದ ಮತದಾನದ ಒಲವನ್ನು ಸಾಮಾನ್ಯವಾಗಿ ಊಹಿಸಬಹುದು. ಪ್ರತಿ ಯೊಂದು ಆಧುನಿಕ ರಾಷ್ಟ್ರದಲ್ಲಿ, ಅದು ಪ್ರಜಾಪ್ರಭುತ್ವವೇ ಆಗಿರಲಿ, ನಿರಂಕುಶ ಪ್ರಭುತ್ವವೇ ಆಗಿರಲಿ, ಜನ ಸಾಮಾನ್ಯರ ಧೋರಣೆ ಮತ್ತು ವರ್ತನೆಗಳು ಸರ ಕಾರದ ವರ್ತನೆಯ ಇತಿಮಿತಿಗಳನ್ನು ನಿರ್ಧರಿಸುತ್ತವೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಸರಕಾರವು ಜನತೆಯಿಂದ ತನ್ನ ಅಧಿಕಾರವನ್ನು ಪಡೆಯುವಲ್ಲಿ ಪ್ರಮುಖ ಸಾಧನಗಳಾಗಿವೆ.

ರಾಜಕೀಯ ವರ್ತನೆ ಮತ್ತು ಮತದಾನದ ಒಲವು

ರಾಜಕೀಯ ವರ್ತನೆ ಅಥವಾ ಒಲವು ಸಂಘಸಂಸ್ಥೆಗಳು, ಘಟನೆಗಳ ಮತ್ತು ಸಿದ್ಧಾಂತಗಳನ್ನು ಹೊರತುಪಡಿಸಿ ಕೇವಲ ರಾಜಕೀಯ ಸಂಗತಿಗಳ ಬಗ್ಗೆ ವ್ಯಕ್ತಿಯ ಅಥವಾ ಹಲವಾರು ವ್ಯಕ್ತಿಗಳ ಮನೋಪ್ರವೃತ್ತಿಯ ಅಧ್ಯಯನದ ಮತ್ತು ವಿಶ್ಲೇಷಣೆಯಿಂದ ಕೂಡಿರುತ್ತದೆ. ಈ ಅರ್ಥದಲ್ಲಿ ರಾಜಕೀಯ ಕ್ರಿಯೆ ಹಾಗೂ ಒಲವು ಮತದಾರರ ಒಲವು ಅಥವಾ ಕ್ರಿಯೆಯೇ ಆಗಿವೆ. ಇಂಥ ಅಧ್ಯ ಯನದಲ್ಲಿ ವ್ಯಕ್ತಿಗಳ ವರ್ತನೆಯನ್ನು ಗುರುತಿಸಿ ಅವುಗಳಿಗಿರಬಹುದಾದ ಕಾರಣ ಗಳನ್ನು ಮತ್ತು ಪ್ರೇರಣೆಗಳನ್ನು ಕಂಡು ಹಿಡಿಯುವ ಪ್ರಯತ್ನವನ್ನು ಕಾಣ ಬಹುದು. ಬಹಳಮಟ್ಟಿಗೆ ಇದನ್ನು ಒಂದು ವೀಕ್ಷಣಾ ಅಧ್ಯಯನವೆಂದು ಕರೆಯಬಹುದು. ಈ ಅಧ್ಯಯನವು ಮೌಲ್ಯ-ಮುಕ್ತವಾದದು ಅಥವಾ ಮೌಲ್ಯ ಬದ್ಧವಾದುದು. ಈ ಪದ್ಧತಿಯ ಅಧ್ಯಯನದಲ್ಲಿ ನಿತ್ಯಸತ್ಯಗಳೆನ್ನಬಹುದಾದ

ಶಾಶ್ವತ ಮೌಲ್ಯಗಳನ್ನು ನಿರ್ಧರಿಸುವ ಅಥವಾ ಕಂಡು ಹಿಡಿಯುವ ಗುರಿಯಿರುವುದಿಲ್ಲ ಮತ್ತು ಅದರ ಬಳಕೆಯೂ ಇರುವುದಿಲ್ಲ ಎಂದೇ ಹೇಳಬಹುದು.

ಆದರೆ ಸಾಮಾನ್ಯವಾಗಿ ರಾಜಕೀಯ ಒಲವಿನ ಅಧ್ಯಯನವು ಎಲ್ಲಾ ರಾಜಕೀಯ ಚಟುವಟಿಕೆಗಳ ಅಧ್ಯಯನದ ವಿಧಾನ ಎಂದು ನಂಬಲಾಗಿದೆ. ಅದು ಕೇವಲ ಮತದಾರರ ವರ್ತನೆ ಅಥವಾ ರಾಜಕೀಯದ ಇನ್ನಾವುದೇ ಸಾಂಘಿಕ ಅಂಶವನ್ನು ಮಾತ್ರ ಒಳಗೊಂಡಿಲ್ಲವೆಂದು ವಾದಿಸಲಾಗಿದೆ.

ರಾಜಕೀಯ ಒಲವಿನ ಅಧ್ಯಯನದ ಆರಂಭವನ್ನು ಈ ಶತಮಾನದ ಮೂರನೆಯ ದಶಕದಲ್ಲಿ, ಕಾಣಬಹುದು. ನಾಲ್ಕನೆಯ ಹಾಗೂ ಐದನೆಯ ದಶಕಗಳಲ್ಲಿ, ರಾಜಕೀಯ ಒಲವಿನ ಅಧ್ಯಯನ ಮಾಡುವವರ ಸಂಖ್ಯೆ ಹೆಚ್ಚಾಗಿ 'ಪ್ರವೃತ್ತಿವಾದಿ'ಗಳು (Behaviouralists) ಎಂಬ ವಿದ್ವಾಂಸರ ತಂಡವು ಕಾರ್ಯನಿರತವಾಯಿತು.

ಈ ಪ್ರವೃತ್ತಿವಾದಿಗಳು ಸಹಜವಾಗಿಯೇ ವಾದಿಗಳ ದಾರಿಯನ್ನು ತುಳಿಯದೇ ಭಿನ್ನ ಮಾರ್ಗವನ್ನನುಸರಿಸಿದರು. ಪ್ರವೃತ್ತಿವಾದಿಗಳು ಸಮಾಜದ ಅನೇಕ ಸಮಸ್ಯೆಗಳಿಗೆ ಹಾಗೂ ರಾಜಕೀಯ ಸಮಸ್ಯೆಗಳಿಗೆ ಮಾನವನ ವರ್ತನೆಯ ವೈಜ್ಞಾನಿಕ ವಿಶ್ಲೇಷಣೆಯೇ ತಾರಕ ಎಂದು ವಾದಿಸಿದರೆ, ಸಂಪ್ರದಾಯವಾದಿಗಳು ಅದು ಪಾಂಡಿತ್ಯದ ಅಧಃಪತನದ ಸಂಕೇತ ಎಂದು ನಿಂದಿಸಿದರು. ಆದರೂ ಅಮೇರಿಕ ಮತ್ತು ಇತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮತ್ತು ಇತ್ತೀಚೆಗೆ ಭಾರತದಲ್ಲಿಯೂ ಸಹ ಇದು ಹೆಚ್ಚು ಆಕರ್ಷಣೀಯವಾಗಿದ್ದು ಚುನಾವಣೆಗಳ ಕಾಲದಲ್ಲಿ ಮತದಾರರ ಒಲವಿನ ಬಗೆಗೆ ವೈಜ್ಞಾನಿಕ ಸಮೀಕ್ಷೆಗಳನ್ನು ಮಾಡಲಾಗಿದೆ. ನಮ್ಮ ದೇಶವನ್ನು ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವ ಎಂದು ವರ್ಣಿಸಲಾಗಿದೆ. ಇಂತಹ ಬೃಹತ್ಪ್ರಮಾಣದಲ್ಲಿ ಪ್ರಜಾಪ್ರಭುತ್ವದ ಪ್ರಯೋಗ ಇನ್ನಾವ ರಾಷ್ಟ್ರದಲ್ಲಿಯೂ ಜರುಗಿಲ್ಲ. ಆದ್ದರಿಂದ ನಮ್ಮಲ್ಲಿ ಇದುವರೆಗೆ ಜರುಗಿದ ಐದು ಸಾರ್ವತ್ರಿಕ ಚುನಾವಣೆಗಳ ಮುನ್ನ ಮತ್ತು ಚುನಾವಣೆಗಳ ಅವಧಿಯಲ್ಲಿ ವಿವಿಧ ಮಾದರಿಯ ವಿಶ್ಲೇಷಣೆಗಳನ್ನು ಮಾಡಲಾಗಿದೆ. ಇವರಲ್ಲಿ ಕೇವಲ ಭಾರತೀಯರೇ ಅಲ್ಲದೇ ಪ್ರಪಂಚದ ಇತರರಾಷ್ಟ್ರಗಳ ಸಮಾಜವಿಜ್ಞಾನಿಗಳು ಆಸ್ಥೆಯಿಂದ ಭಾಗವಹಿಸಿ ತಮ್ಮ ವರದಿಗಳನ್ನು ಸಿದ್ಧಪಡಿಸಿ ಪ್ರಕಟಿಸಿದ್ದಾರೆ. ಹೀಗೆ ಅಧ್ಯಯನ ನಡೆಸಿದ ಪಾಶ್ಚಾತ್ಯರಲ್ಲಿ ಪ್ರೊಫೆಸರ್ ಮೈರಾನ್ ವೇಯಿನರ್(Myron Weiner) ಪ್ರಮುಖರು. ಭಾರತಿಯರಲ್ಲಿ ರಜನಿಕೋಠಾರಿ, ಶಿರ್ಸಿಕರ್ ಮುಂತಾದವರನ್ನು ಉಲ್ಲೇಖಿಸಬಹುದು. ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಒಂದು ತಂಡವು ದಿ. ಪ್ರೊ. ಜಿ. ಎಸ್. ಹಾಲಪ್ಪನವರ ನೇತೃತ್ವದಲ್ಲಿ ೧೯೬೭ ರಲ್ಲಿ ಗೋವಾದಲ್ಲಿ

ಜರುಗಿದ ಪ್ರಪ್ರಥಮ ಚುನಾವಣೆಯ ಅಧ್ಯಯನವನ್ನು ನಡೆಸಿ ೧೯೬೭ರಲ್ಲಿ, 'The First General Election In Goa' ಎಂಬ ಪುಸ್ತಕದ ರೂಪದಲ್ಲಿ ತನ್ನ ವರದಿಯನ್ನು ಪ್ರಕಟಿಸಿವೆ. ಹೀಗೆ ಇನ್ನೂ ಅನೇಕ ಬಗೆಯ ಅಧ್ಯಯನಗಳಿದ್ದು ಅವು ಕೆಲವು ಆಯ್ದ ಚುನಾವಣಾ ಕ್ಷೇತ್ರದಲ್ಲಿ ಕಂಡುಬರಬಹುದಾದಂತಹ ಮತದಾರರ ಒಲವು, ಅದರ ಹಿನ್ನೆಲೆ, ಕಾರಣಗಳು, ಮುಂತಾದವುಗಳನ್ನು ನಿರ್ಧರಿಸುವ ಪ್ರಯತ್ನ ಮಾಡಲಾಗಿದೆ. ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿಯೂ ಇಂತಹ ಅಧ್ಯಯನ ಸಾಧ್ಯ. ಈ ವಿಧಾನದಲ್ಲಿ ಸಾಮಾನ್ಯವಾಗಿ ಸಾಧ್ಯವಾದಷ್ಟು ಸಂಖ್ಯೆಯಲ್ಲಿ ವಿವಿಧ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಹಾಗೂ ವಯೋಗುಂಪಿಗೆ ಸೇರಿದ ಮತದಾರರನ್ನು ಸಂದರ್ಶಿಸಿ ವೈಜ್ಞಾನಿಕ ರೀತಿಯಲ್ಲಿ ಸಿದ್ಧಪಡಿಸಲಾದ ಪ್ರಶ್ನಾವಳಿಯನ್ನು ಅವರಿಗೆ ನೀಡಲಾಗುತ್ತಿದೆ. ಆ ಪ್ರಶ್ನೆಗಳಿಗೆ ಅವರು ನೀಡುವ ಉತ್ತರಗಳು ನಮ್ಮ ಅಧ್ಯಯನಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸುತ್ತವೆ. ಈ ಪ್ರಶ್ನೆ ಮತ್ತು ಉತ್ತರಗಳು ಆಯಾ ಮತದಾರರ ಮನೋಭಾವನೆ, ಚುನಾವಣೆಗಳು, ಅದರಲ್ಲಿ ಪಾಲ್ಗೊಳ್ಳುವ ಉಮೇದುವಾರರು, ಅವರ ಭಾಷಣಗಳು, ಕಾರ್ಯಕ್ರಮಗಳು, ವಾಗ್ದಾನಗಳು, ಅವರ ಚುನಾವಣಾ ಚಿಹ್ನೆ ಮುಂತಾದವುಗಳ ಬಗ್ಗೆ ವ್ಯಕ್ತಪಡಿಸಲು ಸಹಕಾರಿಯಾಗುತ್ತವೆ. ಈ ಕಾರ್ಯಕ್ರಮಕ್ಕೆ ಸಹಜವಾಗಿಯೇ ಅನೇಕ ಜನರ ಸಹಾಯ ಸಹಕಾರ ಅವಶ್ಯ. ಈ ವಿಧಾನವನ್ನನುಸರಿಸಿ ಮಾಡಲಾಗುವ ವಿಶ್ಲೇಷಣೆಯೇ ಮತದಾರರ ಮನೋವಿಶ್ಲೇಷಣೆ ಎನಿಸಿದೆ. ಸಮೀಕ್ಷೆಯ ಮೂರು ಹಂತಗಳಿವೆ: ಚುನಾವಣಾ ಪೂರ್ವ, ಚುನಾವಣೆಯಕಾಲ, ಮತ್ತು ಚುನಾವಣೆಯ ನಂತರ.

ರಾಜಕೀಯ ವರ್ತನೆಯು ವ್ಯಕ್ತಿಯ ರಾಜಕೀಯ ಪ್ರವೃತ್ತಿಜನ್ಯ ಅಭಿವ್ಯಕ್ತನೆಯ ಒಂದು ಮಾರ್ಗವೆಂದು ವರ್ಣಿಸಿದ್ದಾರೆ. ಮತದಾನದ ಒಲವು ಇಂಥ ಅಭಿವ್ಯಕ್ತನೆಗಳಲ್ಲೊಂದಾಗಿದ್ದು ಅದನ್ನು ಹಲವೊಂದು ವಿಧಾನಗಳ ಮೂಲಕ ಅಭ್ಯಸಿಸಬಹುದಾಗಿದೆಯಲ್ಲದೇ ಇದುವರೆಗೆ ಅಭ್ಯಸಿಸುತ್ತಲೂ ಬರಲಾಗಿದೆ.

ಸಮೀಕ್ಷೆಯಲ್ಲಿ ಮಾದರಿಗಳ ವರ್ಗೀಕರಣ :

೧. ಚುನಾವಣೆಯ ಬಗೆಗೆ ತಿಳುವಳಿಕೆ (awareness)
೨. ಚುನಾವಣೆಯ ಬಗೆಗೆ ಸ್ವಂತ ಅಭಿಪ್ರಾಯ (opinion)
೩. ಚುನಾವಣೆಯಲ್ಲಿ ಮತದಾನದ ಬಗ್ಗೆ ಜ್ಞಾನ (knowledge about voting)
೪. ರಾಜಕೀಯ ಮಾಹಿತಿಯ ಮೂಲ (source of political information)

೫. ಗೆಲ್ಲಬಯಸುವ ಪಕ್ಷಗಳ ಆಧಾರದ ಮೇಲೆ

೬. ಚುನಾವಣಾ ಚಿನ್ಹೆಗಳ ಆಧಾರದ ಮೇಲೆ

೭. ಯಾವುದಾದರೂ ಪ್ರಮುಖ ಸಮಸ್ಯೆಗಳಿದ್ದರೆ ಅವುಗಳ ಆಧಾರದ ಮೇಲೆ ರಾಜಕೀಯ ಪ್ರಕ್ರಿಯೆಯ ಮುಖ್ಯ ಕಾರ್ಯ ರಂಗಗಳೆನಿಸಿರುವ ರಾಜಕೀಯಪಕ್ಷಗಳು ಮತ್ತು ಮತದಾನದ ಒಲವಿನ ಬಗೆಗೆ ಎರಡು ಆಯಾಮಗಳು (Dimensions) ಇವೆ: ೧. ಕ್ರೀಯಾಶೀಲತೆ ಮತ್ತು ೨. ಅಭಿಲಾಷೆ.

ಪಕ್ಷದ ಸಕ್ರಿಯ ಕಾರ್ಯಕರ್ತರು	organisation activists
ಪಕ್ಷದ ಸಂವರ್ಧಕರು	organisation contributors
ಅಭಿಪ್ರಾಯ ನಿರೂಪಕರು	opinion leaders
ಮತದಾರರು	voters
ಮತದಾರರಲ್ಲದವರು	Non-voters
ರಾಜಕೀಯ ಅನಾಸಕ್ತರು	Apoliticals

Preference (ಅಭಿಲಾಷೆಯ ದೃಷ್ಟಿಯಿಂದ)

ಸಬಲ ಡೆಮಾಕ್ರಟರು (Strong Democracy)	ದುರ್ಬಲ ಡೆಮಾಕ್ರಟರು (Week Demo.)	ಸ್ವತಂತ್ರ ಡೆಮಾಕ್ರಟರು (Independent Demo.)	ಸ್ವತಂತ್ರ ರಿಪಬ್ಲಿಕನ್ನರು (Ind. Rep.)	ದುರ್ಬಲ ರಿಪಬ್ಲಿಕನ್ನರು (Week Rep.)	ಸಬಲ ರಿಪಬ್ಲಿಕನ್ನರು (Strong Rep.)

೧. ಪಕ್ಷದ ಸಕ್ರಿಯ ಕಾರ್ಯಕರ್ತರು :

ಪಕ್ಷದ ಕೆಲಸ ಕಾರ್ಯಗಳಿಗಾಗಿಯೇ ನಮ್ಮ ಎಲ್ಲಾ ಸಮಯ ಶಕ್ತಿಗಳನ್ನು ವಿನಿಯೋಗಿಸುವಂತಹ ಪಕ್ಷದ ಧುರೀಣರು, ಕಾರ್ಯಕರ್ತರು, ಶಾಸನ ಸಭೆಯ ಕಾರ್ಯಕಲಾಪಗಳ ಮೇಲೆ ಪ್ರಭಾವ ಬೀರುವ ವ್ಯಕ್ತಿಗಳು ಪಕ್ಷದ ಸಕ್ರಿಯ ಕಾರ್ಯಕರ್ತರೆನಿಸಿಕೊಳ್ಳುತ್ತಾರೆ. ಒಟ್ಟು ಜನ ಸಂಖ್ಯೆಯಲ್ಲಿ ಇವರ ಪ್ರಮಾಣ ಅತ್ಯಲ್ಪವಾಗಿರುತ್ತದೆ. ಅಂದರೆ ½ ಅಥವಾ ಶೇಕಡಾ ೧ ರಷ್ಟು.

೨. ಪಕ್ಷದ ಸಂವರ್ಧಕರು :

ಸಂದರ್ಭಾನುಸಾರವಾಗಿ ಪ್ರಚಾರಕಾರ್ಯ, ಧನಕಾಣಿಕೆ, ಬೃಹದ್‌ಸಮಾವೇಶಗಳಲ್ಲಿ ಭಾಗವಹಿಸುವ (Rallies) ಮೂಲಕ ಪಕ್ಷದ ವೃದ್ಧಿಗೆ ಪ್ರಯತ್ನಿಸುವವರನ್ನು ಸಂವರ್ಧಕರೆನ್ನಬಹುದಾಗಿದೆ. ಜನಸಂಖ್ಯೆಯ ಶೇಕಡಾ ೫ ರಷ್ಟು ಈ ಗುಂಪಿಗೆ ಸೇರಿದವರಾಗಿರುತ್ತಾರೆ.

೩. ಅಭಿಪ್ರಾಯ ನಿರೂಪಕರು :

ನಿಯಮಿತ ರೀತಿಯಲ್ಲಿ ರಾಜಕೀಯವನ್ನು ಕುರಿತೇ ಮಾತನಾಡುವಂಥ ಮತ್ತು ತಮ್ಮ ಕುಟುಂಬ, ಹಾಗೂ, ಸಹಚರರೂ ಸಹ ಅದಕ್ಕನುಗುಣವಾಗಿಯೇ ಇರಬೇಕೆಂದು ಬಯಸುತ್ತಾರೆ. ಇಂಥವರ ಪ್ರಮಾಣ ಶೇಕಡಾ ೨೫ ರಷ್ಟು ಇರಬಹುದು.

೪. ಮತದಾರರು :

ಮತದಾನದ ಹಕ್ಕು ಪಡೆದ ಪ್ರೌಢ ಸಮುದಾಯದ ಶೇಕಡಾ ೨೫–೩೫ ರಷ್ಟು ಜನ ಸಾಮಾನ್ಯವಾಗಿ ನಿಯಮಿತವಾಗಿ ಮತದಾನ ಮಾಡುತ್ತಾರೆ.

೫. ಮತದಾರರಲ್ಲದವರು :

ಶೇಕಡಾ ೩೦ ರಿಂದ ೪೦ ರಷ್ಟು ಪ್ರೌಢರು ಮತದಾನಮಾಡುವುದು ಅಪರೂಪವಾಗಿ ಅಥವಾ ಮಾಡುವದೇ ಇಲ್ಲ.

೬. ರಾಜಕೀಯ ಅನಾಸಕ್ತರು :

ಸುಮಾರು ಶೇಕಡಾ ೩ ರಿಂದ ೬ ರಷ್ಟು ಮತದಾರರು ರಾಜಕೀಯವಾಗಿ ಅನಾಸಕ್ತರಾಗಿರುತ್ತಾರೆ.

ಮತದಾನದ ಒಲವುಗಳಲ್ಲಿ ಸ್ಥಿತ್ಯಂತರಗಳು– ವ್ಯತ್ಯಸ್ತಗಳು
(Variable factors in V. B.)

ಸಾಮಾಜಿಕ, ಆರ್ಥಿಕ ಭದ್ರತೆ, ಧರ್ಮ, ಕೌಟುಂಬಿಕ ಪ್ರಭಾವ (ಮನೆತನದ ಪ್ರಭಾವ), ರಾಷ್ಟ್ರೀಯ ವ್ಯವಹಾರಗಳ ಸ್ಥಿತಿಗತಿ ಮೊದಲಾದ ಅಂಶಗಳು, ರಾಜಕೀಯ ಪಕ್ಷ, ಸಮಸ್ಯೆಗಳು ಹಾಗೂ ಅಭ್ಯರ್ಥಿಗಳ ಬಗೆಗಿನ ನಮ್ಮ ನಿಲುಮೆಗಳ ಮೇಲೆ ಪ್ರಭಾವ ಬೀರುತ್ತವೆ. ಆದರೆ ಪಕ್ಷಗಳು, ಸಮಸ್ಯೆ ಮತ್ತು ಅಭ್ಯರ್ಥಿಗಳ ಕುರಿತು ನಮ್ಮ ಪ್ರಜ್ಞಾಪೂರ್ವಕ ಭಾವನೆಗಳು (conscious feelings) ಮತದಾನದ ಒಲವನ್ನು ಶೀಘ್ರನಿರೂಪಿಸಬಲ್ಲ ಅಂಶಗಳಾಗಿವೆ.

ಮತದಾನದ ಪ್ರಧಾನ ವ್ಯತ್ಯಸ್ತಗಳು (main variables)

೧. ರಾಜಕೀಯ ಹಾಗೂ ಮತದಾನ ಪ್ರಜ್ಞೆಯ ಪ್ರಮಾಣ
(degree of politico – electoral consciousuess)

೨. ರಾಜಕೀಯ ಹಾಗೂ ಚುನಾವಣಾ ವರ್ತಮಾನದ ಮೂಲಗಳು–
(ಪ್ರಚಾರಾಂದೋಲನ, ಕೌಟುಂಬಿಕ ರೀತಿಯಲ್ಲಿ ಚರ್ಚೆ, ಸಲಿಗೆಯ ಸ್ನೇಹಕೂಟಗಳು ವೃತ್ತಪತ್ರಿಕೆಗಳು, ಹಾಗೂ ಧಾರ್ಮಿಕ ಸಭೆಗಳು)

೩. ಪಕ್ಷಾಂತರ್ಗತಭಾವ– ಪಕ್ಷಗಳೊಡನೆ ಸಂಯೋಜಿತವಾಗಿರುಪಿಕೆ.
(Party affitiation)

೪. ಮತದಾನದ ಪ್ರಾಶಸ್ತ್ಯ (Voting preferences)

ಭಾರತದಲ್ಲಿ ಮತದಾನದ ಮನೋಭಾವ ರೂಪಗೊಳ್ಳುವಲ್ಲಿ ವಯೋಮಾನ, ಲಿಂಗ ಸಾಕ್ಷರತೆ, ಧರ್ಮ, ಜಾತಿ, ಹಾಗೂ ಆರ್ಥಿಕ ಪರಿಸ್ಥಿತಿಗಳು ಕೂಡ ಪರಿಗಣಿಸಲ್ಪಡುವ ಅಂಶಗಳಾಗಿವೆ.

ಪಕ್ಷಗಳಿಗನುಗುಣವಾಗಿ, ಸಮಸ್ಯೆಗಳಿಗನುಗುಣವಾಗಿ ಅಲ್ಲದೇ ಅಭ್ಯರ್ಥಿಗಳ ಸ್ಥಾನ–ಮಾನಗಳಿಗನುಗುಣವಾಗಿಯೂ ಮತದಾನದ ಮನೋಭಾವವು ರೂಪಗೊಳ್ಳುವದನ್ನು ಕಾಣಬಹುದು.

ಅರಿವು ಅಥವಾ ಗ್ರಹಣಶಕ್ತಿ ಎನ್ನುವದೂ ಕೂಡ ಈ ದಿಶೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುವ ಅಂಶ. “ವಿಶ್ವದ ಕುರಿತು ವ್ಯಕ್ತಿಯ ಚಿತ್ತಭಿತ್ತಿಯಲ್ಲಿರುವ ಮಾನಸಿಕ ಚಿತ್ರ ವಾಸ್ತವಿಕತೆಗೆ ಅನುಗುಣವಾಗಿರುವದು ಬಹು ವಿರಳ ಎಂಬುದು ಆಧುನಿಕ ಮನಶ್ಶಾಸ್ತ್ರದ ಒಂದು ಮೂಲ ತತ್ವ–ಸೂತ್ರವಾಗಿದೆ.”

ಇವನ್ನೇ "ಅಪೇಕ್ಷಿತ ವಸ್ತು-ಗ್ರಾಹಕ ಸಂಯೋಜನೆ" ಎಂಬುದಾಗಿ ಮನೋವಿಜ್ಞಾನಿ ಹ್ಯಾರಿಸ್ಟ್ಯಾಕ್ ಸಲೀವಾನ್ (Harry stack Sullivan) ಕರೆದಿದ್ದುಂಟು. (the mechanism of selective attention). ಮನುಷ್ಯ ತನಗೆ ಬೇಕಾದುದನ್ನು ತಾನು ಬಯಸಿದುದನ್ನು ಇಲ್ಲವೇ ತಾನು ಒಳ್ಳೆಯದೆಂದು ತಿಳಿಯುವ ವಸ್ತುಗಳನ್ನು ಸ್ವಾಗತಿಸುತ್ತಾನಲ್ಲದೇ ತನಗೆ ಅಪ್ರಿಯವೆನಿಸಿದ ಅಥವಾ ಕೆಟ್ಟುದಾದವುಗಳನ್ನು ನಿರಾಕರಿಸುತ್ತಾನೆ. ಜನತೆಯ ಗ್ರಹಿಕೆ ಅಥವಾ ತಿಳುವಳಿಕೆಯು ಅವರು ಯಾವುದನ್ನು ಗ್ರಹಿಸಬೇಕು ಅಥವಾ ತಿಳಿದುಕೊಳ್ಳಬೇಕು ಎಂಬುದರಿಂದ ಪ್ರಭಾವಿತವಾಗಿರುತ್ತದೆ. ಮತದಾರರ ಮನೋವ್ಯಾಪಾರದಲ್ಲೂ ಕೂಡ ಪಕ್ಷಗಳು, ಸಮಸ್ಯೆಗಳು ಹಾಗೂ ಅಭ್ಯರ್ಥಿಗಳ ಬಗೆಗೆ ಮತದಾರರು ಹೊಂದಿದ ಭಾವನೆ ಅಥವಾ ಚಿತ್ರ ಈ "ಅಪೇಕ್ಷಿತ ವಸ್ತು-ಗ್ರಾಹಕ ಸಂಯೋಜನೆ"

ಮತದಾನದ ಇಂಗಿತ (Voting intention)

ಸಾಮಾನ್ಯವಾಗಿ ಮತದಾನ ಮಾಡುವವರೆಲ್ಲಾ ತಾವು ಮತದಾನ ಮಾಡಿದ ಅಭ್ಯರ್ಥಿಯೇ ಆರಿಸಿಬರಬೇಕೆಂದು ಬಯಸುತ್ತಾರೆ. ಜಯಶೀಲ ಪ್ರವೃತ್ತಿ ಸಿದ್ಧಾಂತ (winning- horse theory), ಇಲ್ಲಿ ಹೆಚ್ಚಿನ ಪ್ರಭಾವ ಬೀರುವದಾಗಿದೆ. ಸ್ವತಂತ್ರ ವಿಚಾರ ಮಾಡುವ ಮತದಾರರ ಸಂಖ್ಯೆ ಇನ್ನೂ ಅಲ್ಪವಾಗಿರುವುದರಿಂದ, ಸ್ಥಾನಿಕ ಭಾವ, ಪ್ರಜ್ಞೆ, ವ್ಯಕ್ತಿಗತ ಸಂಬಂಧಗಳು ಹಾಗೂ ಜಾತಿ ಮುಂತಾದವುಗಳು ಮತದಾರರ ಮನೋವೃತ್ತಿಯ ಮೇಲೆ ಪ್ರಭಾವ ಬೀರುವ ಮುಖ್ಯ ಅಂಶಗಳೆನಿಸುತ್ತವೆ.

ಮತದಾರರು ತಾವು ಮತನೀಡುವ ಅಭ್ಯರ್ಥಿಗಳಲ್ಲಿರಬೇಕೆಂದು ಬಯಸುವ ಗುಣಗಳು

ಸಮೀಕ್ಷೆಯೊಂದರ ಪ್ರಕಾರ, ತಾವು ಮತ ನೀಡುವ ಅಭ್ಯರ್ಥಿಗಳಲ್ಲಿ ಪ್ರಾಮಾಣಿಕತೆ, ಸ್ವಸಮರ್ಪಣಭಾವ ಇರಬೇಕೆಂದು ಬಯಸುವ ಮತದಾರರ ಸಂಖ್ಯೆ ಶೇಕಡಾ ೫೦; ಚಳವಳಿ ಸಾಮರ್ಥ್ಯ, ಹೋರಾಟಬಲ, ಆಡಳಿತದ ಮೇಲೆ ಪ್ರಭಾವ ಬೀರುವಂಥ ಅಭ್ಯರ್ಥಿಗಳಿರಬೇಕೆನ್ನುವವರ ಸಂಖ್ಯೆ ಶೇಕಡಾ ೨೦; ತಮ್ಮ ಕ್ಷೇತ್ರಗಳ ಲಾಭಕ್ಕಾಗಿ ಸನ್ನದ್ಧವಿದ್ದು ಹೋರಾಡುವಂಥ ಅಭ್ಯರ್ಥಿಗಳಿಗೆ ಸಾಮಾನ್ಯವಾಗಿ ಮತದಾರರು ಆದ್ಯತೆ ನೀಡುವುದು ಕಂಡು ಬರುತ್ತದೆ.

ಹಣವೂ ಕೂಡ ಮತದಾರರ ಒಲವಿನ ಮೇಲೆ ಪ್ರಭಾವ ಬೀರಬಲ್ಲ ಒಂದು ಅಂಶ.

ಚುನಾವಣಾ ಬಗೆಗಿನ ತಿಳುವಳಿಕೆ, ಅಭಿಪ್ರಾಯ, ಮತಾಧಿಕಾರ-ಮತದ ಹಕ್ಕಿನ ಬಗೆಗಿರುವ ಜ್ಞಾನ, ರಾಜಕೀಯ ವಿದ್ಯಮಾನಗಳ ಗ್ರಹಿಕೆ, ಪಕ್ಷಗಳ ಕುರಿತು ಆಶೋತ್ತರಗಳು, ಚುನಾವಣಾ ಚಿನ್ಹೆಗಳು ರಾಜ್ಯದ ಭಾಷೆ, ನೆಲ-ಜಲ ಮುಂತಾದ ಸಮಸ್ಯೆಗಳು ಸಹ ಮತದಾರರ ಮನೋಭಾವದ ಮೇಲೆ ಪರಿಣಾಮ ಮಾಡಬಲ್ಲ ಸಂಗತಿಗಳಾಗಿವೆ.

ಈ ವಿಶ್ಲೇಷಣೆಯಲ್ಲಿ ಮುಂದೆ ವಿವರಿಸುವಂತಹ ಕೆಲವೊಂದು ಸಾಮಾನ್ಯ ಪ್ರವೃತ್ತಿಗಳು ವ್ಯಕ್ತವಾಗುವದನ್ನು ನಿರೀಕ್ಷಿಸಬಹುದಾಗಿದೆ:

೧. ರಾಜಕೀಯವಾಗಿ ಮುಂದುವರೆದ ದೇಶಗಳಲ್ಲಿ ರಾಜಕೀಯ ಸಿದ್ಧಾಂತಗಳು, ಪಕ್ಷ ಹಾಗೂ ಚುನಾವಣಾ ಅಭ್ಯರ್ಥಿಗಳ ಧೋರಣೆ ಹಾಗೂ ಕಾರ್ಯಕ್ರಮಗಳ ದೃಷ್ಟಿಯನ್ನನುಸರಿಸಿ ಮತದಾರರು ಮಾಡುವ ಆಯ್ಕೆಯು ಸ್ಥಾನಮಾನ ಮತ್ತು ಶಕ್ತಿ ಪ್ರಾಬಲ್ಯಗಳ ಪ್ರಭಾವದ ದೃಷ್ಟಿಗಳಿಂದ ಆಗುತ್ತದೆ ಎಂದು ಹೇಳಬಹುದು.

೨. ಧರ್ಮವಾಗಲೀ, ಜಾತಿಯಾಗಲೀ ನಿರ್ದಿಷ್ಟವೆನಿಸಿಸುವ ಒಂದೇ ರಾಜಕೀಯ ಮಾರ್ಗವನ್ನು ನಿರ್ಮಿಸುತ್ತದೆಂದು ಹೇಳಲಾಗದು. ವಿವಿಧ ಧರ್ಮ, ಜಾತಿಗಳಿಗೆ ಸೇರಿದ ಮತದಾರರಲ್ಲಿಯೇ ರಾಜಕೀಯ ಅಭಿಮತ ಅಥವಾ ಮತದಾನದ ಇಂಗಿತಗಳಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳಿರುವುದನ್ನು ಕಾಣಬಹುದು. ಆದರೂ ಧರ್ಮ, ಜಾತಿ, ಇವು ಮತದಾರರ ಒಲವನ್ನು ರೂಪಿಸುವಲ್ಲಿ ಪ್ರಭಾವಕಾರಿಯಾದ ಅಂಶಗಳೆಂದು ಅಲ್ಲಗಳೆಯಲಾಗದು.

೩. ರಾಜಕೀಯ ವರ್ತನೆಯ ರೀತಿನೀತಿಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳ ಮತದಾರರಲ್ಲಿ ಒಂದೇ ರೀತಿಯಾಗಿಲ್ಲದಿರುವುದು ಚುನಾವಣೆಗಳ ಸಮೀಕ್ಷೆ ಮತ್ತು ನಿರೀಕ್ಷಣೆಯಿಂದ ಸ್ಪಷ್ಟವಾಗುತ್ತದೆ.

——

ಇಂದಿನ ಶೈಕ್ಷಣಿಕ ಸಮಸ್ಯೆಗಳು : ಪ್ರಾಥಮಿಕ ಶಿಕ್ಷಣ

● ವಸಂತ ಪಾಟೀಲ

ಪ್ರಸ್ತಾವನೆ :

ಜೀವನವೇ ಒಂದು ಸಮಸ್ಯೆಯಾಗಿರುವಾಗ ಅದಕ್ಕೆ ಸಂಬಂಧಿಸಿದ ವಿಷಯ ಗಳಿಗೆ ಸಮಸ್ಯೆಗಳಿರುವದು ಸ್ವಾಭಾವಿಕ. ಸಮಸ್ಯೆಗಳಿಲ್ಲದ ಜೀವನವಿಲ್ಲ. ಸಮಸ್ಯೆಗಳಿರುವದು ಜೀವ ಇನ್ನೂ ಬದುಕಿರುವದಕ್ಕೆ ಸಾಕ್ಷಿ. ಅದಕ್ಕೆ ಸಮಸ್ಯೆ ಎಂದಾಕ್ಷಣ ಅಂಜಬೇಕಿಲ್ಲ. ಅದರ ಬದಲು ಆಲೋಚಿಸಬೇಕಾದದ್ದು ಮುಖ್ಯ. ಸಮಸ್ಯೆಗಳು ಆಲೋಚನೆಮಾಡಲು ಹಚ್ಚುವವು. ಆ ದೃಷ್ಟಿಯಲ್ಲಿ ಅವು ಲಾಭ ದಾಯಕ ಅಂಶಗಳು. ಆಲೋಚನೆಯಿಂದ ಬುದ್ಧಿ ಚುರುಕಾಗಿ, ಮನವು ಹೊಸ ಹೊಳಪನ್ನು ಪಡೆದು, ಆತ್ಮ ಶುದ್ಧೀಕರಣ ಹೊಂದಿ ಅದರಿಂದ ದೇಹಕ್ಕೂ, ಸಮಾಜಕ್ಕೂ ಒಳ್ಳೆಯ ಚಾಲನೆ ದೊರಕಬಹುದು–ಪ್ರಗತಿಯತ್ತ.

ಮಾನವನು ಮಾನವನಾಗಿ ಜೀವಿಸಿ ದೇವಮಾನವನಾಗುವತ್ತ ಸಾಗಬೇಕಾಗಿದೆ. ಆ ಪಯಣದಲ್ಲಿ ಸಮಸ್ಯೆಗಳು ಬರುವದು ಸ್ವಾಭಾವಿಕ. ಅವಕ್ಕೆ ಆಗಾಗ್ಗೆ ತಕ್ಕ ಪರಿಹಾರಗಳನ್ನು ಕಂಡುಕೊಂಡು ತನ್ನ ಪಯಣವನ್ನು ಸಾಗಿಸಬೇಕು. ಗುಡ್ಡ ದಿನ್ನೆಗಳು ಅಡ್ಡಬಂದವೆಂದು ನದಿನದ್ಯಗಳು ಸುಸ್ತಾಗಿ ನಿಂತಲ್ಲಿ ನಿಂತೇಬಿಡು

ವವೇ? ತಮ್ಮಲ್ಲಿ ಜೋರಿದ್ದರೆ ಅವನ್ನು ಸೀಳಿಯಾದರೂ, ಜೋರಿಲ್ಲದಲ್ಲಿ ನಮ್ರತೆ ಯಿಂದ ಅವನ್ನು ಬಳಸಿಯಾದರೂ ಮುಂದೆ ದಾಟಿ ಮುನ್ನೀರಿನಾಳವನು ಅವು ಸೇರುವುದಿಲ್ಲವೇ? ಅವೇ ರೀತಿ ಜೀವನಪಥದಲ್ಲಿಯು ಸಮಸ್ಯೆಗಳನ್ನು ಎದುರಿಸಿ ಮುನ್ನಡೆಯುವುದು ಮಾನವ ಧರ್ಮ.

ಶಿಕ್ಷಣದ ಉದ್ದೇಶ:

ಈ ಮಾನವ ಧರ್ಮವನ್ನು ತಿಳಿಸುವುದೇ ಶಿಕ್ಷಣದ ಗುರಿ. 'ಮಾನ' ಉಳ್ಳವನೇ ಮಾನವ. ಮಾನವಿಲ್ಲದವ ದಾನವ ಅಥವಾ ಪಶು. ಈ ಮಾನವ ಉಳಿವಿಗೆ ಹಾಗೂ ಅದರ ರಕ್ಷಣೆಗೆ ಶಿಕ್ಷಣ ಅತ್ಯವಶ್ಯ. "ವಿದ್ಯೆ ಇಲ್ಲದವ ಹದ್ದಿಗಿಂತ ಕಡೆ". ವಿದ್ಯೆ ಇದ್ದವ ಸೀಮಾತೀತ. ಆತನಿಗೆ ಕುಲನೆಲಗಳು ಸೀಮಿತವಾಗಿಲ್ಲ. ಇದಕ್ಕೆ ಸರ್ವಜ್ಞನ ವಚನವೇ ಸಾಕ್ಷಿ:

"ವಿದ್ಯೆಯೇ ತಾಯ್ತಂದೆ, ಬುದ್ಧಿಯೇ ಸೋದರನು,
ವಿದ್ಯೆಯು ಬಲ್ಲ ಬಡವನು ಗಿರಿಯ ಮೇಲಿದ್ದರೂ ಸಲುವ,
ಜ್ಞಾನಿಗೆ ಗುಣಲೇಸು ಸರ್ವಜ್ಞ".

ನಿಜಶಿಕ್ಷಣವಿದ್ದಲ್ಲಿ ವಿದ್ಯೆ, ಬುದ್ಧಿ, ಜ್ಞಾನ, ಗುಣಗಳೆಲ್ಲವೂ ಇವೆ. ಅರ್ಥಾತ್ ಮಾನವತೆ ಇದೆ. ಅದಿಲ್ಲದಲ್ಲಿ ಅಜ್ಞಾನದ ಅಂಧಕಾರ ಆವರಿಸಿದೆ. ಮಾನವನು ಸಾಧಿಸಬೇಕಾದುದು ಮುಖ್ಯವಾಗಿ ನಾಲ್ಕು ಪುರುಷಾರ್ಥಗಳನ್ನು ಎಂಬುದು ವೇದವಾಕ್ಯ. ಧರ್ಮ ಅವುಗಳಲ್ಲಿ ಪ್ರಪ್ರಥಮ ಪುರುಷಾರ್ಥ. ಧೃ— ಧರ— ಧರ್ಮ— ಎತ್ತಿಹಿಡಿಯುವ ಶಕ್ತಿ–ಅರ್ಥಾತ್ ಆಧಾರ. ಉದಾ– ಭೂಮಿಯ ಮೇಲಣ ವಸ್ತುಗಳಿಗೆಲ್ಲ ಭೂಮಿಯೇ ಆಧಾರ. ಇನ್ನು ಭೂಮಿಗೆ ಪೌರಾಣಿಕ ದೃಷ್ಟಿಯಲ್ಲಿ–ಆದಿಶೇಷ, ಆದಿಶೇಷನಿಗೆ ಪರಶಿವನ ಕೊರಳೇ ಆಧಾರ. ವಿಶ್ವವನ್ನೇ ವ್ಯಾಪಿಸಿರುವ ಪರಮಾತ್ಮನಿಗೆ ಆಧಾರದ ಅವಶ್ಯಕತೆಯಿಲ್ಲ. (ಅದು ಇದ್ದರೆ ಭಕ್ತಿ.) ಎಲ್ಲಕ್ಕೂ ಪರಮಾತ್ಮನೇ ಮೂಲಾಧಾರ. ಅದಕ್ಕೆ ಆತನನ್ನು ನಂಬುವದೇ ಮಾನವನ ಮೂಲಧರ್ಮ. ಇದು ಶಿಕ್ಷಣದ ಮೂಲಾಧಾರವಾಗಬೇಕು. ಇನ್ನು ವೈಜ್ಞಾನಿಕವಾಗಿಯೂ ಭೂಮಿ ಅರ್ಥಾತ್ ಪೃಥ್ವಿಗೆ ಆಧಾರ ಸೂರ್ಯಮಂಡಲದ ಸೂತ್ರ. ಈ ಸೂತ್ರ ಹೆಣೆದವ ಆತನೇ ಆ ಪರಮಾತ್ಮ.

ಆಧ್ಯಾತ್ಮಿಕ ಮತ್ತು ಪಾರಮಾರ್ಥಿಕ ತಳಪಾಯವಿಲ್ಲದ ಶಿಕ್ಷಣ ಶಿಕ್ಷಣವೇ ಅಲ್ಲ. ದೇವರು, ಧರ್ಮ, ಸತ್ಯ, ನೀತಿ– ಇವೆಲ್ಲ ಗೊಡ್ಡು ಸಂಪ್ರದಾಯಗಳು, ಇವೇ ಮಾನವನ ಪ್ರಗತಿಪಥದಲ್ಲಿ ಆತಂಕಗಳು ಹಾಗೂ ಇವೇ ಮಾನವನನ್ನು ಮಂದ ಹಾಗೂ ಮುಗ್ಗಲಗೇಡಿಯನ್ನಾಗಿ ಮಾಡುವವು ಎಂದು ವಾದಿಸುವವರೂ

ಉಂಟು. ಅಂಥವರು ಪಾಶ್ಚಿಮಾತ್ಯರ ಭೌತಿಕತೆಯ ಉದಾಹರಣೆಕೊಟ್ಟು ಅಲ್ಲಿ ಇರುವ ಪ್ರಗತಿಯನ್ನು ತೋರಿಸುವರು. ಅವರಿಗೆ ಉತ್ತರವಿಷ್ಟೇ "ದೂರಿನ ಗುಡ್ಡ ನೋಡಲು ನುಣ್ಣಗೆ." ಆಧ್ಯಾತ್ಮಿಕವಿಲ್ಲದ ಭೌತಿಕತೆ ಮನಕ್ಕೆ ಹಾಗೂ ಆತ್ಮಕ್ಕೆ ಶಾಂತಿ ಕೊಡಲಾರದು. ಭೌತಿಕತೆ ಕೇವಲ ದೇಹಕ್ಕೆ ಸಂಬಂಧಿಸಿದೆ. ಆದರೆ ಮಾನವನ ದೇಹ, ಬುದ್ಧಿ, ಮನ ಮತ್ತು ಆತ್ಮಗಳ ಸರ್ವತೋಮುಖ ಬೆಳವಣಿಗೆಯಾಗಬೇಕಾಗಿದೆ. ಈ ನಾಲ್ಕು ಅಂಗಗಳ ವಿಕಾಸಕ್ಕೆ ಅನುಕೂಲ ವಾಗುವಂತೆ ಶಿಕ್ಷಣ ತನ್ನ ತಯ್ಯಾರಿಯಲ್ಲಿರಬೇಕಾದುದು ಅತ್ಯವಶ್ಯ. ಈ ನಾಲ್ಕ ರಲ್ಲಿ ಕೇವಲ ಒಂದೇ ಅಂಗವು ಬೆಳವಣಿಗೆಯಾದರೆ ಸಾಲದು. ಈ ನಾಲ್ಕೂ ಆಗ ಬೇಕಾದ ರೀತಿಯಲ್ಲಿ, ಗಾತ್ರದಲ್ಲಿ, ದಿಶೆಯಲ್ಲಿ ಬೆಳೆದಾಗ ಮಾತ್ರ ಮಾನವನ ಸರ್ವಾಂಗೀಣ ಉನ್ನತಿಯಾಗುವದು. ಈ ದಿಶೆಯತ್ತ ಗುರಿಯಿಟ್ಟ ಶಿಕ್ಷಣವೇ ನಿಜಶಿಕ್ಷಣ. ಇದರಿಂದ ವ್ಯಕ್ತಿ, ಸಮಾಜ ಹಾಗೂ ಮಾನವತೆಗೆ ಸದುಪಯೋಗ ವಾಗುವದು.

ಈ ಹಿಂದೆ ಶಿಕ್ಷಣದ ಗುರಿ ಕೇವಲ ಮಾನವನ ಬುದ್ಧಿಯ ಅಥವಾ ಮಾನ ಸಿಕ ಬೆಳವಣಿಗೆಯಾಗಿತ್ತು. ಪಾಶ್ಚಿಮಾತ್ಯ ವಿದ್ವಾಂಸರಾದ ಲಾರ್ಡ ಬ್ರಾಯ್ಸರು ಸಹ ("Education is an operation on mental malady") "ಶಿಕ್ಷ ಣವು ಮಾನಸಿಕ ರೋಗದ ಮೇಲಿನ ಶಸ್ತ್ರಕ್ರಿಯೆಯಾಗಿದೆ"– ಎಂದು ಸಂಕುಚಿತಾ ರ್ಥವನ್ನು ಇತ್ತಿರುವರು. ಅದು ಸ್ವಾಭಾವಿಕ. ಏಕೆಂದರೆ ಪಶ್ಚಿಮದಲ್ಲಿ ಹೆಚ್ಚಾಗಿ ಭೌತಿಕದ ಗಾಳಿ ಬೀಸುತ್ತದೆ. ಆಧ್ಯಾತ್ಮಿಕದ ತಿಂಗಳದ ಬೆಳಕು ಅಲ್ಲಿ ಚೆಲ್ಲವರಿದಿಲ್ಲ.

ಧರ್ಮ ಒಂದು ದೃಷ್ಟಿಯಲ್ಲಿ ಆಧ್ಯಾತ್ಮಿಕತೆ, ಪಾರಮಾರ್ಥಿಕತೆಯನ್ನು ಸೂಚಿಸಿದರೆ ಮತ್ತೊಂದು ದೃಷ್ಟಿಯಲ್ಲಿ ಕರ್ತವ್ಯವನ್ನು ಸೂಚಿಸುವದು. ಪ್ರತಿ ಯೊಬ್ಬ ಮಾನವ ಜೀವಿ ಧರ್ಮ ಪರಿಪಾಲಕನಾಗಬೇಕು. "ಧರ್ಮೋ ರಕ್ಷತಿ ರಕ್ಷಿತಃ". ತಂದೆತಾಯಿಗಳ ಧರ್ಮ ಕೇವಲ ಮಕ್ಕಳನ್ನು ಹೆರುವುದಲ್ಲ. ಅವ ರಿಗೆ ಯೋಗ್ಯ ಶಿಕ್ಷಣವಿತ್ತು ಪ್ರಾಪ್ತವಯದಲ್ಲಿ ವಿವಾಹ ಮಾಡುವದು ಧರ್ಮ. ಗುರುವು ಕೇವಲ ಪಗಾರಕ್ಕಾಗಿ ಇರದೇ– ಜ್ಞಾನ ನೀಡುವದು ಆತನ ಧರ್ಮ, ವಿದ್ಯಾರ್ಥಿಗಳು ವಿದ್ಯೆಗಳಿಸುವದು ಧರ್ಮ, ಇ.. ತನ್ನ ಪಾಲಿನ ಕರ್ತವ್ಯ ತಾನು ಮಾಡಬೇಕು, ಮತ್ತೊಬ್ಬರ ಕಾರ್ಯದಲ್ಲಿ ಕೈಹಾಕಬಾರದು ಎಂಬ ಅರ್ಥ ದಲ್ಲಿಯೇ ಗ್ರೀಕ ತತ್ವಜ್ಞಾನಿ ಪ್ಲೇಟೋನು ತನ್ನ "ರಿಪಬ್ಲಿಕ್" ದಲ್ಲಿ "ಜಸ್ಟಿಸ್" (ಧರ್ಮ) ಎಂಬ ಪದವನ್ನು ಉಪಯೋಗಿಸಿರುವನು. ಬುದ್ಧನು "ಒಳ್ಳೆಯ ವನಾಗಿರು ಒಳ್ಳೆಯದನ್ನೇ ಮಾಡು" ಎಂಬಲ್ಲಿ ಧರ್ಮವಿದೆ. ಬಸವಣ್ಣನ ಬೀಜ ಮಾತು— "ಕಾಯಕವೇ ಕೈಲಾಸ"ವೆಂಬಲ್ಲಿ ನಿಜ ಧರ್ಮವಿದೆ. ಶಿಕ್ಷಣವು

ಧರ್ಮದ ವ್ಯಾಪಕಕ್ಕೆ ತಕ್ಕಂತೆ ವಿಸ್ತಾರವಾಗಿರಬೇಕು. ಒಟ್ಟಿನಲ್ಲಿ ಪ್ರತಿಯೊಬ್ಬನು ಪರಮಾತ್ಮನಲ್ಲಿ ನಂಬಿಕೆಯನ್ನಿಟ್ಟು ತನ್ನ ಪಾಲಿನ ಕರ್ತವ್ಯ ನಿಭಾಯಿಸಬೇಕು. ಇದುವೇ ನಿಜಧರ್ಮ. ಇಲ್ಲಿ ಎರಡು ಸಂಗತಿಗಳು ಅಡಕವಾಗಿವೆ—ಒಂದು ದೇವರಲ್ಲಿ ನಂಬಿಕೆ, ಮತ್ತೊಂದು ಕಾಯಕ. ದೇವರಲ್ಲಿ ನಂಬಿಕೆಯಿಟ್ಟವನು ದುರ್ವ್ಯವಹಾರ, ದುರ್ನೀತಿಗಿಳಿಯಲಾರ. ಜೀವನದ ಜಂಜಾಟಕ್ಕೆ ಜಗ್ಗಲಾರ. ಸುಖ,ದುಃಖ ಏನೇ ಬಂದರೂ ಪ್ರಸಾದವೆಂದು ಸ್ವೀಕರಿಸುವಷ್ಟು ಸ್ಥೈರ್ಯ ಆತನಲ್ಲಿ ಬರುವದು. ಕಾಯಕನಿರತನಾದವನಿಗೆ ಸಂಪದವಿದೆ, ಸುಖವಿದೆ, ಅರ್ಥಾತ್ ಎರಡನೆಯ ಪುರುಷಾರ್ಥ "ಅರ್ಥ" ಮತ್ತು ಮೂರನೆಯದು "ಕಾಮ". ಸುಖವು ಆನಂದದಲ್ಲಿ, ಆನಂದವು ನಿತ್ಯಾನಂದದಲ್ಲಿ, ನಿತ್ಯಾನಂದವು ಪರಮಾನಂದದಲ್ಲಿ ಬೆರೆತು ಸ್ವತಃ ಸಚ್ಚಿದಾನಂದ ಸ್ವರೂಪನಾಗುವನು. ಆಗ ಜೀವನ್ಮುಕ್ತಿ ಪಡೆಯುವನು. ಇದುವೇ ಕೊನೆಯ ಪುರುಷಾರ್ಥ "ಮೋಕ್ಷ". ಇದು ಜೀವನದ ಹಾದಿ. ಇವೆಲ್ಲಕ್ಕೂ ಮೂಲ "ಧರ್ಮ". ಈ ಹಾದಿ ಸುಗಮವಾಗಲು ಜೀವನಪರ್ಯಂತ ಉಪಯುಕ್ತವಾಗಬಲ್ಲ ಶಿಕ್ಷಣ ಅತ್ಯವಶ್ಯ.

ಜ್ಞಾನ, ಆತ್ಮಜ್ಞಾನ; ವಿಜ್ಞಾನ ಮತ್ತು ಕಲೆ

ಶಿಕ್ಷಣ ಈ ಹಿಂದೆ ಶಿಕ್ಷೆಯಾಗಿತ್ತು. ಈಗಲೂ ಆಗುತ್ತಿದೆ. ಹಾಗಾಗಬಾರದು. ಶಿಕ್ಷಣ ಜ್ಞಾನದ ಸಂಸ್ಕಾರವಾಗಬೇಕು, ತರಬೇತಿಯಾಗಬೇಕು. ಶಿಕ್ಷಣವು ಜ್ಞಾನ ನೀಡುವ ಒಂದು ಸಾಧನ ಮಾತ್ರ. ನಿಜಜ್ಞಾನವನ್ನು ಜ್ಞಾನಾರ್ಥಿಗೆ (ಕೇವಲ ವಿದ್ಯಾರ್ಥಿಯಲ್ಲ) ಮುಟ್ಟಿಸಲು ಸಮರ್ಥವಾಗಬಲ್ಲ ಶಿಕ್ಷಣವಿದಾಗಬೇಕು.

"ಜ್ಞಾನ" ಈ ಸಂಸ್ಕೃತ ಶಬ್ದ 'ಜ್ಞ' ಎಂಬ ಮೂಲ ಸಂಸ್ಕೃತದ ಧಾತುವಿನಿಂದ ಬಂದಿದೆ. 'ಜ್ಞ' ಅಂದರೆ ತಿಳಿ ಅಥವಾ ಅರಿತುಕೊ. ಏನನ್ನು ತಿಳಿದುಕೊಳ್ಳಬೇಕು? ಮೊದಲು ನಿನ್ನನ್ನು ನೀನು ತಿಳಿದುಕೋ. ನೀನು ಯಾರು? ಎಲ್ಲಿಂದ ಬಂದಿರುವೆ? ನೀನು ಎಲ್ಲಿಗೆ ಹೋಗಬೇಕಾಗಿದೆ? ನಿನಗೂ ಈ ಜಗತ್ತು, ವಿಶ್ವ ಮತ್ತು ವಿಶ್ವೇಶ್ವರನಿಗೆ ಏನು ಸಂಬಂಧವಿದೆ? ಇವಕ್ಕೆ ಉತ್ತರವೇ-ಜೀವ, ಜಗತ್ತು, ಮತ್ತು ಈಶ್ವರನ ಸಂಬಂಧದ ಜ್ಞಾನ. ಇದನ್ನು ಅರಿತವನು ಜ್ಞಾನಿ. ಇನ್ನೂ ಚೆನ್ನಾಗಿ ಅರಿತವನು ಸುಜ್ಞಾನಿ. ಇದನ್ನು ಅರಿಯದವನು ಅಜ್ಞಾನಿ. ಶಿಕ್ಷಣದ ಗುರಿ ಈ ರೀತಿಯ ಜ್ಞಾನದ ಅರಿವನ್ನುಂಟುಮಾಡುವದು. "ಅರಿದೊಡೆ ಶರಣ ಮರೆದೊಡೆ ಮಾನವ"-ಎಂಬ ಶರಣರ ನುಡಿಯಾದರೂ ಇದೇ ಧಾಟಿಯಲ್ಲಿದೆ. "ತತ್ ತ್ವಮ್ ಅಸಿ" ಎಂಬ ವೇದವಾಕ್ಯವಾದರೂ ಇದನ್ನೇ ಗುರಿಯನ್ನಾಗಿಟ್ಟಿರುವದು. "ಅಹಂ ಬ್ರಹ್ಮಾಸ್ಮಿ"-ಎಂಬುದು ಆದಿಶಂಕರಾಚಾರ್ಯರು ಅರಿತುಕೊಂಡ ವಿಷಯವಾಗಿದೆ.

ವಿಶಿಷ್ಟವಾದ ಜ್ಞಾನ (ವಿ+ಜ್ಞಾನ) ವಿಜ್ಞಾನ. ವಿಜ್ಞಾನ ಜ್ಞಾನದ ಅಂಗದ ಹೆಸರು. ಜ್ಞಾನ ಅಪಾರ ಮತ್ತು ಅಖಂಡವಾಗಿದೆ. ಅಭ್ಯಾಸದ ಅನುಕೂಲಕ್ಕಾಗಿ ಪ್ಲೇಟೋನ ಕಾಲದಿಂದ ಹಿಡಿದು ಇಂದಿನವರೆಗೆ ಎಷ್ಟೋ ಜ್ಞಾನಿಗಳು ಅದನ್ನು ಹಲವು ಭಾಗಗಳಲ್ಲಿ ವಿಂಗಡಿಸಿದ್ದಾರೆ. (೧) ಆಗಸ್ಟ ಕಾಮ್ಟೆ ಮತ್ತು ಹರ್ಬರ್ಟ ಸ್ಪೆನ್ಸರರು ಗೋಚರ(Concrete) ಮತ್ತು ಅಗೋಚರ (Abstract) ಎಂದು ಜ್ಞಾನದಲ್ಲಿ ಎರಡು ಭಾಗವಮಾಡಿದ್ದಾರೆ. ೨)ಹಲವರು ಅನ್ವಯ(Applied)ಮತ್ತು ಶುದ್ಧ (Pure)ವೆಂದು, (೩) ಇನ್ನು ಹಲವರು ನಿರ್ದಿಷ್ಟ (Exact) ಮತ್ತು ಅನಿರ್ದಿಷ್ಟ (Inexact) ವಿಜ್ಞಾನಗಳೆಂದು, ಕೊನೆಯದಾಗಿ (೪) ಕೆಲವರು ನೈಸರ್ಗಿಕ ವಿಜ್ಞಾನಗಳು (Natural sciences), ಸಾಮಾಜಿಕ ವಿಜ್ಞಾನಗಳು (Social Sciences) ಮತ್ತು ಮಾನವಿಕ ವಿದ್ಯೆಗಳು (Humanities) ಎಂದು ವಿಂಗಡಿಸಿರುವರು. ಕೊನೆಯ ಜ್ಞಾನವಿಂಗಡಣೆಯೇ ಸದ್ಯದಲ್ಲಿ ಎಲ್ಲೆಡೆಯೂ (ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ) ಪ್ರಚಲಿತದಲ್ಲಿದೆ. ನಿಸರ್ಗಕ್ಕೆ ಸಂಬಂಧಿಸಿದ ವಿಜ್ಞಾನಗಳು ನೈಸರ್ಗಿಕ ವಿಜ್ಞಾನಗಳು – ಉದಾ ರಸಾಯನ ಶಾಸ್ತ್ರ, ಭೌತಿಕಶಾಸ್ತ್ರ, ಜೀವಶಾಸ್ತ್ರ, ಭೂಗರ್ಭಶಾಸ್ತ್ರ, ಮುಂ. ಸಮಾಜಕ್ಕೆ ಸಂಬಂಧಿಸಿದ ವಿಜ್ಞಾನಗಳು ಸಾಮಾಜಿಕ ವಿಜ್ಞಾನಗಳು. ಉದಾ-ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮುಂ. ಭಾಷೆ ಮತ್ತು ಕಲೆಗಳು ಇನ್ನುಳಿದ ವಿದ್ಯೆಗಳಲ್ಲಿ ಬರುವವು.

ಈ ರೀತಿಯ ಜ್ಞಾನದ ಹರಹಿಗೆ ತಕ್ಕಂತೆ ಶಿಕ್ಷಣವು ಎಲ್ಲ ರೀತಿಯಿಂದ ಸನ್ನದ್ಧವಾಗಬೇಕು. ಪ್ರತಿಯೊಬ್ಬ ಮಾನವನ ಹಾಗೂ ಇಡೀ ಮಾನವತೆಯ ದೇಹ, ಬುದ್ಧಿ, ಮನಸ್ಸು ಮತ್ತು ಆತ್ಮಗಳ ವಿಕಾಸಕ್ಕೆ ಅನುಕೂಲವಾಗುವಂತಿರಬೇಕು. ಕುಲ,ನೆಲ, ಭಾಷೆ ಮುಂತಾದವುಗಳ ಸಂಕುಚಿತತೆಯಿಂದ ಶಿಕ್ಷಣವು ಸೀಮಿತವಾಗಿರಬಾರದು. ಸೀಮಿತ ಶಿಕ್ಷಣ ಶಿಕ್ಷಣವಲ್ಲ. ರಶಿಯಾ, ಚೀನ, ಹಂಗೇರಿ, ಪೋಲ್ಯಾಂಡ್, ಯುಗೋಸ್ಲೇವಿಯಾ ಮತ್ತು ಝೆಕೋಸ್ಲೋವೇಕಿಯಾ ಮುಂತಾದ ಸಾಮ್ಯವಾದಿ ರಾಷ್ಟ್ರಗಳಲ್ಲಿ ಶಿಕ್ಷಣವು ಕೇವಲ ಸಾಮ್ಯವಾದಿ ಸಿದ್ಧಾಂತದ ಚೌಕಟ್ಟಿನಲ್ಲಿರುವದು.

ಶಿಕ್ಷಣದಿಂದ ಜ್ಞಾನ, ಜ್ಞಾನದಿಂದ ಜೀವನ, ಜೀವನದಿಂದ ಜೀವನ್ಮುಕ್ತಿ ಅರ್ಥಾತ್ ಮೋಕ್ಷ. ಇದು ಶಿಕ್ಷಣದ ಸ್ವಭಾವ, ಸ್ವರೂಪ, ಹರವು ಮತ್ತು ಗುರಿ ಎಲ್ಲ.

ಜೀವನಪರ್ಯಂತ

ಶಿಕ್ಷಣ ಮಾನವನಲ್ಲಿ ರಕ್ತಗತವಾಗಿ ಬರುವದು ಮತ್ತು ರಕ್ತ ಹೆಪ್ಪುಗಟ್ಟುವವರೆಗೆ ಮುಂದುವರೆಯುವದು. ತಾಯಿಯ ಗರ್ಭದಿಂದ ಪ್ರಾರಂಭವಾಗುವ

ಶಿಕ್ಷಣ ಕೊನೆಯುಸಿರು ಎಳೆಯುವವರೆಗೂ ಮುನ್ನಡೆಯುವದು. ಮುನ್ನಡೆಯ ಬೇಕು. ಈ ಶಿಕ್ಷಣದ ಮರ್ಮ ಗ್ರೀಕ ತತ್ವಜ್ಞಾನಿ ಪ್ಲೇಟೋನಿಗೆ ತಿಳಿದಿತ್ತು. ಆತನ "ರಿಪಬ್ಲಿಕ್"ದಲ್ಲಿ ನರ್ಸರಿಶಾಲೆಯಿಂದ ಹಿಡಿದು ವೃದ್ಧಾಪ್ಯದವರೆಗಿನ ಹಂತ ಹಂತವಾದ ಶೈಕ್ಷಣಿಕ ವಿವರಣೆಗಳು ಕಂಡುಬರುವವು. ಅದಕ್ಕೆಂತಲೇ ಫ್ರಾನ್ಸದ ರಾಜ್ಯಶಾಸ್ತ್ರಜ್ಞ ರೂಸೋನು "ರಿಪಬ್ಲಿಕ್" "ಇದು ಕೇವಲ ರಾಜ್ಯಶಾಸ್ತ್ರದ ಬಗೆಗಿನ ಪುಸ್ತಕವಲ್ಲ, ಶಿಕ್ಷಣದ ಉತ್ಕೃಷ್ಟ ಪುಸ್ತಕ" ಎಂದು ಹೇಳುವಲ್ಲಿ ಅತಿಶಯೋಕ್ತಿ ಯೇನಿಲ್ಲ. ಕ್ರಿ. ಶ. ಪೂ. ಸುಮಾರು ೩೦೦ ವರ್ಷಗಳ ಪೂರ್ವದಲ್ಲಿಯೇ ಪ್ಲೇಟೋನು ಸ್ತ್ರೀ ಶಿಕ್ಷಣ, ಜೀವನ ಪರ್ಯಂತ ಶಿಕ್ಷಣ, ಪರೀಕ್ಷಾ ವಿಧಾನಗಳ ಬಗೆಗೆ ಪ್ರತಿಪಾದಿಸಿರುವನು. ಆದರೆ ಆತನ ಶಿಕ್ಷಣ ಪದ್ಧತಿಯಲ್ಲಿ ಕಂಡುಬರುವ ಮುಖ್ಯ ದೋಷಗಳೆಂದರೆ ಶಿಕ್ಷಣವು ಕೇವಲ ಶ್ರೀಮಂತರ ಸೊತ್ತಾಗಿರುವದು, ಶಿಕ್ಷ ಣದಲ್ಲಿ ಕೇವಲ ಸಂಗೀತ ಮತ್ತು ಅಂಕಗಣಿತಕ್ಕೆ ಪ್ರಾಮುಖ್ಯತೆ ಇರುವದು.

ರೂಸೋನ ವಿಚಾರ

ಫ್ರೆಂಚ್ ರಾಜ್ಯಶಾಸ್ತ್ರಜ್ಞ ರೂಸೋನು ತನ್ನ "ಎಮಿಲ್" (Emile) ಎಂಬ ಗ್ರಂಥದಲ್ಲಿ ಆಧ್ಯಾತ್ಮಿಕತೆಗೆ ಪ್ರಾಧಾನ್ಯವಿರುವ ಶಿಕ್ಷಣವನ್ನು ಬೆಂಬಲಿಸಿರುವನು. ಶುಷ್ಕವಾದ ಕಾನ್ವೆಂಟ್ ಶಿಕ್ಷಣವನ್ನು ಆತನು ಹೀಯಾಳಿಸಿರುವನು. ಅದಕ್ಕಾಗಿ ದೇಶತ್ಯಾಗ ಹಾಗೂ ತನ್ನ ಪುಸ್ತಕದ ಬಹಿಷ್ಕಾರ ಮುಂತಾದ ಅನಿಷ್ಟತೆಗಳನ್ನು ಆತನು ಎದುರಿಸಬೇಕಾಯಿತು. ದೊಡ್ಡ ದೊಡ್ಡ ಕಟ್ಟಡಗಳನ್ನು ತೊರೆದು ಸ್ವಚ್ಛಂದ ಪ್ರಕೃತಿಮಾತೆಯ ಮಡಿಲಲ್ಲಿ, ವೃಕ್ಷಗಳ ಛಾಯೆಯ ಅಡಿಯಲ್ಲಿ ಶಿಕ್ಷಣ ಕೊಡುವುದರ ಬಗೆಗೆ ಆತನು ಪ್ರತಿಪಾದಿಸಿರುವನು. ನಮ್ಮ ಹೆಮ್ಮೆಯ ಜಾಗತಿಕ ಕವಿ ರವೀಂದ್ರನಾಥ ಠಾಕೂರರ ಇಂದಿನ ಶಾಂತಿನಿಕೇತನಕ್ಕೆ ರೂಸೋನ ಪ್ರಕೃತಿ ಪ್ರೇಮ ಉತ್ತೇಜನವಿತ್ತಿರಬೇಕು. ಇಂದು ಕಾಲೇಜ, ವಿಶ್ವವಿದ್ಯಾಲಯಗಳ ಸೌಧಗಳಿಗೆ ವಿಪರೀತವಾಗಿ ಹಣ ವ್ಯಯಮಾಡುವವರು ಸ್ವಲ್ಪ ಈ ದಿಶೆಯಲ್ಲಿ ವಿಚಾರಿಸಬೇಕು. ಛಳಿ, ಮಳೆ, ಬಿಸಲನ್ನು ತಡೆಯುವ ಸಾದಾ, ಸ್ವಚ್ಛಂದ ತಾಣ ಗಳು ಶಿಕ್ಷಣ ಸಂಸ್ಥೆಗಳಾಗಲು ಹೆಚ್ಚು ಶ್ರೇಷ್ಠ. ಹಾಗಾದಲ್ಲಿ ದೇಶದ ಹಣವೂ ಸಾಕಷ್ಟು ಉಳಿಯುವದು ಹಾಗೂ ಪ್ರಕೃತಿಯ ಸ್ವಾಭಾವಿಕತೆಯ ರಕ್ಷಣೆಯಾಗು ವದು.

ತಂದೆ, ತಾಯಿ ಮತ್ತು ಗುರುಗಳ ಪಾತ್ರಗಳನ್ನು ರೂಸೋನು ಸ್ಪಷ್ಟವಾಗಿ ಗುರುತಿಸಿರುವನು. ಶಿಕ್ಷಣವು ನಾಡ ಸಂಸ್ಕೃತಿಯನ್ನು ಎತ್ತರಿಸುವಂತಾಗ ಬೇಕೆಂಬುದು ಆತನ ಮತ. ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಕಾಳಜಿವಹಿಸಬೇಕೆಂದು

ಆತನು ಹೇಳುವಲ್ಲಿ ಸತ್ಯತೆ ಅಡಗಿವೆ. ಚಿಕ್ಕಂದಿನ ವಿದ್ಯೆ ಚೊಕ್ಕವೆಂಬುದು ಎಲ್ಲರಿಗೂ ವಿದಿತವಾದ ಸಂಗತಿ. ಎಳೆ ಮಾನವನನ್ನು ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಹಾಗೂ ಮಾನವತೆಯ ದೃಷ್ಟಿಯಿಂದ ಹೇಗೆ ಬೇಕು ಹಾಗೆ ಬೆಳೆಸ ಬಹುದು. ಅರ್ಥಾತ್ ಪ್ರಾಥಮಿಕ ಶಿಕ್ಷಣದತ್ತ ಸರಕಾರ ಮತ್ತು ಸಮಾಜ ಹೆಚ್ಚು ಕಾಳಜಿವಹಿಸಬೇಕು. ಅಲ್ಲಿ ಕೆಟ್ಟರೆ ಎಲ್ಲ ಕಡೆಗೂ ಕೆಟ್ಟಂತೆಯೇ. ಅದು ಶಿಕ್ಷಣದ, ಸಮಾಜದ, ರಾಷ್ಟ್ರದ, ಪ್ರಜಾಪ್ರಭುತ್ವದ ಅಡಿಪಾಯ.

ಪ್ರಜಾಪ್ರಭುತ್ವ ಮತ್ತು ಶಿಕ್ಷಣ

ಇಂದಿನ ಯುಗ ಪ್ರಜಾಪ್ರಭುತ್ವದ ಯುಗ. ಎಲ್ಲ ಪ್ರಜೆಗಳಿಗೆ ಪ್ರಭುತ್ವಕ್ಕೆ ಯೋಗ್ಯರಾಗುವಂಥ ಸಾರ್ವತ್ರಿಕ ಶಿಕ್ಷಣ ಅತ್ಯವಶ್ಯ. ಪ್ರಜಾಪ್ರಭುತ್ವದಲ್ಲಿ ಪಾಲುಗೊಳ್ಳುವದು ಎಲ್ಲ ಪ್ರಜೆಗಳ ಹಕ್ಕು ಮತ್ತು ಕರ್ತವ್ಯ. ವೈಯಕ್ತಿಕವಾಗಿ ವಿಚಾರಿಸಿ ನಿರ್ಣಯಿಸುವಷ್ಟು ಶಿಕ್ಷಣಸಾಮರ್ಥ್ಯ ಪ್ರತಿಯೊಬ್ಬ ಪ್ರಜೆಗೂ ಬರ ಬೇಕು. ಆಗ್ಗೆ ನಿಜ ಪ್ರಜಾಪ್ರಭುತ್ವದ ಪ್ರಖರತೆ ಕಂಡು ಬರುವದು. ಪ್ರಜಾ ಪ್ರಭುತ್ವದ ಅತ್ಯಾವಶ್ಯಕ ಸಂಗತಿಗಳಾದ ಸ್ವಾತಂತ್ರ್ಯ, ಸಮಾನತೆ, ಸಹ ಬಂಧುತ್ವ, ತಾಳ್ಮೆ, ದ್ವಿಪಕ್ಷಪದ್ಧತಿ, ನಿರ್ದಿಷ್ಟ ಅವಧಿಯಲ್ಲಿ ಬರುವ ಚುನಾವಣೆ, ಸದಾ ಜಾಗರೂಕತೆ, ಒಳ್ಳೆಯ ಪ್ರತಿನಿಧಿಗಳನ್ನು ಮತ್ತು ಮುಖಂಡರನ್ನು ಗುರುತಿಸುವದು ಇಂದು ಹಿಂದೆಂದಿಗಿಂತಲೂ ಅತ್ಯವಶ್ಯ. ಇಂದಿನ ರಾಜ್ಯಗಳು ಪ್ರಜಾಪ್ರಭುತ್ವವಾದಿ ಕಲ್ಯಾಣರಾಜ್ಯಗಳು. ಈ ದಿಶೆಯತ್ತ ರಾಜಕೀಯ ಶಿಕ್ಷಣ ಅತ್ಯವಶ್ಯ. ರಾಜಕೀಯ ಶಿಕ್ಷಣವೆಂದಾಕ್ಷಣ ಸರಕಾರ ಬೆಚ್ಚಿಬೀಳುವದು, ಲೈಂಗಿಕ ಶಿಕ್ಷಣ ಎಂದಾಕ್ಷಣ ಮಡಿವಂತರು ಮೂಗುಮುರಿಯುವಂತೆ, ಆಯಾವಯಕ್ಕೆ ಎರಡೂ ಅತ್ಯವಶ್ಯ. ಇಲ್ಲದಿದ್ದರೆ ಅನಾಹುತ.

ಪ್ರಜಾಪ್ರಭುತ್ವವು ಸುಶಿಕ್ಷಿತರ ಪ್ರಜಾಪ್ರಭುತ್ವವಾಗಬೇಕು, ಅಶಿಕ್ಷಿತರ ದಲ್ಲ. ಸ್ವಾತಂತ್ರ್ಯಾನಂತರ ಸುಮಾರು ಮೂವತ್ತು ವರ್ಷಗಳು ಕಳೆದರೂ ಭಾರತದಲ್ಲಿ ಇನ್ನೂ ಶೇಕಡಾ ೬೦ ಕ್ಕಿಂತ ಹೆಚ್ಚು ಜನ ಅಶಿಕ್ಷಿತರಿರುವದು ಶೋಭಿ ಸುವ ಸಂಗತಿಯಲ್ಲ. ಜಗತ್ತಿನಲ್ಲಿಯೇ ಭಾರತವು ದೊಡ್ಡ ಪ್ರಜಾಪ್ರಭುತ್ವವೆನಿ ಸಿದ್ದು ಸಂಖ್ಯೆಯಲ್ಲಿ ಮಾತ್ರ! ಆ ರೀತಿ ಅದು ಗುಣದಲ್ಲಿ ಮುಂದೆ ಬರಬೇಕು.

ಈ ಅಲ್ಪ ಅಂಕಿಯ (೪೦%) ಶಿಕ್ಷಣವೇತ್ತರಲ್ಲಿ ಸುಮಾರು ಅರ್ಧಕ್ಕಿಂತ ಹೆಚ್ಚು ಮತ ಚಲಾಯಿಸುವದಿಲ್ಲ. ಅದಕ್ಕೆ ಅವರು ತೋರಿಸುವ ಅನಾಸಕ್ತಿ

ಮುಖ್ಯ ಕಾರಣ. ಸರಕಾರಿ ಕೆಲಸವೂ ಕೆಲವರನ್ನು ಮತಚಲಾಯಿಸುವುದರಿಂದ ವಂಚಿಸುವದು .

ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸರಕಾರಿ ನೌಕರವರ್ಗ ಚುನಾವಣೆ ಮುಂತಾದ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಬೇಕೇ? ಅಥವಾ ಬೇಡವೇ? ಎಂಬುದು ಇನ್ನೂ ಚರ್ಚಾಸ್ಪದ. ಇವಕ್ಕೆ ಪೂರ್ವಭಾವಿಯಾಗಿ, ಪ್ರಜಾಪ್ರಭುತ್ವ ಮತ್ತು ಇಂದಿನ ಜೀವನದಲ್ಲಿ ರಾಜಕೀಯ ಅಧಿಕಾರದ ಪಾತ್ರದ ಅರಿವನ್ನು ಮಾಡಿಕೊಳ್ಳುವದು ಅತ್ಯವಶ್ಯ. ಪ್ರಜಾಪ್ರಭುತ್ವವೆಂದರೆ ಪ್ರತಿಯೊಬ್ಬರೂ ಸರಕಾರದಲ್ಲಿ ಸಕ್ರಿಯವಾಗಿ ಭಾಗವಹಿಸುವದು. ಇದೇ ಧಾಟಿಯಲ್ಲಿ ಪ್ರೊ. ಸೀಲಿ ("A government in which everyone has a share") ಮತ್ತು ಅಮೇರಿಕೆಯ ಹಿಂದಿನ ಖ್ಯಾತ ಅಧ್ಯಕ್ಷ ಅಬ್ರಹಾಂ ಲಿಂಕನ್ ("A government of the people, by the people and for the people") ರ ಪ್ರಜಾಪ್ರಭುತ್ವದ ವ್ಯಾಖ್ಯೆಗಳಿರುವವು. ಒಟ್ಟಿನಲ್ಲಿ ಈ ಧಾಟಿಯ ಪ್ರಕಾರ ಪ್ರತಿಯೊಬ್ಬರೂ ವಿದ್ಯಾರ್ಥಿ, ಶಿಕ್ಷಕ, ನೌಕರ ಸಹಿತ ರಾಜಕಾರಣದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮಾ ಗಾಂಧಿಯವರನ್ನು ಹಿಡಿದು ಜವಾಹರ ಲಾಲ ನೆಹರೂರವರೆಗೆ ಎಲ್ಲ ಕಾಂಗ್ರೆಸ ಮುಖಂಡರು ಮೇಲಿನ ಧಾಟಿಯನ್ನು ಪುರಸ್ಕರಿಸಿದ್ದರಲ್ಲದೆ ಬಹಿರಂಗವಾಗಿ ವಿದ್ಯಾರ್ಥಿ, ಶಿಕ್ಷಕ, ನೌಕರರನ್ನು ಸ್ವಾತಂತ್ರ್ಯ ಚಳುವಳಿಗೆ ಅಣಿಮಾಡಿದ್ದು ಸರ್ವವಿದಿತ. ಟಿಳಕ ಮತ್ತು ಶ್ರೀ ಅರವಿಂದರಂತೂ ರಾಜಕೀಯ ಶಿಕ್ಷಣಕ್ಕೆ ಪ್ರಾಧಾನ್ಯತೆ ಇತ್ತಿದ್ದನ್ನು ಇಲ್ಲಿ ಸ್ಮರಿಸಬೇಕು. ಆದರೆ ಸ್ವಾತಂತ್ರ್ಯಾನಂತರ ಆ ಧಾಟಿ ಬೇರೆಯಾಯಿತು. ಕಾರಣವಿಷ್ಟೇ ಮೊದಲು ಬ್ರಿಟಿಷ್ ರಾಜ್ಯವಿತ್ತು ಈಗ ನಮ್ಮದೇ ರಾಜ್ಯವಿದೆ. ಮೊದಲು ಸ್ವಾತಂತ್ರ್ಯ ಗಳಿಸುವ ಗುರಿಯಿತ್ತು. ಈಗ ಅಧಿಕಾರ ಉಳಿಸಿಕೊಳ್ಳುವ ಗುರಿ ಇದೆ. ಶ್ರೀ ಜಯಪ್ರಕಾಶ ನಾರಾಯಣರ ವಿಚಾರ ಸ್ಪಷ್ಟವಿದೆ– ಒಂದು ವರ್ಷದ ಅಭ್ಯಾಸ ಹಿಂದುಳಿದರೂ ಚಿಂತೆಯಿಲ್ಲ, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಲೇಬೇಕು.

ಇಂದಿನ ರಾಜಕೀಯ ಅಧಿಕಾರ ಮಾನವನ ಮತ್ತು ಸಮಾಜದ ಇಡೀ ಜೀವನದ ಮೇಲೆ ಪ್ರಭಾವ ಬೀರುವದು. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಅಷ್ಟೇ ಏಕೆ ವಿವಾಹ ಮುಂತಾದ ವೈಯಕ್ತಿಕ ವಿಷಯದ ಮೇಲೂ ಪ್ರಭಾವ ಬೀರುವದರಿಂದ ಈ ರಾಜಕೀಯ ಅಧಿಕಾರದ ಬಗೆಗೆ ಜನತೆ ಎಚ್ಚರ ವಿದ್ದಷ್ಟು ಕಡಿಮೆಯೇ. ಆ ಕಾರಣದಿಂದ ಪ್ರತಿಯೊಬ್ಬ ಪ್ರಜೆ, ವಿದ್ಯಾರ್ಥಿ, ಶಿಕ್ಷಕ,

ನೌಕರ ಸಕ್ರಿಯವಾಗಿ ಇದರಲ್ಲಿ ಭಾಗವಹಿಸಿ ತನ್ನ ಪಾತ್ರವನ್ನಾಡಬೇಕು. ಅಗ್ಗೆ ಅವರಿಚ್ಛೆಯಂತೆ ರಾಜಕೀಯ ಅಧಿಕಾರ ಚಲಾಯಿಸಲ್ಪಡುವದು. ಅದುವೇ ನಿಜಪ್ರಜಾಪ್ರಭುತ್ವ.

ವಿದ್ಯಾರ್ಥಿಗಳ ವಿದ್ಯೆ ಹಾಳಾಗುವದು, ಶಿಕ್ಷಕರ ಮನ ಕದಡುವದು, ನೌಕರರ ನಿಷ್ಠೆ ಹಾಳಾಗುವದು–ಇವೆಲ್ಲ ಕೇವಲ ಸರಕಾರಿ ಬೆದರಿಕೆಗಳು, ಸಮಸ್ಯೆಗಳಲ್ಲ. ಅವರೆಲ್ಲ ತಮ್ಮ ಪಾಲಿನ ನಿಷ್ಠೆಯ ಕರ್ತವ್ಯದೊಡನೆ ತಮ್ಮ ಸಂಸ್ಥೆಗಳಿಗೆ ಯಾವುದೇ ರೀತಿಯಲ್ಲಿ ಧಕ್ಕೆ ಬರದಂತೆ ರಾಜಕಾರಣದಲ್ಲಿ ಭಾಗವಹಿಸಿದರೆ ತಪ್ಪೇನು ? ಉದಾಹರಣಾರ್ಥವಾಗಿ, ಒಬ್ಬ ಕಾಲೇಜ ಶಿಕ್ಷಕನು ತನ್ನ ದಿನ ನಿತ್ಯದ ಒಂದೆರಡು ತಾಸಿನ ಪಾಠ ಹೇಳಿದ ನಂತರ ಉಳಿದ ಅವಧಿಯಲ್ಲಿ ತಾನೊಬ್ಬನೇ ಆಗಲಿ ಅಥವಾ ತನ್ನ ಶಿಷ್ಯರೊಂದಿಗಾಗಲಿ ಸಮೀಪದ ಹಳ್ಳಿಗಳಿಗೆ ಹೋಗಿ ಹಳ್ಳಿಗರಿಗೆ ನಿಜ ರಾಜಕೀಯ ಶಿಕ್ಷಣವಿತ್ತು, ಚುನಾವಣೆಯಲ್ಲಿ ಪ್ರಚಾರಮಾಡಿದರೆ ಆಗುವ ಅನಾಹುತವಾದರೂ ಏನು ? ಸರಕಾರಿ ನೌಕರನು ರವಿವಾರ ಮುಂತಾದ ರಜಾದಿನಗಳಲ್ಲಿ ಹಳ್ಳಿಗಳಿಗೆ ಹೋಗಿ ರಾಜಕೀಯ ಜ್ಞಾನ ನೀಡಿದರೆ ದೇಶಭ್ರಷ್ಟನಾಗುವನೇ ? ಇದುವೇ ನಿಜವಾದ ವಿಚಾರ ಸ್ವಾತಂತ್ರ್ಯ, ನಿಜವಾದ ಪ್ರಜಾಪ್ರಭುತ್ವ. ಈ ಅಂಶವನ್ನು ಮುಖ್ಯವಾಗಿ ಇಂದಿನ ಶಿಕ್ಷಣ ಅಳವಡಿಸಿಕೊಳ್ಳಬೇಕು. ಬ್ರಿಟಿಷರ ಕಾಲದ ಶಿಕ್ಷಣ ಗುಲಾಮಗಿರಿಯ ಶಿಕ್ಷಣ, ಕಾರಕೂನರನ್ನು ತಯಾರಿಸುವ ಶಿಕ್ಷಣ ಎಂದು ಎಲ್ಲರೂ ಘಂಟಾಘೋಷವಾಗಿ ಹೇಳುವರು. ಇಂದಿನ ಶಿಕ್ಷಣ ಹಿಂದಿನ ಟೀಕೆಗಳನ್ನು ಅಳುಕಿಸಿದೆಯೇ ? ಅಳುಕಿಸಬೇಕಿದ್ದರೆ ಶಿಕ್ಷಣದಲ್ಲಿ ಪ್ರಜಾಪ್ರಭುತ್ವದ ಹೊಸಗಾಳಿ ಬೀಸಲಿ.

ಶಿಕ್ಷಣ ಮಾಧ್ಯಮಗಳಾದ ರೇಡಿಯೋ, ಟೆಲಿವಿಜನ್, ಮುದ್ರಣ, ಪ್ರಕಾಶನ, ಭಾಷಣ ಮುಂತಾದವುಗಳೆಲ್ಲ ಸರಕಾರದ ಸ್ವಾರ್ಥದ ಕಪಿಮುಷ್ಟಿಯಿಂದ ಸ್ವತಂತ್ರವಾಗಿ ತಮ್ಮ ಪಾತ್ರವನ್ನಾಡಬೇಕು. ಇಲ್ಲದಿದ್ದರೆ ಸಾಮ್ಯವಾದಿ ಶಿಕ್ಷಣಕ್ಕೂ ಏಕಪಕ್ಷೀಯ ರಾಜಕೀಯ ಶಿಕ್ಷಣಕ್ಕೂ ಏನು ವ್ಯತ್ಯಾಸ ? ಇಂದಿನ ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ, ಶಿಕ್ಷಕರಲ್ಲಿ, ನೌಕರರಲ್ಲಿ ಅಸ್ವಸ್ಥತೆ, ಅಶಿಸ್ತು ಇರಲು ಕಾರಣವೆಂದರೆ ಅವರಿಗೆ ರಾಜಕೀಯ ಸ್ವಾತಂತ್ರ್ಯವಿಲ್ಲದುದು. ಈ ದಿಶೆಯಲ್ಲಿ ಅವರೆಲ್ಲರನ್ನು ಬಂಧನದಿಂದ ಬಿಡುಗಡೆ ಮಾಡುವದು ಅತ್ಯವಶ್ಯ. ಇಲ್ಲದಿದ್ದರೆ ಕೇವಲ ಅಶಿಕ್ಷಿತರ ಅರಾಜಕತೆಯ ಅಟ್ಟಹಾಸ ಮೆರೆದೀತು.

ಶಿಕ್ಷಣ ಕ್ರಮ :

ಮನೆಯಿಂದ ವಿಶ್ವವಿದ್ಯಾಲಯದ ವರೆಗಿನ ಶಿಕ್ಷಣ ಕ್ರಮದಲ್ಲಿಯ ಸಮಸ್ಯೆಗಳನ್ನು ವಿವೇಚಿಸುವದು ಅತ್ಯವಶ್ಯ. ಸಾಮಾನ್ಯವಾಗಿ ಇಡೀ ಭಾರತದಲ್ಲಿಯ, ಅದರಲ್ಲಿಯೂ ಮುಖ್ಯವಾಗಿ ಕರ್ನಾಟಕ ರಾಜ್ಯದಲ್ಲಿಯ ಶಿಕ್ಷಣ ಕ್ರಮಕ್ಕೆ ಈ ವಿವೇ

ಜನೆ ಸಂಬಂಧಿಸಿದೆ. ಸದ್ಯಕ್ಕೆ ಇಲ್ಲಿ ಪ್ರಾಥಮಿಕ ಹಂತದವರೆಗೆ ವಿವೇಚಿಸಲಾಗಿದೆ.

ಸಂವಿಧಾನಾತ್ಮಕವಾಗಿ ಶಿಕ್ಷಣವನ್ನು ರಾಜ್ಯಾಡಳಿತದ ಆಧೀನಕ್ಕೆ ಒಪ್ಪಿಸಲಾಗಿದೆ. ರಾಜ್ಯಗಳು ಭಾಷೆಗಳಮೇಲೆ ವಿಂಗಡಿಸಲ್ಪಟ್ಟಿವೆ. ಆಯಾ ರಾಜ್ಯಗಳ ಶಿಕ್ಷಣವಾದರೂ ಆಯಾರಾಜ್ಯ ಭಾಷಾ ಮಾಧ್ಯಮದ ಮುಖಾಂತರ ಸಾಗಬೇಕೆಂದು ಅಪ್ರತ್ಯಕ್ಷವಾಗಿ ಹೇಳಿದಂತೆ. ಪ್ರತಿಯೊಂದು ರಾಜ್ಯ ತನ್ನದೇ ಆದ ಸಂಸ್ಕೃತಿ, ಭಾಷೆ, ಸಾಹಿತ್ಯ, ಕಲೆಗಳನ್ನು ಪ್ರೋತ್ಸಾಹಿಸಿ ಬೆಳೆಸಲೆಂಬುದು ತಾತ್ಪರ್ಯ. ಈ ವಿವಿಧತೆಯ ಜೊತೆಗೆ ಐಕ್ಯತೆಯನ್ನು ತರುವ ರೀತಿಯಲ್ಲಿ ಭಾರತ ಸರಕಾರ ಹಲವು ಆಯೋಗಗಳನ್ನು ನಿಯಮಿಸಿತು. ೧೯೪೮ ರಲ್ಲಿ ಡಾ. ರಾಧಾಕೃಷ್ಣನ್ನರ ಮುಖಂಡತ್ವದಲ್ಲಿ ವಿಶ್ವವಿದ್ಯಾಲಯ ಶಿಕ್ಷಣದ ಬಗೆಗೆ, ೧೯೫೨ ರಲ್ಲಿ ಡಾ. ಮುದಲಿಯಾರರ ಮುಖಂಡತ್ವದಲ್ಲಿ ಮಾಧ್ಯಮಿಕ ಶಿಕ್ಷಣದ ಬಗೆಗೆ ಮತ್ತು ೧೯೬೪ ರಲ್ಲಿ ಕೋತಾರಿಯವರ ಮುಖಂಡತ್ವದಲ್ಲಿ ಸಮಗ್ರ ಶಿಕ್ಷಣದ ಬಗೆಗೆ ಆಯೋಗಗಳು ನೇಮಕವಾಗಿದ್ದವು.

ಮನೆ

ಮನೆ ಮೊದಲ ಪಾಠಶಾಲೆ. ತಂದೆ ತಾಯಿಗಳೇ ಪ್ರಥಮ ಆತ್ಮೀಯ ಗುರುಗಳು. ಅವರು ಕಲಿಸಿದ್ದೇ ಹೆಚ್ಚಾಗಿ ಸ್ಥಿರವಾಗಿ ಜೀವನದುದ್ದಕ್ಕೂ ಉಳಿಯುವದು. ತಂದೆ ತಾಯಿಗಳಂತೆ ಮಕ್ಕಳು. ಕೆಲವಡೆ ಅಪವಾದಗಳಾಗಬಹುದು. ತಂದೆ ತಾಯಿಗಳು ಸ್ವತಃ ಧರ್ಮ, ಸತ್ಯ, ನೀತಿವಂತರಿದ್ದರೆ ತಮ್ಮ ಮಕ್ಕಳಿಗೆ ಅವನ್ನು ಕಲಿಸಬಲ್ಲರು. ಅವರೇ ಕುಡುಕುತನ, ಕಪಟತನ, ಅನೀತಿಗಳಿಗೆ ಅಂಟಿಕೊಂಡಿದ್ದರೆ ತಮ್ಮ ಮಕ್ಕಳ ಮುಂದೆ ನಿಲ್ಲಲೂ ಸಹ ಅವರಿಗೆ ನೈತಿಕ ಧೈರ್ಯ ಬರಲಾರದು. ಇನ್ನು ಮಕ್ಕಳಿಗೆ ಬುದ್ಧಿವಾದ ಹೇಳುವದಂತೂ ದೂರ ಉಳಿಯಿತು. ತಂದೆ ತಾಯಿಗಳು ಸುಶಿಕ್ಷಿತರಿದ್ದರೆ ಮಕ್ಕಳೂ ಸುಶಿಕ್ಷಿತರಾಗಲು ಅನುವು ಮಾಡಿಕೊಡುವರು. ಮಕ್ಕಳಿಗೆ ವಿದ್ಯೆಕೊಡುವದು, ಕೊಡಿಸುವದು ತಮ್ಮ ಆದ್ಯ ಕರ್ತವ್ಯ, ಧರ್ಮ ಎಂಬ ವಿಚಾರ ತಂದೆತಾಯಿಗಳಿಗಿರಬೇಕು. ಅಂದರೆ ಶಾಲೆಯ ಶಿಕ್ಷಕರು ಶಿಷ್ಯರನ್ನು ಅರಸುತ್ತ ಬರುವದರ ಬದಲು ತಂದೆ ತಾಯಿಗಳು ಬಲಾತ್ಕಾರದಿಂದಾದರೂ ತಮ್ಮ ಮಕ್ಕಳನ್ನು ಶಾಲೆಗೆ ಮುಟ್ಟಿಸಿ ಬರುವರು. ಈ ಬಲಾತ್ಕಾರ ಮುಂದೆ ಎಲ್ಲರಿಗೂ ಒಳ್ಳೆದು. ಔಷಧ ಕಹಿಯಿದ್ದರೂ ದೇಹಕ್ಕೆ ಮುಂದೆ ಆರೋಗ್ಯ ಒದಗಿಸುವದು.

ಭಾರತದಲ್ಲಿ ಇಂಥ ಶಿಕ್ಷಣಪ್ರೇಮಿ ತಂದೆತಾಯಿಗಳು ಎಲ್ಲಿಡೆ ಸಿಕ್ಕಲಾರರು. ಶೇಕಡಾ ೮೦ ರಷ್ಟು ಜನಸಂಖ್ಯೆ ಹಳ್ಳಿಯಲ್ಲಿದೆ. ಅದರಲ್ಲಿ ಶೇಕಡಾ ೯೦ ರಷ್ಟು

ಜನರು ಕಡುಬಡವರು ಮತ್ತು ಅಶಿಕ್ಷಿತರು. ಅವರು ಸ್ವತಃ ಹೆಚ್ಚಾಗಿ ಶಾಲೆ ಕಂಡಿಲ್ಲ. ಶಾಲೆಗೆ ಮಕ್ಕಳನ್ನು ಕಳಿಸುವಲ್ಲಿ ಅವರಿಗೆ ಉತ್ಸುಕತೆಯೂ ಇಲ್ಲ, ಆಸಕ್ತಿಯೂ ಇಲ್ಲ. ಕೃಷಿಪ್ರಧಾನವಾದ ಹಳ್ಳಿಗಳಲ್ಲಿ ಹೊಲ, ದನಕರುಗಳ ಮೇಲೆ ಇರುವಷ್ಟು ಪ್ರೇಮ ಶಿಕ್ಷಣದ ಮೇಲೆ ಖಂಡಿತ ಇಲ್ಲ. ಒಕ್ಕಲಿಗನಿಗೆ ಎಷ್ಟು ಜನ ಮಕ್ಕಳು ಒಕ್ಕಲುತನದಲ್ಲಿ ಸಹಾಯಮಾಡಿದರೂ ಕಡಿಮೆಯೇ. ತನ್ನ ಮಗನು ಶಾಲೆಗೆ ಹೋಗುವ ಬದಲು ದನದ ಮುಂದೆ ನಿಂತರೆ ಸಾಕು— ಎನ್ನುವ ವಿಚಾರ ಭಾರತದುದ್ದಕ್ಕೂ ಸರ್ವಸಾಮಾನ್ಯ. ಇಲ್ಲಿಯೇ ಭಾರತದ ಅವನತಿಯ ಬೀಜವಿದೆ. ಈ ವಿಷಬೀಜವನ್ನು ನಾಶಮಾಡುವದು ಮುಖ್ಯ ಕರ್ತವ್ಯ ಎಲ್ಲರದು. ಒಳ್ಳೆಯ ಕಾರ್ಯಕ್ಕೆ ಬಲಾತ್ಕಾರಮಾಡುವಲ್ಲಿ, ಕಡ್ಡಾಯವನ್ನಾಗಿ ಮಾಡುವುದರಲ್ಲಿ ಏನೂ ತಪ್ಪಿಲ್ಲ. ಸಂವಿಧಾನಾತ್ಮಕವಾಗಿ (ಕಲಮು ೪೫) ೧೪ ವರ್ಷಗಳವರೆಗೆ ಎಲ್ಲ ಮಕ್ಕಳಿಗೂ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕೊಡಲಾಗುವದು. ಇದು ಕಡ್ಡಾಯವಾಗಿ ಪ್ರಯೋಗದಲ್ಲಿ ಬರಲೇಬೇಕು. ಕನಿಷ್ಟ ಪಕ್ಷ ಅಕ್ಷರ ಜ್ಞಾನ, ಓದು ಬರಹ, ಪ್ರಾಥಮಿಕ ಹಂತದ ಶಿಕ್ಷಣ ಭಾರತದ ಸರ್ವಮಕ್ಕಳಿಗೂ ದೊರಕಲೇಬೇಕು. ಆಗ್ಗೆ ಭಾರತದ ಪ್ರಜಾಪ್ರಭುತ್ವಕ್ಕೆ ಗುಣದ ಮೆರಗು ಬರುವದು. ಇದರ ಹೊಣೆ ಮೂಲವಾಗಿ ತಂದೆತಾಯಿಗಳ ಮೇಲಿದೆ.

ಬಾಲವಾಡಿ

ಮನೆಯ ನಂತರ ಶಾಲಾ ಸಂಸ್ಥೆಗಳು ಬರುವವು. ಅವುಗಳಲ್ಲಿ ಪ್ರಥಮ ಹಂತ ಬಾಲವಾಡಿ ಅಥವಾ ನರ್ಸರಿಶಾಲೆ. ಮೂರು ವರ್ಷದಿಂದ ಸುಮಾರು ಆರು ವರ್ಷ ವಯಸ್ಸಿನ ವರೆಗೆ ಇದಿರುವದು. ಇದಕ್ಕಾಗಿ ಪಾಲಕರು ಪ್ರತಿ ತಿಂಗಳು ಫೀ ರೂಪದಲ್ಲಿ ಹಣತೆರಬೇಕಾಗುವದು. ಇದರರ್ಥ ಈ ವ್ಯವಸ್ಥೆ ಕೇವಲ ಶ್ರೀಮಂತರ ಮಕ್ಕಳಿಗೆ, ಮನೆಯಲ್ಲಿ ಮಕ್ಕಳ ಕಾಟಬೇಡ ಎಂದು ಹೊರಗೆ ಹಾಕುವ ವ್ಯವಸ್ಥೆಯಂತಿರುವದು. ಇನ್ನು ಬಡಮಕ್ಕಳಿಗೂ ಇದರ ಸೌಲಭ್ಯ ಸಿಗಲೆಂದು ಸರಕಾರ ವ್ಯವಸ್ಥೆಮಾಡಿದೆ. ಅಲ್ಲಿ ಜ್ಞಾನ ಅಥವಾ ಶಿಕ್ಷಣ ನೀಡುವುದರ ಜೊತೆಗೆ ಹಾಲು, ಉಪ್ಪಿಟ್ಟು ಹಂಚುವ ವ್ಯವಸ್ಥೆಯೂ ಇರುವದು.

ಸುಮಾರು ಆರು ವರ್ಷ (ಈಗ ೫ ವರ್ಷ, ೬ ತಿಂಗಳು) ವಯಸ್ಸಿನವರೆಗೆ ಮಕ್ಕಳು ಮನೆಯಲ್ಲಿಯೇ ತಂದೆ, ತಾಯಿ, ಸಹೋದರ, ಸಹೋದರಿಯರ ಪ್ರೇಮ, ವಾತ್ಸಲ್ಯಗಳ ಆವರಣದಲ್ಲಿ ಸ್ವಚ್ಛಂದವಾಗಿ ಬೆಳೆದರೆ ಒಳ್ಳೆಯದು. ಈಗಿನ ಪಟ್ಟಣದ ಯುವಕರಲ್ಲಿ ಅಶಿಸ್ತು, ಅಗೌರವ ಮುಂತಾದ ಅವಗುಣಗಳು ಇರುವದಕ್ಕೆ ಕಾರಣವೆಂದರೆ ಅವರೆಲ್ಲ ಪ್ರೀತಿ ವಾತ್ಸಲ್ಯಗಳಿಂದ ವಂಚಿತರಾಗಿರುವರು. ಅವರೆಲ್ಲ ಹೆಚ್ಚಾಗಿ ತಮ್ಮ ಮೂರನೆಯ ವರ್ಷದಲ್ಲಿಯೇ ಮನೆಯಿಂದ ಈ ಕೃತ್ರಿಮ ನರ್ಸರಿಗೆ ವರ್ಗಾಯಿಸಲ್ಪಟ್ಟವರಿರುವರು. ಈ ಕೃತ್ರಿಮತೆ ಸಾಧಾ-

ರಣವಾಗಿ ಪ್ಲೇಟೋನ ನರ್ಸರಿ ಪದ್ಧತಿಯನ್ನು ಹೋಲುವದು. ಮುಖ್ಯ ಅಂತರ ವೆಂದರೆ ಪ್ಲೇಟೋನ ಪದ್ಧತಿಯಲ್ಲಿ ತಾಯಿಂದಿರಿಂದ ಮಕ್ಕಳು ಬಾಯಿಂ ಆಗಿ ಕೊನೆಯುವರೆಗೆ ಸರಕಾರದಿಂದ ಬೇರ್ಪಡಿಸಲ್ಪಟ್ಟು ಸರಕಾರದ, ರಾಜ್ಯದ ಮಕ್ಕಳಾಗಿ ಬೆಳೆಯುವರು. ತಂದೆತಾಯಿಗಳ ಗುರುತನ್ನು ಸಹ ಮಕ್ಕಳು ಹಿಡಿಯಲಾರರು. ತಂದೆಯ ಗುರುತು ತಾಯಿಗೂ ಕಠಿಣವೇ! ನನ್ನದು, ತನ್ನದು ಎಂಬ ಸಂಕುಚಿತ ಭಾವನೆ ಬೇಡವೆಂಬುದು ಪ್ಲೇಟೋನ ಉದ್ದೇಶ. ಆದರೆ ನನ್ನದು ತನ್ನದು ಎಂಬ ಅಭಿಮಾನವಿಲ್ಲದ ಜೀವನ ನಿಸ್ಸತ್ವವಾದುದು ಪ್ಲೇಟೋನ ಪದ್ಧತಿಯ ಮುಖ್ಯದೋಷವಿದು. ಈ ದೋಷವನ್ನು ಪ್ರಥಮವಾಗಿ ಪ್ಲೇಟೋನ ಶಿಷ್ಯ ಆರಿಸ್ಟಾಟಲನು ಕಂಡುಹಿಡಿದನು.

ಕಾನ್ವೆಂಟ್ :

ಶ್ರೀಮಂತರು ತಮ್ಮ ಮಕ್ಕಳನ್ನು ಕಾನ್ವೆಂಟ್‌ಗಳಿಗೆ ಕಳಿಸುವದು ಒಂದು ಫ್ಯಾಶನ್ ಆಗಿಬಿಟ್ಟಿದೆ. ಅದರಲ್ಲಿ ಅವರ ಶ್ರೀಮಂತಿಕೆಯ ಪ್ರದರ್ಶನವಿದೆ, ಇಂಗ್ಲೀಷಿನ ವ್ಯಾಮೋಹವಿದೆ. ಕಾನ್ವೆಂಟಿನ ಬಗೆಗೆ ಎದೆಯುಬ್ಬಿಸಿ ಹೆಚ್ಚಾಗಿ ಎಲ್ಲರೂ ಹೇಳುವ ವಿಚಾರವೆಂದರೆ–ಮಕ್ಕಳಿಗೆ ಶಿಸ್ತು ಬರುವದು, ಇಂಗ್ಲೀಷ ಬರುವದು, ಇವೆಲ್ಲಕ್ಕಿಂತ ಹೆಚ್ಚಾಗಿ ಧೈರ್ಯ ಬರುವದು – ಎಂಬುದು. ಇಂಥ ಕಾನ್ವೆಂಟ್ ಶಿಸ್ತಿನ ಖರ್ಚನ್ನು ನಿಭಾಯಿಸುವದೊಂದೇ ಜೀವನದುದ್ದಕ್ಕೂ ಅವರ ಧ್ಯೇಯವಾಗಿ ಉಳಿಯಬಹುದು. ಅವರೆಲ್ಲ ಪೂರ್ತಿ ಭೌತಿಕವಾದಿಗಳೇ ಆದರೆ ಒಂದು ಸಮಸ್ಯೆಯಾಗಬಹುದು.

ಕೆಲ ಕಾನ್ವೆಂಟುಗಳು ಭಾರತ ಸಂಸ್ಕೃತಿಗೆ ಕುಠಾರಪ್ರಾಯವಾಗಿವೆ. ಹೆಣ್ಣು ಮಕ್ಕಳಿಗೆ ಕುಂಕುಮ ಹಚ್ಚಬೇಡಿರಿ, ಬಳೆ ಇಡಬೇಡಿರಿ, ಸೀರೆ ಉಡಬೇಡಿರಿ, ಕಿವಿ ಮೂಗು ಚುಚ್ಚಿಸಿಕೊಳ್ಳಬೇಡಿರಿ– ಎಂದು ಕಡ್ಡಾಯದ ಶಿಕ್ಷಣ ಕೊಡುತ್ತಿರುವರು ಎಂದು ಹೇಳಲಾಗುತ್ತಿದೆ. ಒಟ್ಟಿನಲ್ಲಿ ಭಾರತ ಸಂಸ್ಕೃತಿ ಬಿಡುವುದರಲ್ಲಿಯೇ ಪ್ರಗತಿಯಿದೆ ಎಂದು ಇವು ಹೇಳುತ್ತಿರುತ್ತವೆ. ಭಾರತ ಸಂಸ್ಕೃತಿ ಉಳಿಸಬೇಕೆನ್ನುವವರು, ಮಕ್ಕಳು ವಿನಯಶೀಲರಾಗಬೇಕೆನ್ನುವವರು ಕಾನ್ವೆಂಟಿಗೆ ತಮ್ಮ ಮಕ್ಕಳನ್ನು ಕಳಿಸಬಾರದು ಎಂದು ಹಲವರು ವಾದಿಸುವರು.

ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಶಾಲೆ ಶಿಕ್ಷಣದ ಅಡಿಗಲ್ಲು. ಪ್ರಾಥಮಿಕ ಶಿಕ್ಷಕ ಶಿಕ್ಷಣದ ಆಧಾರ ಸ್ತಂಭ. ಸಂವಿಧಾನಾತ್ಮಕವಾಗಿ ೪೫ ನೆಯ ಕಲಮಿನ ಪ್ರಕಾರ ೧೪ ನೆಯ ವಯದವರೆಗೆ ಶಿಕ್ಷಣ ಸಾರ್ವತ್ರಿಕವಾಗಿರಬೇಕೆಂಬುದು ಶ್ರೇಷ್ಠ ವಿಚಾರ. ಇದರಲ್ಲಿ

"ಸರ್ವರಿಗೂ ಶಿಕ್ಷಣ" ವೆಂಬ ವಿಚಾರ ಅಡಗಿದೆ. ಹಾಗಾದಲ್ಲಿ ಪ್ರಜಾಪ್ರಭುತ್ವಕ್ಕೆ ಮೆರಗು ಬರುವದು. ಆದರೆ ಪ್ರಾಯೋಗಿಕವಾಗಿ ಕಂಡುಬರುವ ಸಮಸ್ಯೆಗಳಿಗೆ ಕೊನೆಯಿಲ್ಲ. ಎಲ್ಲ ಮಕ್ಕಳೂ ಶಾಲೆಗೆ ಬರುತ್ತಿಲ್ಲ. ಇದರಲ್ಲಿ ಪಾಲಕರ ದೋಷವಿದೆ.

ಪ್ರಾಥಮಿಕ ಶಾಲೆಗಳಿಗೆ ಸರಿಯಾದ ಕಟ್ಟಡಗಳಿಲ್ಲದುದು ಒಂದು ವಿಶೇಷ ಕೊರತೆ. ಎಲ್ಲಿಯಾದರೂ ಸರಕಾರದ ದುಡ್ಡು ಸೋರಿಹೋಗುತ್ತಿದ್ದರೆ ಅದನ್ನು ಸ್ವಲ್ಪ ಬಂದುಮಾಡಿ ಆ ಹಣವಲ್ಲಿಯೇ ಶಾಲಾ ಕಟ್ಟಡಗಳನ್ನು ಕಟ್ಟಿಸಬಹುದು. ಈಗಿನ ಶೇಕಡಾ ೯೦ ರಷ್ಟು ಶಾಲೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಯದಲ್ಲಿ ಅವುಗಳಲ್ಲಿ ಕೂಡಬೇಕಾಗುವದು. ಅವು ಯಾವಾಗ "ದೊಪ್ಪ" ಅನ್ನುವವೋ ಹೇಳಲು ಬರುವಂತಿಲ್ಲ. ಇನ್ನು ಮಳೆಗಾಲದಲ್ಲಿ ಶೇಕಡಾ ೫೦ ರಷ್ಟು ಶಾಲೆಗಳು ಮುಚ್ಚಿಯೇ ಇರುವವು. ಅದಕ್ಕೆ ಕಾರಣ ಸ್ಪಷ್ಟ– ಶಾಲೆಗಳಲ್ಲಿಯೇ ಮಳೆರಾಯ !

ಸುಧಾರಣೆಗಳು ಹಳ್ಳಿಗಳಿಂದ ಪ್ರಾರಂಭವಾಗಲಿ ಎಂಬುದು ಮಹಾತ್ಮಾ ಗಾಂಧೀಜಿಯವರ ವಿಚಾರವಾಗಿತ್ತು. ಆ ದಿಶೆಯಲ್ಲಿ ಶಿಕ್ಷಣದಲ್ಲಿಯೂ ಪ್ರಥಮ ಹಂತದಿಂದ ಸುಧಾರಣೆಯಾಗುವದು ಅತ್ಯವಶ್ಯ. ಪ್ರಾಥಮಿಕ ಶಿಕ್ಷಣ ಸರಿಯಾಗಿ ಇಲ್ಲವಲ್ಲಿ ಮುಂದಿನ ಕಾಲೇಜ ವಿಶ್ವವಿದ್ಯಾಲಯಗಳು ಕೇವಲ ಗಗನಕುಸುಮ.

ಇಲ್ಲಿಯವರೆಗೆ ಪ್ರಾಥಮಿಕ ಶಿಕ್ಷಣಕ್ಕಾಗಿಯೇ ಪ್ರತ್ಯೇಕ ಆಯೋಗವಿಲ್ಲ. ಸೌಧದ ಬುನಾದಿಯ ಭದ್ರತೆಯ ಬಗೆಗೆ ಹೆಚ್ಚು ಚಿಂತಿಸದೆ ಅದರ ಗೋಪುರದ ಬಗೆಗೆ ಬಹಳ ಶ್ರಮಪಡಲಾಗಿದೆ. ಶಿಕ್ಷಣದಲ್ಲಿಯ, ಸಮಾಜದಲ್ಲಿಯ ಮತ್ತು ನಿರುದ್ಯೋಗ ಸಮಸ್ಯೆಯಲ್ಲಿಯ ಮುಖ್ಯ ದೋಷವಿದು. ಇಲ್ಲಿ ಸರಿಪಟ್ಟರೆ ಎಲ್ಲೆಡೆ ಸರಿಪಡುವದು. ಈಗಿನ ಶಿಕ್ಷಣಕ್ರಮ ೧೦-೨–೩ರ ಮೆಟ್ಟಲುಗಳನ್ನು ಹೊಂದಿದೆ. ಇದು ಸುಮಾರು ಆರು ವಯಸ್ಸಿನಿಂದ ೨೧ ವರ್ಷ ವಯಸ್ಸಿನವರೆಗೆ ಮಾತ್ರ. ಇದರ ಪೂರ್ವದ ಮತ್ತು ಇದರ ನಂತರದ ಶಿಕ್ಷಣ ತ್ರಿಶಂಕು ಸ್ವರ್ಗವಾಗಿದೆ.

ಪ್ರತಿಯೊಂದು ಹಳ್ಳಿಗೆ ಅತ್ಯವಶ್ಯಕವಾದವುಗಳೆಂದರೆ ಪ್ರಾಥಮಿಕಶಾಲೆ, ಅದಕ್ಕೆ ಹೊಂದಿ ಪುಸ್ತಕಾಲಯ, ಆಟದಬೈಲು, ಗರಡಿಯಮನೆ.

ಕನ್ನಡ ಶಿಕ್ಷಕನನ್ನು ಕಡೆಗಣಿಸಿದಷ್ಟು ಬಹುಶಃ ಯಾವ ನೌಕರನನ್ನೂ ಕಡೆಗಣಿಸಿಲ್ಲ. ಸರಕಾರಿ ಪ್ಯೂನನ ಅಂತಸ್ತಿಗೂ ಪಾಪ ಈ ಮಾಸ್ತರ ಏರಿಲ್ಲ ! "ತರತರ ನಡುಗುವವನೇ ಮಾಸ್ತರ" ಎಂಬ ವ್ಯಾಖ್ಯೆ ತಪ್ಪಾಗಲಾರದು. ಅತಿ ಕಡಿಮೆ ಸಂಬಳ, ಅತಿ ಹೆಚ್ಚು ಶ್ರಮ, ಅತಿ ಕನಿಷ್ಟ ದರ್ಜೆ ಇರುವ ಏಕೈಕ ಜಾಗೆಯಿದು ! ಶ್ರೀ ಎಸ್. ಆರ್. ಕಂಠಿಯವರು ಶಿಕ್ಷಣ ಮಂತ್ರಿಯಾದಾಗ್ಗೆ ಇವರಿಗೆ

ತ್ರಿವಿಧ ಸೌಲಭ್ಯ ದೊರಕಿಸಿಕೊಟ್ಟು ಈ ಬಡಮಾಸ್ತರರು ಬದುಕುವಂತೆ ಮಾಡಿದರು. ಶಿಕ್ಷಕರಿಗೆ ಪ್ರತಿಯೊಂದು ಹಳ್ಳಿಯಲ್ಲಿ ಮನೆಗಳನ್ನು (Quarters) ಕಟ್ಟಿಸಿಕೊಡುವದು ಅತ್ಯವಶ್ಯ. ಪೋಲೀಸರಿಗೆ, ಸರಕಾರಿ ಪ್ಯೂನರಿಗೆ ಮನೆಗಳಿವೆ. ಆದರೆ, ಈ ಶಿಕ್ಷಕರಿಗಿಲ್ಲ. ಅವರಿಗೇನು ದೊಡ್ಡ ಬಂಗ್ಲೆಗಳೇ ಬೇಕಿಲ್ಲ. ಬೇರೆಡೆ ಹಣ ಸೋರುವದನ್ನು ಸ್ವಲ್ಪ ಕಡಿಮೆ ಮಾಡಿದರೆ ಶಿಕ್ಷಕನು ನೆಮ್ಮದಿಯಿಂದ ಹಳ್ಳಿಯಲ್ಲಿ ವಾಸಿಸಲು ಯೋಗ್ಯವಾದ ಮನೆಗಳನ್ನು ಆ ಹಣದಲ್ಲಿ ಕಟ್ಟಬಹುದು. ಅದೇ ರೀತಿ ಶಿಕ್ಷಕರ ವರ್ಗಾವರ್ಗಿಯು ಸಂಬಂಧ ಮಾನವೀಯತೆ ಇರಬೇಕು.

ಶಿಕ್ಷಕರು ಹೆಚ್ಚು ಅಂಜಲು ಕಾರಣವೇನೆಂದರೆ ಪ್ರಯಾಸಪಟ್ಟು ಪಡೆದ ನೌಕರಿಯನ್ನು ರಕ್ಷಿಸುವದು, ವರ್ಗಾವರ್ಗಿಯ ಉಪಟಳದಿಂದ ಪಾರಾಗುವದು, ಹೆಚ್ಚು ಮಕ್ಕಳ ಹೊಣೆ, ನೌಕರನ ಹೆಂಡತಿಯೆಂದು ದರ್ಪತೋರಿಸುವ ತನ್ನ ದುಬಾರಿ ಹೆಂಡತಿಯನ್ನು ಸಂಬಾಳಿಸುವದು ಮತ್ತು ಆತನ ಮೇಲೆ ಅವಲಂಬಿಸಿದ ಹಲವಾರು ಬಂಧುಬಳಗ. ಈ ಚಿತ್ರಣ ನೋಡಿದರೆ ಕೇವಲ ಮಾಸ್ತರ ಅಷ್ಟೇ ಅಲ್ಲ, ಆತನನ್ನು ನೋಡುವವನೂ ತರತರ ನಡುಗುವನು.

ಶಿಕ್ಷಕನ ಕಷ್ಟಗಳನ್ನು ನಿವಾರಿಸಲು ಆತನ ನೌಕರಿಯನ್ನು ಖಾಯಂಗೊಳಿಸಬೇಕು. ಪ್ರತಿ ತಿಂಗಳು ಮೊದಲನೆಯ ತಾರೀಖು ಆತನಿಗೆ ಬರತಕ್ಕ ಪಗಾರ ಆತನ ಕೈಗೆ ನೇರ ಮುಟ್ಟುವಂತಿರಬೇಕು. ಕಡ್ಡಾಯ ಕುಟುಂಬ ಯೋಜನೆ ಶಿಕ್ಷಕರಿಗೆ ಬೇಕೇಬೇಕು. ಸರಕಾರಿ ಮನೆ ಬೇಕು. ವರ್ಗಾವರ್ಗಿಯಲ್ಲಿ ಮಾನವೀಯತೆ ಬೇಕು. ೫೫ ರ ಬದಲು ೫೮ ಕ್ಕೆ ಆತನ ಸೇವಾವಧಿ ಹೆಚ್ಚಿಸಿ ಸಮಾಜದಲ್ಲಿ ಆತನಿಗೆ ವಿಶೇಷ ಗೌರವ ನೀಡಬೇಕು.

ಗುರುವು 'ಗುರು' (ದೊಡ್ಡ) ವಾಗಿಯೇ ಇರಬೇಕು–ತನ್ನ ವರ್ತನೆಯಲ್ಲಿ, ಜ್ಞಾನದಲ್ಲಿ. ಇಲ್ಲದಿದ್ದರೆ ಆತನು 'ಲಘು' ವಾಗುವನು- ಎಲ್ಲರ ಕಣ್ಣಲ್ಲಿ! ಎಲ್ಲಿಯೂ ನೌಕರಿ ಸಿಗಲಾರದವನು ಶಿಕ್ಷಕನಾಗುವನು–ಇದು ನಿಜ. ಆದಾಗ್ಯೂ ಆತ ತನ್ನ ಗುರುತ್ವ ಕಾಯ್ದುಕೊಳ್ಳಬೇಕು. "ಗುರು ಬ್ರಹ್ಮೋ, ಗುರು ವಿಷ್ಣು, ಗುರು ದೇವೋ ಮಹೇಶ್ವರಾ, ಗುರು ಸಾಕ್ಷಾತ್ ಪರಬ್ರಹ್ಮ:" "ಹರಮುನಿದರೂ ಗುರು ಕಾಯುವ"– ಈ ಮಾತುಗಳು ಸುಳ್ಳಾಗಬಾರದು. ಜ್ಞಾನದಾನಮಾಡುವವನೇ ಶಿಕ್ಷಕ, ಗುರು. ಜ್ಞಾನದ ಅರಿವನ್ನು ಆತ ಮಾಡಿಕೊಡುವನು. ಈ ದೃಷ್ಟಿಯಲ್ಲಿ ಪ್ರಾಣಿಗಳು ಸಹ ಜ್ಞಾನದ ಅರಿವನ್ನು ಮಾಡಿಕೊಡುವವು–ಉದಾ–ನಾಯಿ ನಿಷ್ಠೆಯನ್ನು, ನರಿ ಚಾಣಾಕ್ಷತನವನ್ನು, ಕಾಗೆ ಸಹಕಾರವನ್ನು ("ಕಾಗೆ ಒಂದಗುಳಕಂಡರೆ ಕರೆಯದೇ ತನ್ನ ಬಳಗವನೆಲ್ಲ" –ಬಸವಣ್ಣ ಈ ಮಾತಿನಿಂದ ಜನ ಸಮೂಹವನ್ನು ಸಮಾಜವಾದದತ್ತ ಬಡಿದೆಬ್ಬಿಸುವನು. "ಸಹನೌಭುನಕ್ತು"

ಎಂಬ ಉಪನಿಷತ್ತಿನ ಅಂಶ ಇಲ್ಲಿದೆ, ಕತ್ತೆ ಭಾರಹೊರುವುದನ್ನು), ಹಂದಿ ಸಮಾಜ ಸೇವೆಯನ್ನು, ಹಂಸ ಹಂಸಕ್ಷೀರನ್ಯಾಯವನ್ನು, ಆಕಳು ಬಡದಂಟುಕಡಿದು ಜನಕ್ಕೆ ಹಾಲುಣಿಸುವುದನ್ನು, ಕುದುರೆ ಓಟವನ್ನು, ಹೇನು ಯಾವಾಗಲೂ ಮೇಲೆಯೇ ಇರುವದನ್ನು ಕಲಿಸುವವು. ಇವೆಲ್ಲವೂ ಒಂದು ದೃಷ್ಟಿಯಲ್ಲಿ ಗುರುಗಳು. ಇದೇ ರೀತಿ ಪ್ರಕೃತಿಯು ಸಹ ಮಹಾಗುರು ಮತ್ತು ತೆರೆದಿಟ್ಟ ಪುಸ್ತಕ. ಗಿಡ ನೆರಳು ಮತ್ತು ಫಲಪುಷ್ಪಗಳನ್ನು, ಕಬ್ಬು-ಹಿಂಡಿದರೂ ಸಿಹಿ ಹಾಲನ್ನು, ಚಂದನ-ತೆಯ್ದರೂ ಗಂಧವನ್ನು, ಹೂವು-ಒಂದೇ ದಿನ ಬದುಕಿದರೂ ಸುವಾಸನೆಯನ್ನು ಬೀರುವದು. ಹಳ್ಳಗಳು-ಯಾವ್ಯಾವ ದಾರಿಯಲಿ ಹರಿದರೂ ಮುನ್ನೀರಿನಾಳವನು ಸೇರುವವು. ಭೂಮಿ-ಎಲ್ಲರಿಗೂ ಆಧಾರ. ಸೂರ್ಯ, ಚಂದ್ರ ತಮ್ಮ ಕರ್ತವ್ಯ ಪಾಲಿಸುತ್ತಿರುವವು.

ಈ ರೀತಿ ಶಿಕ್ಷಕರು ಎಡರು ತೊಡರು ಬಂದರೂ ತಮ್ಮ ಪಾಲಿನ ಕರ್ತವ್ಯ ಪಾಲಿಸಬೇಕು. ಸರ್ವಜ್ಞನ ವಚನ ಇಲ್ಲಿ ಸ್ಪಷ್ಟ:

ವಿದ್ಯೆಕೊಡಿಸದ ತಂದೆ | ಬುದ್ಧಿ ಕೊಡದ ಗುರು |
ಬಿದ್ದಾಗ ಎತ್ತಿಕೊಳ್ಳದ ತಾಯಿ |
ಈ ಮೂವರು ಬದ್ಧ ವೈರಿಗಳು ಸರ್ವಜ್ಞ ||

ಪ್ರಾಥಮಿಕ ಶಿಕ್ಷಕರ ಹೊಣೆ ಕಾಲೇಜ, ವಿಶ್ವವಿದ್ಯಾಲಯಗಳ ಶಿಕ್ಷಕರಿಗಿಂತ ಹೆಚ್ಚು. ಪ್ರಾಥಮಿಕ ಶಿಕ್ಷಕ ಮಣ್ಣಿನ ಮುದ್ದಿಯಿಂದ ಮೂರ್ತಿಮಾಡಬೇಕಾಗಿದೆ. ಅದರಲ್ಲಿ ಜೀವಕಳೆ ತುಂಬಬೇಕಾಗಿದೆ. ವಿಷಯ (ಅಭ್ಯಾಸ) ಗಳಲ್ಲಿ ಅಭಿರುಚಿ ಹುಟ್ಟಿಸಬೇಕಾಗಿದೆ. ಒಟ್ಟಿನಲ್ಲಿ ಶಿಕ್ಷಣದ ಬೀಜಗಳನ್ನು ಮಕ್ಕಳ ದೇಹ, ಬುದ್ಧಿ, ಮನ, ಆತ್ಮಗಳನ್ನು ಹಸನಮಾಡಿ ಬಿತ್ತಿ ಬೆಳೆಯಬೇಕಾಗಿದೆ.

ಟಿಳಕ ಮತ್ತು ಶ್ರೀ ಅರವಿಂದರು ಪ್ರತಿಪಾದಿಸುವಂತೆ ಪ್ರಾಥಮಿಕದಿಂದ ವಿಶ್ವವಿದ್ಯಾಲಯದ ಹಂತದವರೆಗೂ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಔದ್ಯೋಗಿಕ ಶಿಕ್ಷಣ ಕೊಡಬೇಕು. ಧಾರ್ಮಿಕ, ನೈತಿಕ ಶಿಕ್ಷಣದಿಂದ ಆತ್ಮ ಮತ್ತು ಮನಸ್ಸು ವಿಕಾಸಹೊಂದುವದು. ಸಾಮಾಜಿಕ ಶಿಕ್ಷಣದಿಂದ ತನ್ನ ಮತ್ತು ಇಡೀ ಸಮಾಜದ ಏಳ್ಗೆಯ ಗುರಿಯತ್ತ ಗಮನಹರಿಸಲು ಅನುವಾಗುವದು. ಔದ್ಯೋಗಿಕ ಶಿಕ್ಷಣದಿಂದ "ಕಾಯಕವೇ ಕೈಲಾಸ"- ಎಂಬ ಬಸವಣ್ಣನವರ ತತ್ವ ಪ್ರತಿಬಿಂಬಿತವಾಗುವದು. ವಿದ್ಯೆಪಡೆದೊಡನೆ ಎಲ್ಲರೂ ನೌಕರಿಗಾಗಿಯೇ ಪರೆದಾಡದಂತೆ ಜೀವನ ಸಾಗಿಸಲು ಯಾವುದಾದರೂ ಒಂದು ಕಾಯಕ ಧರ್ಮ ಅನುಸರಿಸಬೇಕು-ಎಂಬ ತಿಳುವಳಿಕೆ ಇಲ್ಲಿ ನೀಡಬೇಕು. ಬಡಿಗತನ, ಕಂಬಾ

ರಿಕೆ, ಕುಂಬಾರಿಕೆ, ಹೊಲಿಗೆ, ಒಕ್ಕಲುತನ-ಇವು ಶಾಲೆಯಲ್ಲಿ ಕಲಿಯುವಂಥವುಗಳಲ್ಲ. ಅವನ್ನು ಕಲಿಸಲು ಬಂದ ನೌಕರನು ನಿಜಜ್ಞಾನ ಕೊಡಲಾರ. ಅದಕ್ಕಾಗಿ ಅಂಥ ಸಾಹಸಕ್ಕೆ ಕೈಹಾಕಿ ಹಣ, ಕಾಲ, ಶ್ರಮ ವ್ಯಯಮಾಡದೇ, ದುಡಿಮೆಯತ್ತ ಅಭಿರುಚಿ ಹುಟ್ಟಿಸುವ ವಿದ್ಯೆ ಕೊಟ್ಟರೆ ಸಾಕು. ಪ್ರಾಥಮಿಕ ಹಂತ ಮುಗಿದಮೇಲೆ ವಿದ್ಯೆ ಮುಂದುವರಿಸದಿದ್ದವರು ತಮ್ಮ ಅಭಿರುಚಿಗೆ ತಕ್ಕಂತೆ ನೇರವಾಗಿ ಬಡಿಗಶಾಲೆಗೆ, ಕಂಬಾರಶಾಲೆಗೆ, ಕುಂಬಾರಶಾಲೆಗೆ, ಹೊಲಿಗೆ ಶಾಲೆಗೆ ಅಥವಾ ಸ್ವಂತ ತನ್ನ ಒಕ್ಕಲುತನದ ದಂಧೆಗೆ ಹೋಗಿ ಅದರಲ್ಲಿ ಪರಿಣತಿ ಹೊಂದಲಿ. ಆಯಾ ದಂಧೆಗೆ ಅನುಸರಿಸಿ ಅವೂ ವಿಶಿಷ್ಟವಾದ ಶಾಲೆಗಳೇ. ಅವೆಲ್ಲವನ್ನು ಪ್ರಾಥಮಿಕ ಶಾಲೆಗೆ ತರಲು ಶಕ್ಯವಿಲ್ಲ- ಹಾಗೆ ತರಲೂಬಾರದು. ಅವು ಇದ್ದಲ್ಲಿಯೇ ಅದರ ವಿದ್ಯಾರ್ಥಿ ಹೋಗಬೇಕು. ಇವೆಲ್ಲವನ್ನೂ ಒಂದೇ ಶಾಲೆಯಲ್ಲಿಯೇ ಕಲಿಸುತ್ತೇವೆ ಎಂಬುದು ಅತೀ ಮಹತ್ವಾಕಾಂಕ್ಷೆಯ ಬರೀ ಮಾತಾದೀತು.

ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಮಾಧ್ಯಮ ಆಯಾ ಸ್ಥಾನಿಕ ಭಾಷೆಯೇ ಆಗಿರಬೇಕು. ಕರ್ನಾಟಕದಲ್ಲಿ ಕನ್ನಡವೇ ಆಗಿರಬೇಕು – ಒಂದನೆಯ ವರ್ಗದಿಂದ ಏಳನೆಯ ವರ್ಗದವರೆಗೆ. ಇಲ್ಲಿ ಹಿಂದಿ, ಇಂಗ್ಲೀಷ, ಸಂಸ್ಕೃತ ಮುಂತಾದ 'ಕಡಬು'ಗಳನ್ನು ನೀರಿಳಿಯದ ಗಂಟಲಿನಲ್ಲಿ ತುರುಕುವ ಪ್ರಯಾಸ ಮಾಡಬಾರದು. ಹಸುಗೂಸುಗಳ ಉಸಿರೇ ಕಟ್ಟೀತು ಜೋಕೆ! ಟಿಳಕ ಮತ್ತು ಶ್ರೀ ಅರವಿಂದರು ಸಹ ಪರದೇಶಿ ಭಾಷೆಗಳ ಭಾರವನ್ನು ವಿದ್ಯಾರ್ಥಿಗಳ ಮೇಲೆ ಹಾಕಬಾರದೆಂದು ಪ್ರತಿಪಾದಿಸಿರುವರು. ಸ್ಥಾನಿಕ ಭಾಷೆಗಳೇ ಮಾಧ್ಯಮವಾಗಲು ಅನುಕೂಲವಾಗಲೆಂದು ಶಿಕ್ಷಣವನ್ನು ಸಂವಿಧಾನವು ರಾಜ್ಯ ಸರಕಾರಗಳಿಗೆ ಒಪ್ಪಿಸಿರುವದು. ರಾಜ್ಯಗಳಾದರೂ ಭಾಷಾವಾರ ವಿಂಗಡಣೆಯಾಗಿವೆ.

ಹಿಂದಿನಂತೆ ಒಂದನೆಯ ವರ್ಗದಿಂದ ಏಳನೆಯ ವರ್ಗದವರೆಗೆ ಸರಿಯಾದ ತರಬೇತಿ, ಪರೀಕ್ಷೆಗಳಿರಬೇಕು. ಪ್ರತಿವರುಷ ಸ್ವತಃ ವಿದ್ಯಾರ್ಥಿಗಳೇ ಪಾಸಾಗಬೇಕು, ಪಾಸುಮಾಡಬಾರದು. ಸದ್ಯದ ಪರಿಸ್ಥಿತಿಯೆಂದರೆ, ಒಂದನೆಯ ವರ್ಗಕ್ಕೆ ಹೆಸರು ಹಚ್ಚಿದರೆ ಆಯಿತು. ಮುಂದೆ ಪ್ರತಿವರುಷ ಆ ಹೆಸರು 'ಬಢತಿ'ಹೊಂದುತ್ತ ಏಳನೆಯ ವರ್ಗಕ್ಕೂ ಬಂದು ಮುಟ್ಟಬಹುದು. 'ಬಢತಿ'ಯ ಮುಖಾಂತರ ಬಂದ ಈ ಹೈಬ್ರಿಡ್ ಬೆಳೆ ಹಾಯಸ್ಕೂಲು, ಕಾಲೇಜ, ವಿಶ್ವವಿದ್ಯಾಲಯಗಳನ್ನು ತುಂಬಿವೆ. ಅಲ್ಲಿಯೂ ಇದೇ ರೀತಿ 'ಬಢತಿ' ಮೇಲೆ 'ಪದವಿ'! ಇದೆಲ್ಲ ಜನ ನೌಕರಿಗಾಗಿ ಸಾಲುಗಟ್ಟುವರು. ಸಿಗದಿದ್ದಕ್ಕೆ ಅಶಿಸ್ತು, ಅಸಂತೃಪ್ತಿ. ಒಟ್ಟನಲ್ಲಿ ಅವನತಿ. ಇವೆಲ್ಲವನ್ನೂ ಹೋಗಲಾಡಿಸಲು ಇರುವ ಒಂದೇ ಒಂದು ಉತ್ತಮಮಾರ್ಗ – ಹಿಂದಿನ ತರಹ ಕಡ್ಡಾಯ ಮತ್ತು ಕಠಿಣ

ಪರೀಕ್ಷೆಗಳು. ಪ್ರಾಥಮಿಕ ಹಂತದಲ್ಲಿಯೂ ಪ್ರತಿವರ್ಗಕ್ಕೂ ಕಠಿಣ ಪರೀಕ್ಷೆ ಇರಬೇಕು. ಕನಿಷ್ಟ ೩೫ ಅಂಕ ಮುಟ್ಟಿದವನೇ ಮುಂದಿನ ವರ್ಗ ಕಾಣಬೇಕು. ಇಲ್ಲದಿದ್ದರೆ ಮತ್ತೂ ಅದೇ ಪರೀಕ್ಷೆಗೆ ಕಟ್ಟಬೇಕು. ಅದಾಗದಿದ್ದಲ್ಲಿ ಬೇರೇ 'ದಂಧೆ' ಹುಡುಕಬೇಕು. ಏಳನೆಯ ವರ್ಗದ ಪರೀಕ್ಷೆ ಮೊದಲಿನ ತರಹದ ಮುಲ್ಕೀಪರೀಕ್ಷೆಯಾಗಬೇಕು. ಅದೊಂದು ಒಳ್ಳೆಯ ಪ್ರಾಥಮಿಕ ಘಟ್ಟದ ಕೊನೆಯ ಸೋಸುವಿಕೆ. ಸೋಸಿ ಚೊಕ್ಕ ಉಳಿದುದನ್ನೇ ಮುಂದಿನ ಹಾಯ್ ಸ್ಕೂಲು ಘಟ್ಟದ ಮೆಟ್ಟಲು ಹತ್ತಿಸಬೇಕು. ಮುಲ್ಕಿಯಲ್ಲಿ ಕನಿಷ್ಟ ಮಟ್ಟ (೩೫ ಅಂಕ)ಕ್ಕೂ ಬರಲಾರದ್ದು – ಶಿಕ್ಷಣಬಿಟ್ಟು – ವೃತ್ತಿ ಶಿಕ್ಷಣಕ್ಕೆ ಹೋಗಲಿ. ಆಗ್ಗೆ ಇನ್ನೂ ಕೇವಲ ೧೨ – ೧೪ ವಯದಲ್ಲಿ ಇರುವ ಈ ಬಾಲಕ ಬಾಲಕಿಯರು ತಮ್ಮ ಮನೆತನದ ವೃತ್ತಿಗಳಾದ ಒಕ್ಕಲುತನ, ವ್ಯಾಪಾರ, ಕಂಬಾರಿಕೆ, ಕುಂಬಾರಿಕೆ, ಬಡಿಗತನ, ನೇಕಾರಿಕೆ, ಹೊಲಿಗೆ ಮುಂತಾದ ತಮಗೆ ಅಭಿರುಚಿಯುಳ್ಳ ವೃತ್ತಿಗೆ ತರಬೇತಿಗಾಗಿ ಇಳಿಯಲಿ. ಹಾಗಾದಲ್ಲಿ ಯಾರಿಗೂ ಹೆಚ್ಚು ವ್ಯಥೆಯಿಲ್ಲ. ಏಕೆಂದರೆ ಹೆಚ್ಚು ಹಣ, ವೇಳೆ, ಶಕ್ತಿ ವ್ಯರ್ಥವ್ಯಯವಾಗಿರುವದಿಲ್ಲ. ಹೇಗಿದ್ದರೂ ಪ್ರಾಥಮಿಕ ಹಂತವನ್ನು ಎಲ್ಲರೂ ಕಡ್ಡಾಯವಾಗಿ ಮುಗಿಸಲೇಬೇಕಲ್ಲ? ಇದರ ಬದಲು ಎಲ್ಲರೂ ಎಮ್. ಎ., ಎಮ್. ಎಸ್‌ಸಿ. ಮುಂತಾದ ಪದವಿಗಳನ್ನು ಹೊತ್ತುಕೊಂಡು ನಿರುದ್ಯೋಗಿಯಾಗಿ ಅಲೆದಾಡುವದು ಎಷ್ಟು ಹಾನಿಕಾರಕ? ಅಷ್ಟೊಂದು ಹಂತಕ್ಕೆ ಎಲ್ಲ ರೀತಿಯಿಂದಲೂ (ಹಣ, ಶ್ರಮ) ಪ್ರಯಾಸಪಟ್ಟು ಹೋದವರಿಗೆ– ಒಕ್ಕಲುತನ, ವ್ಯಾಪಾರಕ್ಕೆ ಹೋಗು ಎಂದು ಹೇಳುವದು ಎಷ್ಟು ಹಾಸ್ಯಾಸ್ಪದ. ಹೇಳುವವರೇ ಮೊದಲು ಹೋಗಲಾರರು. ಒಕ್ಕಲುತನ, ವ್ಯಾಪಾರ ಮುಂತಾದ ವೃತ್ತಿಗಳಿಗೇ ಮರಳಿ ಹೋಗಬೇಕಾದರೆ – ಎಂ. ಎ, ಮುಂತಾದ ಪದವಿಗಳ ತನಕ ಬರುವ 'ಸರ್ಕಸ್ಸು' ಏತಕ್ಕೆ?

ಪ್ರಾಥಮಿಕ ಹಂತದಲ್ಲಿ ಪರೀಕ್ಷೆ ಕಠಿಣ ಮತ್ತು ಕಡ್ಡಾಯವಾದರೆ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುವದು, ಕೇವಲ ಮುಂದುವರಿದ ಸಮಾಜದವರು ಶಿಕ್ಷಣದಲ್ಲಿ ಮುಂದುವರಿಯುವರು -ಎಂಬ ಟೀಕೆ ಬರುವದು ಸ್ವಾಭಾವಿಕ. ಮುಂದುವರೆದ ಸಮಾಜದವರು ನೂರಕ್ಕೆ ೫೦. ೬೦, ೭೦ ರ ಮೇಲೆ ಅಂಕ ಪಡೆದರೆ ಹಿಂದುಳಿದವರು ಕನಿಷ್ಟ ಮಟ್ಟ ೩೫ ನ್ನಾದರೂ ಮುಟ್ಟಲೇಬೇಕು. ಈ ಕನಿಷ್ಟ ಮಟ್ಟ ಮುಟ್ಟಲಾರದವರಿಗೆ ಯಾರಿಗೂ ಯಾವುದೇ ರೀತಿಯಿಂದ ಮುಂದಿನ ವರ್ಗಕ್ಕೆ ಅನುವುಮಾಡಿಕೊಡಬಾರದು. ಹಿಂದುಳಿದವರು ಪರೀಕ್ಷೆಯಲ್ಲಿ ಕನಿಷ್ಟ ಅಂಕ (೩೫) ಪಡೆದು ಪಾಸಾದರೂ– ಮುಂದೆ ಅವರೇನು ನೌಕರಿಯ ಸಂಬಂಧ ಮುಂದುವರಿದವರೊಡನೆ ಸ್ಪರ್ಧಿಸಬೇಕಿಲ್ಲವಲ್ಲ? ಹಿಂದುಳಿದವರಿಗೆ ವಿಶೇಷ ಜಾಗೆಗಳು ಸಂವಿಧಾನಾತ್ಮಕವಾಗಿಯೇ ಕಾಯ್ದಿರಿಸಲಾಗಿವೆ.

ಒಟ್ಟಿನಲ್ಲಿ ಪ್ರಾಥಮಿಕ ಶಿಕ್ಷಣ – ಸುಭದ್ರವಾಗಿ ಭದ್ರಬುನಾದಿಯಾದರೆ ಮುಂದಿನ ಶಿಕ್ಷಣದ ಮಹಲು ಸುರಕ್ಷಿತವಾಗಿ ಶೋಭಿಸುವದು. ಇಲ್ಲಿ ಒಳ್ಳೆಯದಾದರೆ ಎಲ್ಲೆಡೆಗೂ ಒಳ್ಳೆಯದೇ. ಇಲ್ಲಿ ಕೆಟ್ಟರೆ ಎಲ್ಲೆಡೆಯೂ ಕೆಟ್ಟಂತೆಯೆ. ಈ ಸಂಬಂಧ ಎಲ್ಲರೂ ಎಷ್ಟು ಎಚ್ಚರವಹಿಸಿದರೂ ಕಡಿಮೆಯೇ.

ಹತ್ತನೇ ವರ್ಗದ ವಿದ್ಯಾರ್ಥಿಗಳ ಬುದ್ಧಿಶಕ್ತಿ ಮತ್ತು ಅಭಿರುಚಿಗಳ ನಡುವಣ ಸಂಬಂಧ*

(ಒಂದು ಅಧ್ಯಯನ)

● ಎ. ಎಸ್. ಧರಣೇಂದ್ರಯ್ಯ ಮತ್ತು
ಕು. ಇಂದಿರಾ ಆರ್. ಪಾಟೀಲ

ಪೀಠಿಕೆ :

ವ್ಯಕ್ತಿಯಲ್ಲಿ ಕ್ರಮಬದ್ಧವಾದ ಜೀವನ ರೀತಿನೀತಿಗಳನ್ನು ರೂಪಿಸುವಲ್ಲಿ ಬುದ್ಧಿಶಕ್ತಿ ಮತ್ತು ಅಭಿರುಚಿಗಳ ಪಾತ್ರ ಮಹತ್ವಪೂರ್ಣವಾದುದು. ಇದಕ್ಕೆ ಸಂಬಂಧಿಸಿದಂತೆ ಈ ಎರಡು ಮಾನಸಿಕ ಗುಣಲಕ್ಷಣಗಳ ನಡುವೆ ಸ್ವಲ್ಪ ಮಟ್ಟಿನ ಸಾಹಚರ್ಯ ಇರುವುದನ್ನು ನಾವು ಗುರುತಿಸಬಹುದು. ತನ್ನ ಜೀವನದಲ್ಲಿ ಆಗಾಗ್ಗೆ ಕೆಲವು ಗುರುತರವಾದ ಆಯ್ಕೆಗಳನ್ನು ವ್ಯಕ್ತಿಯು ಮಾಡಬೇಕಾಗುತ್ತದೆ-ಉದಾಹರಣೆಗೆ, ಒಂದು ವೃತ್ತಿಯ ಅಥವಾ ಉದ್ಯೋಗದ ಆಯ್ಕೆ. ಅಂತಹ ಸಂದರ್ಭಗಳಲ್ಲಿ ಆತನು ಒಂದಿಲ್ಲ ಒಂದು ಸಮಸ್ಯೆಯನ್ನು ಎದುರಿಸಬೇಕಾಗು

---

* ಭಾರತೀಯ ಅನ್ವಯ ಮನೋವಿಜ್ಞಾನ ಸಂಘ (IAAP) ದ ಹದಿಮೂರನೆಯ ವಾರ್ಷಿಕ ಸಮ್ಮೇಳನದಲ್ಲಿ ಸಾದರಪಡಿಸಿದ ಸಂಶೋಧನಾ ಲೇಖನದ ಕನ್ನಡ ರೂಪಾಂತರ.

ತ್ತದೆ. ಆತನು ಮಾಡುವ ಆಯ್ಕೆಯು ಅವನ ಬುದ್ಧಿಶಕ್ತಿ ಮತ್ತು ಅಭಿರುಚಿಗೆ ಅನುಗುಣವಾಗಿದ್ದರೆ, ತನ್ನ ಪ್ರತ್ಯಾವರಣದೊಂದಿಗೆ ಉತ್ತಮ ಹೊಂದಾಣಿಕೆ ಸಾಧಿಸುವಲ್ಲಿ ಆತನಿಗೆ ಹೆಚ್ಚು ಅನುಕೂಲಕರವಾದಂತಾಗುತ್ತದೆ. ಯಾವುದೇ ಕಾರ್ಯಸಾಧನೆಯಲ್ಲಿ ಬುದ್ಧಿಶಕ್ತಿ ಮತ್ತು ಅಭಿರುಚಿಗಳ ನಡುವೆ ಉತ್ತಮ ಸಂಬಂಧವಿದ್ದರೆ, ವ್ಯಕ್ತಿಯು ಸಾರ್ಥಕತೆ ಪಡೆಯುವುದರ ಜೊತೆಗೆ ಸಂತೃಪ್ತಿಯನ್ನೂ ಪಡೆಯುತ್ತಾನೆ. ಅಂದಮೇಲೆ ಒಂದು ಕಾರ್ಯಸಾಧನೆಯಲ್ಲಿ ಕೇವಲ ಬುದ್ಧಿಶಕ್ತಿಯಾಗಲೀ ಅಥವಾ ಅಭಿರುಚಿಯಾಗಲೀ ಅಷ್ಟಾಗಿ ಪ್ರಭಾವ ಪೂರ್ಣವಾಗಲಾರದು. ಒಂದು ಪಕ್ಷ ಪ್ರಭಾವಬಿದ್ದರೂ, ಸಾಧನೆಯ ಮಟ್ಟ ಅಷ್ಟು ಉತ್ತಮವಾಗಿರಲಾರದು.

ವ್ಯಕ್ತಿಯ ಜೀವನದಲ್ಲಿ ಬುದ್ಧಿಶಕ್ತಿ ಮತ್ತು ಅಭಿರುಚಿಗಳು ನಿರ್ವಹಿಸುವ ಪಾತ್ರದ ಮಹತ್ವದಿಂದಾಗಿ, ಈ ಎರಡು ಮಾನಸಿಕ ಗುಣಲಕ್ಷಣಗಳ ನಡುವೆ ಇರಬಹುದಾದ ಸಂಬಂಧದ ಪ್ರಶ್ನೆಯು ಅನೇಕ ಮನೋವಿಜ್ಞಾನಿಗಳು ಮತ್ತು ಶಿಕ್ಷಣ ತಜ್ಞರ ಗಮನವನ್ನು ಸೆಳೆದಿದೆ. ಅವರ ಸಂಶೋಧನಾ ಕಾರ್ಯಕ್ಕೆ ಇದೊಂದು ಫಲವತ್ತಾದ ಕ್ಷೇತ್ರವಾಗಿ ಪರಿಣಮಿಸಿದೆ. ಹಲವು ಸಂಶೋಧಕರ ಪ್ರಯತ್ನದ ಫಲವಾಗಿ ಇಂದು ಬುದ್ಧಿಶಕ್ತಿ ಮತ್ತು ಅಭಿರುಚಿಗಳ ನಡುವಣ ಸಂಬಂಧದ ಬಗ್ಗೆ ಹೆಚ್ಚು ಬೆಳಕು ಬೀಳುತ್ತಿದೆ.

ಅಭಿರುಚಿ ಅಳತೆಯ ಮೂಲಪುರುಷನೆನಿಸಿರುವ ಎಡ್ವರ್ಡ್ ಸ್ಟ್ರಾಂಗನು ಮೇಲ್ಕಂಡ ಸಮಸ್ಯೆಯ ಬಗ್ಗೆ ನಡೆಸಿದ ಸಂಶೋಧನೆಯಿಂದಾಗಿ, ಬುದ್ಧಿಶಕ್ತಿ ಮತ್ತು ಅಭಿರುಚಿಗಳ ನಡುವೆ ಸಂಬಂಧವಿರುವ ತಥ್ಯಾಂಶ ಬೆಳಕಿಗೆ ಬಂದಿತು. ಅಂತಹ ಸಂಬಂಧ ಒಂದೇ ರೀತಿಯದಾಗಿರದೆ, ವಿವಿಧ ರೀತಿಯ ಅಭಿರುಚಿಗಳಿಗನುಗುಣವಾಗಿ ವ್ಯತ್ಯಾಸ ಹೊಂದುತ್ತದೆ. ಅವುಗಳ ಸಹಸಂಬಂಧ (Correlation) $+0\cdot40$ ರಿಂದ $-0\cdot40$ ರ ವರೆಗೆ ಅಂತರಿತವಾಗುತ್ತದೆ. ಉದಾಹರಣೆಗೆ, ಬುದ್ಧಿಶಕ್ತಿಯು ವೈಜ್ಞಾನಿಕ ಮತ್ತು ಭಾಷಾತ್ಮಕ ಅಭಿರುಚಿಗಳೊಂದಿಗೆ ಧನ (Postive) ಸಹಸಂಬಂಧವನ್ನೂ ಸಾಮಾಜಿಕ ಮತ್ತು ವ್ಯಾಪಾರ ಸಂಪರ್ಕಾಭಿರುಚಿಗಳೊಂದಿಗೆ ಋಣ (Negative) ಸಹ ಸಂಬಂಧವನ್ನೂ ಹೊಂದಿರುವುದು ಕಂಡುಬಂದಿದೆ. ಬುದ್ಧಿಶಕ್ತಿಗೆ ಕೆಲವು ಅಭಿರುಚಿಗಳೊಂದಿಗೆ ಯಾವುದೇ ರೀತಿಯ ಸಂಬಂಧವಿಲ್ಲವೆಂಬುದನ್ನು ಕಾರ್ಟರನ ಸಂಶೋಧನೆ ಬೆಳಕಿಗೆ ತಂದಿದೆ. ಇದೇರೀತಿ, ಶಾಫಟರ್, ಅಲೆಕ್ಸಾಂಡರ್, ರೀಡ್ ಮುಂತಾದವರ ಅಧ್ಯಯನಗಳು, ಬುದ್ಧಿಶಕ್ತಿ ಮತ್ತು ಕೆಲವು ಅಭಿರುಚಿಗಳ ನಡುವಣ ಸಹಸಂಬಂಧವನ್ನು ಸ್ಪಷ್ಟಪಡಿಸಿವೆ.

ಅಧ್ಯಯನದ ಉದ್ದೇಶ :

ಬುದ್ಧಿಶಕ್ತಿ ಮತ್ತು ಅಭಿರುಚಿಗಳ ನಡುವೆ ಇರುವ ಸಂಬಂಧದ ಪುನರ್ಪರಿಶೀಲನೆಯೇ ಈ ಅಧ್ಯಯನದ ಪ್ರಮುಖ ಉದ್ದೇಶ. ಪ್ರಾಸಂಗಿಕವಾಗಿ, ವಯಸ್ಸು ಮತ್ತು ಅಭಿರುಚಿಗಳು ಮತ್ತು ಸಾಮಾಜಿಕ–ಆರ್ಥಿಕ ಅಂತಸ್ತು ಮತ್ತು ಅಭಿರುಚಿಗಳ ನಡುವಣ ಸಂಬಂಧದ ಬಗ್ಗೆಯೂ ತಿಳಿಯುವ ಪ್ರಯತ್ನ ಮಾಡಲಾಗಿದೆ. ಇಷ್ಟಲ್ಲದೆ, ಹೊಸದಾಗಿ ನಮ್ಮ ದೇಶದಲ್ಲಿ ರಚಿತವಾಗಿರುವ ಎನ್. ಸಿ. ಇ. ಆರ್. ಟಿ ಅಭಿರುಚಿ ಅಂಶಮಾಲೆಯು ಎಂತಹ ಫಲಿತಾಂಶಗಳನ್ನು ನೀಡಬಲ್ಲದು ಮತ್ತು ಹಾಗೆ ದೊರೆತ ಫಲಿತಾಂಶಗಳು ಬುದ್ಧಿಶಕ್ತಿಯೊಂದಿಗೆ ಎಷ್ಟರಮಟ್ಟಿನ ಸಂಬಂಧವನ್ನು ಹೊಂದಿರುತ್ತವೆ ಎಂಬ ಅಂಶವನ್ನೂ ತಿಳಿಯುವ ಉದ್ದೇಶವಿದೆ.

ಈ ಉದ್ದೇಶ ಸಾಧನೆಗಾಗಿ ರೂಪಿಸಲಾದ ಶೂನ್ಯಪ್ರಾಕ್ಕಲ್ಪನೆ (Null–hypothesis) ಈ ರೀತಿ ಇದೆ : **"ಹತ್ತನೇ ವರ್ಗದ ವಿದ್ಯಾರ್ಥಿಗಳ ಬುದ್ಧಿಶಕ್ತಿ ಮತ್ತು ಉದ್ಯೋಗಾಭಿರುಚಿಗಳ ನಡುವೆ ಏನೂ ಸಂಬಂಧವಿಲ್ಲ"**

ಈ ಪ್ರಾಕ್ಕಲ್ಪನೆಯೇ ಇಲ್ಲಿ ಪ್ರಧಾನವಾದುದು. ಆದರೂ ದೊರೆತ ತಥ್ಯಾಂಶಗಳಲ್ಲಿ ಅಂತರ್ಗತವಾಗಿರಬಹುದಾದ ಕೆಲವು ಮಾಹಿತಿಗಳನ್ನು ಪ್ರಕಟಪಡಿಸಲು ಅನುಕೂಲವಾಗುವಂತೆ ಮತ್ತೆರಡು ಶೂನ್ಯ ಪ್ರಾಕ್ಕಲ್ಪನೆಗಳನ್ನು ರೂಪಿಸಲಾಯಿತು.

೧) "ಹತ್ತನೇ ವರ್ಗದ ವಿದ್ಯಾರ್ಥಿಗಳ ವಯಸ್ಸು ಮತ್ತು ಉದ್ಯೋಗಾಭಿರುಚಿಗಳ ನಡುವೆ ಏನೂ ಸಂಬಂಧವಿಲ್ಲ"

೨) "ಸಾಮಾಜಿಕ–ಆರ್ಥಿಕ ಅಂತಸ್ತಿನಲ್ಲಿ ಕೆಳ, ಮಧ್ಯಮ ಮತ್ತು ಮೇಲ್ವರ್ಗಗಳಿಗೆ ಸೇರಿದ ಹತ್ತನೇ ವರ್ಗದ ವಿದ್ಯಾರ್ಥಿಗಳ ಉದ್ಯೋಗಾಭಿರುಚಿಗಳಲ್ಲಿ ಏನೂ ವ್ಯತ್ಯಾಸವಿಲ್ಲ."

ಬಳಸಲಾದ ಸಾಧನಗಳು :

ಈ ಅಧ್ಯಯನದಲ್ಲಿ ಎರಡು ಮನೋವೈಜ್ಞಾನಿಕ ಸಾಧನಗಳನ್ನು ಬಳಸಲಾಗಿದೆ. ಅವುಗಳಲ್ಲಿ ರೇವನನ ಪ್ರಗಾಮೀಮಾತೃಕೆ (Raven's Progressive Matrices) ಗಳ ಪರೀಕ್ಷೆಯನ್ನು ಬುದ್ಧಿಶಕ್ತಿಯ ಅಳತೆಗಾಗಿಯೂ; ಎನ್. ಸಿ.

ಇ. ಆರ್. ಟಿ. ಅಭಿರುಚಿ ಅಂಶಮಾಲೆ* (ಕನ್ನಡ ರೂಪ) ಯನ್ನು ಉದ್ಯೋಗಾಭಿರುಚಿಗಳ ಅಳತೆಗೂ ಬಳಸಲಾಗಿದೆ.

ರೇವನನ ಪ್ರಗಾಮೀ ಮಾತೃಕೆಗಳ ಪರೀಕ್ಷೆ (Standard) ಯಲ್ಲಿ ಎ. ಬಿ. ಸಿ. ಡಿ. ಇ ಎಂಬ ಐದು ವಿಭಾಗಗಳಿವೆ. ಪ್ರತಿಯೊಂದು ವಿಭಾಗದಲ್ಲಿಯೂ ಹನ್ನೆರಡು ಆಕೃತಿಕ ಸಮಸ್ಯೆಗಳಿವೆ. ಅಂದರೆ ಅದರಲ್ಲಿ ಒಟ್ಟು ೬೦ ಸಮಸ್ಯೆಗಳಿವೆ. ಈ ವಿಭಾಗಗಳನ್ನು ಕಠಿಣತೆಯ ಆಧಾರದ ಮೇಲೆ ಹೊಂದಿಸಲಾಗಿದೆ. ಎ ಮತ್ತು ಬಿ ವಿಭಾಗಗಳು ಸಾಪೇಕ್ಷವಾಗಿ ಸುಲಭವೆನಿಸಿದರೆ, ಸಿ, ಡಿ ಮತ್ತು ಇ ವಿಭಾಗಗಳು ಸಾಪೇಕ್ಷವಾಗಿ ಹೆಚ್ಚು ಕಠಿಣವೆನಿಸುತ್ತವೆ. ಪರೀಕ್ಷಾಪುಸ್ತಿಕೆಯ ಪ್ರತಿ ಪುಟದಲ್ಲೂ ಒಂದೊಂದು ಆಕೃತಿ ವಿನ್ಯಾಸವನ್ನು ಕೊಡಲಾಗಿದೆ. ಆದರೆ ಅದರಲ್ಲಿ ಒಂದು ಕಡೆ ವಿನ್ಯಾಸ ಲೋಪವಾಗಿರುತ್ತದೆ. ಅದೇ ಆಕೃತಿಯ ಕೆಳಭಾಗದಲ್ಲಿ, ಆರರಿಂದ ಎಂಟು ವಿವಿಧ ವಿನ್ಯಾಸವುಳ್ಳ ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಮೇಲಿನ ಆಕೃತಿಯಲ್ಲಿ ಲೋಪವಾದ ಭಾಗಕ್ಕೆ ಸರಿಯಾಗಿ ತುಂಬಿಕೊಳ್ಳುತ್ತವೆ. ಪರೀಕ್ಷಾರ್ಥಿಯು, ಆಕೃತಿಯನ್ನೂ, ಪರ್ಯಾಯ ಉತ್ತರಗಳನ್ನೂ ಬಹಳ ಎಚ್ಚರಿಕೆಯಿಂದ ಪರಿಶೀಲಿಸಿ, ಸರಿಯಾದ ಉತ್ತರವನ್ನು ಆರಿಸಿಕೊಂಡು ಆ ಉತ್ತರವನ್ನು ಸೂಚಿಸುವ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಸಂಬಂಧಪಟ್ಟ ಸಂಖ್ಯೆ ಎದುರು ಬರೆಯಬೇಕಾಗುತ್ತದೆ. ಹೀಗೆ ಅವನು ಎಲ್ಲಾ ಸಮಸ್ಯೆಗಳನ್ನು ಬಿಡಿಸಬೇಕಾಗುತ್ತದೆ. ಯಾವುದಾದರೂ ಸಮಸ್ಯೆ ಅತಿ ಕಷ್ಟವೆನಿಸಿದರೆ ಮುಂದಿನ ಸಮಸ್ಯೆಗೆ ಅವನು ಹೋಗಬಹುದು. ಈ ಪರೀಕ್ಷೆಗೆ ಉತ್ತರಿಸಲು ಯಾವುದೇ ಕಾಲಮಿತಿಯಿಲ್ಲ. ಆದರೂ ಹೆಚ್ಚೆನಿಸಿದರೆ ೪೦ – ೪೫ ನಿಮಿಷಗಳಲ್ಲಿ ಪರೀಕ್ಷಾರ್ಥಿಗಳು ಇದನ್ನು ಪೂರ್ತಿಮಾಡಬಲ್ಲರು.

ಪಡೆದ ಪ್ರತಿದರ್ಶ (Sample) :

ಧಾರವಾಡ ನಗರದ ವಿವಿಧ ಪ್ರದೇಶಗಳಲ್ಲಿರುವ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳ ಒಂದು ಪ್ರಾತಿನಿಧಿಕ ಪ್ರತಿದರ್ಶವನ್ನು ತೆಗೆದುಕೊಳ್ಳಲಾಯಿತು. ಪ್ರತಿದರ್ಶದ ಒಟ್ಟು ಸಂಖ್ಯೆ ೨೮೪. ಇದಕ್ಕಾಗಿ ಆಯ್ದ ಪ್ರೌಢಶಾಲೆಗಳೆಂದರೆ, ವಿಶ್ವವಿದ್ಯಾಲಯ ಸಾರ್ವಜನಿಕಶಾಲೆ, ಆರ್. ಎಲ್. ಎಸ್. ಪ್ರೌಢಶಾಲೆ, ಕೆ. ಇ. ಬೋರ್ಡ ಪ್ರೌಢಶಾಲೆ, ಭಾರತ್ ಪ್ರೌಢಶಾಲೆ, ಕರ್ನಾಟಕ ಪ್ರೌಢಶಾಲೆ ಮತ್ತು ಎನ್. ಎಂ. ಪ್ರೌಢಶಾಲೆ. ಈ ಎಲ್ಲಾ ಪ್ರೌಢಶಾಲೆಗಳಲ್ಲಿ ಕೆಲವು ತರಗತಿಗಳ ವಿದ್ಯಾರ್ಥಿಗಳನ್ನು ಆರಿಸಿಕೊಂಡದ್ದರಿಂದ, ಧಾರವಾಡದ

* ಈ ಅಂಶಮಾಲೆಯ ಒಂದು ಸ್ಥೂಲ ವಿವರಣೆಗೆ (ನೋಡಿ) ಎ. ಎಸ್. ಧಣೀಂದ್ರಯ್ಯ, 'ಅಭಿರುಚಿಗಳ ಅಳತೆ' ಮಾನವಿಕ ಭಾರತಿ, ಸಂಪುಟ ೧, ಸಂಚಿಕೆ ೧, ಜನೇವರಿ, ೧೯೭೭.

ವಿವಿಧ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಪ್ರತಿದರ್ಶದಲ್ಲಿ ಸಾಕಷ್ಟು ಪ್ರಾತಿನಿಧ್ಯ ದೊರೆತಿದೆ ಎಂಬುದು ನಮ್ಮ ನಂಬಿಕೆ.

ಪರೀಕ್ಷಾ ಪ್ರಯೋಗ :

ಪೂರ್ವಯೋಜಿತ ಕಾರ್ಯಕ್ರಮಕ್ಕನುಗುಣವಾಗಿ, ಮೊದಲೇ ಆಯ್ದ ತರಗತಿಗಳ ವಿದ್ಯಾರ್ಥಿಗಳಿಗೆ, ಅವರವರ ಶಾಲೆಗಳಲ್ಲಿಯೇ ಬುದ್ಧಿಶಕ್ತಿ ಮತ್ತು ಅಭಿರುಚಿ ಪರೀಕ್ಷೆಗಳನ್ನು ಕೊಡಲಾಯಿತು. ಇದಕ್ಕಾಗಿ ಎರಡು ಅಧಿವೇಶನಗಳನ್ನು ನಡೆಸಲಾಯಿತು. ಮೊದಲನೆಯ ಅಧಿವೇಶನದಲ್ಲಿ ರೇವನನ ಪ್ರಗಾಮೀ ಮಾತೃಕೆಗಳ ಪರೀಕ್ಷೆಯನ್ನೂ, ಎರಡನೆಯ ಅಧಿವೇಶನದಲ್ಲಿ ಎನ್. ಸಿ. ಇ. ಆರ್. ಟಿ. ಅಭಿರುಚಿ ಅಂಶಮಾಲೆಯನ್ನೂ ಕೊಟ್ಟು ಉತ್ತರಗಳನ್ನು ಸಂಗ್ರಹಿಸಲಾಯಿತು. ಎರಡು ಅಧಿವೇಶನಗಳನ್ನು ಬೇರೆ ಬೇರೆ ದಿನಗಳಲ್ಲಿ ನಡೆಸಲಾಯಿತು. ಈ ಪರೀಕ್ಷೆಗಳನ್ನು ಸುಸೂತ್ರವಾಗಿ ಕೊಡುವಲ್ಲಿ ವಿವಿಧ ಶಾಲೆಗಳ ಮುಖ್ಯೋಪಾಧ್ಯಾಯರುಗಳೂ, ಸಂಬಂಧಪಟ್ಟ ವರ್ಗೋಪಾಧ್ಯಾಯರುಗಳೂ ತುಂಬಾ ಸಹಕಾರ ನೀಡಿದರು. ಅನಂತರ ಪಡೆದ ಉತ್ತರಗಳ ಮೌಲ್ಯಮಾಪನ ಮಾಡಿ, ಅಂಕಿ ಅಂಶ ವಿಶ್ಲೇಷಣೆಗೆ ಒಳಪಡಿಸಲಾಯಿತು.

ಫಲಿತಾಂಶ ವಿಶ್ಲೇಷಣೆ :

ಮೊದಲು, ಪ್ರಮಾಣಿತ ಅಂಕನ ಕುಂಜಿ (Scoring key) ಯ ನೆರವಿನಿಂದ, ಬುದ್ಧಿಶಕ್ತಿ ಪರೀಕ್ಷೆಗೆ ಕೊಡಲಾದ ಉತ್ತರಗಳ ಮೌಲ್ಯಮಾಪನಮಾಡಿ ಪ್ರಾಪ್ತಾಂಕ (Scores) ಗಳನ್ನು ಪಡೆಯಲಾಯಿತು. ಅನಂತರ ದೊರೆತ ಪ್ರಾಪ್ತಾಂಕಗಳ ಆವೃತ್ತಿ ವಿತರಣೆಯೊಂದನ್ನು (ಕೋಷ್ಟಕ ೧) ರಚಿಸಿ, ಸರಾಸರಿ (mean) ಮತ್ತು ಮಾನಕ ವಿಚಲನ (standard deviation)ಗಳನ್ನು ಕಂಡು ಹಿಡಿಯಲಾಯಿತು.

ಕೋಷ್ಟಕ ೧ : ರೇವನನ ಪ್ರಗಾಮೀ ಮಾತೃಕೆಗಳ ಪರೀಕ್ಷೆಯ ಪ್ರಾಪ್ತಾಂಕಗಳಿಂದ ಪಡೆದ ಆವೃತ್ತಿ ವಿತರಣ, ದೊರೆತ ಸರಾಸರಿ ಮತ್ತು ಮಾನಕ ವಿಚಲನ ಅಂಕಗಳನ್ನೂ ಕೆಳಗೆ ಕಾಣಿಸಲಾಗಿದೆ. (ಪರೀಕ್ಷಾರ್ಥಿಗಳು ಒಟ್ಟು ೨೮೪)

ವರ್ಗಾಂತರ	ಆವೃತ್ತಿ
೫—೯	೧
೧೦—೧೪	೮
೧೫—೧೯	೯
೨೦—೨೪	೧೭
೨೫—೨೯	೧೮
೩೦—೩೪	೩೫
೩೫—೩೯	೪೩
೪೦—೪೪	೭೬
೪೫—೪೯	೪೨
೫೦—೫೪	೩೨
೫೫—೫೯	೩
ಒಟ್ಟು	೨೮೪

ಸರಾಸರಿ = ೩೬.೭೨

ಮಾನಕ ವಿಚಲನ = ೧೨

ದೊರೆತ ಮಾನಕ ವಿಚಲನ [೧೨] ದ ಆಧಾರದ ಮೇಲೆ ಪರೀಕ್ಷಾರ್ಥಿಗಳಲ್ಲಿ ಅತಿಮೇಲ್ಮಟ್ಟ ಮತ್ತು ಕೆಳಮಟ್ಟದ ಎರಡು ಗುಂಪುಗಳನ್ನು ಆಯ್ದುಕೊಳ್ಳಲಾಯಿತು. ಅಂದರೆ +೧σ ಕ್ಕಿಂತ ಮೇಲಿದ್ದವರೆಲ್ಲರೂ ಮೇಲ್ಮಟ್ಟದ ಗುಂಪಿಗೆ ಸೇರಿದರೆ, −σ ಕ್ಕಿಂತ ಕೆಳಗಿದ್ದವರೆಲ್ಲ ಕೆಳಮಟ್ಟದ ಗುಂಪಿಗೆ ಸೇರಿದರು. ಈ ಗುಂಪುಗಳಲ್ಲಿ ಒಂದೊಂದರಲ್ಲೂ ೪೦ ಮಂದಿ ವಿದ್ಯಾರ್ಥಿಗಳಿದ್ದರು.

ಅನಂತರ ಈ ಎರಡು ಗುಂಪಿನ ವಿದ್ಯಾರ್ಥಿಗಳು ಅಭಿರುಚಿ ಅಂಕಮಾಲೆಗೆ ಕೊಟ್ಟಿದ್ದ ಉತ್ತರಗಳ ಮೌಲ್ಯಮಾಪನವನ್ನು ಮಾಡಿ, ಎರಡು ಗುಂಪಿಗೂ ಪ್ರತ್ಯೇಕ ಪ್ರಾಪ್ತಾಂಕಗಳನ್ನು ಪಡೆಯಲಾಯಿತು. ಇವಕ್ಕಾಗಿ ಆರು ಅಭಿರುಚಿ ಅಂಕನ ಕುಂಜಿಗಳನ್ನು ಬಳಸಲಾಯಿತು. ಅವು ಆರ್ಥಿಕ (೦೧), ನ್ಯಾಯ-ಆಡಳಿತ (೦೩), ತಾಂತ್ರಿಕ (೦೪), ವೈಜ್ಞಾನಿಕ (೦೬), ವೈದ್ಯಕೀಯ (೧೦) ಮತ್ತು ಶಿಕ್ಷಣ (೧೧) ಈ ಉದ್ಯೋಗ ಕ್ಷೇತ್ರಗಳಿಗೆ ಸಂಬಂಧಪಟ್ಟ ಅಂಕನ ಕುಂಜಿಗಳು. ಇಲ್ಲಿ ಆವರಣಗಳಲ್ಲಿ ಕೊಡಲಾಗಿರುವ ಸಂಖ್ಯೆಗಳು ಆಯಾಯ

ಉದ್ಯೋಗ ಕ್ಷೇತ್ರಕ್ಕೆ ಕೊಡಲಾಗಿರುವ ಸಂಕೇತ ಸಂಖ್ಯೆಗಳು. ಈ ಆರು ಅಂಕನ ಕುಂಜಿಗಳನ್ನು ಪ್ರತ್ಯೇಕವಾಗಿ ಎರಡು ಗುಂಪುಗಳ ಉತ್ತರಗಳ ಮೌಲ್ಯಮಾಪನದಲ್ಲಿ ಬಳಸಿ, ವಿವಿಧ ಅಭಿರುಚಿ ಸೂಚಿಸುವ ಪ್ರಾಪ್ತಾಂಕಗಳನ್ನು ಪಡೆಯಲಾಯಿತು. ಅನಂತರ ಆ ಪ್ರಾಪ್ತಾಂಕಗಳನ್ನು ಪ್ರತಿಶತಾಂಶ (Percentiles) ಗಳಾಗಿ ಮಾರ್ಪಡಿಸಿ, ಎರಡು ಗುಂಪುಗಳನ್ನು ಪರಸ್ಪರ ಹೋಲಿಸಲಾಯಿತು. (ಕೋಷ್ಟಕ ೨) ಹೋಲಿಕೆಯು ಹೆಚ್ಚು ಸ್ಪಷ್ಟವಾಗಲು ಅನುಕೂಲವಾಗುವಂತೆ,

ಕೋಷ್ಟಕ ೨ : ಮೇಲ್ಮಟ್ಟ ಮತ್ತು ಕೆಳಮಟ್ಟದ ಬುದ್ಧಿಶಕ್ತಿಯ ವಿದ್ಯಾರ್ಥಿಗಳ ವಿವಿಧ ಅಭಿರುಚಿಗಳನ್ನು ಸೂಚಿಸುವ ಪ್ರತಿಶತಾಂಶಗಳು.

ಉದ್ಯೋಗ ಕ್ಷೇತ್ರ	ಮೇಲ್ಮಟ್ಟದ ಬುದ್ಧಿಶಕ್ತಿ	ಕೆಳಮಟ್ಟದ ಬುದ್ಧಿಶಕ್ತಿ
ಆರ್ಥಿಕ (೦೧) ...	೪೨	೪೧
ನ್ಯಾಯ-ಆಡಳಿತ (೦೩) ...	೪೧	೪೩
ತಾಂತ್ರಿಕ (೦೪) ...	೪೪	೩೭
ವೈಜ್ಞಾನಿಕ (೦೬)	೬೫	೩೯
ವೈದ್ಯಕೀಯ (೧೦) ...	೪೨	೩೯
ಶಿಕ್ಷಣ (೧೧) ...	೪೧	೪೦

ದೊರೆತ ಎರಡು ಗುಂಪುಗಳ ಪ್ರತಿಶತಾಂಶಗಳನ್ನು ಒಂದೇ ಗ್ರಾಫ್ ಮೇಲೆ ಗುರುತಿಸಿ ಅಭಿರುಚಿ ಪಾರ್ಶ್ವರೇಖೆ (Profile)ಗಳನ್ನು ಪಡೆಯಲಾಯಿತು. (ಚಿತ್ರ : ೯೨ನೇ ಪುಟ ನೋಡಿ) ಕೊನೆಯಲ್ಲಿ ಬುದ್ಧಿಶಕ್ತಿ ಮತ್ತು ವಿವಿಧ ಅಭಿರುಚಿಗಳ ನಡುವೆ ಇರಬಹುದಾದ ಸಹಸಂಬಂಧವನ್ನು ಹೆಚ್ಚು ನಿಖರವಾಗಿ ತಿಳಿಯಲು ಪಾಯಿಂಟ ಬೈಸೀರಿಯಲ್ ವಿಧಾನವನ್ನು ಬಳಸಲಾಯಿತು. ಅದರಿಂದ ದೊರೆತ ಅಂಕಿಅಂಶಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು.

ಕೋಷ್ಟಕ ೩ : ಬುದ್ಧಿಶಕ್ತಿ ಮತ್ತು ಆರು ವಿಧವಾದ ಉದ್ಯೋಗಾಭಿರುಚಿಗಳ ನಡುವಣ ಸಂಬಂಧವನ್ನು ಸೂಚಿಸುವ ಪಾಯಿಂಟ ಬೈಸೀರಿಯಲ್ ಸಹಸಂಬಂಧ ಅಂಶಗಳು.

ಅಭಿರುಚಿ ಕ್ಷೇತ್ರ		ಸ. ಸಂ. ಗುಣಾಂಕಗಳು
ಆರ್ಥಿಕ (೦೧)	....	೦.೦೫
ನ್ಯಾಯ–ಆಡಳಿತ (೦೨)	...	—೦.೦೨
ತಾಂತ್ರಿಕ (೦೯)	....	೦.೨೫
ವೈಜ್ಞಾನಿಕ (೦೬)	...	—೦.೦೫
ವೈದ್ಯಕೀಯ (೧೦)	....	—೦.೧೧
ಶಿಕ್ಷಣ (೧೧)	...	೦.೦೨

ಅರ್ಥವಿವರಣೆ :

೧. ಇಲ್ಲಿಯ ವರೆಗೆ ಪ್ರಸ್ತಾಪಿಸಲಾದ ಅಂಕಿ ಅಂಶಗಳು ನಮ್ಮ ಮುಂದಿಡುವ ಒಂದು ಸ್ಪಷ್ಟ ಚಿತ್ರವೆಂದರೆ, ಹತ್ತನೇ ವರ್ಗದ ವಿದ್ಯಾರ್ಥಿಗಳಲ್ಲಿ ಬುದ್ಧಿಶಕ್ತಿಗೂ ಅಭಿರುಚಿಗಳಿಗೂ ಅಷ್ಟೇನೂ ಗಮನೀಯ ಸಂಬಂಧವಿಲ್ಲವೆಂಬುದು. ಇದನ್ನು ೨ ಮತ್ತು ೩ನೆಯ ಕೋಷ್ಟಕಗಳಲ್ಲಿ ಕೊಡಲಾಗಿರುವ ಅಂಕಿ ಅಂಶಗಳೂ ಮತ್ತು ಸ್ವಲ್ಪ ಮಟ್ಟಿಗೆ ಪಾರ್ಶ್ವ ರೇಖೆಗಳೂ ಸ್ಪಷ್ಟಪಡಿಸುತ್ತವೆ. ಅಂದರೆ **"ಹತ್ತನೇ ವರ್ಗದ ವಿದ್ಯಾರ್ಥಿಗಳ ಬುದ್ಧಿಶಕ್ತಿ ಮತ್ತು ಉದ್ಯೋಗಾಭಿರುಚಿಗಳ ನಡುವೆ ಏನೂ ಸಂಬಂಧವಿಲ್ಲ"** ಎಂಬ ನಮ್ಮ ಶೂನ್ಯ ಪ್ರಾಕಲ್ಪನೆ ಸ್ಥಿರಗೊಂಡಂತಾಯಿತು. ಅದು ವಿವಿಧವಾದ ಅಭಿರುಚಿಗಳನ್ನು ಸಮಗ್ರವಾಗಿ ಪರಿಗಣಿಸಿದಾಗ ಮೇಲಿನ ಮಾತು ನಿಜವೆನಿಸುತ್ತದೆ. ಆದರೆ ಒಂದೊಂದು ಅಭಿರುಚಿಯನ್ನೂ ಪ್ರತ್ಯೇಕವಾಗಿ ತೆಗೆದುಕೊಂಡು ಬುದ್ಧಿಶಕ್ತಿಯೊಡನೆ ಅದಕ್ಕಿರುವ ಸಂಬಂಧವನ್ನು ಪರಿಶೀಲಿಸಿದಾಗ, ಸಾಮಾನ್ಯೀಕರಿಸುವಲ್ಲಿ ನಾವು ಸ್ವಲ್ಪ ಹಿಂಜರಿಯಬೇಕಾಗುತ್ತದೆ. ಉದಾಹರಣೆಗೆ, ತಾಂತ್ರಿಕ ಅಭಿರುಚಿಗೂ ಬುದ್ಧಿಶಕ್ತಿಗೂ ಇರುವ ೦.೨೫ ಸಹಸಂಬಂಧವನ್ನು ನೋಡಿದಾಗ ಅರ್ಥವಿವರಣೆಯಲ್ಲಿ ಮುಕ್ತ ಭಾವವನ್ನು ತಳೆಯಬೇಕಾಗುತ್ತದೆ. ಸ್ವಲ್ಪ ಕೂಲಂಕಷವಾಗಿ ಪರಿಶೀಲಿಸಿದರೆ, ದೊರೆತ ತಥ್ಯಾಂಶಗಳು, ಕೆಲವು ನಿರ್ದಿಷ್ಟ ಸೂಚನೆಗಳನ್ನು ಕೊಡುವುದು ನಮಗೆ ಗೋಚರಿಸುತ್ತದೆ. ಉದಾಹರಣೆಗೆ ೨ನೇ ಕೋಷ್ಟಕದಲ್ಲಿ ಕೊಡಲಾಗಿರುವ ಪ್ರತಿಶತಾಂಶಗಳು ಕೆಲವು ಗಮನಾರ್ಹ ಸೂಚನೆಗಳನ್ನು ಕೊಡಬಲ್ಲವು. ಮೊದಲನೆಯ

ಬಗೆ ನ್ಯಾಯ ಮತ್ತು ಆಡಳಿತ ಕ್ಷೇತ್ರವೊಂದನ್ನು ಬಿಟ್ಟು ಉಳಿದೆಲ್ಲ ಕ್ಷೇತ್ರಗಳಲ್ಲಿಯೂ, ಮೇಲ್ಮಟ್ಟದ ಬುದ್ಧಿಶಕ್ತಿಯುಳ್ಳ ವಿದ್ಯಾರ್ಥಿಗಳ ಅಭಿರುಚಿ ಪ್ರತಿಶತಾಂಶಗಳು, ಕೆಳಮಟ್ಟದ ಬುದ್ಧಿಶಕ್ತಿಯುಳ್ಳ ವಿದ್ಯಾರ್ಥಿಗಳ ಅಭಿರುಚಿ ಪ್ರತಿಶತಾಂಶಗಳಿಗಿಂತ ಅತ್ಯಧಿಕವಾಗಿರುವುದು ಗಮನೀಯ ಅಂಶ. ಈ ಹೆಚ್ಚಳ ಅವರಲ್ಲಿಯೂ ತಾಂತ್ರಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಫಲಿತಾಂಶಗಳು ಈಗಾಗಲೇ ಹೊರಬಿದ್ದಿರುವ ಕೆಲವು ಸಂಶೋಧನಾ ವರದಿಗಳಿಗೆ ಅನುಗುಣವಾಗಿವೆ. ಆದರೂ ಈಗ ದೊರೆತಿರುವ ಆಧಾರಗಳ ಮೇಲೆ ಯಾವುದೇ ಸಾಮಾನ್ಯೀಕರಣ ಮಾಡುವುದು ಅನುಚಿತ. ಇದಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಮಾಹಿತಿಗಳನ್ನು ಪಡೆಯುವ ಅಗತ್ಯವಿದೆ.

ದೊರೆತ ಫಲಿತಾಂಶಗಳಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಸೂಚನೆ ಎಂದರೆ, ನ್ಯಾಯ ಮತ್ತು ಆಡಳಿತ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಕೆಳಮಟ್ಟದ ಬುದ್ಧಿಶಕ್ತಿಯುಳ್ಳ ವಿದ್ಯಾರ್ಥಿಗಳಿಗೆ (ಪ್ರತಿಶತಾಂಶ ೪೭) ಮೇಲ್ಮಟ್ಟದ ಬುದ್ಧಿಶಕ್ತಿಯುಳ್ಳ ವಿದ್ಯಾರ್ಥಿಗಳಿಗಿಂತ (ಪ್ರತಿಶತಾಂಶ ೪೦) ಹೆಚ್ಚು ಅಭಿರುಚಿ ಕಂಡುಬಂದಿರುವುದು. ಎರಡು ಗುಂಪುಗಳ ನಡುವಣ ವ್ಯತ್ಯಾಸವು ಗಣನೀಯವಲ್ಲದಿದ್ದರೂ, ಕಡೆಗಣಿಸುವಂತಿಲ್ಲ. ನ್ಯಾಯ ಮತ್ತು ಆಡಳಿತಕ್ಕೆ ಹೆಚ್ಚು ಹೆಚ್ಚು ಬುದ್ಧಿವಂತರು ಬೇಕೆಂಬ ನಮ್ಮ ಸರ್ಕಾರದ ಧೋರಣೆಯನ್ನು ಇಂತಹ ಮಾಹಿತಿಗಳು ಪುಷ್ಟೀಕರಿಸಲಾರವು. ಆದರೆ ಈ ಬಗ್ಗೆ, ದೊರೆತಿರುವ ಮಾಹಿತಿಗಳ ಆಧಾರದ ಮೇಲೆ ನಾವು ಯಾವುದೇ ನಿರ್ದಿಷ್ಟ ನಿರ್ಧಾರಕ್ಕೆ ಬರಲಾಗದು. ಈ ಫಲಿತಾಂಶಗಳ ಸೂಚನೆಯನ್ನು ಇನ್ನೂ ಹೆಚ್ಚು ವಿಶದವಾಗಿ ಅಧ್ಯಯನ ಮಾಡಿದರೆ ನಮ್ಮ ಕೆಲವು ಶೈಕ್ಷಣಿಕ ಧೋರಣೆಗಳನ್ನು ಮಾರ್ಪಡಿಸಿಕೊಳ್ಳುವಲ್ಲಿ ಬಹಳ ಅನುಕೂಲವಾಗಬಹುದು.

೨. "ಹತ್ತನೇ ವರ್ಗದ ವಿದ್ಯಾರ್ಥಿಗಳ ವಯಸ್ಸು ಮತ್ತು ಉದ್ಯೋಗಾಭಿರುಚಿಗಳ ನಡುವೆ ಏನೂ ಸಂಬಂಧವಿಲ್ಲ". ಈ ಶೂನ್ಯ ಪ್ರಾಕ್ಕಲ್ಪನೆಯನ್ನು ಒಪ್ಪಿಕೊಳ್ಳಲು ಬೇಕಾದಂತಹ ಮಾಹಿತಿಗಳು ಈ ಅಧ್ಯಯನದಿಂದ ದೊರೆತಿವೆ. ಪೂರ್ವ ತಾರುಣ್ಯ ಮತ್ತು ಉತ್ತರ ತಾರುಣ್ಯಾವಸ್ಥೆಗಳ ಎರಡು ಗುಂಪಿನ ವಿದ್ಯಾರ್ಥಿಗಳ ನಡುವೆ ತಾಂತ್ರಿಕ ಅಭಿರುಚಿಯೊಂದನ್ನುಳಿದು ಯಾವುದೇ ಅಭಿರುಚಿಯಲ್ಲಿ ಗಣನೀಯ ವ್ಯತ್ಯಾಸ ಕಂಡುಬರಲಿಲ್ಲ. ಸಾರ್ಥಕ ಗುಣಾಂಕಗಳ ನಡುವಣ ವ್ಯತ್ಯಾಸವನ್ನು ತೋರಿಸಲು ಪಟ್ಟಿ ೩. ೪೦. ಅಂಕಗಳು ಹೀಗಿವೆ : ಆರ್ಥಿಕ= ೧.೦೬೧; ನ್ಯಾಯ ಮತ್ತು ಆಡಳಿತ= −೦.೧೨; ತಾಂತ್ರಿಕ= ೨.೯೩; ವೈಜ್ಞಾನಿಕ = −೦.೦೩೪; ವೈದ್ಯಕೀಯ = −೧.೨೨ ಮತ್ತು ಶಿಕ್ಷಣ=೧.೦೪.


ಈ ಬಗ್ಗೆ ಯಾವುದೇ ನಿರ್ಣಯಕ್ಕೆ ಬರಬೇಕಾದರೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾಗುತ್ತದೆ.

೨. **"ಸಾಮಾಜಿಕ ಆರ್ಥಿಕ ಅಂತಸ್ತಿನಲ್ಲಿ ಕೆಳ, ಮಧ್ಯಮ ಮತ್ತು ಮೇಲ್ವರ್ಗಗಳಿಗೆ ಸೇರಿದ ಹತ್ತನೇ ತರಗತಿಯ ವಿದ್ಯಾರ್ಥಿಗಳ ಉದ್ಯೋಗಾಭಿರುಚಿಗಳಲ್ಲಿ ಏನೂ ವ್ಯತ್ಯಾಸವಿಲ್ಲ"** ಈ ಅಧ್ಯಯನದಲ್ಲಿ ದೊರೆತ ಮಾಹಿತಿಗಳು, ಈ ಶೂನ್ಯ ಪ್ರಾಕ್ಕಲ್ಪನೆಯನ್ನು ಬೆಂಬಲಿಸುವುದಿಲ್ಲ. ಕೆಳ ಮತ್ತು ಮಧ್ಯಮ ವರ್ಗಗಳ ಅಭಿರುಚಿ ವಿನ್ಯಾಸದಲ್ಲಿ ಅಷ್ಟಾಗಿ ಭಿನ್ನತೆ ಕಂಡುಬರದಿದ್ದರೂ, ಮಧ್ಯಮ ಮತ್ತು ಮೇಲ್ವರ್ಗಗಳ ಹಾಗೂ ಕೆಳ ಮತ್ತು ಮೇಲ್ವರ್ಗಗಳ ಅಭಿರುಚಿ ವಿನ್ಯಾಸದಲ್ಲಿ ಗಣನೀಯ ಭಿನ್ನತೆ ಕಂಡುಬಂದಿದೆ. ಮಧ್ಯಮ ಮತ್ತು ಮೇಲ್ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ನ್ಯಾಯ ಮತ್ತು ಆಡಳಿತ (ಸಿ. ಆರ್. =೧.೯೮) ಮತ್ತು ವೈದ್ಯಕೀಯ (ಸಿ. ಆರ್. =೧.೯೯) ಅಭಿರುಚಿಗಳಲ್ಲಿ ಗಣನೀಯ ವ್ಯತ್ಯಾಸವಿದೆ. ಇದರಂತೆಯೇ ಕೆಳ ಮತ್ತು ಮೇಲ್ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ನ್ಯಾಯ ಮತ್ತು ಆಡಳಿತ (ಸಿ. ಆರ್, = -೩.೫೪); ವೈಜ್ಞಾನಿಕ (ಸಿ. ಆರ್ =೨.೫೬); ವೈದ್ಯಕೀಯ (—೧.೮೫) ಮತ್ತು ಶಿಕ್ಷಣ (೨.೦೪) ಅಭಿರುಚಿಗಳಲ್ಲಿ ಗಣನೀಯ ವ್ಯತ್ಯಾಸ ಕಂಡುಬಂದಿದೆ. ಇಂತಹ ವ್ಯತ್ಯಾಸಕ್ಕೆ ಆರ್ಥಿಕ ಸಾಮಾಜಿಕ ಅವಕಾಶಗಳಲ್ಲಿರುವ ಭೇದವೇ ಪ್ರಮುಖ ಕಾರಣವಿರಬಹುದು. ಈ ಬಗ್ಗೆ ಹೆಚ್ಚು ವಿಶದವಾದ ಸಂಶೋಧನೆಯ ಅಗತ್ಯವಿದೆ.

ಸಾರಾಂಶ : ಪ್ರಮುಖವಾಗಿ ಹತ್ತನೇ ವರ್ಗದ ವಿದ್ಯಾರ್ಥಿಗಳ ಬುದ್ಧಿಶಕ್ತಿ ಮತ್ತು ಅಭಿರುಚಿಗಳ ನಡುವೆ ಇರಬಹುದಾದ ಸಂಬಂಧವನ್ನು ತಿಳಿಯಲು ಧಾರವಾಡ ನಗರದ ಎಂಟು ಪ್ರೌಢಶಾಲೆಗಳಿಂದ ಆರಿಸಿಕೊಂಡ, ೨೮೪ ವಿದ್ಯಾರ್ಥಿಗಳಿಗೆ ರೇವನನ ಪ್ರಗಾಮೀ ಮಾತೃಕೆಗಳ ಪರೀಕ್ಷೆ ಮತ್ತು ಎನ್.ಸಿ.ಇ.ಆರ್.ಟಿ. ಅಭಿರುಚಿ ಅಂಶಮಾಲೆಗಳನ್ನು ಕೊಡಲಾಯಿತು. ಈ ಪರೀಕ್ಷೆಗಳಿಗೆ ದೊರೆತ ಉತ್ತರಗಳನ್ನು ಪಾರಿಮಾಣಿಕ ವಿಶ್ಲೇಷಣೆಗೆ ಒಳಪಡಿಸಿದಾಗ, ಹತ್ತನೇ ವರ್ಗದ ವಿದ್ಯಾರ್ಥಿಗಳ ಬುದ್ಧಿಶಕ್ತಿ ಮತ್ತು ಅಭಿರುಚಿಗಳ ನಡುವೆ ಗಣನೀಯ ಸಂಬಂಧವಿರುವುದು ಕಂಡುಬರಲಿಲ್ಲ. ಅಂದರೆ ದೊರೆತ ಮಾಹಿತಿಗಳು ಶೂನ್ಯ ಪ್ರಾಕ್ಕಲ್ಪನೆಯನ್ನು ಬೆಂಬಲಿಸಿದವು.

ಪ್ರಾಸಂಗಿಕವಾಗಿ, ವಯಸ್ಸು ಮತ್ತು ಸಾಮಾಜಿಕ ಆರ್ಥಿಕ ಅಂತಸ್ತು ಈ ಕಾರಕಗಳು ಅಭಿರುಚಿಗಳ ಮೇಲೆ ಬೀರಬಹುದಾದ ಪ್ರಭಾವವನ್ನು ತಿಳಿಯಲು ದೊರೆತ ಪ್ರಾಪ್ತಾಂಕಗಳನ್ನು ಪುನಃ ಪಾರಿಮಾಣಿಕ ವಿಶ್ಲೇಷಣೆಗೆ ಒಳಪಡಿಸಲಾಯಿತು. ನವ ತರುಣತರುಣಿಯರು ಮತ್ತು ಬೆಳೆದ ತರುಣತರುಣಿಯರ

ಉದ್ಯೋಗಾಭಿರುಚಿಗಳ ನಡುವೆ ಗಣನೀಯ ವ್ಯತ್ಯಾಸ ಕಂಡುಬರಲಿಲ್ಲ. ಇದು ನಮ್ಮ ನಿರೀಕ್ಷಣೆಗೆ ಅನುಗುಣವಾಗಿದೆ. ಆದರೆ ಸಾಮಾಜಿಕ ಆರ್ಥಿಕ ವರ್ಗಗಳ ನಡುವೆ ಉದ್ಯೋಗಾಭಿರುಚಿಗಳಿಗೆ ಸಂಬಂಧಿಸಿದಂತೆ ಗಣನೀಯ ವ್ಯತ್ಯಾಸಗಳು ಕಂಡುಬಂದವು. ಕೆಳ ಮತ್ತು ಮಧ್ಯಮ ವರ್ಗಗಳ ನಡುವಣ ವ್ಯತ್ಯಾಸ ಕಡೆಗಣಿಸುವಂಥಾದ್ದದರೂ ಕೆಳ ಮತ್ತು ಮೇಲ್ವರ್ಗಗಳು ಹಾಗೂ ಮಧ್ಯಮ ಹಾಗೂ ಮೇಲ್ವರ್ಗಗಳ ನಡುವೆ ಉದ್ಯೋಗಾಭಿರುಚಿಗಳಿಗೆ ಸಂಬಂಧಿಸಿದಂತೆ ಗಣನೀಯ ವ್ಯತ್ಯಾಸಗಳಿರುವುದು ಕಂಡುಬಂದಿತು. ಇತರ ಎರಡು ವರ್ಗಗಳಿಗೆ ಹೋಲಿಸಿದಾಗ ಮೇಲ್ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಹೆಚ್ಚು ಉತ್ತಮ ಸಾಮಾಜಿಕ ಆರ್ಥಿಕ ಅವಕಾಶಗಳು ದೊರೆಯುವುದೇ ಇದಕ್ಕೆ ಪ್ರಮುಖ ಕಾರಣವಿರುವ ಸಾಧ್ಯತೆ ಹೆಚ್ಚು. ಒಟ್ಟಿನಲ್ಲಿ, ಈ ಅಧ್ಯಯನದಿಂದ ದೊರೆತ ತಥ್ಯಾಂಶಗಳು, ಹತ್ತನೇ ವರ್ಗದ ವಿದ್ಯಾರ್ಥಿಗಳ ಅಭಿರುಚಿ ಮತ್ತು ಬುದ್ಧಿಶಕ್ತಿಗಳ ನಡುವಣ ಸಂಬಂಧದ ಹಾಗೂ ಅಭಿರುಚಿಗಳ ಮೇಲೆ, ವಯಸ್ಸು ಮತ್ತು ಆರ್ಥಿಕ ಸಾಮಾಜಿಕ ಅಂತಸ್ತುಗಳು ಬೀರಬಹುದಾದ ಪ್ರಭಾವದ ಬಗ್ಗೆ ಸ್ವಲ್ಪ ಬೆಳಕು ಚೆಲ್ಲುತ್ತದೆ ಎಂದು ಹೇಳಬಹುದು. ಆದರೂ, ಈ ಸಮಸ್ಯೆಗಳಿಗೆ ಸಂಬಂಧಿಸಿದಂತೆ, ಇನ್ನೂ ಹೆಚ್ಚು ವಿಶದವಾದ ಹಾಗೂ ವ್ಯಾಪಕ ರೀತಿಯ ಅಧ್ಯಯನಗಳ ಅಗತ್ಯವಿದೆ.



ಚಿತ್ರ : ಹತ್ತನೇ ವರ್ಗದ ಮೇಲ್ಮಟ್ಟ ಮತ್ತು ಕೆಳಮಟ್ಟದ ಬುದ್ಧಿಶಾಲಿಗಳ ಉದ್ಯೋಗಾಭಿರುಚಿ ವಿನ್ಯಾಸ.

ಆಕರ ಗ್ರಂಥಗಳು ಮತ್ತು ಲೇಖನಗಳು

1 Guilford, J. P., Fundamental Statistics in Psychology and Education, New York, McGraw Hill, 1956.

2 Ospiow, Samuel H., Theories of Career Development New York, Appleton Century Crofts.

3 Super, Donald & Crites, Appraising Vocational Fitness, University Book Stall, Delhi, 1949.

4 Strong, E. K., Vocational Interests of Men & Women Stanford Uni. Press, California, 1943.

5 Dharanendriah, A. S., Notes relating to the Development of N.C.E.R.T. Interest Inventory.

6 Ferguson, "Abitities, Interests and Aptitudes" Jl. Appl. Psychol., 44: 126–31, 1960.

7 Indira Patil, A Study of Relationship between Vocational Interests and Intelligence Among 10th Grade Boys. M. A. Dissertation, Kaarnatak University, Dharwar, 1975.

8 Mamata, C. M., An Investigation into the Vocational Interests of X Class Students Jl. Rajastan Board, 1969, Vol. V, No. 2, 16–21.

9 Mukerjee, C. S. & Others, Effect of Intelligence level on Interests, Manas, 1972, Vol. 19 (i), 47–53.

10 Nalinidevi, G. and M. Basavanna, A Study of Interests in relation to intelligence & socio-economic status among Women College Students. Ind. Jl. Appl. Psychol. 9, 1972.

11 Rostagi, K. G., A Study of the relation between intelligence, interests and achievement of High School Students. Guidance Review 3(4), 1965.

ನಮ್ಮ ದೇಶದ ಕೃಷಿ ಕಾರ್ಮಿಕರ ಏಳ್ಗೆ ಎಂತು ?

● ಎಂ. ಸಿ. ಕೊಡ್ಲಿ

ನಮ್ಮ ದೇಶ ಬೇಸಾಯ ಪ್ರಧಾನವಾದ ದೇಶ. ನಮ್ಮ ದೇಶದ ಶೇಕಡಾ ೭೦ ರಷ್ಟು ಜನರು ಬೇಸಾಯವನ್ನವಲಂಬಿಸಿ ಜೀವಿಸುತ್ತಾರೆ. ದೇಶದ ಉತ್ಪನ್ನದ ಅರ್ಧದಷ್ಟು ಬೇಸಾಯದಿಂದಲೇ ಬರುತ್ತದೆ.

ಯಾವದೇ ದೇಶದಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರು ಹೆಚ್ಚಿನ ಪ್ರಮಾಣದಲ್ಲಿದ್ದರೆ ಆ ದೇಶದ ಆರ್ಥಿಕ ಪ್ರಗತಿಯ ಮಟ್ಟವು ಕಡಿಮೆ ಇರುತ್ತದೆಯೆಂದು ಕೊಲಿನ್ ಕ್ಲಾರ್ಕ ಮತ್ತು ಸಾಯಿಮನ್ ಕುಜ್ನೆಟ್ಸರವರು ತಮ್ಮ ಅಭ್ಯಾಸದಿಂದ ತೋರಿಸಿಕೊಟ್ಟಿದ್ದಾರೆ. ಅವರ ಪ್ರಕಾರ ನಾವು ವ್ಯಕ್ತಿಯ ವರಮಾನ ಹೆಚ್ಚಿಗಿರುವ ದೇಶಗಳನ್ನು, ವರಮಾನ ಕಡಿಮೆ ಇರುವ ದೇಶಗಳಿಗೆ ಹೋಲಿಸಲಾಗಿ, ವರಮಾನಕ್ಕೂ ಮತ್ತು ಬೇಸಾಯವನ್ನವಲಂಬಿಸಿ ಜೀವಿಸುವ ಜನರ ಪ್ರಮಾಣಕ್ಕೂ ಇರುವ ಸಂಬಂಧ ಗೊತ್ತಾಗುತ್ತದೆ. ವ್ಯಕ್ತಿ ವರಮಾನ ಹೆಚ್ಚಿಗಿರುವ ದೇಶದಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರ ಪ್ರಮಾಣ ಕಡಿಮೆ ಇರುತ್ತದೆ. ಅಮೇರಿಕೆಯಂಥ ಮುಂದುವರಿದ ದೇಶಗಳಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರು ಶೇಕಡಾ ೧೦ ಕ್ಕಿಂತಲೂ ಕಡಿಮೆ. ಆದರೆ ಭಾರತದಂಥ ಬಡದೇಶಗಳಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರ ಪ್ರಮಾಣವು ಶೇಕಡಾ ೭೦. ಅದೇ ರೀತಿಯಾಗಿ ವ್ಯಕ್ತಿಯ ವರಮಾನ ಕಡಿಮೆ ಇದ್ದಂತಹ ದೇಶಗಳಲ್ಲಿ

ರಾಷ್ಟ್ರೀಯ ಉತ್ಪನ್ನದಲ್ಲಿ ಬೇಸಾಯದಿಂದ ಬರುವ ಉತ್ಪನ್ನದ ಪ್ರಮಾಣವು ಹೆಚ್ಚಿಗಿರುತ್ತದೆ. ಮತ್ತು ಮುಂದುವರಿದ ದೇಶಗಳಲ್ಲಿ ರಾಷ್ಟ್ರೀಯ ಉತ್ಪನ್ನದಲ್ಲಿ ಬೇಸಾಯದಿಂದ ಬರುವ ಉತ್ಪನ್ನದ ಭಾಗವು ಬಹಳ ಕಡಿಮೆ ಇರುತ್ತದೆ.

ದೇಶದ ಆರ್ಥಿಕ ಪ್ರಗತಿಯಾದಂತೆ ಹೆಚ್ಚು ಹೆಚ್ಚು ಉದ್ದಿಮೆಗಳು ಅಸ್ತಿತ್ವದಲ್ಲಿ ಬರುವದರಿಂದ, ಬೇಸಾಯದಿಂದ ಉಪಜೀವಿಸುವ ಜನರ ಪ್ರಮಾಣ ಕಡಿಮೆಯಾಗಿ, ಉದ್ದಿಮೆ, ಸಾರಿಗೆ ಮುಂತಾದ ರಂಗಗಳ ಮೇಲೆ ಉಪಜೀವಿಸುವ ಜನರ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. ಈ ವರ್ಗಾವಣೆಯು ಬಹಳ ಕಾಲವನ್ನು ತೆಗೆದುಕೊಳ್ಳುತ್ತದೆ. ಜಪಾನ ದೇಶದಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರ ಪ್ರಮಾಣವನ್ನು ೧೮೭೨ ರಲ್ಲಿ, ಶೇಕಡಾ ೮೫ ಇದ್ದುದನ್ನು ೧೯೩೬ ರ ಸುಮಾರಿಗೆ ಶೇಕಡಾ ೪೫ಕ್ಕೆ ಇಳಿಸಲು ೬೫ ವರ್ಷಗಳ ಕಾಲಾವಕಾಶ ಬೇಕಾಯಿತು. ಅದೇ ರೀತಿಯಾಗಿ ಅಮೇರಿಕಾ ದೇಶದಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರ ಪ್ರಮಾಣ ೧೮೭೦ ರಲ್ಲಿ ಶೇಕಡಾ ೫೦ ಇದ್ದದ್ದನ್ನು ಶೇಕಡಾ ೩೦ ಕ್ಕೆ ಇಳಿಸಲು ೪೦ ವರುಷಗಳ ಕಾಲಾವಕಾಶ ಬೇಕಾಯಿತು. ಈ ವರ್ಗಾವಣೆಯು, ಜನಸಂಖ್ಯೆಯ ಬೆಳವಣಿಗೆ, ಬಂಡವಾಳ ತೊಡಗಣೆಯ ಪ್ರಮಾಣ, ಮತ್ತು ಬಂಡವಾಳ ಹಾಗೂ ಉತ್ಪನ್ನದ ಸಂಬಂಧ ಮುಂತಾದವುಗಳನ್ನು ಅವಲಂಬಿಸಿರುತ್ತದೆ. ಈ ದೃಷ್ಟಿಯಿಂದ ನೋಡಲಾಗಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರ ಪ್ರಮಾಣವನ್ನು ಕಡಿಮೆಮಾಡಲು ಅಭಿವೃದ್ಧಿ ಹೊಂದುತ್ತಿರುವ ಹಿಂದುಸ್ತಾನದಂತಹ ದೇಶಗಳಿಗೆ, ಬಹಳ ಸಮಯ ಬೇಕಾಗುವದೆಂಬುದು ನಮ್ಮ ಗಮನಕ್ಕೆ ಬರುತ್ತದೆ.

ಬೆಳೆಯುತ್ತಿರುವ ಜನಸಂಖ್ಯೆ

ನಮ್ಮ ದೇಶದ ಜನಸಂಖ್ಯೆಯು ಕಳೆದ ೪೦ ವರುಷಗಳಿಂದ ತ್ವರಿತಗತಿಯಲ್ಲಿ ಬೆಳೆಯುತ್ತಾ ನಡೆದಿದೆಯೆಂದು ನಾವು ಹೇಳಬಹುದು. ನಮ್ಮ ದೇಶ ೧೯೪೭ ರಲ್ಲಿ ಸ್ವಾತಂತ್ರ್ಯ ಪಡೆದ ವೇಳೆಯಲ್ಲಿ ನಮ್ಮ ಜನಸಂಖ್ಯೆ ೩೫ ಕೋಟಿ ಇತ್ತು. ೧೯೫೧ರ ಜನಗಣತಿಯ ಪ್ರಕಾರ ನಮ್ಮ ಜನಸಂಖ್ಯೆ ೩೬.೧೧ ಕೋಟಿಗೆ ಏರಿತು. ೧೯೫೧–೬೧ ರ ಮಧ್ಯದಲ್ಲಿ ನಮ್ಮ ಜನಸಂಖ್ಯೆ ೭.೮ ಕೋಟಿಯಷ್ಟು ಹೆಚ್ಚಾಯಿತು. ಅಂದರೆ ಕೇವಲ ೧೦ ವರುಷಗಳಲ್ಲಿ ನಮ್ಮ ದೇಶದ ಜನಸಂಖ್ಯೆಯು ಸ್ವಾತಂತ್ರ್ಯದ ವೇಳೆಯಲ್ಲಿದ್ದ ಒಟ್ಟು ಪಾಕಿಸ್ತಾನದ ಜನಸಂಖ್ಯೆಯಷ್ಟು ಬೆಳೆಯಿತು. ೧೯೬೧–೭೧ ರ ಮಧ್ಯದಲ್ಲಿ ನಮ್ಮ ಜನಸಂಖ್ಯೆ ೧೦.೯ ಕೋಟಿಯಷ್ಟು ಹೆಚ್ಚಾಯಿತು. ಇದು ಅಮೇರಿಕಾ ದೇಶದ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಆಗುತ್ತದೆ. ಅಮೇರಿಕಾ ದೇಶವು ನಮ್ಮ ದೇಶದ ಮೂರು ಪಟ್ಟು

ವಿಸ್ತಾರವಿದೆಯೆಂದ ಮೇಲೆ ನಮ್ಮ ಜನಸಂಖ್ಯೆಯ ಬೃಹತ್ ಪ್ರಮಾಣವು ನಮ್ಮ ಗಮನಕ್ಕೆ ಬರುತ್ತದೆ. ಈಗ ನಮ್ಮ ಜನಸಂಖ್ಯೆಯು ೬೧.೨ ಕೋಟಿಯಿದೆ. ಸ್ವಾತಂತ್ರ್ಯದ ನಂತರ ನಮ್ಮ ಜನಸಂಖ್ಯೆಯು ೨೫ ಕೋಟಿಯಷ್ಟು ಹೆಚ್ಚಾಯಿತು. ನಮ್ಮ ದೇಶದ ೬ ಪಟ್ಟು ವಿಸ್ತಾರವಿರುವ ರಶಿಯಾ ದೇಶದ ಒಟ್ಟು ಜನಸಂಖ್ಯೆಯು ೨೫ ಕೋಟಿಗಿಂತಲೂ ಕಡಿಮೆ ಇದೆ. ನಮ್ಮ ಜನಸಂಖ್ಯೆಯು ಪ್ರತಿವರ್ಷ ೧.೩ ಕೋಟಿಯಷ್ಟು ಹೆಚ್ಚುತ್ತಾ ನಡೆದಿದೆ. ಅಂದರೆ ಪ್ರತಿವರುಷ ನಮ್ಮ ಜನಸಂಖ್ಯೆಯು ಆಸ್ಟ್ರೇಲಿಯಾ ದೇಶದ ಒಟ್ಟು ಜನಸಂಖ್ಯೆಯಷ್ಟು ಹೆಚ್ಚುತ್ತದೆ.

ತಃಖ್ತೆ ೧

ಹಿಂದುಸ್ತಾನದ ಜನಸಂಖ್ಯೆಯ ಬೆಳವಣಿಗೆ

	(ಕೋಟಿಯಲ್ಲಿ)	ಪ್ರತಿಶತ ಹೆಚ್ಚಳ
೧೯೨೧	೨೫.೧೨	—
೧೬೩೧	೨೭.೮೮	೧೧.೦
೧೯೪೧	೩೧.೮೫	೪೧.೨
೧೯೫೧	೩೬.೦೯	೧೩.೩
೧೯೬೧	೪೩.೯೦	೨೧.೬
೧೯೭೧	೫೪.೭೯	೨೪.೮

ನಮ್ಮ ದೇಶದಲ್ಲಿ ಸಾರ್ವಜನಿಕ ಆರೋಗ್ಯ ರಕ್ಷಣೆಯ ಕಾರ್ಯಕ್ರಮಗಳಿಂದಾಗಿ ಮರಣ ಪ್ರಮಾಣವು ಕಡಿಮೆಯಾಗುತ್ತ ನಡೆದಿದ್ದು, ಜನನ ಪ್ರಮಾಣವು ಕಡಿಮೆಯಾಗದೆ ಇರುವದರಿಂದ ಜನಸಂಖ್ಯೆ ಬೆಳೆಯುವ ಪ್ರಮಾಣವು ಹೆಚ್ಚಾಗಿದೆ. ೧೯೬೧-೭೦ ರಲ್ಲಿ ಹಿಂದುಸ್ತಾನದಲ್ಲಿ ಜನನ ಪ್ರಮಾಣವು ಪ್ರತಿಸಾವಿರಕ್ಕೆ ೪೧.೧ ಎಂದೂ ಮತ್ತು ಮರಣ ಪ್ರಮಾಣವು ೧೮.೯ ಎಂದೂ ಅಂದಾಜು ಮಾಡಲಾಗಿದೆ. ಆದ್ದರಿಂದ ಜನಸಂಖ್ಯೆಯ ಬೆಳವಣಿಗೆಯ ಗತಿಯು ವರುಷಕ್ಕೆ ಪ್ರತಿಶತ ೨.೨ ಇದ್ದಿತು. ಇದೇ ರೀತಿ ನಮ್ಮ ಜನಸಂಖ್ಯೆಯು ಬೆಳೆಯುತ್ತಾ ಹೋದಲ್ಲಿ ಈ ಶತಮಾನದ ಕೊನೆಯಲ್ಲಿ ನಮ್ಮ ಜನಸಂಖ್ಯೆಯು ೨೦೦ ಕೋಟಿಯಾಗಬಹುದೆಂದು ಅಂದಾಜು ಮಾಡಲಾಗಿದೆ. ಬೆಳೆಯುತ್ತಿರುವ ಜನಸಂಖ್ಯೆಗೆ ಔದ್ಯೋಗಿಕ ರಂಗದಲ್ಲಿ ಸಾಕಷ್ಟು ಉದ್ಯೋಗ ಅವಕಾಶಗಳು ಸಿಗದೆ ಇರುವದರಿಂದ ಅವರೆಲ್ಲರೂ ಬೇಸಾಯವನ್ನವಲಂಬಿಸಿ ಜೀವಿಸಬೇಕಾಗುತ್ತದೆ. ಆದ್ದರಿಂದ ನಮ್ಮ ದೇಶದಲ್ಲಿ ಜನಸಂಖ್ಯೆಯು ಇದೇ ರೀತಿ ಬೆಳೆಯುತ್ತಾ ಹೋದಲ್ಲಿ ಮತ್ತು

ನಮ್ಮ ದೇಶದ ಔದ್ಯೋಗಿಕ ಪ್ರಗತಿಯು ಈಗಿನ ಕುಂಠಿತವಾದ ರೀತಿಯಲ್ಲಿ ಮುಂದುವರಿದಲ್ಲಿ ನಮ್ಮ ದೇಶದಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರ ಪ್ರಮಾಣವು ಕಡಿಮೆಯಾಗುವದರ ಬದಲು ಬರುವ ವರುಷಗಳಲ್ಲಿ ಹೆಚ್ಚುತ್ತಾ ಹೋಗುತ್ತದೆಯೆಂದು ನಾವು ಹೇಳಬಹುದು.

ಬೆಳೆಯುತ್ತಿರುವ ಜನಸಂಖ್ಯೆ ಹಾಗೂ ಬೇಸಾಯ ಕೂಲಿಕಾರರು :

೧೯ ನೆಯ ಶತಮಾನದ ಪೂರ್ವದಲ್ಲಿ ನಮ್ಮ ದೇಶದಲ್ಲಿ ಭೂರಹಿತ ಬೇಸಾಯ ಕೂಲಿಕಾರರ ವರ್ಗವೆಂಬುದಿರಲಿಲ್ಲ. ಆಗಿನ ಕಾಲದಲ್ಲಿ ಬೇಸಾಯ ಮತ್ತು ಇನ್ನುಳಿದ ಗ್ರಾಮೀಣ ಉದ್ದಿಮೆಗಳಲ್ಲಿ ಹೊಂದಾಣಿಕೆಯಿತ್ತು. ಅವು ಒಂದನ್ನೊಂದು ಅವಲಂಬಿಸಿದ್ದವು. ಥಾಮಸ್ ಮನ್ರೊ ಅವರು ಹಿಂದುಸ್ತಾನದಲ್ಲಿ ಭೂರಹಿತ ಬೇಸಾಯ ಕೂಲಿಕಾರರು ಇಲ್ಲವೆಂದು ಬರೆದಿದ್ದಾರೆ. ಆದ್ದರಿಂದ ಭೂರಹಿತ ಬೇಸಾಯ ಕೂಲಿಕಾರರ ವರ್ಗವು ಬ್ರಿಟಿಶರ ಆಳ್ವಿಕೆಯ ಕಾಲದಲ್ಲಿ ಉದ್ಭವವಾಯಿತೆಂದು ನಾವು ಹೇಳಬಹುದು. ಜನಸಂಖ್ಯೆ ಬೆಳೆಯುತ್ತಾ ಹೋದಂತೆ ಭೂಮಿಯ ಮೇಲೆ ಒತ್ತಡವು ಹೆಚ್ಚಾಗಿ, ಭೂಮಿಯನ್ನು ತುಂಡುಗಳಾಗಿ ಮಾಡಬೇಕಾಗುತ್ತದೆ. ಕ್ರಮೇಣ ಚಿಕ್ಕ ಬೇಸಾಯಗಾರರು, ಕೂಲಿಕಾರರಾಗಬೇಕಾಗುತ್ತದೆ. ಅದೇ ರೀತಿಯಾಗಿ ಗ್ರಾಮೀಣ ಪ್ರದೇಶದಲ್ಲಿ ಸಾಲವು ಹೆಚ್ಚಾದಂತೆ ಭೂಮಿಯ ವರ್ಗಾವಣೆಯು ಹೆಚ್ಚುತ್ತಾ ಹೋಗಿ ಕ್ರಮೇಣ ಭೂರಹಿತ ವರ್ಗವೊಂದು ನಿರ್ಮಾಣವಾಯಿತು. ೧೯೧೧ ರಿಂದ ೧೯೩೧ ರ ಸುಮಾರಿಗೆ ನಮ್ಮ ದೇಶದಲ್ಲಿ ಕೂಲಿಕಾರರ ಸಂಖ್ಯೆ ಪ್ರತಿ ಸಾವಿರ ಬೇಸಾಯಗಾರರಿಗೆ ೨೪೭ ರಿಂದ ೫೧೯ ಕ್ಕೆ ಏರಿತು. ೧೯೫೧ ರ ಸುಮಾರಿಗೆ ಭೂರಹಿತ ಬೇಸಾಯ ಕೂಲಿಕಾರರು ಗ್ರಾಮೀಣ ಪ್ರದೇಶದ ಜನಸಂಖ್ಯೆಯು ಶೇಕಡಾ ೨೦ ಕ್ಕೆ ಮುಟ್ಟಿತು. ೧೯೬೧ ರಿಂದ ೧೯೭೧ ರ ವೇಳೆಗೆ ನಮ್ಮ ದೇಶದಲ್ಲಿ ಬೇಸಾಯ ಕೂಲಿಕಾರರ ಸಂಖ್ಯೆಯಲ್ಲಿ ತೀವ್ರ ಹೆಚ್ಚಳವಾದದ್ದು ಕಂಡು ಬರುತ್ತದೆ. ನಮ್ಮ ದೇಶದಲ್ಲಿ ಬೇಸಾಯ ಕೂಲಿಕಾರರ ಸಂಖ್ಯೆ ೧೯೬೧ ರಲ್ಲಿ ೧·೭೩ ಕೋಟಿ ಇದ್ದದ್ದು, ೧೯೭೧ ರಲ್ಲಿ ೩·೧೭ ಕೋಟಿಗೆ ಏರಿತು. ಅದೇ ವೇಳೆಯಲ್ಲಿ ಬೇಸಾಯಗಾರರ ಸಂಖ್ಯೆಯು ೬·೯೪ ಕೋಟಿಯಿಂದ ೬·೮೯ ಕೋಟಿಗೆ ಏರಿತು. ಅಂದರೆ ೧೯೬೧–೭೧ ರ ಮಧ್ಯದಲ್ಲಿ ಬೇಸಾಯಗಾರರ ಸಂಖ್ಯೆಯು ಶೇಕಡಾ ೩·೮ ರಷ್ಟು ಹೆಚ್ಚಾದರೆ ಬೇಸಾಯ ಕೂಲಿಕಾರರ ಸಂಖ್ಯೆಯು ಶೇಕಡಾ ೮೩ ರಷ್ಟು ಹೆಚ್ಚಳವಾಯಿತು. ತಃಖ್ತೆ ೨ ದುಡಿಯುವ ಜನರನ್ನು ಜೀವನಾಧಾರ ವರ್ಗಗಳಿಗನುಗುಣವಾಗಿ ವಿಂಗಡಿಸಿ ತೋರಿಸುತ್ತದೆ. ಇದು ಬೇಸಾಯ ಕೂಲಿಕಾರರ ಸಂಖ್ಯೆಯಲ್ಲಾದ ಬೆಳವಣಿಗೆಯನ್ನು ತೋರಿಸುತ್ತದೆ.

ತಃಖ್ತೆ ೨

ಜೀವನಾಧಾರ ವರ್ಗಗಳಿಗನುಗುಣವಾಗಿ ದುಡಿಯುವ ಪುರುಷ ಜನಶಕ್ತಿ : ೧೯೬೧ ಮತ್ತು ೧೯೭೧

	ಉದ್ಯಮ ವರ್ಗ	ದುಡಿಮೆಗಾರರು (ದಶಲಕ್ಷದಲ್ಲಿ) ೧೯೬೧	೧೯೭೧	೧೯೬೧ ರಿಂದ ೧೯೭೧ರ ವರೆಗೆ ಆದ ಹೆಚ್ಚಳ ಅಥವಾ ಕಡಿತ (ದಶಲಕ್ಷದಲ್ಲಿ)	ಶೇಕಡಾ ಪ್ರಮಾಣದಲ್ಲಿ ಬದಲಾವಣೆ
೧	ಕೃಷಿಕರು	೬೬.೭೮	೬೮.೯೧	+ ೨.೧೩	+ ೩.೧೯
೨	ಕೃಷಿ ಕಾರ್ಮಿಕರು	೧೭.೨೯	೩೧.೬೯	+೧೪.೪೦	+೮೩.೨೯
೩	ಪಶುಪಾಲನೆ, ಅರಣ್ಯೋದ್ಯಮ, ಮೀನುಗಾರಿಕೆ, ತೋಟಗಾರಿಕೆ	೪.೭೬	೩.೫೧	— ೧.೨೫	—೨೬.೨೬
೪	ಗಣಿ ಉದ್ಯಮ	೦.೭೩	೦.೮೦	+ ೦.೦೭	+ ೯.೫೯
೫	ಕೈಗಾರಿಕೆಗಳು	೧೩.೦೧	೧೪.೮೭	+ ೧.೮೬	+೧೪.೩೦
೬	ನಿರ್ಮಾಣ ಕಾರ್ಯ	೧.೮೧	೨.೦೧	+ ೦.೨೦	+೧೧.೦೫
೭	ವಾಣಿಜ್ಯ ಮತ್ತು ವ್ಯಾಪಾರ	೬.೮೧	೯.೪೮	+ ೨.೬೭	+೩೯.೨೧
೮	ಸಾರಿಗೆ ಮತ್ತು ಸಂಪರ್ಕ	೨.೯೩	೪.೨೬	+ ೧.೩೩	+೪೫.೩೯
೯	ಇತರ ಸೇವೆಗಳು	೧೪.೧೫	೧೨.೫೪	— ೧.೬೧	—೧೧.೩೮
೧೦	ಒಟ್ಟು ದುಡಿಮೆಗಾರರು	೧೨೮.೨೭	೧೪೮.೦೭	+೧೯.೮೦	+೧೫.೪೪

ಮೂಲ : ಜನಗಣತಿ ೧೯೭೧

ಬೇಸಾಯ ಕೂಲಿಕಾರರಲ್ಲಿ ಕೆಲವು ಜನರು ಅಲ್ಪಭೂಮಿ ಇದ್ದ ಜನರೂ ಇರುತ್ತಾರೆ. ಆದರೆ ಹೆಚ್ಚಿಗೆ ಜನರು ತಮ್ಮ ಉಪಜೀವನಕ್ಕಾಗಿ ಕೂಲಿಯನ್ನೇ ಅವಲಂಬಿಸಿ ಜೀವಿಸ ಬೇಕಾದುದರಿಂದ, ಆರ್ಥಿಕ ದೃಷ್ಟಿಯಿಂದ ಇಂಥ ಜನರು ನಮ್ಮ ಸಮಾಜದ ಅತೀ ಕೆಳಮಟ್ಟದ ಜನರಾಗಿರುತ್ತಾರೆ. ನಮ್ಮ ದೇಶದಲ್ಲಿರುವ ಬಡವರಲ್ಲಿ ಬಹುಪಾಲು ಬೇಸಾಯ ಕೂಲಿಕಾರರೇ ಆಗಿರುತ್ತಾರೆ.

ಬೇಸಾಯ ಕೂಲಿಕಾರರ ಆರ್ಥಿಕ ಪರಿಸ್ಥಿತಿ :

ನಮ್ಮ ದೇಶದಲ್ಲಿ ೧೯೫೦–೫೧ ರಲ್ಲಿ ಮತ್ತು ೧೯೫೬-೫೭ ರಲ್ಲಿ ಹೀಗೆ ಎರಡು ಬಾರಿ, ಬೇಸಾಯ ಕೂಲಿಕಾರರ ಬಗೆಗೆ ಸಮೀಕ್ಷೆಯನ್ನು ಮಾಡಲಾಗಿದೆ. ಎರಡನೆಯ ಸಮೀಕ್ಷೆಯ ಪ್ರಕಾರ ಬೇಸಾಯ ಕೂಲಿಕಾರರ ಪರಿಸ್ಥಿತಿಯು, ಮೊದಲಿನ ಸಮೀಕ್ಷೆಯ ವೇಳೆಗಿಂತ ಹದಗೆಟ್ಟಿತ್ತೆಂದು ತಿಳಿದು ಬರುತ್ತದೆ. ೧೯೫೦-೫೧ ರಲ್ಲಿ ಪುರುಷರ ಸರಕಾರಿ ದಿನಗೂಲಿಯ ದರವು ೯೬ ಪೈಸೆ ಇದ್ದದ್ದು, ೧೯೫೬-೫೭ ರಲ್ಲಿ ೮೪ ಪೈಸೆಗೆ ಇಳಿಯಿತು. ಸ್ತ್ರೀಯರ ಸರಾಸರಿ ದಿನಗೂಲಿಯ ದರವು ೬೮ ಪೈಸೆಯಿಂದ ೫೯ ಪೈಸೆಗೆ ಇಳಿಯಿತೆಂದು ತಿಳಿದು ಬರುತ್ತದೆ. ಅದೇ ವೇಳೆಯಲ್ಲಿ ಸಾಲದಲ್ಲಿ ಇರುವ ಕುಟುಂಬಗಳ ಪ್ರಮಾಣವು ಶೇಕಡಾ ೪೫ ರಿಂದ ೬೪ ಕ್ಕೆ ಏರಿತು, ಮತ್ತು ಪ್ರತಿ ಕುಟುಂಬದ ಸಾಲದ ಮೊತ್ತವು ಸರಾಸರಿ ೪೭ ರೂಪಾಯಿಗಳಿಂದ ೮೮ ರೂಪಾಯಿಗಳಿಗೆ ಏರಿತು. ಅದೇ ರೀತಿಯಾಗಿ ಪುರುಷರಲ್ಲಿ ಕೆಲಸ ಸಿಕ್ಕ ದಿನಗಳು ೧೯೫೦–೫೧ ರಲ್ಲಿ ೨೦೦ ದಿನಗಳಿಂದ ೧೯೫೬ ೧೯೫೭ ರಲ್ಲಿ ೧೯೭ ದಿನಗಳಿಗೆ ಇಳಿಯಿತು. ಸ್ತ್ರೀ ಕೆಲಸಗಾರರಿಗೆ ಮಾತ್ರ ಕೆಲಸ ಸಿಕ್ಕ ದಿನಗಳು ೧೯೫೦–೫೧ ರಲ್ಲಿ ೧೩೪ ದಿನಗಳಿದ್ದದ್ದು ೧೯೫೬ ೫೭ ರಲ್ಲಿ ೧೪೧ ದಿನಗಳಿಗೆ ಏರಿತು.

ಬೇಸಾಯ ಕೂಲಿಕಾರರ ಕುಟುಂಬದ ಸರಾಸರಿ ವಾರ್ಷಿಕ ಉತ್ಪನ್ನ ೧೯೫೦ ೧೯೫೧ ರಲ್ಲಿ ೪೯೫ ರೂಪಾಯಿಗಳಿದ್ದದ್ದು ೧೯೫೬–೫೭ ರಲ್ಲಿ ೪೩೯ ರೂಪಾಯಿಗಳಿಗೆ ಇಳಿಯಿತು. ಈ ರೀತಿಯಾಗಿ ಬೇಸಾಯ ಕೂಲಿಕಾರರ ಆರ್ಥಿಕ ಪರಿಸ್ಥಿತಿಯು ಎಲ್ಲ ದೃಷ್ಟಿಯಿಂದಲೂ ಕೆಳಮಟ್ಟಕ್ಕೆ ಬಂದಿದೆಯೆಂದು ಹೇಳಬಹುದು. ಇತ್ತಿತ್ತಲಾಗಿ ಬೇಸಾಯ ಕೂಲಿಕಾರರ ಕೂಲಿಯ ದರದಲ್ಲಿ ಹೆಚ್ಚಳವಿದ್ದಾಗ್ಯೂ ಜೀವನ ವೆಚ್ಚವು ಹೆಚ್ಚಾಗಿರುವದರಿಂದ ಅವರ ಪರಿಸ್ಥಿತಿಯಲ್ಲಿ ಗಮನಾರ್ಹ ಸುಧಾರಣೆಗಳೇನೂ ಕಂಡು ಬರುವದಿಲ್ಲ.

ಈ ಜನರಲ್ಲಿ ನಿರುದ್ಯೋಗತನ ಮತ್ತು ಅರೆ ನಿರುದ್ಯೋಗತನವು ಹೆಚ್ಚಿಗಿರುವದರಿಂದ ಅವರ ಜೀವನ ಮಟ್ಟವು ಅತೀ ಕಡಿಮೆ ಇರುತ್ತದೆ. ನಮ್ಮ

ದೇಶದ ಆರ್ಥಿಕ ಅಭಿವೃದ್ಧಿಯ ಲಾಭಗಳು ಈ ವರ್ಗಕ್ಕೆ ಮುಟ್ಟಿಲ್ಲ. ಬೇಸಾಯದ ಸುಧಾರಣೆಯಿಂದ ಮತ್ತು ನೀರಾವರಿ ವಿಸ್ತರಣೆಯಿಂದ ಬೇಸಾಯದ ಕೆಲಸ ಹೆಚ್ಚಿಗೆ ಆದಾಗ್ಯೂ, ಬೇಸಾಯ ಕೂಲಿಕಾರರ ಸಂಖ್ಯೆ ಇನ್ನೂ ಹೆಚ್ಚಿಗೆ ಅದಾಗ್ಯೂ, ಬೇಸಾಯ ಕೂಲಿಕಾರರ ಸಂಖ್ಯೆ ಇನ್ನೂ ಹೆಚ್ಚಿಗೆ ಬೆಳೆದಿರುವಾಗ ಪ್ರತಿಯೊಬ್ಬನಿಗೂ ಸಾಕಷ್ಟು ಕೆಲಸ ಸಿಗದೆ ಹೋಗುತ್ತದೆ. ಹೀಗಾಗಿ ಅವರ ಪರಿಸ್ಥಿತಿ ಇನ್ನೂ ಹದಗೆಟ್ಟಿವೆಯೆಂದು ನಾವು ಹೇಳಬಹುದು.

ಪರಿಹಾರ ಮಾರ್ಗ :

ಬೇಸಾಯ ಕೂಲಿಕಾರರಲ್ಲಿ ಬಹುತೇಕ ಜನರಿಗೆ ಭೂಮಿ ಇರುವದಿಲ್ಲವಾದ್ದರಿಂದ ಅಥವಾ ತೀರ ಅತ್ಯಲ್ಪ ಭೂಮಿ ಇರುವದರಿಂದ ಅವರ ಕುಟುಂಬದ ಜನರಿಗೆ ವರುಷವಿಡೀ ದುಡಿಯಲು ಸಾಕಷ್ಟು ಕೆಲಸವಿರುವದಿಲ್ಲ. ಆದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗತನ ಮತ್ತು ಅರೆ ನಿರುದ್ಯೋಗತನ ಉತ್ಪನ್ನವಾಗುತ್ತದೆ. ಆದ್ದರಿಂದ ಭೂರಹಿತ ಬೇಸಾಯ ಕೂಲಿಕಾರರಿಗೆ ಭೂಮಿಯನ್ನು ಕೊಟ್ಟಲ್ಲಿ ಅವರ ಪರಿಸ್ಥಿತಿ ಸುಧಾರಿಸುವದೆಂದು, ಕೆಲವರು ಅಭಿಪ್ರಾಯ ಪಡುತ್ತಾರೆ. ವಿನೋಬಾಜಿಯವರು ಭೂದಾನದಿಂದ ಪ್ರತಿ ಭೂರಹಿತ ಕೂಲಿಕಾರನಿಗೆ ಭೂಮಿಯನ್ನು ಒದಗಿಸಲು ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ಭೂಮಿಯ ಮರು ವಿತರಣೆಯಿಂದ ಭೂರಹಿತ ಕೂಲಿಕಾರರ ಸಮಸ್ಯೆಯನ್ನು ನಾವು ಬಗೆಹರಿಸಬಹುದೇ ಎಂಬ ಪ್ರಶ್ನೆ ಇಲ್ಲಿ ಸಹಜವಾಗಿ ಉದ್ಭವಿಸುತ್ತದೆ. ನಮ್ಮ ದೇಶದಲ್ಲಿ ಭೂಮಿಯ ಒಡೆತನದಲ್ಲಿರುವ ಅಸಮಾನತೆಗಳನ್ನು ಕಂಡುಕೊಂಡು ಭೂಮಿಯ ಸರಿಯಾದ ಹಂಚುವಿಕೆಯು ಭೂರಹಿತ ಕೂಲಿಕಾರರ ಸಮಸ್ಯೆಯನ್ನು ಬಿಡಿಸಬಲ್ಲದೇ ಎಂಬ ಪ್ರಶ್ನೆಯನ್ನು ಕಂಡುಕೊಳ್ಳುವಾ.

ನ್ಯಾಶನಲ್ ಸ್ಯಾಂಪಲ್ ಸರ್ವೆ ಪ್ರಕಾರ ೧೯೬೦–೬೧ ರಲ್ಲಿ ನಮ್ಮ ದೇಶದಲ್ಲಿ ಶೇಕಡಾ ೩೩ ರಷ್ಟು ಗ್ರಾಮೀಣ ಕುಟುಂಬಗಳು ಭೂಮಿಯನ್ನು ಹೊಂದಿರಲಿಲ್ಲ, ಅಥವಾ ½ ಎಕರೆಯಷ್ಟು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರೆಂದು ತಿಳಿದು ಬರುತ್ತದೆ. ೨½ ಎಕರೆಯಕ್ಕಿಂತಲೂ ಕಡಿಮೆ ಭೂಮಿಯನ್ನು ಸಾಗುವಳಿ ಮಾಡುವ ಮತ್ತು ಭೂಮಿ ಸಾಗುವಳಿ ಮಾಡದ ಕುಟುಂಬಗಳು ಶೇಕಡಾ ೬೦ ರಷ್ಟು ಇದ್ದವೆಂದು ಹೇಳಲಾಗುತ್ತದೆ. ಈ ಶೇಕಡಾ ೬೦ ರಷ್ಟು ಕುಟುಂಬಗಳು ಕೇವಲ ಶೇಕಡಾ ೭ ರಷ್ಟು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದವು. ೩೦ ಎಕರೆಗಳಿಗಿಂತಲೂ ಹೆಚ್ಚಿನ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದ ಕುಟುಂಬಗಳು ಶೇಕಡಾ ೩ ರಷ್ಟು ಮಾತ್ರವಿದ್ದು ಅಂಥ ಕುಟುಂಬಗಳು ಶೇಕಡಾ ೨೩ರಷ್ಟು ಭೂಮಿಯನ್ನು ಪಡೆದಿದ್ದವು. ನಮ್ಮ ದೇಶದಲ್ಲಿರುವ ಭೂಮಿಯ ಅಸಮಾನ

ಹಂಚುವಿಕೆಯ ಕಲ್ಪನೆಯನ್ನು ಮೇಲಿನ ಅಂಕಿ ಸಂಖ್ಯೆಗಳು ನಮಗೆ ಕೊಡು ತ್ತವೆ. ಗ್ರಾಮೀಣ ಪ್ರದೇಶದ ಬಹುತೇಕ ಕುಟುಂಬಗಳು ಭೂಮಿಯನ್ನು ಸಾಗುವಳಿ ಮಾಡುವ ಕುಟುಂಬಗಳಾಗಿರದೆ, ಭೂಮಿಯು ಕೆಲವೇ ಗ್ರಾಮೀಣ ಕುಟುಂಬಗಳ ಸೊತ್ತಾಗಿದೆಯೆಂದು ಹೇಳಬಹುದು.

ಇಂಥ ಪರಿಸ್ಥಿತಿಯಲ್ಲಿ ನಾವು ಪ್ರತಿಯೊಂದು ಭೂರಹಿತ ಗ್ರಾಮೀಣ ಕುಟುಂಬಕ್ಕೆ ಎಷ್ಟು ಭೂಮಿಯನ್ನು ಕೊಡಲು ಸಾಧ್ಯ ಮತ್ತು ಇಷ್ಟು ಭೂಮಿ ಯನ್ನು ಪ್ರತಿಯೊಂದು ಕುಟುಂಬಕ್ಕೆ ಕೊಡಬೇಕಾದಲ್ಲಿ ಭೂಹಿಡುವಳಿಯ ಪರ ಮಾವಧಿ ಮಿತಿ ಎಷ್ಟು ಇರಬೇಕಾಗುತ್ತದೆಯೆಂಬುದನ್ನು ಪ್ರೊ. ದಾಂಡೇಕರ ಮತ್ತು ರಥ ಅವರು ಲೆಕ್ಕ ಹಾಕಿದ್ದಾರೆ. ನಾವು ಕೇರಳ, ಪಶ್ಚಿಮ ಬಂಗಾಲ ಮತ್ತು ಆಸ್ಸಾಮ ರಾಜ್ಯಗಳಲ್ಲಿ ಪ್ರತಿಯೊಂದು ಗ್ರಾಮೀಣ ಕುಟುಂಬಕ್ಕೆ ೧/೨ ಎಕರೆ ಭೂಮಿಯನ್ನು ಕೊಡಬೇಕೆಂದು ತಿಳಿದರೆ, ಆ ರಾಜ್ಯಗಳಲ್ಲಿ ಭೂ ಹಿಡು ವಳಿಯ ಪರಮಾವಧಿ ಮಿತಿಯು, ಕೇರಳ ಆಸ್ಸಾಮಗಳಲ್ಲಿ ೭.೫ ಎಕರೆ, ತಮಿಳು ನಾಡು ಮತ್ತು ಬಂಗಾಲಗಳಲ್ಲಿ ೧೦ ಎಕರೆ ಇರಬೇಕಾಗುತ್ತದೆ. ಯಾಕೆಂದರೆ ಈ ರಾಜ್ಯಗಳಲ್ಲಿ ಶೇಕಡಾ ೪೦ ರಿಂದ ೫೫ ಗ್ರಾಮೀಣ ಕುಟುಂಬಗಳು ಭೂರಹಿತ ಅಥವಾ ೧/೨ ಎಕರೆಗಿಂತ ಕಡಿಮೆ ಭೂಮಿ ಹೊಂದಿದವರಾಗಿರುತ್ತಾರೆ.

ಜಮ್ಮು ಮತ್ತು ಕಾಶ್ಮೀರ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರತಿ ಯೊಂದು ಗ್ರಾಮೀಣ ಕುಟುಂಬಕ್ಕೆ ೧/೨ ಎಕರೆ ಭೂಮಿಯನ್ನು ಕೊಡಲು, ಭೂ ಹಿಡುವಳಿಯ ಪರಮಾವಧಿ ಮಿತಿಯು ೧೫ ಎಕರೆ ಇರಬೇಕಾಗುತ್ತದೆ.

ಬಿಹಾರ, ಓರಿಸ್ಸಾ, ಪಂಜಾಬ ಮತ್ತು ಉತ್ತರ ಪ್ರದೇಶಗಳಲ್ಲಿ ಪ್ರತಿ ಗ್ರಾಮೀಣ ಕುಟುಂಬಕ್ಕೆ ೧ ಎಕರೆ ಭೂಮಿಯನ್ನು ಕೊಡಲು ಸಾಧ್ಯವೆಂದು ತಿಳಿ ದರೆ, ಈ ರಾಜ್ಯಗಳಲ್ಲಿ ಭೂ ಪರಮಾವಧಿ ಹಿಡುವಳಿಯ ಗಾತ್ರ, ಬಿಹಾರ ರಾಜ್ಯ ದಲ್ಲಿ ೧೨ ೧/೨ ಎಕರೆ, ಉತ್ತರ ಪ್ರದೇಶದಲ್ಲಿ ೧೫ ಎಕರೆ ಮತ್ತು ಪಂಜಾಬದಲ್ಲಿ ೨೫ ಎಕರೆ ಇರಬೇಕಾಗುತ್ತದೆ.

ಆಂಧ್ರಪ್ರದೇಶ, ಕರ್ನಾಟಕ, ಗುಜರಾಥ, ಮಧ್ಯಪ್ರದೇಶ ಮತ್ತು ಮಹಾ ರಾಷ್ಟ್ರ ರಾಜ್ಯಗಳಲ್ಲಿ ಪ್ರತಿಯೊಂದು ಗ್ರಾಮೀಣ ಕುಟುಂಬಕ್ಕೆ ೨ ೧/೨ ಎಕರೆ ಭೂಮಿಯನ್ನು ಕೊಡಲು, ಈ ರಾಜ್ಯಗಳಲ್ಲಿ ಭೂ ಹಿಡುವಳಿಯ ಮಿತಿಯು, ಆಂಧ್ರ ಪ್ರದೇಶದಲ್ಲಿ ೧೫ ಎಕರೆ, ಕರ್ನಾಟಕ ಮತ್ತು ಗುಜರಾಥದಲ್ಲಿ ೨೫ ಎಕರೆ, ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ೩೦ ಎಕರೆ ಇರಬೇಕಾಗುತ್ತದೆ.

ರಾಜಸ್ತಾನದಲ್ಲಿ ಪ್ರತಿ ಗ್ರಾಮೀಣ ಕುಟುಂಬಕ್ಕೆ ೫ ಎಕರೆ ಭೂಮಿಯನ್ನು ಕೊಡಲು ಭೂ ಪರಮಾವಧಿ ಮಿತಿಯು ೫೦ ಎಕರೆ ಇರಬೇಕಾಗುತ್ತದೆ. ಆದ್ದ

ರಿಂದ ಪ್ರತಿ ಗ್ರಾಮೀಣ ಭೂ ರಹಿತ ಕುಟುಂಬಕ್ಕೆ ನಾವು ಭೂಮಿಯನ್ನು ಹಂಚಿದ್ದಾದರೆ ನಮ್ಮ ದೇಶದಲ್ಲಿ ಚಿಕ್ಕ ಬೇಸಾಯಗಾರರ ಸಂಖ್ಯೆ ಹೆಚ್ಚಾಗುತ್ತದೆ. ಆದ್ದರಿಂದ ಭೂಮಿಯ ಮರುವಿತರಣೆಯು ಕೂಲಿಕಾರರ ಸಮಸ್ಯೆಯನ್ನು ಹೋಗಲಾಡಿಸಲಾಗದು. ಮೇಲಾಗಿ ಭೂ ಹಿಡುವಳಿಯ ಪರಮಾವಧಿ ಮಿತಿಯನ್ನು ತೀರ ಕಡಿಮೆ ಮಾಡಿದ್ದಾರೆ. ಬೇಸಾಯದ ಪ್ರಗತಿಯು ಕುಂಠಿತವಾಗಬಹುದೆಂದು ಪ್ರೊ. ದಾಂಡೇಕರ ಮತ್ತು ರಥ ಅವರು ಅಭಿಪ್ರಾಯಪಡುತ್ತಾರೆ. ಹೀಗೆಂದ ಮಾತ್ರಕ್ಕೆ ಭೂ ಹಿಡುವಳಿಯ ಪರಮಾವಧಿ ಮಿತಿ ಇರಬಾರದೆಂದಲ್ಲ. ಆದರೆ ಭೂರಹಿತ ಗ್ರಾಮೀಣ ಪ್ರದೇಶದ ಕುಟುಂಬಗಳಿಗೆ ಭೂಮಿಯನ್ನು ಹಂಚಲು ಈ ಪರಮಾವಧಿ ಮಿತಿಯನ್ನು ತೀರ ಕೆಳಮಟ್ಟಕ್ಕೆ ತಂದಿದ್ದಾರೆ. ಅದು ಯಾವ ಉದ್ದೇಶವನ್ನೂ ಪೂರೈಸಲಾರದು. ಪ್ರೊ. ಬಿ ಎಸ್. ಮಿನ್ಹಾಸರವರೂ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅವರು ಭೂ ಹಿಡುವಳಿಯ ಮೇಲೆ ಗರಿಷ್ಠ ಮಿತಿಯನ್ನು ಇಡಬೇಕೆಂದು ಹೇಳುತ್ತಾರೆ. ಭೂರಹಿತ ಜನರಿಗೆ ಭೂಮಿಯನ್ನು ಕೊಡುವದಾಗಿರದೆ ಸಣ್ಣ ರೈತರಿಗೆ ಇನ್ನಷ್ಟು ಭೂಮಿಯನ್ನು ಕೊಟ್ಟು ಅವರ ಉತ್ಪಾದನೆಯನ್ನು ಹೆಚ್ಚಿಸುವದಾಗಿರಬೇಕೆಂಬುದೇ ಇದರ ಉದ್ದೇಶ.

ಭೂಮಿಗಳ ಮರುವಿತರಣೆಯು ನಮ್ಮ ದೇಶದ ಭೂರಹಿತ ಕೂಲಿಕಾರರ ಬಡತನವನ್ನು ಹೋಗಲಾಡಿಸಲು ಸಹಾಯಕವಾಗಲಾರದೆಂಬುದನ್ನು ನಾವು ಕಂಡುಕೊಂಡಂತಾಯಿತು. ಹಾಗಾದರೆ ಈ ಭೂರಹಿತ ಕೂಲಿಕಾರರ ಪರಿಸ್ಥಿತಿಯನ್ನು ಸುಧಾರಿಸಲು ಮತ್ತೆ ಬೇರೆ ಪರಿಹಾರಗಳೇನೆಂಬುದನ್ನು ನಾವು ಕಂಡುಕೊಳ್ಳುವಾ.

ದೊಡ್ಡ ಪ್ರಮಾಣದ ಕಾಮಗಾರಿ ಕಾರ್ಯಕ್ರಮ :

ಕೃಷಿ ಕಾರ್ಮಿಕರಿಗೆ ಭೂಮಿ ಇಲ್ಲದಿರುವದರಿಂದ ಅಥವಾ ಅತ್ಯಲ್ಪ ಭೂಮಿ ಇರುವದರಿಂದ ಅವರು ವರುಷದಲ್ಲಿ ಅನೇಕ ದಿನಗಳನ್ನು ಕೆಲಸವಿಲ್ಲದೆ ನಿರುದ್ಯೋಗಿಗಳಾಗಿ ಕಳೆಯಬೇಕಾಗುತ್ತದೆಯೆಂಬುದನ್ನು ನಾವು ಈಗಾಗಲೆ ಕಂಡುಕೊಂಡಿದ್ದೇವೆ. ಅದೂ ಅಲ್ಲದೆ ಅವರಿಗೆ ಸಾಕಷ್ಟು ಭೂಮಿಯನ್ನು ಕೊಡಲು ಸಾಧ್ಯವಿಲ್ಲವೆಂಬ ವಿಷಯವನ್ನು ನಾವು ಕಂಡುಕೊಂಡದ್ದಾಯಿತು. ಹಾಗಾದರೆ ಕೃಷಿ ಕಾರ್ಮಿಕರ ಏಳ್ಗೆಗೆ ಬೇರೆ ಮಾರ್ಗಗಳು ಉಂಟೇ ಎಂಬ ಪ್ರಶ್ನೆ ಇಲ್ಲಿ ಸಹಜವಾಗಿ ಉದ್ಭವಿಸುತ್ತದೆ. ಇದಕ್ಕೆ ಅರ್ಥಶಾಸ್ತ್ರಜ್ಞರು ಪರಿಹಾರವನ್ನು ಸೂಚಿಸಿದ್ದಾರೆ. ಅದಾವುದೆಂದರೆ ಗ್ರಾಮೀಣ ಪ್ರದೇಶದಲ್ಲಿ ಈ ಜನರಿಗೆ ವರುಷವಿಡೀ ಉದ್ಯೋಗ ಕಲ್ಪಿಸಲು ದೊಡ್ಡ ಪ್ರಮಾಣದಲ್ಲಿ ಕಾಮಗಾರಿ ಕಾರ್ಯಕ್ರಮಗಳನ್ನು ಕೈಕೊಳ್ಳುವದಾಗಿದೆ.

ಪ್ರೊ. ದಾಂಡೇಕರ ಮತ್ತು ರಥ ಅವರ ಪ್ರಕಾರ ನಮ್ಮ ದೇಶದಲ್ಲಿ ಶೇಕಡಾ ೪೦ ರಷ್ಟು ಜನರು ಕನಿಷ್ಟ ಮಟ್ಟದ ಜೀವನವನ್ನು ನಡೆಸಲು ಸಾಕಾಗುವಷ್ಟು ಆದಾಯವನ್ನು ಹೊಂದಿರುವದಿಲ್ಲ. ಅಂದರೆ ೧೯೬೮-೬೯ರ ಬೆಲೆಗಳ ಪ್ರಕಾರ ಈ ಜನರ ವರಮಾನ ವರುಷಕ್ಕೆ ೩೨೪ ರೂಪಾಯಿಗಳಷ್ಟು ಇರುವದಿಲ್ಲ. ಇದರಲ್ಲಿಯ ¾ ದಷ್ಟು ಜನರು ಕಡುಬಡವರು. ಅವರಿಗೆ ಒಂದಿಲ್ಲೊಂದು ರೀತಿಯ ಸಾಮಾಜಿಕ ಸಹಾಯ ಬೇಕಾಗುತ್ತದೆಯೆಂದು ದಾಂಡೇಕರ ಮತ್ತು ರಥ ಅವರು ಅಭಿಪ್ರಾಯ ಪಡುತ್ತಾರೆ. ಇನ್ನುಳಿದ ಶೇಕಡಾ ೩೦ ರಷ್ಟು ಗ್ರಾಮೀಣ ಜನರಿಗೆ ಅಂದರೆ ೧೪ ಕೋಟಿ ೫೦ ಲಕ್ಷ ಜನರಿಗೆ ಕನಿಷ್ಠ ಜೀವನ ನಡೆಸಲು ಅವರಿಗೆ ಸುಮಾರು ೧೦೦೦ ಕೋಟಿ ರೂಪಾಯಿಗಳ ಹೆಚ್ಚಿನ ಉತ್ಪನ್ನ ಬೇಕಾಗುತ್ತದೆಯೆಂದು ಪ್ರೊ. ದಾಂಡೇಕರ ಮತ್ತು ರಥ ಅವರು ಅಂದಾಜು ಮಾಡಿದ್ದಾರೆ. ಆದ್ದರಿಂದ ಒಂದು ವರುಷಕ್ಕೆ ೧೯೬೮-೬೯ ಬೆಲೆಗಳ ಮಟ್ಟದಿಂದ ಒಂದು ಸಾವಿರ ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ತೆಗೆದುಕೊಳ್ಳಬೇಕೆಂದು ಅವರು ತಿಳಿಸುತ್ತಾರೆ. ೧೫ ವರುಷಗಳಿಗೆ ಮೇಲ್ಪಟ್ಟ ಹಾಗೂ ೫೯ ವರುಷಗಳೊಳಗಿನ ಪ್ರತಿಯೊಬ್ಬ ಪುರುಷ ಹಾಗೂ ಸ್ತ್ರೀಗೆ ಕೆಲಸ ಕೊಟ್ಟಲ್ಲಿ ಮತ್ತು ಪುರುಷರಿಗೆ ೨.೪೦ ರೂ. ಗಳಂತೆ ಸ್ತ್ರೀಗೆ ೧.೬೦ ರೂ. ಗಳಂತೆ ಕೂಲಿಯನ್ನು ಕೊಟ್ಟಲ್ಲಿ ಅವರು ಪ್ರತಿ ದಿನ ೪ ರೂಪಾಯಿಗಳನ್ನು ಸಂಪಾದಿಸುತ್ತಾರೆ. ಹೀಗೆ ಅವರು ವರುಷದಲ್ಲಿ ಸುಮಾರು ೨೦೦ ದಿನ ಕೆಲಸ ಮಾಡುತ್ತಾರೆಂದು ತಿಳಿದರೆ ಪ್ರತಿಯೊಂದು ಕುಟುಂಬ ತಿಂಗಳಿಗೆ ೧೦೦ ರೂಪಾಯಿಗಳನ್ನು ಗಳಿಸಬಹುದು. ಒಂದು ಕುಟುಂಬದಲ್ಲಿ ೪ ಜನರಿರುವರೆಂದು ನಾವು ತಿಳಿದರೆ ಅವರು ಕನಿಷ್ಠ ಜೀವನ ನಡೆಸಲು ಸಾಕಾಗುವಷ್ಟು ಉತ್ಪನ್ನ ಅವರಿಗೆ ಬರುತ್ತದೆ. ಈ ರೀತಿಯಾಗಿ ದೊಡ್ಡ ಪ್ರಮಾಣದಲ್ಲಿ ಗ್ರಾಮೀಣ ಜನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿ ಕೊಡಬೇಕಾದಲ್ಲಿ ಮೂರು ಅತಿ ಮುಖ್ಯ ಪ್ರಶ್ನೆಗಳು ಉದ್ಭವಿಸುತ್ತವೆ. ಅವು ಯಾವವೆಂದರೆ :

೧ ಇಷ್ಟು ಜನರಿಗೆ ಉದ್ಯೋಗ ಕೊಡಲು ನಮ್ಮ ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಕೆಲಸವಿದೆಯೇ ?
೨ ಈ ಉದ್ಯೋಗ ಯೋಜನೆಯನ್ನು ಹೇಗೆ ಕಾರ್ಯಗತಗೊಳಿಸುವದು.
೩ ಇವಕ್ಕೆ ಬೇಕಾದ ಹಣ ಎಲ್ಲಿಂದ ಬರುತ್ತದೆ ?

ಪ್ರೊ. ದಾಂಡೇಕರ ಮತ್ತು ರಥ ಅವರ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಇಷ್ಟು ಜನರಿಗೆ ಉದ್ಯೋಗ ಕೊಡಲು ಸಾಕಷ್ಟು ಕೆಲಸವಿದೆ. ರಸ್ತೆ ನಿರ್ಮಾಣ, ಭೂ ಅಭಿವೃದ್ಧಿ, ಚಿಕ್ಕ ಮತ್ತು ಮಧ್ಯಮ ನೀರಾವರಿ, ಗ್ರಾಮೀಣ ಆರೋಗ್ಯ ರಕ್ಷಣೆ ಮುಂತಾದ ಕೆಲಸಗಳನ್ನು ತೆಗೆದುಕೊಳ್ಳಬಹುದು.

ಈ ಯೋಜನೆಗಳನ್ನು ಕಾರ್ಯಗತಗೊಳಿಸುವದು ತಾಲೂಕ ಅಥವಾ ಜಿಲ್ಲಾ ಮಟ್ಟದ ಅಭಿವೃದ್ಧಿ ಮಂಡಳಗಳ ಜವಾಬ್ದಾರಿಯಾಗಿರಬೇಕೆಂದು ಪ್ರೊ. ದಾಂಡೇಕರ ಮತ್ತು ರಥ ಅವರು ಅಭಿಪ್ರಾಯ ಪಡುತ್ತಾರೆ. ಈ ಅಭಿವೃದ್ಧಿ ಮಂಡಳಗಳ ಕಕ್ಷೆಯಲ್ಲಿ ಬರುವ ಎಲ್ಲ ಹಳ್ಳಿಗಳಲ್ಲಿ ಯಾವ ಯಾವ ಕೆಲಸ ತೆಗೆದುಕೊಳ್ಳಬೇಕೆಂಬುದನ್ನು ಈ ಅಭಿವೃದ್ಧಿ ಮಂಡಳಗಳಿಗೇ ಬಿಟ್ಟುಕೊಡಬೇಕು. ಹೀಗೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ನಾವು ಕೆಲವು ಗ್ರಾಮೀಣ ಜನರಿಗೆ ಉದ್ಯೋಗ ಅವಕಾಶ ಕೊಟ್ಟಲ್ಲಿ ಇನ್ನುಳಿದ ಕೂಲಿಕಾರರಿಗೆ ಬೇಸಾಯದಲ್ಲಿ ಉದ್ಯೋಗ ಅವಕಾಶಗಳು ಸಿಕ್ಕು ಅವರೂ ವರುಷವಿಡೀ ಉದ್ಯೋಗ ಪಡೆಯಲು ಅನುಕೂಲವಾಗುತ್ತದೆ.

ಕೊನೆಯದಾಗಿ ಈ ಕಾರ್ಯಕ್ರಮಗಳಿಗೆ ಬೇಕಾಗುವ ಸುಮಾರು ೧೦೦೦ ಕೋಟಿ ರೂಪಾಯಿಗಳನ್ನು ಎಲ್ಲಿಂದ ತರುವದೆಂಬುದು ದೊಡ್ಡ ಸಮಸ್ಯೆ. ಪ್ರೊ. ದಾಂಡೇಕರ ಮತ್ತು ರಥ ಅವರು ನಮ್ಮ ದೇಶದಲ್ಲಿಯ ಗ್ರಾಮೀಣ ಪ್ರದೇಶದಲ್ಲಿಯ ಮತ್ತು ಪಟ್ಟಣಗಳಲ್ಲಿಯ ಅತಿ ಶ್ರೀಮಂತರ ಉತ್ಪನ್ನದ ಶೇಕಡಾ ೭½ ಯಿಂದ ೧೫ ರಷ್ಟು ಭಾಗವನ್ನು ತೆಗೆದುಕೊಂಡರೆ ಈ ಕಾರ್ಯಕ್ರಮಗಳಿಗೆ ಬೇಕಾಗುವ ಹಣವು ಸಿಗುತ್ತದೆಯೆಂದು ಅಭಿಪ್ರಾಯ ಪಡುತ್ತಾರೆ. ಸರಕಾರವು ಈ ಹಣವನ್ನು ತೆರಿಗೆಗಳ ಮುಖಾಂತರವಾಗಿ ಪಡೆಯಬಹುದು.

ಆದ್ದರಿಂದ ನಮ್ಮ ದೇಶದಲ್ಲಿಯ ಅತೀ ಬಡವರ ಗುಂಪಿನಲ್ಲಿ ಬರುವ ಕೃಷಿ ಕಾರ್ಮಿಕರ ಪರಿಸ್ಥಿತಿಯನ್ನು ಸುಧಾರಿಸುವ ಒಂದೇ ಮಾರ್ಗವೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಕೊಂಡು ಅವರಲ್ಲಿರುವ ನಿರುದ್ಯೋಗತನ ಮತ್ತು ಅರೆನಿರುದ್ಯೋಗತನಗಳನ್ನು ತೊಡೆಯುವದಾಗಿದೆ. ಈ ರೀತಿ ಗ್ರಾಮೀಣ ಪ್ರದೇಶಗಳಲ್ಲಿಯ ಬಡವರ ಉತ್ಪನ್ನ ಹೆಚ್ಚಿದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಅವಕಾಶಗಳು ಇನ್ನೂ ಹೆಚ್ಚುತ್ತವೆ. ಆದ್ದರಿಂದ ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಯಾಗದ ಹೊರತು ಕೃಷಿ ಕಾರ್ಮಿಕರ ಏಳ್ಗೆಯಾಗಲಾರದು.

ಗ್ರಂಥಋಣ

1 Rao, V. K. R. V. (Ed). **Agricultural Labour in India.** Bombay : Asia Publishers, 1962.

2 Nanavati, M. B. & Anjania, J. J. : **Indian Rural Problems**, Bombay : India Society of Agricultural Economics, 1972.

3 Dandekar, V. M. & Rath, N. : Poverty in India. Economic and Political Weekly. Vol. 6, No. 1–2, 1971.

4 Kusro, A. M. : **Reading in Agricultural Development,** Bombay : Allied Publishers, 1968.

5 Prakasa Rao, Shashi Kumar & Sulochana Kulkarni, Growth of Agricultural Labour in India. Indian **Journal of Labour Economics,** Vol. XVI, No. 4, 1974.

———

ಉತ್ತರ ಕನ್ನಡ ಜಿಲ್ಲೆಯ ಕೆಲವು ಅಪೂರ್ವ ಶಿಲ್ಪಗಳು

● ಅ. ಸುಂದರ

ಮೇ ೭೭ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ–ಹೊನ್ನಾವರ ಪ್ರದೇಶದ ಕೆಲವು ಭಾಗಗಳಲ್ಲಿ ಪ್ರಾದೇಶಿಕ ಅನ್ವೇಷಣೆ ನಡೆಸುತ್ತಿದ್ದಾಗ ಕಂಡುಬಂದ ಪುರಾತತ್ವ ಅವಶೇಷಗಳಲ್ಲಿ ಕೆಲವೊಂದು ಶಿಲ್ಪಗಳು ವಿಶಿಷ್ಟ ಲಕ್ಷಣಗಳುಳ್ಳದ್ದಾಗಿಯೂ ಇಲ್ಲವೆ ಅಪರೂಪದ್ದಾಗಿಯೂ ಇವೆ. ಅವುಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

I. ಬೌದ್ಧ ಶಿಲ್ಪ

೧. ಬುದ್ಧ : ಅಂಕೋಲದಿಂದ ಪಶ್ಚಿಮಕ್ಕೆ ಸುಮಾರು ೩ ಕಿ. ಮೀ. ದೂರದಲ್ಲಿ ಸಮುದ್ರದ ಅಂಚಿನಲ್ಲಿ ಬಬ್ರುವಾಡ ಎಂಬ ಒಂದು ಸಣ್ಣ ಹಳ್ಳಿ ಇದೆ. ಇಲ್ಲಿ ಬಬ್ರು ದೇವತೆಯ ಒಂದು ಗುಡಿಯಿದೆ. ಆ ದೇವತೆಯಿಂದಲೇ ಆ ಹಳ್ಳಿಗೆ "ಬಬ್ರುವಾಡ"ವೆಂದು ಹೆಸರು ಬಂತೆಂದು ಪ್ರತೀತಿಯಿದೆ. ಗುಡಿಯೊಳಗಿರುವುದು ಮಾತ್ರ ಬುದ್ಧನ ಮೂರ್ತಿ.

ಬುದ್ಧನು (ಚಿತ್ರ 1; ೧) ಪದ್ಮಾಸನದಲ್ಲಿ ಕುಳಿತಿದ್ದು ಅವನ ಎರಡೂ ಕೈಗಳು ಧ್ಯಾನ ಮುದ್ರೆಯಲ್ಲಿವೆ. ಮಂಡಿಯ ತನಕ ಇಳಿಬಿದ್ದ ಧೋತ್ರ ಮತ್ತು ಎಡಭುಜದ ಮೇಲಿಂದ ಇಳಿಬಿದ್ದ ಬ್ರಹ್ಮವಸ್ತ್ರವನ್ನು ಉಟ್ಟಿದ್ದಾನೆ. ಗುಂಗುರ

ಕುಂಡಲ, ಉದ್ದುದ್ದ ಕಿವಿ, ದಪ್ಪ ತುಟಿ, ವಿಶಾಲವಾದ ಭುಜ ಮತ್ತು ಎದೆ, ಒಳ್ಳೇ ಮೈಕಟ್ಟು ಮನಸ್ಸಿಗೆ ಹಿಡಿಯುವಹಾಗಿದೆ. ಕಣ್ಣು, ಮೂಗು ಮತ್ತು ತುಟಿ ಸ್ವಲ್ಪ ಒಡೆದು ಹೋಗಿ ಸವೆದಿದೆ. ಅರಳಿದ ಕಮಲಾಸನದ ದಳಗಳನ್ನೂ ಕೂಡ ಸ್ಪಷ್ಟವಾಗಿ ಬಿಡಿಸಿರುವುದು ಗಮನಾರ್ಹ. ಬೆನ್ನಿನ ಹಿಂದೆ ಮಕರ ಚಿತ್ರ ಮತ್ತು ದಿಂಬುಗಳ ಆಸರೆ ಪಟ್ಟಿಕೆಯಿರುವುದು ಕೂಡಾ ಗಮನಾರ್ಹ. ಶಿಲ್ಪ ಶೈಲಿಯ ದೃಷ್ಟಿಯಿಂದ ಇದರ ಕಾಲಮಾನ ಸುಮಾರು ೪-೫ನೇ ಶತಮಾನದ್ದಾಗಿದ್ದು ಇದು ಐಹೊಳೆಯಲ್ಲಿ ಹಿಂದೆ ಅಲ್ಲಿಯ ದೇಸಾಯಿಯವರ ಮನೆ ಹತ್ತಿರ ಬಿದ್ದಿದ್ದು ಈಗ ಅಲ್ಲಿಯ ಕೇಂದ್ರ ಸರ್ಕಾರದ ಪುರಾತತ್ವ ಸರ್ವೇಕ್ಷಣ ಶಾಖೆಯ ವಸ್ತುಸಂಗ್ರಹಾಲಯದಲ್ಲಿ ಇಡಲ್ಪಟ್ಟ ಬುದ್ಧನ ವಿಗ್ರಹಕ್ಕೆ ಬಹಳಷ್ಟು ಹೋಲುತ್ತದೆ. ಅಜಂತಾ ಮತ್ತು ಎಲ್ಲೋರ ಬೌದ್ಧ ಚೈತ್ಯಾಲಯ ವಿಹಾರ ಸಂಖ್ಯೆ ಕ್ರಮವಾಗಿ ೧೬, ೧೯ ಮತ್ತು ೮ ರಲ್ಲಿರುವ ಮಕರ ಬೆನ್ನುಪಟ್ಟಿಯುಳ್ಳ ಆಸನದ ಮೇಲೆ ಕುಳಿತ ಬುದ್ಧನಿಗೆ ಹೋಲುತ್ತದೆ.

ಈ ಗ್ರಾಮದಿಂದ ಆಗ್ನೇಯ ದಿಕ್ಕಿಗೆ ಸುಮಾರು ೧೫ ಕಿ. ಮಿ. ದೂರದಲ್ಲಿರುವ ಹಿರೇಗುತ್ತಿಯಲ್ಲಿ ಹಿಂದೆ ಸಿಕ್ಕಿದ ಸು. ೬ನೇ ಶತಮಾನದ ತಾಮ್ರಶಾಸನದಲ್ಲಿಯ ಉಲ್ಲೇಖದಿಂದ ಈ ಭಾಗದಲ್ಲಿ ಬೌದ್ಧ ಧರ್ಮ ಪ್ರಚಲಿತವಿತ್ತೆಂದು ತಿಳಿದಿತ್ತು. ಅದನ್ನು ಈ ವಿಗ್ರಹವು ಪುಷ್ಟೀಕರಿಸುತ್ತದೆ. ಆ ತಾಮ್ರ ಶಾಸನವು ಭೋಜ ವಂಶದ ಅಶಂಕಿತ ರಾಜನ ಕಾಲದ್ದಾಗಿದ್ದು ಸಂಸ್ಕೃತ ಭಾಷೆ ಮತ್ತು ಕನ್ನಡ ಲಿಪಿಯಲ್ಲಿದೆ. ಅದರಲ್ಲಿ ಭಗವಾನ್ ಬುದ್ಧನ ಪ್ರಾರ್ಥನೆ ಆರಂಭದಲ್ಲಿದ್ದು, ಅಶಂಕಿತ ರಾಜನು ಅವನ ಮಾಂಡಲೀಕ ಅರಸ ಕೇಕಯ ವಂಶದ ಕೊಟ್ಟಿ ಪೆಗ್ಗಲಿಯ ವಿನಂತಿಯ ಮೇರೆಗೆ ಅವನು ಕಟ್ಟಿಸಿದ ಬೌದ್ಧ ವಿಹಾರಕ್ಕೆ ದೀಪಕ, ವಿಷಯದಲ್ಲಿದ್ದ ಸುಂದರಿಕಾ ಗ್ರಾಮವನ್ನು ದತ್ತಿಯಾಗಿ ಕೊಟ್ಟ ವಿಷಯವಿದೆ.

ಹಂಚಿನ ಮಾಡುಳ್ಳ ಈ ದೇವಾಲಯವು ಇತ್ತೀಚಿನ ಕಾಲದ್ದು; ಇದರಲ್ಲಿ ವಾಸ್ತುಶಿಲ್ಪ, ವೈಶಿಷ್ಟ್ಯವೇನಿಲ್ಲ. ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಅದರಲ್ಲೂ ಅಂಕೋಲ ಕುಮಟಾ ತಾಲೂಕಿನ ಭಾಗಗಳಲ್ಲಿ, ಬೀರ(ವೀರ)ರ ಕಲ್ಲಿನ ಮೂರ್ತಿಗಳನ್ನು ಮಾಡಿಸಿ ಪೂಜಿಸುವುದು ಸರ್ವಸಾಮಾನ್ಯ. ಬಹಳ ಅಪರೂಪವಾಗಿ ಇಂಥ ಮೂರ್ತಿಗಳನ್ನು 'ಬಬ್ರು' ಎಂದು ಕರೆಯುವರುಂಟು. ಕುಮಟದ ಹತ್ತಿರವಿರುವ ವನ್ನಳ್ಳಿ ಇಂಥ ಒಂದು ಮೂರ್ತಿಗೆ ಬಬ್ರು (ಚಿತ್ರ 1; 2) ಎಂದೇ ಕರೆಯಲಾಗಿದೆ. ಸಾಮಾನ್ಯವಾಗಿ ಇಂಥ ಮೂರ್ತಿಗಳು ೨೦೦-೩೦೦ ವರ್ಷಗಳ ಈಚಿನವು. ಆದ್ದರಿಂದ ಪ್ರಚಲಿತ ಈ ಪದ್ಧತಿಯ ಪ್ರಭಾವದಿಂದ ಬಬ್ರುವಾಡದಲ್ಲಿಯ ದೃಢಕಾಯದ ಮೂರ್ತಿಯನ್ನು ಕೂಡಾ

ಬಬ್ರು ಎಂದು ಇತ್ತೀಚಿನ ಕಾಲದಲ್ಲಿ ಇಲ್ಲಿಯ ಜನರಲ್ಲಿ ನಂಬಿಕೆ ಮೂಡಿ ಅದನ್ನು ಹಾಗೆ ಕರೆಯಲಾಯಿತೆಂದು ಊಹಿಸಬಹುದು.

II. ಜೈನ ಶಿಲ್ಪಗಳು

೧. ಕುಮಟದಲ್ಲಿಯೂ, ಇದೇ ತಾಲೂಕಿನಲ್ಲಿರುವ ಚಂದಾವರ ಮತ್ತು ಬಸ್ತಿ ಕೆರೆಯಲ್ಲಿಯೂ ಮತ್ತು ಹೊನ್ನಾವರ ತಾಲೂಕಿನಲ್ಲಿರುವ ಮಟ್ಟಾದಲ್ಲಿಯೂ ಜೈನಬಸದಿಯ ಅವಶೇಷಗಳು ಮೂರ್ತಿಗಳು ಇವೆ. ಇವೆಲ್ಲವೂ ಸುಮಾರು ೧೧–೧೨ನೇ ಶತಮಾನದವು. ಇವುಗಳಲ್ಲಿ, ಮಟ್ಟಾ ಗ್ರಾಮದ ಬಸ್ತಿ ಭಾಗದಲ್ಲಿ ಒಂದರ ಪಕ್ಕದಲ್ಲೊಂದಿದ್ದ ಎರಡು ಜೈನ ಬಸದಿಗಳು ಹಾಳಾಗಿವೆ. ಆದರೆ ಶಿಲ್ಪಗಳು ಮಾತ್ರಾ ಉಳಿದಿವೆ. ಒಂದು ಪಾರ್ಶ್ವನಾಥನ ಬಸದಿಯಾಗಿದ್ದು ಪೂಜೆಗೊಳ್ಳುತ್ತಿದೆ. ಗರ್ಭಗುಡಿಯಲ್ಲಿ ಪಾರ್ಶ್ವನಾಥ, ಅಂತರಾಳದಲ್ಲಿ ಧರಣೇಂದ್ರಯಕ್ಷ ಪದ್ಮಾವತಿಯಕ್ಷಿ ಮತ್ತು ಸರಸ್ವತಿಯರ ಸುಂದರ ವಿಗ್ರಹಗಳು ಇವೆ. ಇವೆಲ್ಲವು ಕರೆ ಕಲ್ಲಿನಿಂದ ಕಡೆದವು. ಹೊರಗಡೆಯಲ್ಲಿರುವ ಶಿಲಾಶಾಸನದ ಪ್ರಕಾರ ಗೋಕರ್ಣ ಮಹಾಬಳದೇವ ಪಾದಾರಾಧಕಂ ಶ್ರೀ ಮತ್ರಿಭುವನ ಮಲ್ಲಮಲ್ಲಿದೇವರು ಚಂದಾವರ ಸೀಮೆಯಲ್ಲಿಯ ಸಿರಿಯೂರು ನೆಲೆವೀಡಿನಲ್ಲಿ ಆಳುತ್ತಿದ್ದಾಗ ೧೦೬೩ ಶಕವರ್ಷ (೧೧೪೧ ಕ್ರಿ. ಶ.) ದಲ್ಲಿ ಈ ದೇವಾಲಯವನ್ನು ಕಟ್ಟಲಾಯಿತೆಂದು ತಿಳಿಯುತ್ತದೆ. ಈ ಬಸದಿಯ ಎಡಬದಿಯ ಬಸದಿಯಲ್ಲಿ ಅಂತರಾಳ ಮತ್ತು ಗರ್ಭಗುಡಿ ಮಾತ್ರ ಉಳಿದಿದೆ. ಗರ್ಭಗುಡಿಯಲ್ಲಿ ಚೆಲುವಾದ ಪದ್ಮಾಸನದಲ್ಲಿ ಕುಳಿತ ಮೂರು ತೀರ್ಥಂಕರ ಪ್ರತಿಮೆಗಳಿವೆ. ಬಲಬದಿಯ ಪ್ರತಿಮೆಯ ಪೀಠದ ಮೇಲಿರುವ ಶಾಸನವು ಅದನ್ನು ಶ್ರೀ ಮಲ್ಲಿದೇವರು ಮಾಡಿಸಿದ್ದೆಂದು ಹೇಳುತ್ತದೆ. ಮೂಲ ಸಂಘದ ಉಲ್ಲೇಖವೂ ಇದೆ. ಈ ಗರ್ಭಗುಡಿಗೆ ಪ್ರತಿಯೊಂದು ಮೂರ್ತಿಯ ಎದುರಿನಲ್ಲಿ ಪ್ರತ್ಯೇಕ ಬಾಗಿಲಿದೆ.

ಪಾರ್ಶ್ವನಾಥನ ಬಸದಿಯಲ್ಲಿ ಇರುವ ಮತ್ತೊಂದು ತೀರ್ಥಂಕರನ ವಿಗ್ರಹವು ಗಮನಾರ್ಹವಾಗಿದೆ. ಇದನ್ನು ಜಲವಳ್ಳಿ ಎಂಬ ಹಳ್ಳಿಯಿಂದ ತರಲಾಗಿದೆಯೆಂದು ಬಸದಿಯ ಪೂಜಾರಿಗಳು ಹೇಳಿದರು. ಇದು ಬಿಳಿ ಬೆಣಚಿ ಕಲ್ಲಿನದು (ಚಿತ್ರ 1; ೪). ತೀರ್ಥಂಕರ (ಆದಿನಾಥ?)ನು ಅರಳಿ ಹಸರಿಸಿದ ಕಮಲ ಪೀಠದ ಮೇಲೆ ಪದ್ಮಾಸನದಲ್ಲಿದ್ದು ಅವನ ಕೈಗಳು ಧ್ಯಾನಮುದ್ರೆಯಲ್ಲಿವೆ. ತಲೆಯ ಮೇಲೆ ಕೂದಲು ಗುಂಗುರು ಗುಂಗುರಾಗಿದ್ದು ಭುಜದ ಮೇಲೆ ಸುರುಳಿಯಾಗಿ ಬಿದ್ದಿವೆ. ಆದರೆ ತಲೆಯ ಹಿಂಬದಿಯಲ್ಲಿ ಕೂದಲನ್ನು ಬಾಚಿ ಉದ್ದ ಇಳಿಬಿದ್ದ ಹಾಗೆ ತೋರಿಸಿರುವುದೇ ಒಂದು ವೈಶಿಷ್ಟ್ಯ. ಸಾಮಾನ್ಯವಾಗಿ ಈ ಭಾಗದಲ್ಲೂ ಕೂದಲು ಗುಂಗುರು ಗುಂಗುರಾಗಿಯೇ ತೋರಿಸಲಾಗು

ತ್ತವೆ. ಮತ್ತು ಕಿವಿಯ ಕೆಳ ಭಾಗಕ್ಕೆ ಆಯತಾಕಾರದ ಸರಳ ಆಭರಣ(?)ವು ಜೋತು ಬಿದ್ದ ಹಾಗೆ ಇದೆ. ಈ ವಿಶಿಷ್ಟ ಲಕ್ಷಣವು ಎಡಬದಿಯ ಜೈನ ಬಸದಿಯಲ್ಲಿರುವ ಎಡಬದಿಯ ಮೂರ್ತಿಯಲ್ಲಿಯೂ ಇದೆ. ಇದು ಆಭರಣವಾಗಿರದೆ ಕಿವಿಯ ತೂತನ್ನೆ ತೀರಾ ವಿಲಕ್ಷಣವಾಗಿ ತೋರಿಸಿರಬಹುದೇ ಎಂದು ಅನುಮಾನವಾಗಬಹುದು. ಆದರೆ ಮೂರ್ತಿಯ ಶೈಲಿಯನ್ನು ಗಮನಿಸಿದಾಗ, ಇಂಥ ವಿಲಕ್ಷಣಕ್ಕೆ ಎಡೆಯಿರುತ್ತದೆಯೇ ಎಂಬ ಪ್ರಶ್ನೆಯೂ ಏಳುತ್ತದೆ. ಈ ಸಂದರ್ಭದಲ್ಲಿ ಒಂದು ಐತಿಹಾಸಿಕ ವಿಷಯವನ್ನು ನೆನಪಿಗೆ ತಂದುಕೊಳ್ಳಬಹುದು. ಈ ಭಾಗದಲ್ಲಿ ಇದೇ ಸಮಯದಲ್ಲಿ ನಾಥ ಪಂಥ ಪ್ರಚಲಿತವಿತ್ತೆಂದು ಚಂದಾವರದ ಶಾಸನದಿಂದ ತಿಳಿದುಬರುತ್ತದೆ. ಈ ಪಂಥದ ಯೋಗಿಗಳು ತಮ್ಮ ಕಿವಿಗಳ ಕೆಳಭಾಗವನ್ನೇ ಸೀಳಿಬಿಟ್ಟಿರುತ್ತಾರೆ. ಇದು ಆ ಪಂಥದವರ ವೈಶಿಷ್ಟ್ಯ. ಆದ್ದರಿಂದಲೇ ಅವರಿಗೆ "ಖಾಣಫಾಟ"ರೆಂದು ಹೆಸರು ಬಂದಿದೆ. ಅಥವ ಕಿವಿಗೆ ದಪ್ಪ ತಂತಿಯ ಗಾಲಿಗಳಂಥ ಆಭರಣಗಳನ್ನು ಹಾಕಿಕೊಳ್ಳುವದುಂಟು. ಆದ್ದರಿಂದ ಈ ಸಂಪ್ರದಾಯದ ಪ್ರಭಾವ ಸಮಕಾಲಿನ ಜೈನ ತೀರ್ಥಂಕರ ಶಿಲ್ಪದ ಮೇಲೆ ಆಗಿರಬಹುದೇನೊ ಎಂಬ ಸಂಶಯ ಬರುತ್ತದೆ.

೨. ಚಂದಾವರದಲ್ಲಿಯ ಖಡ್ಗಾಸನದಲ್ಲಿರುವ ತೀರ್ಥಂಕರನ ಉಬ್ಬು ಶಿಲ್ಪವು ಮತ್ತು ಸಂತೆಗುಳಿ ಹತ್ತಿರವಿರುವ ಬಸ್ತಿಕೇರಿಯಲ್ಲಿ ಒಂದು ತೀರ್ಥಂಕರನ ಮತ್ತು ಒಂದು ಶ್ರಾವಕಿಯ ಮೂರ್ತಿಗಳಿವೆ. ಕುಮಟ ಊರಿನಲ್ಲಿಯೇ ಹೊಸದಾಗಿ ಕಟ್ಟಿಸಿದ ಬಸದಿಯಲ್ಲಿರುವ ಪಾರ್ಶ್ವನಾಥನ ಉಬ್ಬುಶಿಲ್ಪವು ಮೂಲಸಂಘ ಸೂರಸ್ತಗಣ ಚಿತ್ರಕೂಟಗಚ್ಛದ ಮುಕುಂದ ದೇವನ ಪ್ರತಿಷ್ಠೆಯೆಂಬುದು ಆ ಮೂರ್ತಿಯ ಪೀಠದ ಮೇಲಿನ ಶಾಸನದಿಂದ ತಿಳಿದಿದ್ದು ಈಗಾಗಲೇ ಪ್ರಕಟಿತ[3]ವಾಗಿದೆ. ಹೊನ್ನಾವರದ ಹತ್ತಿರವಿರುವ ಹಳದಿಪುರದಲ್ಲಿ ಜೈನ ಬಸದಿಯೆಂದು ಕರೆಯಲಾದ ಒಂದು ಆಧುನಿಕ ಸಾಧಾರಣ ಕಟ್ಟಡದಲ್ಲಿಯೂ ಜೈನ ತೀರ್ಥಂಕರರ ಶಿಲ್ಪಗಳಿವೆ. ಮತ್ತು ಗೋಕರ್ಣದ ಹತ್ತಿರವಿರುವ ಬಂಕಿಕೊಡ್ಲದಲ್ಲಿಯು ಜೈನ ಮೂರ್ತಿಗಳಿ[4]ವೆಯೆಂದು ತಿಳಿದಿದೆ.

ಈ ಜೈನ ಬಸದಿ ಮತ್ತು ಶಿಲ್ಪಾವಶೇಷಗಳಿಂದ ಒಂದು ಗಮನಾರ್ಹ ಸಂಗತಿ ಹೊರಬೀಳುತ್ತದೆ. ಉತ್ತರ ಕನ್ನಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಸುಮಾರು ೧೫-೧೬ ಶತಮಾನದಲ್ಲಿ ಜೈನ ಧರ್ಮವು ಗೇರುಸೊಪ್ಪ, ಬೀಳಗಿ ಅರಸರ ಪೋಷಣೆಯಲ್ಲಿ ಒಳ್ಳೆ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಭಟಕಳ, ಹಾಡುವಳ್ಳಿ, ಬೀಳಗಿ ಮತ್ತು ಗೇರುಸೊಪ್ಪೆಗಳಲ್ಲಿ ಶ್ರೇಷ್ಠ ಮಟ್ಟದ ಬಸದಿಗಳನ್ನು ಕಟ್ಟಲಾಯಿತು. ಈ ಸ್ಥಳಗಳಲ್ಲಿಯ ಬಸದಿಗಳು ಸುಪ್ರಸಿದ್ಧ. ಆದರೆ ಈ ಶತಮಾನಗಳ

ಗಿಂತ ಪೂರ್ವದಲ್ಲಿಯೇ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಚಂದಾವರ ಕುಮಟ ಪ್ರದೇಶ ಕೇಂದ್ರವಾಗಿದ್ದು ಹೊನ್ನಾವರ-ಅಂಕೋಲ ಕರಾವಳಿ ಪ್ರದೇಶದಲ್ಲಿ ಜೈನ ಧರ್ಮವು ಅಭಿವೃದ್ಧಿಯಲ್ಲಿತ್ತೆಂಬುದು ಸ್ಪಷ್ಟವಾಗುತ್ತದೆ.

III. ಪೌರಾಣಿಕ ಧರ್ಮದ ಶಿಲ್ಪಗಳು

i) ಶೈವ ಶಿಲ್ಪಗಳು :

೧. ಕಲವೆಯ (ಕುಮಟ, ತಾ) ಒಂದು ದೇವಿ ದೇವಸ್ಥಾನದಲ್ಲಿ ಪೂಜೆಗೊಳ್ಳುವ ಮೂರ್ತಿ ಮಹಿಷಮರ್ದಿನಿ (ಚಿತ್ರ 2; ೧) ದೇವಾಲಯವು ಒಂದು ಸಾಧಾರಣ ಕಟ್ಟಡವಾಗಿದ್ದು ಅರ್ವಾಚೀನ ಕಾಲದ್ದು. ಚತುರ್ಭುಜ ಮಹಿಷ ಮರ್ದಿನಿಯ ಮೂರ್ತಿಯು ದುಂಡು ಶಿಲ್ಪದಲ್ಲಿದ್ದು ಸಮಭಂಗದಲ್ಲಿದೆ. ಮೇಲಿನ ಕೈಗಳಲ್ಲಿದ್ದ ಆಯುಧಗಳು ಮುರಿದು ಹೋದುದಲ್ಲದೆ ಮಣಿಕಟ್ಟಿನ ಹತ್ತಿರ ಕೈಗಳೇ ತುಂಡಾಗಿವೆ. ಅವುಗಳನ್ನು ತಾಮ್ರದ ಕೊಳವೆಯಿಂದ ಪೂಜೆ ಮಾಡುವವರು ಜೋಡಿಸಿದ್ದಾರೆ. ಮುಂದೆ ಮುಕ್ಕರಿಸಿ ಬಿದ್ದ ಕೋಣನ ನೆತ್ತಿಯ ಮೇಲೆ ತನ್ನ ಬಲಹಸ್ತದಲ್ಲಿದ್ದ ಶೂಲದಿಂದ ಇರಿದದ್ದು ಎಡಗೈಯಿಂದ ಅದರ ಬಾಲವನ್ನು ಹಿಡಿದು ಹಿಂಭಾಗವನ್ನೇ ಮೇಲಕ್ಕೆತ್ತಲಾಗಿದೆ. ಕೋಣವು ಶೂಲದ ಇರಿತದ ನೋವಿನಿಂದ ನಾಲಿಗೆಯನ್ನು ಹೊರಚಾಚಿದೆ. ರತ್ನಖಚಿತ ಕುಸುರಿನ ಕೆತ್ತನೆಯುಳ್ಳ ಕಿರೀಟ ಮುಕುಟ ಚಕ್ರಕುಂಡಲಗಳು, ಕಂಠಾಭರಣ, ಸ್ತನಹಾರ, ನಾಗಮುರಿಗೆ, ಮಣಿಖಚಿತ ಬಳೆಗಳು, ಮುಂಭಾಗದಿಂದ ಕಾಣದಿರುವ ಶಿರಶ್ಚಕ್ರ ಮೂರ್ತಿಯಲ್ಲಿ ಮಾಡಿಸಲಾಗಿದೆ. ಹೆಣೆದ ಜಡೆ ಬೆನ್ನು ಮೇಲೆ ಇಳಿಬಿದ್ದಿದೆ. ಮುಂದೆ ನೆರಿಗೆ ಬರುವ ಹಾಗೆ ಮಡಿಕೆ ಮಡಿಕೆಯಾಗಿ ಸೀರೆ ಉಟ್ಟದ್ದು, ಸೊಂಟಕ್ಕೆ ಅಡ್ಡ ವಸ್ತ್ರವನ್ನು ಮುಂದೆ ಮಾಲೆಯ ಹಾಗೆ ಮತ್ತು ಬದಿಯಲ್ಲಿ ಇಳಿಬೀಳುವ ಹಾಗೆ ಕಟ್ಟಲಾಗಿದೆ. ಮೈಕಟ್ಟು ಪ್ರಮಾಣ ಬದ್ಧವಾಗಿದೆ. ಇದುವರೆಗೂ ಕಂಡುಬಂದ ಮಹಿಷಮರ್ದಿನಿ ಮೂರ್ತಿಗಳಲ್ಲಿ ದೈತ್ಯನನ್ನು ಇರಿಯಲು ತ್ರಿಶೂಲವನ್ನು ತೋರಿಸಲಾಗಿದೆ. ಆದರೆ ಇದರಲ್ಲಿ ಶೂಲವನ್ನು ತೋರಿಸಿರುವುದು ಅಪೂರ್ವವೇ ಸರಿ ಮತ್ತು ಅದರ ಮಾದರಿಯೂ ಗಮನಾರ್ಹ. ಶಿಲ್ಪಲಕ್ಷಣದ ಮೇಲೆ ಈ ಮೂರ್ತಿಯು ಸುಮಾರು ೫-೬ ಶತಮಾನದ್ದೆಂದು ಹೇಳಬಹುದು. ಸಾಮಾನ್ಯವಾಗಿ ಮಹಿಷಮರ್ದಿನಿಯ ಮೂರ್ತಿಗಳಲ್ಲಿ ದೇವಿಯು ತನ್ನ ಒಂದು ಕಾಲನ್ನು ಕೋಣನ ಬೆನ್ನನ್ನು ಮೆಟ್ಟಿ ತುಳಿದ ಹಾಗೆ ತೋರಿಸಲಾಗುತ್ತದೆ. ಆದರೆ ಮೇಲೆ ಹೇಳಿದ ಮೂರ್ತಿಯ ಭಂಗಿಯು ಇದಕ್ಕೆ ಹೊರತಾಗಿದೆ.

ಈ ತರಹ ಮಹಿಷಮರ್ದಿನಿ ಮೂರ್ತಿಗಳು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗವಾಡಿ, ಪೊಳಲಿ, ಮಂದರ್ತಿ, ಮಠದಬೆಟ್ಟುಗಳಲ್ಲಿವೆ. ಅವು ಪ್ರಾಯಃ

೮–೧೦ನೇ ಶತಮಾನದವೆಂದು ಸಧ್ಯಕ್ಕೆ ಊಹಿಸಬಹುದು. ಎಂ. ಜಿ. ಎಂ. ಕಾಲೇಜಿನಲ್ಲಿರುವ ಮೂರ್ತಿಯು, ಕಲಶೆಯ ಮೂರ್ತಿಗೆ ಶೈಲಿಯಲ್ಲಿ ಬಹಳ ಸಮೀಪವಾಗಿದೆ. ಆದರೆ ಅದು ಉದರದಿಂದ ಕೆಳಭಾಗ ಗುರುತಿಸಲಾಗದಷ್ಟು ಸವೆದಿದೆ.

೨. ಇದರ ಸಮೀಪದಲ್ಲಿ ದೀವಳ್ಳಿಯಲ್ಲಿ ಒಂದು ಈಗಿನ ಸಣ್ಣ ಮರದ ಕಟ್ಟಡದಲ್ಲಿ ಒಂದು ದೇವಿಯ ಮೂರ್ತಿಯಿದೆ (ಚಿತ್ರ 1; ೨). ಇದನ್ನು ದುರ್ಗಾ ಪರಮೇಶ್ವರಿಯೆಂದು ಪೂಜಿಸಲಾಗುತ್ತದೆ. ಈ ದ್ವಿಬಾಹು ಮೂರ್ತಿಯು ದುಂಡು ಶಿಲ್ಪದಲ್ಲಿದ್ದು ಸಮಭಂಗದಲ್ಲಿದೆ. ಬಲಗೈಯಲ್ಲಿ ಮೇಲ್ಮುಖವಾಗಿ ಹಿಡಿದ ಕತ್ತಿಯು ಎಡಗೈಯಲ್ಲಿ ಸರ್ಪವು ಇವೆ. ಎಡಹಸ್ತವು ಅಭಯ ಮುದ್ರೆಯಲ್ಲಿದ್ದು ಮಧ್ಯದ ಬೆರಳು ಮತ್ತು ಹೆಬ್ಬೆಟ್ಟಿನಿಂದ ಸರ್ಪವನ್ನು ಹಿಡಿಯಲಾಗಿದೆ. ಅಂಗೈಗೆ ಆನಿಸಿ ಸರ್ಪ ಹೆಡೆಬಿಚ್ಚಿದ ಹಾಗೆ ತೋರಿಸಲಾಗಿದೆ. ಮತ್ತು ಕಿರೀಟ ಮುಕುಟದ ಮೇಲೂ ಹೆಡೆ ಬಿಚ್ಚಿದ ಸರ್ಪವಿದೆ. ಗಾಲಿಯಂಥ ಚಕ್ರಕುಂಡಲ, ಕಂಠಾಭರಣ, ಪದಕವುಳ್ಳ ಸಣ್ಣ ಗಂಟೆಗಳ ಸ್ತನಹಾರ, ಕಂಕುಳಿಗೆ ಸುತ್ತು ಹಾಕಿದ ಭುಜಸರ, ಸರಳ ಮುರಿಗೆ: ಇವು ಆಭರಣಗಳು. ಸೀರೆಯನ್ನು ಮೇಲಿಂದ ಕೆಳಗೆ ಮೂರು ಹಂತದಲ್ಲಿ ಅಂಚು ಬರುವ ಹಾಗೆ ಉಟ್ಟಿರುವುದು ವೈಶಿಷ್ಟ್ಯವೇ ಸರಿ. ಸೊಂಟಕ್ಕೂ ಸಣ್ಣ ಗಂಟೆಗಳ ಪಟ್ಟಿಯಿದೆ. ತಲೆಯ ಹಿಂದೆ ಶಿರಶ್ಚಕ್ರವಿದೆ. ಕಂಬಗಳ ಮೇಲಿಂದ ತೋರಣ ಏರಿಸಿದ ಪ್ರಭಾವಳಿಯಿದೆ. ಈ ಮಾದರಿಯ ಪ್ರಭಾವಳಿಯಲ್ಲಿ ಕಂಬಗಳ ಮೇಲೆ ಕುಳಿತ ತೋರಣದ ಎರಡು ತುದಿಗಳನ್ನು ಬಾಯಲ್ಲಿ ಹಿಡಿದಂಥ ಮಕರಗಳಿರುತ್ತವೆ. ಆದರೆ ಇಲ್ಲಿ ಮಕರಗಳಿಲ್ಲ. ಶಿಲ್ಪಶೈಲಿ ಪ್ರಾದೇಶಿಕವಾಗಿ ಕಾಣುವುದು. ಕುಳಿತ ಅಥವ ನಿಂತ ದ್ವಿಭುಜ ದುರ್ಗಾ ಮೂರ್ತಿಯು ಬಲಗೈಯಲ್ಲಿ ಖಡ್ಗವು ಎಡಗೈಯಲ್ಲಿ ಪಾನಪಾತ್ರೆ ಇರುವುದು ಸಾಮಾನ್ಯ. ಆದರೆ ಈ ಮೂರ್ತಿಯ ಎಡಗೈಯಲ್ಲಿ ಮತ್ತು ಕಿರೀಟದ ಮೇಲೆ ಸರ್ಪವಿರುವುದು ಇದರ ವೈಶಿಷ್ಟ್ಯತೆಯಾಗಿದೆ. ಇದರ ಕಾಲಮಾನವನ್ನು ಸರಿಯಾಗಿ ತರ್ಕಿಸುವುದು ಸಧ್ಯಕ್ಕೆ ಅಷ್ಟು ಸುಲಭವಾಗಿಲ್ಲ ಆದರೂ ಇದರ ಕೆಲವು ವಿಶಿಷ್ಟ ಲಕ್ಷಣಗಳನ್ನು ಮತ್ತು ಶೈಲಿಯನ್ನು ಅನುಲಕ್ಷಿಸಿದಾಗ ಇದು ಪ್ರಾಯಶಃ ೧೨–೧೩ನೇ ಶತಮಾನಕ್ಕಿಂತ ಈಚಿನದಲ್ಲವೆಂದು ಹೇಳಬಹುದೇನೊ?

೩. **ಕಾರ್ತಿಕೇಯ:** ಕವಲಕ್ಕಿ (ಹೊನ್ನಾವರ ತಾ.)ಯ ಸುಬ್ರಮಣ್ಯ ದೇವಸ್ಥಾನ ಆ ಭಾಗದಲ್ಲಿ ಒಂದು ಕ್ಷೇತ್ರವಾಗಿದೆ. ಇದು ಪ್ರಾಕಾರದಿಂದ ಆವರಿಸಲ್ಪಟ್ಟ ವಿಶಾಲವಾದ ಆವರಣವುಳ್ಳ ದೊಡ್ಡ ದೇವಾಲಯ. ಇದಕ್ಕೆ ಸೇರಿದ ಹಾಗೆ ಒಂದು ಸಂಸ್ಕೃತ ಶಾಲೆಯೂ ನಡೆಯುತ್ತಿದೆ.

ಗರ್ಭಗುಡಿಯಲ್ಲಿರುವ ನವಿಲುವಾಹನ ಕಾರ್ತಿಕೇಯನ ಮೂರ್ತಿ ಇತ್ತೀಚಿನ ಕಾಲದಲ್ಲಿ ಮರುಪ್ರತಿಷ್ಟೆಯಾಗಿದೆ ಎಂದು ಹೇಳುತ್ತಾರೆ. ಗುಡಿಯ ಹೊರಗಡೆ ಎಡಬದಿಯಲ್ಲಿ ಮಣ್ಣಿನಲ್ಲಿ ಹುಗಿದ ಒಂದು ದ್ವಿಭುಜ ಶಿಲಾಮೂರ್ತಿಯಿದೆ. ಇದೇ ಕಾರ್ತಿಕೇಯನ ಮೂಲ ಮೂರ್ತಿಯೆಂದು ಅನುಮಾನವಾಗುತ್ತದೆ, ಶಿಲ್ಪದ ಶೈಲಿಯು ಇದು ಪ್ರಾಚೀನವೆಂದೇ ಸೂಚಿಸುತ್ತದೆ.

೪. **ಚಂಡೇಶ್ವರ(?)** : ಮಟ್ಪಾದಲ್ಲಿ ಒಂದು ಇತ್ತೀಚಿನ ಕಾಲದ ಒಂದು ದೇವಿ ದೇವಸ್ಥಾನದಲ್ಲಿ ಸುಂದರ ಕೆತ್ತನೆಯುಳ್ಳ ಶಿಲ್ಪದ ಒಂದು ಮೂರ್ತಿ ಯಿದೆ. ಇದನ್ನು ಚಂಡೇಶ್ವರನೆಂದು (ಚಿತ್ರ 2; ೩, ೪) ಸ್ಥಳೀಕರು ಕರೆಯು ತ್ತಾರೆ. ಪದ್ಮಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ ಸಣ್ಣ ಮೂರ್ತಿ, ಎಡಗೈಯು ತೊಡೆಯ ಮೇಲಿದೆ. ಬಲಗೈಯಲ್ಲಿ ಪದ್ಮವಿದೆ. ರತ್ನಖಚಿತ ಕಿರೀಟ ಮುಕುಟ, ಭುಜದ ಮೇಲೆ ಕುಂಚುಳ್ಳ ಮಣಿಸರ, ಪದಕವುಳ್ಳ ಎದೆಹಾರ, ತೋಳ್ಬಂದಿ, ದಪ್ಪ ಕೈಗಡಗ ಎಲ್ಲ ಬೆರಳಿಗೆ ಉಂಗುರಗಳು, ಸಿಂಹ ಮುಖವುಳ್ಳ ಸೊಂಟಪಟ್ಟಿ, ಹೀಗೆ ಒಳ್ಳೇ ಶ್ರೀಮಂತ ರೀತಿಯಲ್ಲಿದೆ. ಕಚ್ಚೆ ಹಾಕಿ ಧೋತ್ರ ಧರಿಸಲಾಗಿದೆ. ಧೃಡಕಾಯ ಹಾಗು ಸ್ವಲ್ಪ ಉಬ್ಬಿದ ಹೊಟ್ಟೆಯಿದೆ. ಹಿಂದೆ ಬೆನ್ನಿನ ಮೇಲೆ ತಲೆಕೂದಲು ಸುರಳಿಸುರಳಿಯಾಗಿ ಇಳಿಬಿದ್ದಿದೆ. ಈ ಮೂರ್ತಿ ಬಹುಶಃ ನವನಿಧಿಗಳಲ್ಲೊಂದಾದ ಪದ್ಮನಿಧಿಯಿರಬಹುದು. ಚಂಡೇಶ್ವರನು ಬಲಗೈಯಲ್ಲಿ ಪರಶುವನ್ನು ಧರಿಸಿರುತ್ತಾನೆ. ಅಂತು ಇದೊಂದು ಒಳ್ಳೆಯ ಶಿಲ್ಪ ಕೃತಿ. ಶೈಲಿಯ ಮೇಲಿಂದ ಇದು ೫-೬ನೇ ಶತಮಾನದ್ದೆಂದು ಹೇಳಬಹುದು.

೫. **ನಾಗ** : ಈ ದೇವಾಲಯದ ಸಮೀಪದಲ್ಲಿ ಆಗ್ನೇಯ ದಿಕ್ಕಿಗೆ ೧೧-೧೨ನೇ ಶತಮಾನದ ಕಲ್ಯಾಣ ಚಾಲುಕ್ಯ ಶೈಲಿಯ ಒಂದು ಸಪ್ತಮಾತೃಕೆಯ ಪಟ್ಟಿಕೆ ಮತ್ತು ಉತ್ತರ ದಿಕ್ಕಿಗೆ ಅದೇ ಕಾಲದ ಎರಡು ನಾಗಶಿಲ್ಪಗಳಿವೆ. ಈ ನಾಗಶಿಲ್ಪಗಳಲ್ಲಿ ಒಂದು ಗಮನಾರ್ಹ (ಚಿತ್ರ 2; ೨). ನಾಗಶಿಲ್ಪದಲ್ಲಿ ಸಾಮಾನ್ಯ ವಾಗಿ ಅದರ ಮೈಯನ್ನು ನುಣುಪಾಗಿಯೂ ಹೊಟ್ಟೆಯ ಭಾಗವನ್ನು ಸಹಜ ರೀತಿಯಲ್ಲಿ ತೋರಿಸಲಾಗಿರುತ್ತದೆ. ಆದರೆ ಈ ಶಿಲ್ಪದಲ್ಲಿ ಗೋಧಿ ನಾಗರ ಹಾವಿನ ಮೈಯಲ್ಲಿ ಗೋಧಿ ಕಾಳಿನ ಹಾಗೆ ಇದ್ದು ಅದರಂತೆಯೇ ಇದರಲ್ಲಿ ಸೂಕ್ಷ್ಮವಾಗಿ ಬಿಡಿಸಲಾಗಿದೆ. ಮತ್ತು ಪ್ರತ್ಯೇಕ ಪೀಠವಿದ್ದು ಅದರಲ್ಲಿ ಇದನ್ನು ಸ್ಥಾಪಿಸಲಾಗಿದೆ. ಬೇರೆ ದೇವರ ಮೂರ್ತಿಗಳಿಗಿರುವ ಹಾಗೆ ಇವಕ್ಕೂ ಪೀಠವಿರು ವುದು ಒಂದು ವೈಶಿಷ್ಟ್ಯ. ಇದರ ಕಾಲ ಸುಮಾರು ೧೧-೧೨ನೇ ಶತಮಾನ.

ನಾಗ ಶಿಲ್ಪಿಗಳು ಎಲ್ಲೆಡೆಗಳಲ್ಲಿ ಸರ್ವೆಸಾಮಾನ್ಯವಾಗಿ ಇವೆ. ದಕ್ಷಿಣಕನ್ನಡ ಜಿಲ್ಲೆ ಮತ್ತು ಸ್ವಲಮಟ್ಟಿಗೆ ಉತ್ತರ ಕನ್ನಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ

ನಾಗಪೂಜೆ ಬಹಳವಾಗಿದ್ದು ಅದೊಂದು ವಿಶಿಷ್ಟ ರೀತಿಯದಾಗಿದೆ. ಈ ಪ್ರದೇಶ ಗಳಲ್ಲಿ ನಾಗವನಗಳು ಹೆಚ್ಚಾಗಿದ್ದು ಅವುಗಳಲ್ಲಿ ನಾಗಶಿಲ್ಪಗಳು ಹಲವಾರು ಇರು ತ್ತವೆ. ಆದರೆ ಅವುಗಳಿಗೆ ಪ್ರತ್ಯೇಕ ಪ್ರತ್ಯೇಕ ಪೀಠಗಳಿರುವದಿಲ್ಲ. ನಿತ್ಯ ಪೂಜೆ ಇರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಸುಬ್ರಮಣ್ಯನ ದೇವಸ್ಥಾನಗಳಲ್ಲಿ ಉತ್ಸವ (ಚರ) ಮೂರ್ತಿ ನಾಗ! ಹೊಸ ನಗರದಲ್ಲಿ ಶಿವಪ್ಪ ನಾಯಕನ ಕಾಲದ ಸುಬ್ರಮಣ್ಯ ದೇವಸ್ಥಾನದ ಗರ್ಭಗುಡಿಯಲ್ಲಿ ಪೂಜೆಗೊಳ್ಳುವ ಮೂರ್ತಿ ನಾಗ, ಈ ಸಂಪ್ರದಾಯದ ಹಿನ್ನೆಲೆಯಲ್ಲಿ ನೋಡಿದಾಗ, ಈ ಹಳ್ಳಿಯಲ್ಲಿರುವ ನಿತ್ಯ ಪೂಜೆಗೆಂದೇ ಮಾಡಿದ್ದಿರಬಹುದಾದ ಪೀಠ ಸಹಿತ ನಾಗನ ಮೂರ್ತಿ ಕೇವಲ ಪರಿವಾರ ನಾಗ ದೇವತೆಯಾಗಿರದೆ, ಪ್ರಧಾನ ನಾಗದೇವರ (ಸ್ಥಿರ) ಮೂರ್ತಿ ಯೆಂದು ತರ್ಕಿಸಬಹುದು. ಮತ್ತು ಇಂಥ ಸಂಪ್ರದಾಯದ ಪ್ರಾಚೀನತೆ ಯನ್ನು ಇದು ತೋರಿಸುತ್ತದೆ.

ii) ವೈಷ್ಣವ ಮೂರ್ತಿಗಳು.

೧. **ವರಾಹ ಮೂರ್ತಿ :** ಕರ್ಕಿ (ಹೊನ್ನಾವರ ತಾ.) ದ ಕಡಗೇರಿ ಭಾಗ ದಲ್ಲಿ ಒಂದು ವರಹ ದೇವಸ್ಥಾನವಿದೆ. ಮುರಕಲ್ಲಿನ ಗರ್ಭಗುಡಿ ಹಳೆಯದೆಂದೇ ತೋರುವದು. ಬಾಗಿಲು ಮತ್ತು ನೆಲ ಕರಿಕಲ್ಲಿನದು. ಅಡ್ಡಮಡಿಕೆಯುಳ್ಳ ಪೀಠದ ಮೇಲೆ ದ್ವಿಭುಜ ವರಾಹನು ಅರಳಿದ ಕಮಲದ ಮೇಲೆ ಸಮಭಂಗದಲ್ಲಿ ನಿಂತಿದ್ದಾನೆ (ಚಿತ್ರ 4; ೨). ಬಲಗೈಯಲ್ಲಿ ಮಾತುಲಿಂಗವು ಇದೆ. ಎಡಗೈಯು ನೆಟ್ಟಗೆ ಊರಿದ ಗದೆಯ ಮೇಲಿದೆ. ಉದ್ದನೆ ಚೂಪಾದ ಕಿರೀಟ ಮುಕುಟ, ಕುಚ್ಚುಳ್ಳ ದುಂಡನೆ ಶಿರಶ್ಚಕ್ರ, ಕಂಠಾಭರಣ, ಭುಜಸರ, ಎದೆಹಾರ, ಮೂರೆ ಳೆಯ ಯಜ್ಞೋಪವಿತ, ಉದರಪಟ್ಟಿ, ತೋಳ್ಗಡಗ, ಬಳೆ, ಸಿಂಹ ಮುಖವುಳ್ಳ ಮಣಿಯ ಸೊಂಟಪಟ್ಟಿ, ಅದಕ್ಕೆ ಸೇರಿದ ಹಾಗ ಮಾಲಾಕಾರದ ಮಣಿ ಸರ, ಕಾಲ್ಗ ಡಗ ಪಾದಗೆಜ್ಜೆ : ಇಷ್ಟು ಆಭರಣಗಳು*. ಅಲ್ಲಲ್ಲಿ ಮಡಿಕೆ ಬರುವ ಹಾಗೆ ಮತ್ತು ಬದಿಯಲ್ಲಿ ಜೋಲು ಬೀಳುವಹಾಗೆ ಧೋತ್ರವನ್ನು ಬಿಗಿಯಾಗಿ ಉಟ್ಟಂತಿದೆ, ಹಿಂಬದಿಯಲ್ಲಿ ತಲೆಗೂದಲನ್ನು ಇಳಿಬಿಟ್ಟಿದೆ. ಶಿಲ್ಪಶೈಲಿ ಸ್ವಲ್ಪ ಅಪರೂಪವೇ ಆಗಿದ್ದು ಪ್ರಾಯಶಃ ಪ್ರಾಚೀನ ಪ್ರಾದೇಶಿಕ ಶೈಲಿಯದ್ದಾಗಿರಬಹುದೆಂದು ಕಾಣು ವುದು. ಇದರ ಕಾಲಮಾನ ಈಗ ಸ್ಪಷ್ಟವಾಗಿ ಹೇಳುವುದಕ್ಕಾಗದಿದ್ದರೂ ೬-೭ನೇ ಶತಮಾನದ್ದಿರ ಬಹುದೆಂದು ಅನುಮಾನವಾಗುವುದು. ಇದುವರೆಗೆ ಬೇರೆಡೆಯಲ್ಲಿ ಪ್ರಾಚೀನ ದ್ವಿಭುಜ ವರಾಹ ವಿಗ್ರಹ ನನಗೆ ತಿಳಿದಮಟ್ಟಿಗೆ ಕಂಡುಬಂದಿಲ್ಲ.

---

* ಈ ಮೂರ್ತಿಗೆ ಕಾಸಿನ ಪದಕವುಳ್ಳ ಒಂದು ಸರವನ್ನು ಪೂಜೆ ಮಾಡುವವರು ಹಾಕಿದ್ದಾರೆ, ಅದನ್ನು ಚಿತ್ರದಲ್ಲಿ ಕಾಣಬಹುದು.

೨. **ನರಸಿಂಹ :** ಹೆಚ್ಚಾಗಿ ದಕ್ಷಿಣ–ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನಲ್ಲೂ ಬೆಳಗಾಂವ್ ಜಿಲ್ಲೆಯ ಖಾನಾಪುರ ತಾಲೂಕಿನಲ್ಲಿ ಅಲ್ಲಲ್ಲಿ ದ್ವಿಬಾಹು ನರಸಿಂಹನ ವಿಗ್ರಹಗಳಿವೆ. ಇವೆಲ್ಲವೂ ಸುಮಾರು ೫–೭ ನೇ ಶತಮಾನದವು. ಈ ಮೂರ್ತಿಗಳೆಲ್ಲವೊ ಸಾಮಾನ್ಯವಾಗಿ ಒಂದೇ ತರಹ ಇವೆ. ಸವ್ಯಲಲಿತಾಸನದಲ್ಲಿದ್ದು ಬಲಗೈಯಲ್ಲಿ ಮಾತುಲುಂಗವು ಇವೆ. ಎಡಗೈಯನ್ನು ತೊಡೆಯ ಮೇಲೆ ಇರಿಸಲಾಗಿದೆ. ಈ ಶಿಲ್ಪ ಪದ್ಧತಿ ಸುಮಾರು ೮ ನೇ ಶತಮಾನದ ನಂತರ ಅಪರೂಪವಾಗಿ, ಚತುರ್ಭುಜ ನರಸಿಂಹ ಮೂರ್ತಿಗಳೇ ಹೆಚ್ಚಾಗಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಪದ್ಧತಿಯ ಅನುಕರಣ ಮಾತ್ರ ವಿಜಯನಗರ ಕಾಲದವರೆಗೂ ಇತ್ತೆಂದು ಸಿದ್ಧರ (ಕಾರವಾರ ತಾ) ಮತ್ತು ಬಂಗಣೆ (ಕುಮಟಾ ತಾ) ನರಸಿಂಹ ದೇವಾಲಯಗಳಿಂದ ತಿಳಿದು ಬರುತ್ತದೆ. ಮೊದಲನೆಯದು ಸಾಧಾರಣ ಅರ್ವಾಚೀನ ಕಟ್ಟಡ ಇಲ್ಲಿ ಪೂಜೆ ನಡೆಯುತ್ತದೆ. ಎರಡನೆಯದು ಅಪರೂಪದ ವಾಸ್ತು ಶಿಲ್ಪ ಶೈಲಿಯ ಕಲ್ಲಿನ ದೇವಾಲಯ. ಹಾಳು ಬಿದ್ದಿದೆ. ಈ ದೇವಾಲಯಗಳಲ್ಲಿ ಇರುವ ನರಸಿಂಹನ ವಿಗ್ರಹ ಪ್ರಾಚೀನ ಮಾದರಿಯವು. ಹೀಗಿದ್ದ ಮಾತ್ರಕ್ಕೆ ವಿಜಯನಗರ ಕಾಲದ ವರೆಗೂ ಈ ಶೈಲಿಯು ಉಳಿದು ಬಂದಿತ್ತೆಂದು ಹೇಳಲಾಗುವದಿಲ್ಲ. ಇಲ್ಲಿ ಹಿಂದೆ ಈ ಮಾದರಿಯ ಪ್ರಾಚೀನ ಮೂರ್ತಿಗಳಿದ್ದು ಅವು ಭಿನ್ನವಾದ ಕಾರಣ ಪುನಃ ವಿಜಯನಗರ ಮತ್ತು ಅನಂತರ ಕಾಲದಲ್ಲಿ ಈ ದೇವಾಲಯಗಳ ಜೀರ್ಣೋದ್ಧಾರವಾದಾಗ ಹಿಂದಿದ್ದ ಮೂರ್ತಿಗಳ ಹಾಗೆ ಈಗಿರುವ ಮೂರ್ತಿಗಳನ್ನು ಮಾಡಿಸಿದ್ದೆಂಬುದಕ್ಕೆ ಬೆಂಗಣೆಯ ದೇವಾಲಯದೊಳಗಿರುವ ಮತ್ತೊಂದು ಹಳೆಯ ನರಸಿಂಹ (ಚಿತ್ರ 3; 1) ವಿಗ್ರಹ ಸಾಕ್ಷಿ. ಮೂಲ ಮೂರ್ತಿಯು ಸವ್ಯಲಲಿತಾತೊನದಲ್ಲಿದ್ದು ನೆತ್ತಿಯ ಮೇಲೆ ಕಮಲವಿದೆ. ಮುಚ್ಚಿದ ಬಾಯಿ, ಹರಳಿನ ಎದೆಹಾರ, ಸರಳವಾದ ಸುತ್ತಿನ ತೋಳ್ಬಂದಿ, ಬಳೆಗಳು, ಎಳೆಗಳುಳ್ಳ ಯಜ್ಞೋಪವೀತ, ಧರಿಸಿದೆ. ಪೀಠಸ್ಥ ಮೂರ್ತಿಯು (3; ೨) ಮೂಲ ಮೂರ್ತಿಯ ಶೈಲಿಯಲ್ಲಿದ್ದು, ಕೇಶರಾಶಿಯು ಕೆನ್ನೆಯ ಮೇಲೆ ಇಳಿಬಿದ್ದ ಹಾಗೆ, ಬಾಯಿ ಸ್ವಲ್ಪ ಬಿಟ್ಟ ಹಾಗೆ ತೋರಿಸಲಾಗಿದೆ. ವೈಜಯಂತಿ ಯಜ್ಞೋಪ ವೀತರೀತಿಯಲ್ಲಿ ಉದ್ದವಾಗಿದ್ದು ಬಲಗಾಲನ್ನು ಹೊರಗಿನಿಂದ ಸುತ್ತ ಹಾಕಿದೆ. ಹೀಗೆ ನೋಡುವದಕ್ಕೆ ಎರಡೂ ಮೂರ್ತಿಗಳೂ ಒಂದೇ ಆಗಿದ್ದರೂ ದೈಹಿಕ ಮಾಟದಲ್ಲಿ ಮಾತ್ರವಲ್ಲದೆ, ಲಕ್ಷಣದಲ್ಲೂ, ಆಭರಣಗಳಲ್ಲೂ, ವ್ಯತ್ಯಾಸಗಳಿವೆ. ಪ್ರಾಚೀನ ಶೈಲಿಯ ಅನುಕರಣೆಯಲ್ಲಿ ಸಮಕಾಲೀನದ ಶೈಲಿಯ ಪ್ರಭಾವವನ್ನು ಎತ್ತಿ ತೋರಿಸುತ್ತದೆ.

ಬೆಂಗಣೆಯ ನರಸಿಂಹ ದೇವಾಲಯದ ವಾಸ್ತು ಶಿಲ್ಪ ಗಮನಾರ್ಹ. ಸಭಾಂಗಣದ ಹಿಂಬದಿಯಲ್ಲಿ ಪ್ರದಕ್ಷಿಣ ಪಥಕ್ಕೆ ಸ್ಥಳ ಬಿಟ್ಟು ಗರ್ಭಗುಡಿಯಿರುವ ಸರಳ ದೇವಾಲಯ. ಇದು ಕರಿಬೂದು ಬಣ್ಣದ ಬಳಪದ ಕಲ್ಲಿನದು. ಕಲ್ಲನ್ನು ಇಟ್ಟಿಗೆಯಷ್ಟು ಸಣ್ಣದಾಗಿ ಕತ್ತರಿಸಿ ನಯಮಾಡಿ ಕಟ್ಟಡಕ್ಕೆ ಉಪಯೋಗಿಸಲಾಗಿದೆ. ದೂರದಿಂದ ನೋಡಿದರೆ ಬೂದು ಬಣ್ಣದ ಇಟ್ಟಿಗೆಯಿಂದಲೆ ಕಟ್ಟಿದ್ದಾರೇನೊ ಎಂಬ ಭ್ರಮೆಯುಂಟಾಗುತ್ತದೆ. ಇದು ಈ ದೇವಾಲಯದ ವಾಸ್ತುಶಿಲ್ಪದ ವೈಶಿಷ್ಟ್ಯ. ಈ ರೀತಿಯಲ್ಲಿ ನಿರ್ಮಿಸಿದ ದೇವಾಲಯಗಳು ಈ ಭಾಗದ ಕೆಲವೆಡೆಗಳಲ್ಲಿವೆ. ಉದಾಹರಣೆಗೆ, ಬೆಂಗಣೆಯಲ್ಲೆ ಮತ್ತೊಂದು ಈಶ್ವರ ದೇವಾಲಯ, ಸಂತೆಗುಳಿ ಹತ್ತಿರವಿರುವ ಅಬ್ಬಳ್ಳಿ ಗ್ರಾಮದ ಗಣಪತಿ ದೇವಾಲಯ ಮತ್ತು ಮರ್ಸೆಯ ಸಾರಂಗಪಾಣಿ ವಿಷ್ಣು ದೇವಾಲಯ.

೩. **"ಸಾರಂಗ ಪಾಣಿ"** (ಶಾರ್ಙಧರ ವಿಷ್ಣು) : ಬೆಂಗಣೆ ಹತ್ತಿರವಿರುವ ಮರ್ಸೆಯಲ್ಲಿ "ಸಾರಂಗಪಾಣಿ" ವಿಷ್ಣು ಗುಡಿಯಿದೆ. ಕೇವಲ ಗರ್ಭಗುಡಿಯಿದ್ದು ಮೇಲೆ ಸೋಗೆಯ ಛಾವಣಿಯಿದೆ. ಚತುರ್ಭುಜ ವಿಷ್ಣುಮೂರ್ತಿಯು ಸಮಭಂಗದಲ್ಲಿದ್ದು ಮೇಲಿನ ಬಲ, ಎಡ ಕೈಗಳಲ್ಲಿ ಚಕ್ರ ಶಂಖಗಳಿದ್ದು ಕ್ರಮವಾಗಿ ಕೆಳಗಿನ ಕೈಗಳಲ್ಲಿ ಬಾಣ ಬಿಲ್ಲು ಇದೆ (ಚಿತ್ರ 3; ೨). ಬದಿಗಳಲ್ಲಿಯ ಶ್ರೀದೇವಿ, ಭೂದೇವಿಯರ ಉಬ್ಬು ಶಿಲ್ಪಗಳನ್ನು ಪ್ರಭಾವಳಿ ಮೇಲೆ ಮೂಡಿಸಲಾಗಿದೆ, ಗರುಡನನ್ನು ತೋರಿಸಿಲ್ಲ. ವಿಷ್ಣುವಿನ ಮೂರ್ತಿಯು ದುಂಡುಶಿಲ್ಪದಲ್ಲಿದೆ. ಕಿರೀಟ ಮುಕುಟವು ವಿಜಯನಗರ ಕಾಲದ ಒಂದು ವಿಶಿಷ್ಟ ಶೈಲಿಯಲ್ಲಿದೆ. ಶಾರ್ಙಧರ ವಿಷ್ಣು ಶಿಲ್ಪವು ಹೊಯ್ಸಳ ಕಾಲದ ದೇವಾಲಯಗಳ ಭಿತ್ತಿಶಿಲ್ಪಗಳಲ್ಲಿ ಕಾಣಿಸಿಕೊಂಡು ಕ್ರಮೇಣ ವಿಜಯನಗರದ ಕಾಲದಲ್ಲಿ ಒಂದು ಪ್ರತ್ಯೇಕ ಪೂಜಾ ವಿಗ್ರಹವಾಗಿ ಅದಕ್ಕೇ ಬೇರೆ ದೇವಾಲಯಗಳನ್ನು ಕಟ್ಟುವ ಪದ್ಧತಿ ಬೆಳೆಯಿತು. ರೂಢಿಯಲ್ಲಿ ಈ ಮಾದರಿ ವಿಷ್ಣುಶಿಲ್ಪಕ್ಕೆ ರಂಗನಾಥನೆಂದೂ ದಕ್ಷಿಣ ಕರ್ನಾಟಕದ ಭಾಗದ ಕೆಲವೆಡೆಗಳಲ್ಲಿ ಕರೆಯುವುದುಂಟು. ಇಂಥ ಸಾರಂಗಪಾಣಿ ದೇವಾಲಯಗಳಿಗೆ, ಮೇಲಿನ ದೇವಾಲಯ ಒಂದು ಉತ್ತಮ ನಿದರ್ಶನ.

೪. **ವಿಷ್ಣು ದೇವಾಲಯಗಳು** : ಚಂಡಿಯೆ, ತೋಡೂರು ಹಾಗೂ ಅರ್ಗ (ಕಾರವಾರ ತಾ.) ಮತ್ತು ಬಸ್ತಿಕೇರಿಯ ಹತ್ತಿರವಿರುವ ಅಬ್ಬಳ್ಳಿ, ಉಳ್ಳೂರುಗಳಲ್ಲಿ (ಕುಮಟ ತಾ.) ವಿಷ್ಣುವಿನ ದೇವಾಲಯಗಳು ಇಲ್ಲವೆ ಮೂರ್ತಿಗಳು ವಿವಿಧವಾಗಿವೆ. ದೇವಾಲಯಗಳು ಮಾತ್ರ ಈಚಿನ ಕಾಲದವು. ಇವುಗಳಲ್ಲಿ ಮೊದನೆಯ ವಿಷ್ಣುಮೂರ್ತಿ ಅಲ್ಲಿಯ ಪ್ರಸಿದ್ಧ ಅರ್ಘೇಶ್ವರ (ಪ್ರಾಚೀನ ಪ್ರಾಯಶಃ ೮ ನೇ ಶತಮಾನ) ದೇವಾಲಯದ ಪ್ರಾಕಾರದೊಳಗಿರುವ ಒಂದು ಗೂಡಿನಲ್ಲಿದೆ. (ಚಿತ್ರ 4–೩), ಶಿಲ್ಪ ಲಕ್ಷಣಗಳಿಂದ ಇದು ಸುಮಾರು ೧೦ ನೇ ಶತಮಾನದ್ದು. ಸಮ

ಭಂಗದಲ್ಲಿದ್ದು ಕ್ರಮವಾಗಿ ಕೆಳಬಲಗೈಯಲ್ಲಿ ಗದೆ, ಮೇಲಿನ ಕೈಗಳಲ್ಲಿ ಪ್ರಯೋಗ ಚಕ್ರ ಮತ್ತು ಶಂಖಗಳಿವೆ. ಕೆಳ ಎಡಗೈ ಸೊಂಟದ ಮೇಲಿದೆ. ಮೇಲೆ ಹೆಚ್ಚು ಅಗಲವಾದ ಗೋಲಾಕೃತಿಯ ಪ್ರಭಾವಳಿಯಿದೆ. ಗರುಡ, ಭೂದೇವಿ ಶ್ರೀದೇವಿ ಯರನ್ನು ತೋರಿಸಿಲ್ಲ. ಚೋಳ ಶಿಲ್ಪ ಶೈಲಿಯ ಪ್ರಭಾವ ಇದರಲ್ಲಿದೆ. ವಿಷ್ಣುವಿನ ೨೪ ಪ್ರಕಾರ ರೂಪಗಳಲ್ಲಿ ಇದು ಮಾಧವನದಾಗಿದೆ. ಮೊದಲಿನ ಗ್ರಾಮದಲ್ಲಿ ನಾರಾಯಣ ಮತ್ತು ಕೇಶವನ ದೇವಾಲಯಗಳಿವೆ. ಮೂರ್ತಿಗಳೆರಡೂ ಕಲ್ಯಾಣ ಶಿಲ್ಪ ಶೈಲಿಯಲ್ಲಿದ್ದು ಲಕ್ಷಣಗಳೂ ಒಂದೇ ಆಗಿವೆ. ಇವೂ ಕೂಡ ಮಾಧವನನ್ನು ಪ್ರತಿನಿಧಿಸುತ್ತವೆ. ಇವೆರಡರಲ್ಲಿ ಬದಿಗಳಲ್ಲಿ ಭೂದೇವಿ ಶ್ರೀದೇವಿಯರನ್ನು ಪ್ರಭಾ ವಳಿಯಲ್ಲಿ ವಿಷ್ಣುವಿನ ಹತ್ತು ಅವತಾರಗಳನ್ನು "ನಾರಾಯಣ" ಮೂರ್ತಿಯಲ್ಲಿ ಗರುಡನನ್ನು ಮೂಡಿಸಲಾಗಿದೆ.

ತೋಡೂರಿನ ಗೋವಿಂದ ದೇವಾಲಯ(ಅರ್ವಾಚೀನ)ದಲ್ಲಿಯ ಮೂರ್ತಿಯು ಕಲ್ಯಾಣ ಶಿಲ್ಪ ಶೈಲಿಯಲ್ಲಿದ್ದು, ಕ್ರಮವಾಗಿ, ಚಕ್ರ, ಗದೆ, ಪದ್ಮ ಮತ್ತು ಶಂಖ ವನ್ನು ಕೈಗಳಲ್ಲಿ ಧರಿಸಲಾಗಿದೆ. ಇದು ಗೋವಿಂದನನ್ನು ಪ್ರತಿನಿಧಿಸುತ್ತದೆ.

ಸಂತೆಗೂಳಿ ಹತ್ತಿರವಿರುವ ಅಬ್ಬಳ್ಳಿ ಗ್ರಾಮದಲ್ಲಿಯ ಒಂದು ಗಣಪತಿ ದೇವಾಲಯದ ಎಡಬದಿಯ ಮರದ ಬುಡದಲ್ಲಿ ತುಂಡು ತುಂಡಾದ ಒಂದು ವಿಷ್ಣುವಿನ ಮೂರ್ತಿ ಬಿದ್ದಿದೆ. (ಚಿತ್ರ 4; ೧) ಸಮ ಭಂಗದಲ್ಲಿದ್ದು ಕ್ರಮವಾಗಿ ಕೆಳ ಬಲಗೈಯಿಂದ, ಪದ್ಮ, ಚಕ್ರ, ಶಂಖ ಮತ್ತು ಗದೆ ಕೈಗಳಲ್ಲಿವೆ. ಆದ್ದ ರಿಂದ ಇದು ಜನಾರ್ಧನನ ಮೂರ್ತಿ. ಸುಂದರ ಕಲಾಕೃತಿ, ೧೨-೧೩ ನೇ ಶತ ಮಾನದ್ದಾಗಿದ್ದು ಇದರಲ್ಲಿಯ ಚೋಳ ಶಿಲ್ಪ ಶೈಲಿಯ ಪ್ರಭಾವ ಕಾಣುತ್ತದೆ. ಈ ಗ್ರಾಮದ ಬಸ್ತಿ ಕೆರೆಯ ಮಧ್ಯದಲ್ಲಿರುವ ಉಳ್ಳೂರು ಗ್ರಾಮದಲ್ಲಿ ಹಳೆಯ ವಿಷ್ಣು ದೇವಸ್ಥಾನ ತೆಗೆಸಿ ಹೊಸ ದೇವಸ್ಥಾನವನ್ನು ಕೆಲವು ವರ್ಷಗಳ ಹಿಂದೆ ಕಟ್ಟಲಾಗಿದೆ. ಹೊಸವಿಷ್ಣುವಿನ ಮೂರ್ತಿಯನ್ನು ಹಳೆಯ ಮೂರ್ತಿಯಂತೆ ಮಾಡಿಸಲಾಗಿದೆ. ಇದು ಕೃಷ್ಣನ ಮೂರ್ತಿ.

ಇವುಗಳಿಂದ ಒಟ್ಟಿನಲ್ಲಿ ಕಾರವಾರ-ಕುಮಟ ಭಾಗಗಳಲ್ಲಿ ಸುಮಾರು ೧೧ನೇ ಶತಮಾನದಿಂದ ವಿಷ್ಣು ದೇವಾಲಯಗಳ ಸಂಖ್ಯೆ ಹೆಚ್ಚಾಗುತಿದ್ದುದು ಕಾಣುವುದು ವೈಷ್ಣವ ಧರ್ಮ ಪ್ರಬಲವಾಗುತ್ತಿತ್ತೆಂದು ತೋರುತ್ತದೆ.

ಟಿಪ್ಪಣಿಗಳು

೧ ಹಿಂದೆ ಈ ಜಿಲ್ಲೆಯ ಸಿಲ್ವ ಮಹಾಶಯರು ಈ ಮೂರ್ತಿಯನ್ನು ಜೈನ ಮೂರ್ತಿಯೆಂದು ಅವರ **ಕಾರವಾರ ದರ್ಶನ** ಎಂಬ ಪುಸ್ತಕದಲ್ಲಿ ವರ್ಣಿಸಿದ್ದಾರೆಂದು ಇತ್ತೀಚೆಗೆ ನನಗೆ ತಿಳದುಬಂದಿದೆ.

೨ Gupte, R. S., & Mahajan, B. D. 1962 : **Ajanta Ellora & Aurangabad Caves** : Plates XXVIII, XLV, LIV

೩ ಗುರವ್, ಆರ್. ಎನ್; ೧೯೭೫ : **ಕಾರವಾರ ಜಿಲ್ಲೆಯ ಶಾಸನಗಳು**, ಪುಟಗಳು ೨೨–೨೪.

೪ Epigraphia Carnatica Vol. IX, No. 1.

೫ ಶ್ರೀಧರ, ಬಿ. ಎಚ್; ೧೯೭೩ : "ಹೈವನಾಡಿನ ಚರಿತ್ರೆ", ಕುಮಟಾ ಕೃಷಿ ಕ್ಷೇತ್ರ–ಶಾಲೆಯ ಸುವರ್ಣ ಮಹೋತ್ಸವದ ಸಂಸ್ಮರಣ ಸಂಚಿಕೆ. ಪುಟ ೮.

೬ ನಾನು ಈ ಊರಿನಲ್ಲಿ ಪುರಾತತ್ವ ಶೋಧನೆ ಮಾಡುತ್ತಿದ್ದಾಗ ಅಲ್ಲಿಯ ಜನರು ಈ ವಿಷಯ ತಿಳಿಸಿದರು. ತೀರ್ಥಂಕರನ ಮೂರ್ತಿಯಿದ್ದ ಸ್ಥಳವು ವಿಶಾಲ ಬಯಲಿದ್ದು ಅಲ್ಲೆಲ್ಲ ಆಳೆತ್ತರದ ಹುಲ್ಲು ಬೆಳೆದಿದ್ದರಿಂದ ಆ ಮೂರ್ತಿಯನ್ನು ಹುಡುಕಲು ಸಾಧ್ಯವಾಗಲಿಲ್ಲ.

೭ ಜಡೆ ಹೆಣೆದ ಶೈಲಿಯು ಸಾಂಚಿಯಲ್ಲಿಯ ಬೌದ್ಧ ಸ್ತೂಪದ ತೋರಣದಲ್ಲಿರುವ ಸಾಲಭಂಜಿಕೆಯ ಶಿಲ್ಪದ ಕೇಶಾಲಂಕಾರವನ್ನು ನೆನಪಿಗೆ ತರುತ್ತದೆ.

೮ Guru Raja Bhatt, P. 1975. **Studies in Tuluva History & Culture** : Plates 117 118(a), 119(c), & 115(b)

೯ Sundara, A. 1975–67 : "Some Recent, Archeological Discoveries in Northwestern Karnatak", **Silver Jubilee Souvenir,** Janatha Shikhana Samiti, Dharwar, pp. 7–17 and 1977 : " Narasimha Sculptures from HosaMahakuta and Kuppatur", **Karnatak History Research Review**, Vol. xiii, No. 1, pp. 9–12.

ಕೃತಜ್ಞತೆ

ಮೇಲೆ ಹೇಳಿದ ಪುರಾತತ್ವ ಶೋಧನೆಗಳನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ವಿಶ್ವವಿದ್ಯಾಲಯದ ಉಪಾಧ್ಯಾಯರುಗಳ ಸಂಶೋಧನೆಗೆ ನೆರವು ಎಂಬುದರ ಧನಸಹಾಯದಿಂದ ನಡೆಸಲಾಯಿತು. ಸುರೇಶ ಶಿ. ನಾಯಕ್, ಡಾ. ಸಿ. ಎಚ್. ಜ್ಯೋತೆಣ್ಣವರ ಮತ್ತು ಇತರರು ಈ ಅನ್ವೇಷಣೆಗಳಲ್ಲಿ ಸ್ವತಃ ತುಂಬಾ ಸಹಾಯ ಮಾಡಿದ್ದಾರೆ. ಶ್ರೀಮತಿ ಭಾಗ್ಯಲಕ್ಷ್ಮಿ ಸುಂದರ ನನ್ನ ಲೇಖನದ ಹಸ್ತಪ್ರತಿಯನ್ನು ಸಿದ್ಧಮಾಡಿಕೊಟ್ಟರು. ಇವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.



ಬಿಜ್ರಪಾಡ : ಬುದ್ಧ ೨. ದೀಪಳ್ಳಿ : ದುರ್ಗಾ ಪರಮೇಶ್ವರಿ ೩. ವನ್ನಳ್ಳಿ : ಬುದ್ಧ
೪. ನಂದಿಪ್ಳ . ತೀರ್ಥಂಕರ


೧


೨


೩


೪

೧. ಕಲವೆ : ಮಹಿಷಮರ್ದಿನಿ. ೨. ಮಟ್ಟಾ : ನಾಗ
೩, ೪ : ಮಟ್ಟಾ : ಚಂಡೇಶ್ವರ ? (ಹಿಂಬದಿ, ಮುಂಬದಿ)

ಚಿತ್ರ : 3



೧



೨



೩

೧, ೩; ಬೆಂಗಣೆ : ನರಸಿಂಹ.   ೨ ಮರ್ಸೆ : ಸಾರಂಗಪಾಣಿ ವಿಷ್ಣು

ಚಿತ್ರ : 4



೧. ಅಬ್ಬಳ್ಳಿ : ಜನಾರ್ಧನ ೨ ಕವಲಕ್ಕಿ : ವರಾಹ. ೩ ಆರ್ಗೆ : ಮಾಧವ.

ತುಳುನಾಡಿನ ಮೂರು ರಾಜಧಾನಿಗಳು : ಒಂದು ಸ್ಥಳನಾಮ ಜಿಜ್ಞಾಸೆ

● ಕೆ. ರಘುಪತಿ ಭಟ್ಟ

ದಕ್ಷಿಣ ಕನ್ನಡ ಜಿಲ್ಲೆ ಎಂದು ಇಂದು ಕರೆಯಲಾಗುತ್ತಿರುವ ಕರಾವಳಿ ಪ್ರದೇಶದ ಚಾರಿತ್ರಿಕ ಹೆಸರು ತುಳುನಾಡೆಂದಾಗಿತ್ತು. ತುಳುನಾಡು ಈಗಿನ ದ. ಕ. ಜಿಲ್ಲೆಗಿಂತ ತುಂಬ ವಿಸ್ತಾರವಾಗಿತ್ತು—ಭೂಭಾಗದ ದೃಷ್ಟಿಯಿಂದ ಮಾತ್ರವಲ್ಲ, ಹೆಸರಿನ ಅರ್ಥವ್ಯಾಪ್ತಿಯಿಂದ ಕೂಡ. ೧೮೬೨ ರಿಂದೀಚೆಗೆ ದ. ಕ. ಜಿಲ್ಲೆ ಎಂಬ ಹೆಸರು ವ್ಯವಹೃತವಾದರೂ, ಈ ಪ್ರದೇಶಕ್ಕೆ 'ತುಳುನಾಡು' ಎಂದು ಕರೆಯುವುದೇ ಹೆಚ್ಚು ಉಚಿತ. ಇಲ್ಲಿ ಸುಮಾರು ಒಂದು ಸಾವಿರದ ಇನ್ನೂರು ವರ್ಷಗಳ ವರೆಗೆ ಅವ್ಯಾಹತವಾಗಿ ಆಳಿದ ರಾಜಮನೆತನದ ಹೆಸರು 'ಆಳುಪ/ಆಳುವ/ಆಳುಕ' ಎಂಬುದಾಗಲೀ, ಮೊದಲು 'ನಾಡು' ಎಂಬರ್ಥದಲ್ಲೂ ಈಚೆಗೆ 'ಭಾಷೆ' ಎಂಬರ್ಥದಲ್ಲೂ ಬಳಕೆಗೆ ಬಂದ 'ತುಳು' ಎಂಬ ಪದವಾಗಲೀ, ಮೂಲತಃ ಜಲವಾಚಕವಾಗಿಯೇ ಇದ್ದಿರಬೇಕು[೧]. ಈ ಆಳುಪರ ಪ್ರಪ್ರಥಮ ರಾಜಧಾನಿ ಮಂಗಳೂರು. ಸು. ೮ನೇ ಶ.ದ ಆದಿಯಿಂದ ೧೦ನೇ ಶ.ದ ವರೆಗೆ

---

೧ 'ತುಳುಪ' ಪದದ ನಿಷ್ಪತ್ತಿಯ ಬಗ್ಗೆ ಚರ್ಚಿಸಿದ್ದ ದಿ. ರಾಷ್ಟ್ರಕವಿ ಗೋವಿಂದ ಪೈ ಅವರು ಒಂದು ಕಡೆ ಮುಂದುಮಾಡಿದ ಹಲವಾರು ಸಾಧ್ಯತೆಗಳಲ್ಲಿ ಈ ಕೆಳಗಿನದು ಸತ್ಯಕ್ಕೆ ಹೆಚ್ಚು ಸಂನಿಹಿತವಾಗಿದೆ, ಭೂ ವಿವರ ರೀತ್ಯಾ.

"ತಮಿಳನ್ನ ಆಶ್ರಯಿಸಿ ತುಳುವಿನ ನಿಷ್ಪತ್ತಿಯನ್ನ ಕಂಡುಹಿಡಿಯುವುದಾದರೆ. ನನಗೆ ಹೀಗೆನಿಸುತ್ತದೆ: ತಮಿಳಿನಲ್ಲಿ ತುಟಿ[೨] ಎಂದರೆ ನೀರಿನಲ್ಲಿ ಹುಟ್ಟು ಹಾಕು ಎಂದೂ,

ಉದಯಪುರವು (ಉಡುಪಿ ತಾಲೂಕಿನ ಉದ್ಯಾವರ) ಅವರ ರಾಜಕೀಯ ವಿದ್ಯ-ಮಾನಗಳ ಪ್ರಧಾನ ಕೇಂದ್ರವಾಯಿತು. ನಂತರ ೧೧–೧೨ನೇ ಶ.ದಲ್ಲಿ ಆಗಲೇ ಪ್ರಸಿದ್ಧ ಸಮೃದ್ಧಿಪರ ಬಂದರಾಗಿ ಮೆರೆಯುತ್ತಿದ್ದ ಬಾರಕೂರೆಂಬ ಶ್ರೀಮಂತ ನಗರ ಅವರ ಗಮನ ಸೆಳೆಯಿತು. ಆದಾಗ್ಯೂ, ಉದ್ಯಾವರವು ತನ್ನ ಚಾರಿತ್ರಿಕ

ತುಳ್ಳೈ ಎಂದರೆ ಮುಳುಗು, ನೀರಿನಲ್ಲಿ ಆಡು ಎಂದೂ, ತುಳ್ಳೈಯುವ್ ಎಂದರೆ ನೀರಿನಲ್ಲಿ ಆಡುವಿಕೆ ಎಂದೂ ಅರ್ಥ. ಹರಿವಂಶದಿಂದ ತುಳುನಾಡಿನ ಜನರನ್ನು ಕುರಿತು-ತಸ್ಯ ದಾಶಾ ಜಲೇಮಗ್ನಾಃ...... ಸಮುದ್ರೋದರಚಾರಿಣಃ। ಎಂದು.........ಕಡಲಕರೆಯ ಪ್ರದೇಶವಾಗಿದ್ದರೂ ನಾಡಿನಲ್ಲಿ ಆ ಹಳೆಗಾಲದಲ್ಲಿ ಬೆಸ್ತರೂ ಅಂಬಿಗರೂ ಸಹಜವಾಗಿ ಹೇರಳವಾಗಿದ್ದು ದಾಶಭೂಯಿಷ್ಠವಾಗಿರಬೇಕಾದ ಈ ದೇಶವು ಅದೇ ಕಾರಣ ತುಲು-ತುಳು ಎಂದು ಕರೆಯಲ್ಪಟ್ಟಿರಬೇಕು... 'ತುಳುನಾಡು : ಪೂರ್ವಸ್ಮೃತಿ' -ತೆಂಕನಾಡು, ಪು. ೧೯.

ವಾಸ್ತವಿಕವಾಗಿ ಕಡಲಕರೆಯ ಈ ಪ್ರದೇಶಕ್ಕೆ ಜಲವಾಚಕ ನಾಮನಿರ್ದೇಶನವಾಗುವುದರಲ್ಲಿ ಆಶ್ಚರ್ಯವಿಲ್ಲ. ತುಳುಭಾಷೆಯಲ್ಲಿ ಈಗ ಈ ಪದವಿರದಿದ್ದರೂ, ಕೆಲವು ಸಾಧಿತ (derived words) ಪದಗಳು ಲಾಕ್ಷಣಿಕವಾಗಿ ಪ್ರಾಯಃ ಇದನ್ನೆ ಸಮರ್ಥಿಸುವಂತಿವೆ : ಉದಾ—ತುಟುವೆ ಪೆಲಕ್ಕಾಯಿ, ತುಟುವೆ ಕುಕ್ಕು ಚ್ಚುರ ಮೃದು, ಅಂದರೆ ಹೆಚ್ಚು ರಸದ (=ನೀರಿನ) ಅಂಶವುಳ್ಳ ಹಲಸು ಮತ್ತು ಮಾವಿನ ಹಣ್ಣು; 'ತೊಳಂಕು' (ಕ. ತುಳುಕು) ನೀರು ಒಂದು ಯಾವುದೇ 'ಪಾತ್ರ'ದಿಂದ ಹೊರಸೂಸುವುದನ್ನೂ 'ತುಳ್ಳು' 'ನೀರಿನಲ್ಲಿ ಬಿದ್ದವನು ಉಸಿರುಕಟ್ಟುವಾಗ ಹೊರಳಾಡುವುದ'ನ್ನೂ ಕಣ್ಣಿಗೆ ಕಟ್ಟಿದಂತೆ ಚಿತ್ರಿಸುತ್ತದೆ. ಬಹುಶಃ ಕನ್ನಡದ 'ತೊಳೆ' ಎಂಬುದು (=ನೀರಿನಿಂದ ಶುಚಿಗೊಳಿಸು) ನೀರಿನ ಸಹ-ಯೋಗದಿಂದ ನಿಷ್ಪನ್ನವಾದ, ಮೇಲಿನ ಮೂಲಪದದ ಸಾಧಿತರೂಪವಾಗಬಹುದೇನೋ.

ಇನ್ನು 'ಆಳುಪ, ಆಲುಪ, ಆಳುವ, ಆಳ್ವ ಆಳುಕ ಮುಂತಾದ ರೂಪಗಳನ್ನು 'ಆಳುವವ' ಎಂಬರ್ಥದಲ್ಲಿ ತೆಗೆದುಕೊಳ್ಳದೆ, ಜಲವಾಚಕ 'ಅಲ್' (ನೀರು, ನದಿ, ಇ) ನಿಂದ ಸಾಧಿಸಬಹುದು. ತುಳುನಾಡಿನಲ್ಲಿ ಆಲ್/ಆರ್ ಎಂಬ ಪೂರ್ವ ಅಥವಾ ಅಂತ್ಯ ಪ್ರತ್ಯಯದಿಂದ ಕೂಡಿದ ಸ್ಥಳನಾಮಗಳ ಸಂಖ್ಯೆ ಅಧಿಕವಾಗಿವೆ. ಆದ್ದರಿಂದ, ಆಲುಪ> ಆಳುವ ಎಂದಲ್ಲಿ, ತುಳುಭಾಷಾ ಸಹಜವಾಗಿರುವಂತೆ, ನೀರಿಗೆ ಅಂದರೆ ಸಮುದ್ರಕ್ಕೆ ಹತ್ತಿರದ ಪ್ರದೇಶ, 'ಅಳಿವೆ' ಪ್ರದೇಶ ಎಂದೂ. ಆ ಪ್ರದೇಶದವರೆಂದೂ ಅರ್ಥಮಾಡುವುದು ಸಯುಕ್ತಿಕ ಎನಿಸುತ್ತದೆ. ಈ ನಿಟ್ಟಿನಲ್ಲಿ ಈ ಪದಗಳ ಅರ್ಥಶೋಧನೆ ಮಾಡುವುದು ತುಳುನಾಡಿನ ಭೂಸ್ಥಿತಿ ವಾಚಕ ಸ್ಥಳನಾಮಗಳ ಯಥಾರ್ಥ ವಿವರಣೆಯ ದೃಷ್ಟಿಯಿಂದ ತುಂಬ ಪ್ರಯೋಜನಕಾರಿಯಾದೀತು.

ಇನ್ನೊಂದಂಶ : ಈಗಿನ ಉ. ಕ. ಜಿಲ್ಲೆಗೆ ಹೈಗ, ಪೈಗ, ಪಶುಕ ಮುಂತಾದ ಉಪನಾಮಗಳಿದ್ದುವು. ಉತ್ತರ–ದಕ್ಷಿಣ ಕನ್ನಡಗಳೆರಡೂ ('ಪರಶುರಾಮ ಸೃಷ್ಟ' ಎಂದು ಸಂಭಾವಿತವಾದ) ಸಮುದ್ರದ ಹಿಂತೆಗೆತದಿಂದ ಉಂಟಾದ ಭೂ-ಪೃಥ್ವಿಯಾಗಿರುವುದರಿಂದ ಈ ಜಿಲ್ಲೆಗಳಲ್ಲಿ ಕಲೆಯ ಪ್ರದೇಶಗಳಲ್ಲೆಲ್ಲ ಹೊಯ್ಗೆ (ತು. ಪೊಯ್ಯೆ–ಮಳಲು) ಅಧಿಕವಾಗಿ ಕಾಣಬರುವುದು ಸ್ವಾಭಾವಿಕ. ದ. ಕ. ಕ್ಕೆ 'ತುಳುವ' ವೆಂದೂ ಉ. ಕ. ಕ್ಕೆ 'ಹೈವೆ> ಪೊಯ್ಯೆ' ಎಂದೂ ನಾಮಕರಣವಾದುದೂ ಸಹ ನಮ್ಮ ವಾದವನ್ನು ಪುಷ್ಟಿಗೊಳಿಸುತ್ತದೆ.

ಸ್ಥಾನವನ್ನು ಕಳಕೊಂಡ ಮೇಲೂ ಮಂಗಳೂರು ತನ್ನ ಹಿಂದಿನ ಸ್ಥಾನವನ್ನು ಉದ್ದಕ್ಕೂ ಉಳಿಸಿಕೊಂಡು ಬಂದಿತು. ವಿಜಯನಗರದ ಆಡಳಿತ ಕಾಲದಲ್ಲಂತೂ ಈ ಜಿಲ್ಲೆಯನ್ನು 'ಬಾರಕೂರು ರಾಜ್ಯ, ಮಂಗಳೂರು ರಾಜ್ಯ'ಗಳೆಂಬ ಪ್ರಧಾನ ಭಾಗಗಳನ್ನಾಗಿ ವಿಂಗಡಿಸಲಾಯಿತು.

ಹೀಗೆ ತುಳುನಾಡಿನ ಮೂರು ರಾಜಧಾನಿಗಳಾದ ಮಂಗಳೂರು, ಉದ್ಯಾವರ ಹಾಗೂ ಬಾರಕೂರುಗಳ ಸ್ಥಳನಾಮಗಳ ವ್ಯುತ್ಪತ್ತಿ ತಿಳಿಯುವುದು ಉಪಯುಕ್ತ ಎಂಬುದರಿಂದ, ಐತಿಹಾಸಿಕ ಕಾಲದಲ್ಲಿ ಬೇರೆಬೇರೆ ಆಧಾರಗಳಲ್ಲಿ ಅವು ಪಡೆದ ರೂಪವ್ಯತ್ಯಾಸವನ್ನು ಕಾಲಾನುಕ್ರಮವಾಗಿ ಹೊಂದಿಸಿ, ಪ್ರಾಚೀನ ನಾಮರೂಪ ವನ್ನು ಕಂಡುಹಿಡಿಯುವ ಯತ್ನವನ್ನಿಲ್ಲಿ ಮಾಡಲಾಗಿದೆ.

೧. **ಮಂಗಲಪುರ** (ಮಂಗಳೂರು) : ಪ್ಲಿನಿ (ಕ್ರಿ. ಶ. ೨೩-೭೯) ಹಾಗೂ ಟಾಲೆಮಿ (ಕ್ರಿ. ಶ. ಸು. ೧೫೦) ಎಂಬಿಬ್ಬರು ವಿದೇಶೀ ಸಂದರ್ಶಕರು ಪ. ಕರಾವಳಿಯಲ್ಲಿ ಕ್ರಮವಾಗಿ Nitrias ಎಂಬ ವ್ಯಾಪಾರ ಸ್ಥಳವನ್ನೂ (mart), Nitra ಎಂಬ ರೇವನ್ನೂ (port) ಉಲ್ಲೇಖಿಸಿರುತ್ತಾರೆ. ಇದು ನೇತ್ರಾವತಿ ನದಿಯ ಹೆಸರು ಎಂಬುದು ಸ್ಪಷ್ಟ. ನೇತ್ರಾವತಿ ನದಿಯ ಹೆಸರು ಉಲ್ಲೇಖಗೊಳ್ಳಬೇಕಾದರೆ ಅದರ ದಂಡೆಯ ನಗರವಾದ ಮಂಗಳೂರು ಸಹ ಆ ಕಾಲಕ್ಕೆ ಸಾಕಷ್ಟು ಮುಂದುವರಿದಿದ್ದಿರಬೇಕೆಂದು ಊಹಿಸುವುದು ತಪ್ಪಾಗ ಲಿಕ್ಕಿಲ್ಲ. ದಿ. ಗೋವಿಂದ ಪೈ ಅವರು ಅನುಮಾನಿಸಿರುವಂತೆ[೨] Nitrias = Nitra < Netravati ಎಂಬ ಹೆಸರು ಅದರ ಕರೆಯ ಮಂಗಳೂರಿಗೂ ಅನ್ವಯ ವಾಗುತ್ತಿತ್ತೇನೋ; ಅಥವಾ ಈ ಬರೆಹಗಾರರು ಮಂಗಳೂರಿನ ಹೆಸರು ಹೇಳದೆ, ಈ ಹೆಸರನ್ನು ಅದಕ್ಕೆ ವಿಶಿಷ್ಟವಾಗಿ ಅನ್ವಯಿಸಿ ಬಳಸಿದ್ದರೇನೋ.

ಮಂಗಳೂರಿನ ನಾಮರೂಪದ ಕಾಲಾನುಕ್ರಮಣಿ ಹೀಗಿದೆ:

i) ಕ್ರಿ.ಶ. ೧೦೦–೧೭೨ : Mandigora (Aurrian in 'India')
ii) ಕ್ರಿ.ಶ.ಸು. ೬ನೇ ಶ. : Mangarouth (Kosmos in 'Christian Topography')
iii) ಕ್ರಿ.ಶ. ೬೬೪–೫–೯ : ಮಂಗಲಾಪುರ (ಮಾರಟೂರು ದತ್ತಿಶಾಸನ)
iv) ಕ್ರಿ.ಶ. ೭೭೦ : ಮಂಗಲಾಪುರ (ವೆಲ್ವಿಕ್ಕುಡಿ ತಾಮ್ರಪಟಗಳು)
v) ಕ್ರಿ.ಶ.ಸು. ೮೦೫–೮೧೫ : ಮಙ್ಗಲಪುರ (ಉದ್ಯಾವರ ಶಿಲಾಶಾಸನ)
vi) ಕ್ರಿ.ಶ.ಸು. ೧೧೬೦–೧೨೨೦ : ಮಂಗಲಾಪುರ
vii) ಕ್ರಿ.ಶ.ಸು. ೧೩೦೦ : Manjarūr (Rashiduddin)

೨ ಗೋವಿಂದ ಪೈ : ಅದೇ, ಪು. ೨೦.

viii) ಕ್ರಿ.ಶ.ಸು. ೧೨೦೨ : ಮಂಗಳಾಪುರ (ಮಂಗಳೂರು ಶಾಸನ)
,, ೧೨೦೩ : ,, ,,
ix) ,, ೧೩೪೩ : Manjarūr (Ibn Batuta)
x) ,, ೧೩೪೫ : ಮಂಗಲೂರ ರಾಜ್ಯ
xi) ,, ೧೩೮೬ : ಮಂಗಲೂರು
,, ೧೩೮೯ : ,,
xii) ,, ೧೩೯೮ : ಮಂಗಲೂರು ರಾಜ್ಯ
xiii) ಈಚಿನ ಹತ್ತಾರು ಶಾಸನಗಳಲ್ಲಿ : ಮಂಗಲೂರು ರಾಜ್ಯ
xiv) ಕ್ರಿ.ಶ. ೧೪೪೨ : Mangalor (Abdul Razzaq)
,, ೧೫೧೬ : ,, (Barbosa)
xv) ,, ೧೭೨೭ : Mangulore (A. Hamilton)
xvi) ,, ೧೮೦೧ : Mangalore (Buchanan)

ಮೇಲಿನ ಕಾಲಾನುಕ್ರಮ ವ್ಯವಸ್ಥೆಯಿಂದ ವ್ಯಕ್ತವಾಗುವ ಕೆಲವು ಮುಖ್ಯಾಂಶಗಳು : ೧) ಮಂಗಳಾಪುರ ಎಂಬ ರೂಪವು ಪ್ರಾಯಶಃ ೭ನೇ ಶ.ದ ಮಧ್ಯದಿಂದ ಜಾರಿಗೆ ಬಂದಿರಬಹುದು. ೨) ವಿದೇಶೀ ಸಂದರ್ಶಕರ ರೂಪವು 'ಮಂಗಳೂರು' ಎಂಬ ರೂಪಕ್ಕೆ ಉಚ್ಚಾರದಲ್ಲಿ ಹೆಚ್ಚು ಹತ್ತಿರವೆನಿಸುವುದರಿಂದ 'ಮಂಗಳಾಪುರ' ಎಂಬ ರೂಪವು, ಸಂಸ್ಕೃತ ಭಾಷೆಯ ಹೇರಿಕೆ ಎನ್ನಬಹುದು. ೩) 'ಮಂಗಳೂರು' ಎಂಬುದು ಸಂಸ್ಕೃತದಲ್ಲಿ 'ಮಂಗಲಾಪುರ' ವೆನ್ನಿಸಿದರೂ, ಈಚಿನ ಶಾಸನಗಳಲ್ಲಿ 'ಮಂಗಲೂರು' ('ಮಂಗಳೂರು ರಾಜ್ಯ' ಇ.) ಎಂಬ ರೂಪಗಳೇ ಅಧಿಕವಾಗಿ ಕಾಣಿಸುತ್ತವೆ. ಪೋರ್ಚುಗೀಸ್ ಮತ್ತಿತರ ಐರೋಪ್ಯ ಯಾತ್ರಿಕರ ಬರೆಹಗಳಲ್ಲಿನ ನಾಮರೂಪವು ಮಂಗಳೂರಿನ ಪ್ರಸ್ತುತ ಇಂಗ್ಲಿಷ್ ಉಚ್ಚಾರ ಕ್ರಮಕ್ಕೆ ಸರಿಹೋಲುತ್ತದೆ (Mangalor/Mangalore (ಮ್ಯಾಂಗ್ಳೋರ್) Z Bangalore). ೫) ಹಾಗಾದರೆ ಇದರ ಬೆಳವಣಿಗೆಯನ್ನು ಹೀಗೆ ಗುರುತಿಸಬಹುದು :

ಮಂಗಳೂರು (ಕ) > ಮಂಗಲಾಪುರ (ಸಂ) > ಮಂಗಳೂರು (ಕ) > ಮ್ಯಾಂಗ್ಳೋರ್ (ಇಂ.)

ಮಂಗಳೂರು : ಸ್ಥಳನಾಮದ ರೂಪದ ನಿಷ್ಪತ್ತಿಯ ಕುರಿತಾದ ವಾದಗಳು ಹೀಗಿವೆ :

i) ಜನಪ್ರಿಯ ಸ್ಥಳನಾಮ ರೂಪದ ಪ್ರಕಾರ, ಇಲ್ಲಿನ 'ಮಂಗಳಾದೇವಿ'ಯ ದೇವಸ್ಥಾನದಿಂದ ಈ ಹೆಸರು ಬಂದಿದೆ ಎಂಬುದು. ಆದರೆ ಮಂಗಳಾದೇವಿಯ

ಗುಡಿಯು ತುಂಬ ಈಚಿನದ್ದಾಗಿರುವುದಲ್ಲದೆ, ಅದು ನಿರ್ಮಿತವಾಗುವದಕ್ಕೆ ಮುನ್ನವೇ ಮಂಗಳೂರೆಂಬ ಹೆಸರು ರೂಢಿಯಲ್ಲಿತ್ತೆಂದು ನೋಡಿದೆ. ಅಲ್ಲದೆ, ತುಳುನಾಡಿನಲ್ಲಿ ಅಪಾರ ಸಂಖ್ಯೆಯಲ್ಲಿ ದೇವತೆಗಳು ಆರಾಧನೆಗೊಳ್ಳುತ್ತಿದ್ದರೂ, ಆ ದೇವತೆಗಳಿಂದ ಆ ಆ ಸ್ಥಳಗಳಿಗೆ ಹೆಸರು ಬಂದ ನಿದರ್ಶನಗಳು ತೌಲನಿಕವಾಗಿ ತೀರಾ ವಿರಳ, ಮಾತ್ರವಲ್ಲ, ಕೆಲವೊಮ್ಮೆ ನಿರ್ದಿಷ್ಟ ಊರಿನ ಹೆಸರಿನಿಂದ ಎಲ್ಲ ಊರುಗಳಿಗೆ ಸಮಾನವಾದ ದೇವತೆಗಳ ಹೆಸರನ್ನು ಸಹಯೋಜಿಸಿ ಕರೆಯುವ ವಾಡಿಕೆಯಿದೆ.

ii) ನಾಥಪಂಥದ ಜೋಗಿಣಿಯಾದ ಮಂಗಳೆ (ಪ್ರೇಮಲಾ? ಪರಿಮಳಾ?) ಎಂಬವಳಿಂದ ಈ ಹೆಸರು ಬಂತೆಂಬುದು ಎರಡನೇ ವಾದ. ಇದೂ ಮತ್ತೆ ಹುರುಳಿಲ್ಲದುದು. ನಾಥಪಂಥ ಮಂಗಳೂರಿಗೆ ಅಡಿಯಿಟ್ಟುದು ೯ ನೇ ಶ. ದ. ಸುಮಾರಿನಲ್ಲಿ; ಅಂದಮೇಲೆ ಅದಕ್ಕೆ ಮುನ್ನ ಮಂಗಳೂರೆಂಬ ನಾಮವು ಪ್ರಚಲಿತವಿದ್ದುದರಿಂದ, ಆ ಮಂಗಳೆಯನ್ನ ಇಲ್ಲಿ ನಿರ್ದೇಶಿಸಿಲ್ಲ ಎಂಬುದು ಸುವ್ಯಕ್ತ.

iii) 'ಮಂಗಲಾಪುರ' : ಮಂಗಲ + ಪುರ 'ಮಂಗಲ' ಪದಕ್ಕೆ ಸಂಸ್ಕೃತ ಕೋಶಗಳಲ್ಲಿ[೩] 'happiness, bliss, felicity, welfare etc.' (ಶುಭ, ಕಲ್ಯಾಣ, ಇತ್ಯಾದಿ) ಎಂಬರ್ಥವಿದೆ. ಇದನ್ನೆತ್ತಿಕೊಂಡು ಕೆಲವರು ಇದು ಕಲ್ಯಾಣಕರವಾದ (c.f. ಕಲ್ಯಾಣಪುರ, ಕಲ್ಯಾಣದುರ್ಗ ಇ.) ಊರು ಎಂಬರ್ಥ ನಿರ್ವಚಿಸುತ್ತಾರೆ. ಇದೂ ಮೇಲಿನ ವಾದಗಳಷ್ಟೇ ತಳರಹಿತ ವಿವರಣೆ. ನಾಮ ನಿರ್ದೇಶನ ಮಾಡುವಲ್ಲಿ ಒಂದು ಸ್ಥಳದ ಮೂಲ ನಿವಾಸಿಗಳ (ಯಾ, ಆಸುಪಾಸಿನವರು) ಆ ಸ್ಥಳದ ಭೂ–ವೈಶಿಷ್ಟ್ಯಗಳನ್ನು ಲಕ್ಷ್ಯದಲ್ಲಿರಿಸಿಕೊಳ್ಳುತ್ತಾರೆಯೇ ವಿನಾ ಬೇರಾವ ಅಂಶಗಳನ್ನೂ ಅಲ್ಲ; ಅಲ್ಲದೆ, ಹಾಗೆ ನಾಮಕರಣ ಮಾಡುವಲ್ಲಿ ಸ್ವಲ್ಪ ಮಟ್ಟಿಗೆ ಪೃಥಗ್ಭಾವದೊಂದಿಗೆ ನಿರ್ದಿಷ್ಟೀಕರಿಸುವ ಪ್ರಜ್ಞೆ ಅವರಲ್ಲಿ ಜಾಗೃತವಾಗಿತ್ತು.

iv) ದಿ. ಪಂಜೆ ಮಂಗೇಶರಾಯರನ್ನನುಸರಿಸಿ ಇತ್ತೀಚಿನ ಸಂಶೋಧಕರು ಎತ್ತಿ ಹಿಡಿಯುವ ವಾದವಾದರೂ 'ಮಂಗಳ' ಎಂಬುದಕ್ಕೆ ವಾಸ್ತುಶಿಲ್ಪಶಾಸ್ತ್ರಾನುಸಾರ ದುರ್ಗ, ಕೋಟೆ ಎಂಬರ್ಥವಿರುವುದರಿಂದ, ಇದು 'ದುರ್ಗರಕ್ಷಣೆಗಾಗಿ ನಗರದಲ್ಲಿದ್ದ ಸೈನ್ಯಕ್ಕೆ ಬೇಕಾದ ಸೌಕರ್ಯಗಳುಳ್ಳ ಸ್ಥಳ' ಅಥವಾ 'ದಂಡಿನವರು ಇರುವ ಕೋಟೆಕೇರಿ,'[೪]–[೪A] —ಎಂಬುದು. ಈ ವಾದಕ್ಕೆ ದಿ. ಪಂಜೆ

೩ Monier-Monier Williams : Sanskrit-English Dictionary, p. 772.

೪ ದಿ. ಪಂಜೆ ಮಂಗೇಶರಾಯರು : ಸ್ಥಳನಾಮ– ಪಂಜೆಯವರ ನೆನಪಿಗಾಗಿ, ಪು. ೫೦–೫೧.

೪A ಡಾ. ಪಿ. ಗುರುರಾಜಭಟ್ಟ : 'ತುಳುನಾಡಿನ ಮೂರು ಹೆಸರುಗಳು' ಎಂ. ಜಿ. ಎಂ. ಕಾಲೇಜು ಮೆಗಜಿನ್, ಸಂ. XII ೧೯೬೩ ಮತ್ತು 'ತುಳುನಾಡು' ಮುಂ.

ಯವರು 'ಬೋಳಾರ ಪೌಜು' ಮುಂತಾದ ಸಮರ್ಥನೆ ನೀಡಿದರೂ ಇದು ಗಟ್ಟಿಮುಟ್ಟಾದ ವ್ಯಾಖ್ಯಾನವಲ್ಲ. ಕಾರಣ, ಒಂದನೆಯದಾಗಿ, ಇಲ್ಲಿ ಕೋಟೆಯ ಅವಶೇಷ ಕಾಣಿಸುತ್ತಿಲ್ಲ. ಈ ಹೆಸರು ಹೀಗೆಯೆ ಹುಟ್ಟಿದ್ದಿದ್ದರೆ ಈ ಕೋಟೆ ಕ್ರಿ. ಶ. ದ ಆದಿಗೆ ಅಥವಾ ಪೂರ್ವಕ್ಕೇ ಹೋಗಬೇಕಾಗುತ್ತದೆ. ಆ ಬಗ್ಗೆ ಯಾವ ಆಧಾರಗಳೂ ಕಾಣಿಸುತ್ತಿಲ್ಲ. ಎರಡನೆಯದಾಗಿ, 'ಮಂಗಲ' ನಾಮಭಾಗವುಳ್ಳ ಈಶ್ವರ ಮಂಗಲ, ದತ್ತಮಂಗಲ, ನಾಮಮಂಗದ, ಕುಞಂಗಲ, ಕಾಂತಮಂಗಲ ವಿಶ್ವಮಂಗಲ ಮುಂತಾದ ಕಡೆಗಳಲ್ಲೆಲ್ಲ, ಅವರು ಹೇಳುವ ಕೋಟೆಗಳಿದ್ದುವೆಂದು ಹೇಳುವುದು ನಂಬಿಕೆಗೆ ದೂರವಾದ ಸಂಗತಿ.

v) ಇತ್ತೀಚೆಗೆ ತುಳುನಾಡಿನ ಸ್ಥಳನಾಮಗಳ ಕುರಿತಾಗಿ ಆಳವಾಗಿ ಅಭ್ಯಾಸ ಮಾಡಿರುವ ಶ್ರೀ ನರ್ಕಳ ಮಾರಪ್ಪ ಶೆಟ್ಟರು ಒಂದು ಹೊಸ ವಾದ ಮುಂದುಮಾಡಿದ್ದಾರೆ. ತುಳುವಿನಲ್ಲಿ 'ಮೊಗರು' ಎಂಬುದಕ್ಕೆ 'ಮುಮ್ಮೂಲೆಯ ನೆಲ. ನಂದಿಮುಖಜ ಭೂಮಿ, ಮೂರುಕಡೆ ನೀರು ಸುತ್ತಿರುವ ಡೆಲ್ಟಾ(delta)' ಇ. ಅರ್ಥಗಳಿವೆ. 'ಆರು ಆಟ'ಗಳು ತುಳುವಿನಲ್ಲಿ (ಇತರ ದ್ರಾವಿಡ ಭಾಷೆಗಳಲ್ಲಿಂತೂ ಅಂತೆ) 'ನೀರು, ನದಿ' ಎಂಬರ್ಥ ರೂಢಿಯಲ್ಲಿದೆ. ಆದ್ದರಿಂದ 'ಮೊಗರಾಲ್|ಮೊಗಲಾರ್' ಎಂಬುದು 'ಮಗಲೂರು> ಮಂಗಳೂರು' ಎಂದಾಯಿತು.[೫೨]

ಈ ವಿವರಣೆ ವಿಚಾರಣೀಯವಾಗಿದ್ದು ಸ್ಪಷ್ಟತೆಯನ್ನು ಬಯಸುತ್ತದೆ. 'ಮಂಗಳೂರಿ'ನ ಮಟ್ಟಿಗೆ ಈ ವಿವರಣೆ ಸ್ವಲ್ಪಮಟ್ಟಿಗೆ ಹೊಂದೀತು. ಕಾರಣ ಇದರ ಭೂಸಂನಿವೇಶ ಅಂತಹುದು. ಎರಡು ಕಡೆಗಳಿಂದ ಎರಡು ನದಿಗಳು– ನೇತ್ರಾವತೀ ಮತ್ತು ಗುರ್ಪುರ (ಫಲ್ಗುಣೀ) ನದಿಗಳು– ಇಲ್ಲಿ ಕೂಡಿ ಹರಿದು ಸಮುದ್ರದಲ್ಲಿ ಸೇರುತ್ತವೆ. ಹೀಗೆ ಈ ನದಿಗಳ ಸಂಗಮಸ್ಥಾನದಲ್ಲಿರುವ ಊರಿಗೆ ತುಳುವಿನಲ್ಲಿ ಕುಡ್ಲ> ಕುಡಲ> ಕೂಡಲ (ಕೂಡು+ಆಲ್) ಎಂಬ ಹೆಸರು ತುಂಬ ಸಮುಚಿತವೂ ಅಷ್ಟೇ ಸುಂದರವೂ ಆದುದು. ಹೀಗೆ, ಭೂವಿವರರೀತ್ಯಾ ಮಂಗಳೂರು ಒಂದು ದೃಷ್ಟಿಯಿಂದ 'ಮೊಗಲ+ಆಲ'ವೇ ಆಗಿವೆ. ಆದರೆ ಸಮಸ್ಯೆ ಬರುವುದು, ಉಳಿದ ಮಂಗಲಾಂಶದ ಎಡೆವೆಸರುಗಳಲ್ಲಿ. 'ಈಶ್ವರ ಮಂಗಲ' ಮುಂತಾದ ಸ್ಥಳನಾಮಗಳಿಗೆ ೕಯುತರು ಕೊಟ್ಟ ವಿವರಣೆ ಹೀಗಿದೆ: 'ಈರ ಮೊಗಲ್ – ಈರ — (ಸ. ಆಗಮ) ಈರ=ಈಸ. ಈಸ+ಆರ್= ಈಸಾರ್. ಈ ಸರ ಮೊಗಲ್=ಈರ ಮೊಗಲ್ – ದ್ವಿರುಕ್ತಿಯಿಂದ (ಆರ್+ ಆಲ್) ನೀರ ಮೊಗಲ್=ನೆಲದ ಮುಖದಲ್ಲಿ ನೀರಾಶ್ರಯದ ಊರು. ಆ ಸಾರ್ ಮೊಗಲ್–ಈ ಸಾರ ಮಂಗಲ್=(ಸಂ) ಈಶ್ವರ ಮಂಗಲ ಮಾಡಿಕೊಂಡುದು'[೫೩]

---

೫೨ ನರ್ಕಳ ಮಾರಪ್ಪ ಶೆಟ್ಟಿ : "ಮಂಗಳೂರು– ಈ ಹೆಸರು ಹೇಗಾಯಿತು ?" ಪ್ರಭಾತ, ಸ್ವಾತಂತ್ರ್ಯಾಂಕ ೧೫–೮–೧೯೬೯.

೫೩ ಅಲ್ಲೇ.

ಈ ಕೂಪಲೆಳೆ ಸೀಳುವ ಸೂಕ್ಷ್ಮತರ ವ್ಯಾಖ್ಯಾನ ನಮ್ಮನ್ನ ಎಲ್ಲೆಲ್ಲಿಗೋ ಕೊಂಡೊಯ್ಯುತ್ತದೆ. ಏಕೆಂದರೆ, 'ಈಶ್ವರ ಮಂಗಲ' ಎಂಬ ತಾಣದಲ್ಲಿ ಶಿವ ದೇವಾಲಯವಿದೆ. ಆದ್ದರಿಂದ, ಮೇಲೆ ಕೊಟ್ಟಿರುವ ವಿವರಣೆಯ ವ್ಯಾಪ್ತಿ-ಕಸುವು ಕುಗ್ಗಿದಂತಾಗಿದೆ.

vi) ತಮಿಳ್ನಾಡು ಮತ್ತು ಕರ್ನಾಟಕಗಳಲ್ಲಿ 'ಮಂಗಲ' ಎನ್ನುವ ಪದಕ್ಕೆ 'ಅಗ್ರಹಾರ-ಬ್ರಾಹ್ಮಣರ ಕೇರಿ' ಎಂಬರ್ಥವಿದೆ.[೬] ಕೇತಮಂಗಲ ಐ (<ಅಯ್ಯನ) ಮಂಗಲ ಮುಂತಾದ ಹೆಸರುಗಳಲ್ಲಿನ ಪೂರ್ವಭಾಗವು ವ್ಯಕ್ತಿನಾಮವಾಗಿದ್ದು, ಆ ಆ ವ್ಯಕ್ತಿಗಳು ಬ್ರಾಹ್ಮಣರಿಗೆ ದತ್ತಿಬಿಟ್ಟ ಊರಭಾಗ, ಕೇರಿ ಎಂಬರ್ಥದಲ್ಲಿ ಈ ಸ್ಥಳನಾಮಗಳು ಹುಟ್ಟಿಕೊಂಡಿವೆ.

ಆದರೆ ಮಂಗಳೂರು ಮುಂತಾದ ಮಂಗಳವಾಚಕ ಊರುಗಳಲ್ಲಿ ಎಲ್ಲಿಲ್ಲೂ ಅಗ್ರಹಾರಗಳಿದ್ದ ಬಗ್ಗೆ ಯಾವ ಆಧಾರವೂ ಉಲ್ಲೇಖವೂ ತಿಳಿದುಬಂದಿಲ್ಲ. ಅಲ್ಲದೆ 'ಮಂಗಲ' ಎಂಬುದು ಮೇಲಿನರ್ಥದಲ್ಲಿ ಬಹುತೇಕ ಚೋಳರ ಕೊಡುಗೆಯೆನ್ನಲಾದುದರಿಂದ[೬a], ತುಳುನಾಡಿಗೆ ಚೋಳರೊಂದಿಗೆ ಕ್ರಿಸ್ತಶಕದ ಆದಿಯಲ್ಲಿ ಯಾವುದೇ ಸಂಬಂಧಗಳಿರಲಿಲ್ಲವಾಗಿ, ಈ ಅರ್ಥದಲ್ಲಿ ಈ ಪದ ತುಳುನಾಡಿನಲ್ಲಿ ಬಳಕೆಗೆ ಬಂದಿಲ್ಲ ಎನ್ನಬೇಕಾಗುತ್ತದೆ.

ಈ ಸಂದರ್ಭದಲ್ಲಿ ಒಂದು ಊಹೆಯನ್ನು ಮಂಡಿಸಬಹುದು. 'ಮಂಗಲ' ಎನ್ನುವ ಪದ, ಬಹುಸಂಖ್ಯೆಯ ಸ್ಥಳನಾಮಗಳಲ್ಲಿ ಸ್ಥಾನ ಗಳಿಸಿರುವುದರಿಂದ, ಪ್ರಾಯಃ ಇದು ದ್ರಾವಿಡ ಮೂಲದ ಪದವಾಗಿರಬೇಕು, ಅಥವಾ ದ್ರಾವಿಡ ಭಾಷೆಗಳಲ್ಲಿ ವಿಶಿಷ್ಟಾರ್ಥ ದ್ಯೋತಕವಾಗಿದ್ದಿರಬೇಕು. 'ಮಂಗಲ' ಎಂಬ ಪದ ಈ ಹಿನ್ನೆಲೆಯಲ್ಲಿ, ದೀರ್ಘ ಕಾಲದಿಂದ ನನ್ನನ್ನು ಯೋಚನೆಗೆ ಹಚ್ಚಿದಂತೆ, 'ಬೆಳೆ ಬೆಳೆಸಲು ಯೋಗ್ಯವಾದ ಜಲಾನಯನ ಭೂಮಿ-ಪ್ರದೇಶ' ಎಂಬರ್ಥದಲ್ಲೇಕೆ ಬಂದಿರಬಾರದು? ಹೇಮಚಂದ್ರನ 'ದೇಶೀ ನಾಮಮಾಲಾ' ಎಂಬ ದೇಶೀ ಪದಗಳ ಕೋಶದಲ್ಲಿ ಇದಕ್ಕೆ ಸಮರ್ಥನೆಯಿದೆ. ಅಲ್ಲಿ 'ಮಂಗಲ ಸಂಜ್ಞಂ' ಎಂಬ ಶಬ್ದಕ್ಕೆ 'ಬೀಜವಾಹಶೇಷಂ ಕ್ಷೇತ್ರಮ್'[೭] (a field ready for sowing seeds) ಎಂದು ಅರ್ಥವಿಸಿದೆ. ಇದು ಪ್ರಾಯಃ ಸಹಜವಾಗಿ, ಪ್ರಕೃತಿದತ್ತವಾಗಿ

೬ ಡಾ. ಎಂ. ಚಿದಾನಂದ ಮೂರ್ತಿಯವರೊಂದಿಗೆ ೨೫–೩–೭೭ ರಂದು ನಡೆಸಿದ ಸಂದರ್ಶನದ ವೇಳೆಗೆ ಬೆಳಕಿಗೆ ಬಂದ ಸಂಗತಿ.

೬a ಅಲ್ಲಿ.

೭ The Dēsīnāmamala of Hēmachandra (1938) : Glossary, p. 67.

ಕೃಷಿಯೋಗ್ಯ ಭೂಮಿಯನ್ನು ಸೂಚಿಸುತ್ತಿರಬೇಕು. ಅಲ್ಲದೆ, ಸಾಮಾನ್ಯವಾಗಿ 'ಮಂಗಲ' ಎಂಬುದನ್ನು ಉತ್ತರ ಅಥವಾ ಪೂರ್ವ ಭಾಗದಲ್ಲಿ (Mangala as a post-position or pre-position in place-names) ಹೊಂದಿದ ಸ್ಥಳನಾಮಗಳೆಲ್ಲ ಕೃಷಿಯೋಗ್ಯ ಪ್ರದೇಶಗಳನ್ನು ಸೂಚಿಸುತ್ತವೆ; ಅಲ್ಲದೆ, ಕೃಷಿಯಿಂದಾಗಿ ಈ ಊರುಗಳೆಲ್ಲ ಸಾಕಷ್ಟು ಮುಂದುವರಿದಿವೆ. ಬಹುಶಃ 'ಮಂಗಳೂರು' ಎಂಬುದೂ ಇದೇ ಅರ್ಥವನ್ನು ಕೊಡುತ್ತದೆ. ಇನ್ನಷ್ಟು ಆಧಾರಗಳು ದೊರಕುವ ತನಕ, ಈ ವಾದವನ್ನು ಉಳಿಸಿಕೊಳ್ಳಬಹುದು.

೨. ಉದ್ಯಾವರ (ಉಡುಪಿ ತಾ.) :

i) ಸು. ೮ನೇ ಶ. : ಉದಯಪುರ (ಕೋಟದ ಹಿರಿಯ ದೇವಾಲಯದ ಶಾಸನ)
ii) ೮ನೇ ಶ.ದ ಮಧ್ಯ : ಉದಿಯಪುರ (ಉದ್ಯಾವರದ ಶಾಸನ)
iii) ೮ನೇ ಶ.ದ ಉತ್ತರಾರ್ಧ : ಉದಿಯಾವರ (ಉಡುಪಿ ಶಾಸನ).
iv) ಕ್ರಿ.ಶ. ೭೬೫–೮೦೦ರ ಮಧ್ಯೆ : ಉದಯಪುರ
v) ,, ೮೦೫–೮೧೫ ಮಧ್ಯೆ : ಉದಯಪುರ
vi) ,, ೮೪೦–೮೭೦ರ ಮಧ್ಯೆ : ಉದಯಪುರ
vii) ,, ೯ನೇ ಶ.ದ ಮಧ್ಯ : ಒದೆವುರ (ಉದ್ಯಾವರ ಶಾಸನ)
viii) ,, ೧೪೭೪ : ಒದೆವೂರ (ಚೊಕ್ಕಾಡಿ ಶಾಸನ)

ಶಾಸನಗಳಲ್ಲಿ ವಿಶೇಷವಾಗಿ ಪ್ರಯುಕ್ತವಾಗಿರುವ ರೂಪ: 'ಉದಯಪುರ'. ಉಳಿದ ಕಡೆ ಇಂಥ ಹೆಸರುಗಳು ಕಾಣುತ್ತವೆಯಾದರೂ, ತುಳುನಾಡಿನಲ್ಲಿ ಇದು ಯಥಾರ್ಥ ನಾಮರೂಪವಲ್ಲ ಎಂಬ ಶಂಕೆಗೆ ಎಡೆಯಿದೆ. 'ಒದೆವುರ' ಮತ್ತು 'ಉದಿಯಾವರ' (c.f. ಆಧುನಿಕ ಉದ್ಯಾವರ) ಎಂಬ ರೂಪಗಳೂ ಸಾಕಷ್ಟು ಪ್ರಾಚೀನ ಕಾಲದಲ್ಲೇ ಕಾಣಿಸಿಕೊಳ್ಳುತ್ತವೆ. ಅಲ್ಲದೆ, 'ಉದಿಯಪುರ' ಎಂಬ ಶಾಸನೋಕ್ತ ರೂಪವಂತೂ ತುಂಬ ಕುತೂಹಲಕಾರಿಯಾಗಿದ್ದು, ಸಂಸ್ಕೃತೀಕರಣದ ಪ್ರಯತ್ನವನ್ನು ಸೂಚಿಸುತ್ತದೆ.

'ಉದಯಪುರ' ಎಂಬ ರೂಪವನ್ನೇ ಮೂಲವಾಗಿಟ್ಟುಕೊಂಡು, ಇದಕ್ಕೆ 'ಸಮೃದ್ಧ ನಗರ'[೮] 'ಪ್ರಗತಿ ಹೊಂದುತ್ತಿರುವ ಹಾಗೂ ಸಂಪತ್ತಿನಿಂದ ಕೂಡಿದ

೮ ಡಾ. ಭಟ್ಟ "ಮಲ್ಪೆಯಿಂದ ಮಣಿಪಳಕ್ಕೆ"—ಎಂ. ಜಿ. ಎಂ. ಕಾಲೇಜ ಮೆಗಜಿನ್ ಸಂ. XVI, ೧೯೬೬–೬೭.

ಊರು ಅಥವಾ ಪಟ್ಟಣ'[೯೩] ಎಂದು ಸಂಸ್ಕೃತ ಭಾಷಾ ರೀತ್ಯಾ ವ್ಯಾಖ್ಯಾನಿಸಲಾಗಿದೆ. ಆದರೆ, ತುಳುನಾಡಿನ ಈ ಭಾಗದಲ್ಲಿ ಕೆಲವು ಮೂಲತಃ ದೇಶೀಯ ಸ್ಥಳನಾಮ ಪದಗಳು ಊಹಿಸಲಾರದಷ್ಟು ವ್ಯತ್ಯಾಸ ಪಡೆದಿವೆ ಎಂಬುದನ್ನು ಮರೆಯುಬಾರದು.[೯] ತುಳು ಭಾಷೆಯಲ್ಲಿ ಸ್ಥಳೀಕರು 'ಉದ್ದಾರ್/ಉದ್ಯಾರೊ/ಉಜ್ಜಾರೊ' ಎಂದು ಉಚ್ಚರಿಸುವುದನ್ನು ಗಮನಿಸಬೇಕು. ಅಲ್ಲದೆ, 'ಉದ್ಯಾರ<ಉದ್ದಾರ' ಎಂದೇ ಸ್ವೀಕರಿಸುವುದಾದರೆ, ಯೋಗಾರ್ಥದಿಂದ 'ಉದ್ದವಾದ ಹೊಳೆಯಿಂದ ಕೂಡಿರುವ ಊರು' ಎಂದೂ 'ಉದ್ಯಾವರ' ಎಂಬುದನ್ನು ಮೂಲವಾಗಿರಿಸಿಕೊಂಡರೆ(?) 'ಹೊಳೆಯಿಂದ ಸುತ್ತುವರಿದಿರುವ (ಆವರ—ಸಂ.?) ಊರು' ಎಂದೂ, ಅವಗತವಾಗುತ್ತದೆ. ಊರಿನ ಒಂದು ಮೇರೆಯಾಗಿ ಉದ್ದಕ್ಕೂ ನದಿ ಹರಿದು ಸುತ್ತುವರಿಯುತ್ತದೆ, ಇಲ್ಲಿ. ಸದ್ಯದ ಮಟ್ಟಿಗೆ ಈ ವಿವರಣೆ ಸಾಧುವಾದೀತೇನೋ.

೩. ಬಾರಕೂರು (ಉಡುಪಿ ತಾ.) :

i) ಕ್ರಿ. ಶ. ೧೧೧೭ : ಬಾರಕನೂರ(ಘಟ್ಟ) (ಹೊಯ್ಸಳ ವಿಷ್ಣುವರ್ಧನನ ಶಾಸನ)

ii) ಕ್ರಿ. ಶ. ೧೧೫೫ : ಬಾರಹಕನ್ಯಾಪುರ (ಕೋಟಿಕೇರಿ ಶಾಸನ ಬಾರಕೂರು)

,, ೧೨೫೮ : ಬಾರಹಕನ್ಯಾಪುರ (ನೀಲಾವರ ಶಾಸನ)

ಕ್ರಿ. ಶ. ೧೨೬೧ : ಬಾರಹಕನ್ಯಾಪುರ (ಕೋಟೇಶ್ವರ ಶಾ.)

,, ೧೨೬೭ : ,, (ಪುತ್ತಿಗೆ ಶಾ.)

,, ೧೨೭೪ : ,, (ಕುತ್ತುಪಾಡಿ ಶಾ.)

iii) ಕ್ರಿ. ಶ. ೧೩೧೬ : ಬಾರಕಂನ್ಯೂಪುರ (ಬಾರಕೂರ ಶಾ.)

iv) ,, ೧೩೩೪ : ಬಾರಕೂರು (ಹೊಸಾಳ ಶಾ.)

v) ,, ೧೩೪೩ : Fakanur (Ibn Batuta)

---

೯೩ ಡಾ. ಭಟ್ಟ : "ಉದಯಪುರ ಮತ್ತು ಶ್ರೀ ಗಣಪತಿ ದೇವಾಲಯ"- ಭವ್ಯವಾಣಿ, ಫೆಬ್ರುವರಿ, ೧೯೭೮.

೯ ಇಂಥ ಊರುಗಳಿಗೆ ಉದಾ. ಉಡುಪಿ ತಾ. ನ ಮತ್ತು ಉದ್ಯಾವರಕ್ಕೆ ಸನಿಹದ ಹಳ್ಳಿ- 'ಮಣಿಪುರ' (ಸಂ.) ಮತ್ತು 'ಮಣಿಪಾಲ' (ಸಂ.) ಭೂ-ವಿವರ ರೀತ್ಯಾ ಹಾಗೂ ಸ್ಥಳೀಯ ಭಾಷಾ (ತುಳು) ದೃಷ್ಟಿಯಿಂದ ವ್ಯಾಖ್ಯಾನಿಸುವುದಾದರೆ, ಇವು ಕ್ರಮವಾಗಿ 'ಮಾಣಿ' (= ಉತ್ತರ, ತುಳು) + ಊರು' ಎಂದೋ, 'ಮಾಣಿ + ಪಾಳ' (ಅಥವಾ 'ಪಳ್ಳ'—ಏಕೆಂದರೆ, ಅಲ್ಲೊಂದ. ಬಹುದೊಡ್ಡ ಹಳ್ಳವಿದೆ.) ಎಂದೋ ಇದ್ದಿರಬೇಕು. ಆದರೆ, ಇದೀಗ ಆ ಅರ್ಥ ಹೊಳೆಯಲಾರದಷ್ಟು ಸಂಸ್ಕೃತ ಭಾಷಾಜಾಲ ಹಬ್ಬಿಬಿಟ್ಟಿದೆ.

vi) ,, ೧೩೮೭ : ಬಾರಹಕನ್ಯಾಪುರ (ನೀಲಾವರ ಶಾ.)
vii) ,, ೧೪೧೧ : ಬಾಡಕೂಡ (?)(<ಬಾರಕೂರ) (ಬಪ್ಪನಾಡು ಶಾ.)
viii) ,, ೧೦೨೦ : Pachamuriam (?) (Conti)
ix) ,, ೧೪೩೦ : ಬಾರಕೂರ ರಾಜ್ಯ
x) ,, ೧೪೬೪ : ಬಾರಕೂರು (ಬಸ್ರೂರು ಶಾ.)
xi) ,, (೧೫ ನೇ ಶ. ದ. ಮಧ್ಯ) : ಬಾರಕೂರ ತುಳುರಾಜ್ಯ (ಕ್ಯಾಕಿಣಿ ಶಾ.)
,, ೧೪೫೮ : ,,
xii) ,, ೧೫೭೦ : "Bacanut" (< Bacanur) (Account of 'Da Gama's Disoceveries)
xiii) ,, ೧೫೧೬ : Bacanor (Barbosa)
xiv) ,, ೧೫೫೬ : ,, De (Barros)
xv) ,, ೧೭೨೬ : Baquanon (Valentjin)
xvi) ,, ೧೭೨೭ : Baccanoor (A. Hamilton)
xvii) ,, ೧೭೮೦ : Bacanor (Dunn's N. Directory)

ಮೇಲಿನ ಕಾಲಾನುಕ್ರಮಣಿಯಿಂದ ಹೊರಪಡುವ ಕೆಲವಂಶಗಳು ಗಮನಾರ್ಹವಾದುವು : ೧. 'ಬಾರಕನೂರು' ಎಂಬ ರೂಪ ಕಾಣಿಸುವುದು ಮೊತ್ತ ಮೊದಲು ತುಳುನಾಡಿನಿಂದ ಹೊರಗಿನ ಶಾಸನವೊಂದರಲ್ಲಿ. ೨. ಬಾರಕೂರಿನ ಉಲ್ಲೇಖ ಶಾಸನಗಳಲ್ಲಿ ಕಾಣಿಸುವುದು ೧೨ನೇ ಶ. ದ. ಆದಿಯಿಂದ. ಆದ್ದರಿಂದ ಇದು ಒಂದು ಶತಮಾನ ಪೂರ್ವದಲ್ಲಿ, ಒಂದು ರಾಜಕೀಯ ಕೇಂದ್ರವಾಗಿ, ಆಡಳಿತದ ಕಚೇರಿಯಾಗಿ ರೂಪುಗೊಂಡಿದ್ದಿರಬೇಕು. ೩. 'ಬಾರಹಕನ್ಯಾಪುರ' ಎಂಬ ರೂಪ ತುಂಬ ವಿಚಿತ್ರವಾದುದು. ಬಹುಶಃ ಈ ರೂಪಕ್ಕೂ, ಪ್ರಚಲಿತವಿರುವ ಭೂತಾಳಪಾಂಡ್ಯನ ಕುರಿತಾದ ದಂತಕತೆಗೂ ಸಂಬಂಧವಿರುವಂತೆ ಅವನ ಕುರಿತಾದ ಕತೆಯೂ ಪ್ರಾಯಃ ೧೨ ನೇ ಶ. ದ ಮಧ್ಯದಿಂದ (ಹೆಚ್ಚೆಂದರೆ ಆದಿಯಿಂದ) ಹುಟ್ಟಿರಬೇಕು ಎಂಬುದನ್ನ 'ಬಾರಹಕನ್ಯಾಪುರ' ಎಂಬ ರೂಪವು ಸೂಚಿಸುತ್ತದೆ. ೪. ಉಳಿದ ರೂಪಗಳಲ್ಲಿ ಶಾಸನೋಕ್ತ 'ಬಾಡಕೂಡ' ಹಾಗೂ 'ಬಾರಕಂನ್ಯೂಪುರ' ವಿಚಿತ್ರವೂ ವಿಲಕ್ಷಣವೂ ಆದುವು. ಮೊದಲನೆಯುವಂತೂ ತೀರಾ ಅಪಭ್ರಷ್ಟ (Corrupt) ರೂಪ; 'ಬಾರಕೂರು' ಎಂಬ ರೂಪದ ತಪ್ಪು ಬರವಣಿಗೆ ಇದು. 'ಬಾರಕಂನ್ಯೂಪುರ' ಎಂಬುದೂ 'ಬಾರಕನ್ಯಾಪುರ' ಎಂಬುವನ್ನು ಬರೆವ ಉದ್ದೇಶದಲ್ಲಿ ಉಂಟಾಗಿರುವ ಸ್ಖಾಲಿತ್ಯವೆನ್ನಬಹುದು. ೫. ವಿಜಯನಗರದ ಅರಸರ ನೇರ ಪ್ರಭಾವಕ್ಕೆ, ಮೇಲಾಡಳಿತಕ್ಕೆ ಒಳಗಾದ ತುಳುನಾಡು

'ಬಾರಕೂರು ರಾಜ್ಯ' - 'ಮಂಗಳೂರು ರಾಜ್ಯ' ಎಂಬೆರಡು ಪ್ರಧಾನ ಆಡಳಿತ ಘಟಕಗಳಾಗಿ ವಿಭಜಿತವಾದುದಕ್ಕೆ ಶಾಸನೋಲ್ಲೇಖವಿದೆ. ಈ ವಿಭಾಗಗಳ ಉಲ್ಲೇಖ ೧೪ ನೇ ಶ. ದ ಆದಿಯಿಂದ ಶಾಸನಗಳಲ್ಲಿ ಕಾಣಿಸಿಕೊಳ್ಳುವುದು ಗಮನೀಯ ಸಂಗತಿ. ೬. ವಿದೇಶೀ ಬರಹಗಾರರ ಪೈಕಿ ಕಾಂಟಿ ಕೊಡುವ 'Pachamuriam' ರೂಪ ತೀರಾ ವಿರೂಪದ್ದಾಗಿದ್ದು ಅವಿಶ್ವಸನೀಯವಾಗಿದೆ. ಉಳಿದವರ ಉಚ್ಚಾರ ರೀತಿಯಲ್ಲೂ ವ್ಯತ್ಯಾಸ ಎದ್ದು ತೋರುವಂತಿದ್ದರೂ, ಅವು ಪ್ರಾಯಃ ಆ ವೇಳೆಗೆ ಜನಪ್ರಿಯವಾಗಿದ್ದ 'ಬಾರಕೂರು' ಎಂಬ ರೂಪದ ಉಚ್ಚಾರವನ್ನೇ ಹೋಲುತ್ತವೆ.

'ಬಾರಕೂರು' ಸ್ಥಳನಾಮ ಕುರಿತು ಎದ್ದಿರುವ ಭಿನ್ನಾಭಿಪ್ರಾಯಗಳು ಒಂದು ದೃಷ್ಟಿಯಿಂದ ಅವರ ಜನಪ್ರಿಯತೆ—ಪ್ರಸಿದ್ಧಿಯ ತೋರುಬೆರಳು. ಅಂತಹ ಕೆಲವು ಮುಖ್ಯ ವಾದಗಳು :

i) 'ಪಾರಕೂಲ' > ಬಾರಕೂರು : ಸಮುದ್ರದ ದಡದಲ್ಲಿರುವ ಊರು. ಭೌಗೋಳಿಕವಾಗಿ ಈ ವಿವರಣೆ ಒಪ್ಪುತ್ತದೆ. ಆದರೆ ಈ ರೂಪ ಶಾಸನಗಳಲ್ಲಾಗಲೀ ಪ್ರಾಚೀನ ಲಿಖಿತಾಧಾರಗಳಲ್ಲಾಗಲೀ ಕಾಣಿಸಿಕೊಳ್ಳುವುದಿಲ್ಲ; ಅದು ಬಹುಶಃ ಮೊತ್ತಮೊದಲು ಕಾಣಿಸಿಕೊಳ್ಳುವುದು ಲಿಂಗಣ್ಣ ಕವಿಯ 'ಕೆಳದಿನೃಪವಿಜಯ'ದಲ್ಲಿ. ಇದು ತೀರಾ ಇತ್ತೀಚಿನ ಆಧಾರವಾಯಿತು. ಆದ್ದರಿಂದ ಈ ರೂಪವೂ, ಉಳಿದ ನಾಮರೂಪಗಳಂತೆ, ಪಂಡಿತರ, ಸಾಹಿತಿಗಳ ಸೃಷ್ಟಿಯೆನ್ನದೆ ವಿಧಿಯಿಲ್ಲ.

ii) ಬಾರಹ (ಹನ್ನೆರಡು) + ಕನ್ಯಾಪುರ (ಕನ್ನೆಯರ ಊರು > ಬಾರಹ ಕನ್ಯಾಪುರ > ಬಾರಕನ್ಯಾಪುರ. ಆಗಲೇ ಹೇಳಿರುವಂತೆ, ಭೂತಾಳಪಾಂಡ್ಯನು ಇಲ್ಲಿ ಹನ್ನೆರಡು ಜೈನ ಕನ್ನೆಯರನ್ನು ಮದುವೆಯಾದುದರಿಂದ ಈ ಊರಿಗೆ ಈ ಹೆಸರಾಯಿತೆಂಬ ಕಲ್ಪಿತಕತೆಯೇ ಈ ನಿರುಕ್ತಿಯ ಹಿನ್ನೆಲೆ.

iii) ಬೈರಕ್ಕನ + ಊರು > ಬೈರಕ್ಕನೂರು > ಬಾರಕ್ಕನೂರು > ಬಾರಕೂರು : ಗೇರುಸೊಪ್ಪೆಯ ರಾಣಿ (?) ಬೈರಾದೇವಿಯ ಸ್ಮರಣಾರ್ಥ ಈ ಹೆಸರು ಬಂದಿದೆ ಎನ್ನುವ ವಾದ ಇದು. ಇದೂ ಅಷ್ಟೇ ಆಧಾರರಹಿತ ಕಲ್ಪನೆ.

iv) ಇನ್ನೊಂದು ಲಘು ಕಲ್ಪನೆ ಹೀಗಿದೆ : 'ವಾರಕೋಲ ನಡೆಯುತ್ತಿದ್ದ ಸ್ಥಳ ಬಾರಕೂರು' ಎಂಬುದು[೧೦]. ಇದು 'ಪಾರಕೂಲ' ಎಂಬ ರೂಪವನ್ನೇ

೧೦ ಎನ್. ಎಸ್. ಕಿಲ್ಲೆ, ಎನ್. ಎ. ಶೀನಪ್ಪ ಹೆಗ್ಡೆ : "ಪ್ರಾಚೀನ ತುಳುನಾಡು" ಪು. ೧೧೬.

ಸ್ವಲ್ಪ ಪರಿವರ್ತಿಸಿಕೊಂಡು ಬೇರೊಂದು ಅರ್ಥದಲ್ಲಿ ಬಳಸುವ ಚಮತ್ಕಾರ. 'ವಾರಕೂಲ' ಬಾರಕೂರಾಗುವದು ಎಷ್ಟು ಅಸಹಜವೋ, 'ವಾರ ಕೋಲ' ಆಗುವುದೂ ಅಷ್ಟೇ ಅಸಂಭವನೀಯ.

v) "'ಬಾರಕ' ಎಂಬುದು 'ದ್ವಾರಕ'ದ ಅಪಭ್ರಂಶವಾಗಿದ್ದು ಸಮುದ್ರದ ದ್ವಾರದಲ್ಲಿರುವ ಊರೆಂದೂ ಈ ಊರಿನಲ್ಲಿ ಮೊದಲು ನೂರು ಕುಲಗಳು ವಾಸವಾಗಿದ್ದುವೆಂದೂ ತಿಳಿಯಬಹುದಾಗಿದೆ. ಈ ರೀತಿಯ ವ್ಯುತ್ಪತ್ತಿಗೆ ಕರ್ನಾಟಕದ ಇತಿಹಾಸದಲ್ಲಿ ಇತರ ದೃಷ್ಟಾಂತಗಳವೆ."[೧೧] "ಇದೊಂದು ಹೊಸ ವಾದ. 'ದ್ವಾರಕ', 'ಬಾರಕ' ಎಂದಾಗುವುದು ಸಂಸ್ಕೃತಪದವು ತದ್ಭವವಾಗುವ ವ್ಯಾಕರಣನಿಯಮಕ್ಕೆ ಅನುಸಾರವಾಗಿಯೇ ಇದೆ. ಆದರೆ ಈ ನಿಷ್ಪತ್ತಿಯೂ ಸಹ 'ವಾರಕೂಲ> ಬಾರಕೂರು' ಎಂಬ ವಾದದಷ್ಟೇ ಸತ್ಯದೂರವೆನ್ನಬೇಕಾಗುತ್ತದೆ. ಕಾರಣ, ಇಂಥ ರೂಪಗಳಿಗೆ ಸ್ಥಳನಾಮಗಳಲ್ಲಾಗಲಿ, ಶಾಸನಾದಿ ಆಧಾರಗಳಲ್ಲಾಗಲೀ ಪುರಾವೆ ಒದಗುತ್ತಿಲ್ಲ.

ಈ ಸಂದರ್ಭದಲ್ಲಿ ಒಂದು ಸಂಭವನೀಯ ಅನುಮಾನವನ್ನು ಮುಂದಿಡ ಬಯಸುತ್ತೇನೆ. ತುಳುವಿನಲ್ಲಿ 'ಬಾರಗರು' ಎಂಬ ಪದಕ್ಕೆ 'ಬಂಟರು', ಕೃಷಿ ನಿರತರಾದ ಬಂಟ ಜಾತಿಯವರು (ಬಾರ್ (ತು) = ಬತ್ತ + ಅಗ ?) ಎಂಬರ್ಥವೇ ಅಲ್ಲದೆ, 'ಗುತ್ತಿನ ಸಹಾಯಕ' ಎಂಬರ್ಥವಿದೆ.[೧೨] ಪಾಡ್ದನಗಳಲ್ಲೇ ಅಲ್ಲವೆ ವ್ಯವಹಾರದಲ್ಲೂ 'ಬಂಟಬಾರಗ' ಎಂಬ ಕೂಡುನುಡಿ ಪ್ರಚಲಿತವಿದೆ. ಬಾರಕೂರಿನಲ್ಲಿ ಒಮ್ಮೊಮ್ಮೆ ಇಂಥ ಬಾರಗರು ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಿದ್ದಿರಬೇಕು. ಅಲ್ಲದೆ ಸು. ೧೦ನೇ ಶ. ದ ಪೂರ್ವದಲ್ಲೆ ಬಾರಕೂರು ಸುವ್ಯವಸ್ಥಿತ ನಗರಾಡಳಿತವನ್ನೂ, ನಗರಾಡಳಿತದ ಜನತಾ ಪ್ರತಿನಿಧಿಗಳನ್ನೂ ಹೊಂದಿತ್ತು. ಇಲ್ಲಿನ ಸಂಪನ್ನವಾದ ಹತ್ತುಕೇರಿಗಳು, ವ್ಯಾಪಾರ – ವಹಿವಾಟು, ನಖರ – ಸೆಟ್ಟಿಕಾರ ಮುಂತಾದ ವರ್ತಕ ಸಂಘಗಳು, ಅವು ಪಡೆದಿದ್ದ ಸ್ವಯಮಾಡಳಿತದ ಹಕ್ಕುಬಾಧ್ಯತೆಗಳು ಇವನ್ನೆಲ್ಲಾ ಪರಿಶೀಲಿಸಿದ್ದಾದರೆ, (ಬಾರಗರಿಂದ) ಈ ಊರು ೧೦ನೇ ಶ. ಕ್ಕೆ ಮುನ್ನವೇ ಶ್ರೀಮಂತ ನಗರವಾಗಿ ಮೆರೆದಿದ್ದಿರಬೇಕೆನ್ನಿಸುತ್ತದೆ. ಇಲ್ಲದಿದ್ದಲ್ಲಿ, ಮುಂದಿನ ಶಾಸನಗಳಲ್ಲಿ ಉಲ್ಲೇಖಿತವಾಗುವ ಈ ಎಲ್ಲ ವ್ಯವಸ್ಥೆಗಳು, ಸಂಘ–ವ್ಯವಹಾರಗಳು ಇತ್ಯಾದಿಗಳಿಗೆ ಇಂಥದೊಂದು ಭವ್ಯ ಹಾಗೂ ಸುದೀರ್ಘ ಪರಂಪರೆ ನಿರ್ಮಾಣಗೊಳ್ಳುತ್ತಿರಲಿಲ್ಲ. ಬಾರಕೂರಿನ ಬಂಟರಿಗೆ ಆಸುಪಾಸಿನಲ್ಲಿ ತುಂಬ ಗೌರವವೂ ಸಲ್ಲುತ್ತಿತ್ತು; ಪ್ರಾಯಃ ಆ ಆಸುಪಾಸಿನಲ್ಲಿ ಅವರು ಬಹುಸಂಖ್ಯಾಕರು ಆಗಿದ್ದಿರಬೇಕು.

---

೧೧ ಡಾ. ಭಟ್ಟ : 'ಬಾರಕೂರು', ಪು. ೪೩.

೧೨ ಕಿಲ್ಲೆ–ಹೆಗ್ಡೆ : ಅದೇ ಪು. ೧೧೪.

ಇತ್ತೀಚೆಗೆ ಸಂಶೋಧಿಸಲ್ಪಟ್ಟ ಸ್ಥಳೀಯ ಶಾಸನವೊಂದು[೧೩] ಈ ವಿಚಾರದ ಮೇಲೆ ಸ್ವಲ್ಪ ಬೆಳಕು ಚೆಲ್ಲಬಲ್ಲುದು. ಇದು 'ನರಸಿಂಗ ಸೂಡುಗ' ಎಂಬವನು ಬಾರಕೂರ ಮೂರುಕೇರಿ (ಮೂಡುಕೇರಿ)ಯ ಸೋಮ(ಯ್ಯ) ದೇವರಿಗೆ ಬಾರಕೂರಿನ ಭೂಮಿಯನ್ನು ದತ್ತಿ ಬಿಟ್ಟುದುದಾಗಿ ತಿಳಿಸುತ್ತದೆ. ಇಲ್ಲಿ ಬರುವ 'ಸೂಡುಗ' ಎಂಬ ಪದವು ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಮಹತ್ವಪೂರ್ಣ ಉಲ್ಲೇಖ. 'ಸೂಡುಗ' ಎಂಬುದು 'ಸೂಡ'[೧೪] ಎಂಬುದರ ಮೂಲರೂಪವಿರಬೇಕೆಂದು ಡಾ. ಪಿ. ಗುರುರಾಜಭಟ್ಟರು ಸರಿಯಾಗಿಯೇ ಊಹಿಸಿದ್ದಾರೆ.[೧೫] 'ಸೂಡ' ಎಂಬುದು ನಾಡವರ ಒಂದು ವರ್ಗದ ಹೆಸರಾಗಿದ್ದು, ಅವರು ಈ ಪ್ರದೇಶದಲ್ಲಿ ಈ ಶಾಸನದ ಕಾಲದಲ್ಲಿ (ಸು. ೧೪೫೬-೬೫ ರ ನಡುವಣ ಕಾಲದ್ದು) ಹೊಂದಿದ್ದ ಘನತೆಯನ್ನೂ, ಸಾಂಪತ್ತಿಕ ನೆಲೆಗಟ್ಟನ್ನೂ ಇದು ಸೂಚಿಸುತ್ತದೆ. ಈ 'ಸೂಡುಗನು' ಪ್ರಾಯಃ ಸ್ಥಳೀಯನೇ ಆಗಿದ್ದಿರಬಹುದು. ಹೀಗೆ ಬಾರಕೂರಿನಲ್ಲಿ ಬಂಟರ, ಬಾರಗರ ಮತ್ತಿತರ ನಾಡವ ವರ್ಗದ ಪ್ರಾಬಲ್ಯ-ಪ್ರಭಾವವು ಐತಿಹಾಸಿಕ ಕಾಲದಲ್ಲಿ ಏಕಪ್ರಕಾರವಾಗಿ ಮುಂದುವರಿದುದನ್ನು ಕಾಣುತ್ತೇವೆ.

---

೧೩ 'ಮುಂದಾರ್ತಿಯ ಸಮೀಪ ವಿಜಯನಗರ ಶಾಸನ ಪತ್ತೆ' : ಉದಯವಾಣಿ, ೨೨-೩-೧೯೭೬

೧೪ ಉಡುಪಿ ತಾ. ನ. 'ಸೂಡ' ಎಂಬ ಊರಿನ ಹೆಸರು ಬಹುಶಃ ಈ 'ಸೂಡುಗ' ರಿಂದಲೇ ಬಂದಿರಬೇಕು. ಬಂಟ ಜಾತಿ ವಾಚಕ ಸ್ಥಳನಾಮಗಳು ತುಳುನಾಡಿನಲ್ಲಿ ಹಲವಾರಿವೆ : ಬಂಟಕಲ್ಲು, ಬಂಟರ, ಬಂಟವಾಳ ಇ.

೧೫ ಡಾ. ಭಟ್ಟ, ಉದಯವಾಣಿ: ೨೨-೩-೭೬.

ಗಜೇಂದ್ರ ಮೋಕ್ಷ : ಕಥೆ ಹಾಗೂ ಶಿಲ್ಪ

● ಶ್ರೀನಿವಾಸ ಪಾಡಿಗಾರು

ವಿಷ್ಣುವಿನ ಭಕ್ತವಾತ್ಸಲ್ಯವನ್ನು ಎತ್ತಿತೋರಿಸಲಿಕ್ಕೆಂದು ಸೃಷ್ಟಿಸಲ್ಪಟ್ಟ ಹಲವು ಕಥೆಗಳಲ್ಲಿ ಗಜೇಂದ್ರ ಮೋಕ್ಷವೂ ಒಂದು. ಭಾಗವತ ಪುರಾಣದಲ್ಲಿ ವಿಶದವಾಗಿ ಪ್ರಸ್ತಾಪಿಸಲ್ಪಟ್ಟಿರುವ ಈ ಕಥೆಯು ಮಹಾಭಾರತದ ಶಾಂತಿಪರ್ವದ 'ಮೋಕ್ಷಧರ್ಮ' ವಿಭಾಗದಲ್ಲಿಯೂ ಉಕ್ತವಾಗಿದೆಯೆಂದು 'ಪಂಚರತ್ನ'ವೆಂಬ ಗ್ರಂಥದಿಂದ ತಿಳಿದು ಬರುತ್ತದೆ. ನಮಗೆ ತಿಳಿದ ಮಟ್ಟಿಗೆ ಉಳಿದ ಪುರಾಣಗಳಲ್ಲಿ ಇದರ ಉಲ್ಲೇಖವಿದ್ದಂತಿಲ್ಲ. ಮಹಾಭಾರತದಲ್ಲಾದರೂ ಕೆಲವು ಪಾಠಗಳಲ್ಲಿ ಮಾತ್ರ ಅದರ ಪ್ರಸ್ತಾಪವಿರಬೇಕು.

ಭಾಗವತ ಪುರಾಣದಲ್ಲಿರುವ ಗಜೇಂದ್ರ ಮೋಕ್ಷ ಕಥೆಯ ಪಾಠಕ್ಕೂ ಮಹಾಭಾರತದಿಂದಾಯ್ದದ್ದೆನ್ನಲಾದ ಪಾಠಕ್ಕೂ ಸಾಕಷ್ಟು ಭೇದಗಳಿವೆ. ಭಾಗವತದ ಪ್ರಕಾರ ಕಥೆಯ ಸಾರಾಂಶ ಹೀಗಿದೆ: ದ್ರಾವಿಡದೇಶದ ಪಾಂಡ್ಯ ಅರಸು ಪರಮ ವಿಷ್ಣುಭಕ್ತನಾದ ಇಂದ್ರದ್ಯುಮ್ನನು ಒಮ್ಮೆ ವಿಷ್ಣುಸ್ಮರಣೆಯಲ್ಲಿ ತೊಡಗಿದ್ದಾಗ ಅಗಸ್ತ್ಯಮಹರ್ಷಿಗಳು ತಮ್ಮ ಶಿಷ್ಯವರ್ಗದೊಂದಿಗೆ ಅವನಿದ್ದಲ್ಲಿಗೆ ಬಂದರು. ಭಗವತ್ಸ್ಮರಣೆಯಲ್ಲಿ ತಲ್ಲೀನನಾದ ಇಂದ್ರದ್ಯುಮ್ನ ಎಂದಿನಂತೆ ಅವರಿಗೆ ಸ್ವಾಗತ-ಗೌರವಗಳನ್ನು ನೀಡದಿರಲು ಅಗಸ್ತ್ಯರು ಅವನಿಗೆ ಗಜಜನ್ಮ ಪಡೆಯುವಂತೆ ಶಾಪವಿತ್ತರು. ಮರುಜನ್ಮದಲ್ಲಿ ಗಜೇಂದ್ರನಾದ ಇಂದ್ರದ್ಯುಮ್ನ ತನ್ನ ಪರಿವಾರ

ದೊಂದಿಗೆ ಒಮ್ಮೆ ತ್ರಿಕೂಟವೆಂಬಲ್ಲಿರುವ ಸರೋವರದಲ್ಲಿಳಿದಾಗ ಭಾರೀ ಮೊಸಳೆಯೊಂದು ಅವನ ಕಾಲನ್ನು ಹಿಡಿಯಿತು. ಆ ಹಿಡಿತದಿಂದ ತಪ್ಪಿಸಿಕೊಳ್ಳುವ ಸರ್ವಪ್ರಯತ್ನಗಳೂ ವಿಫಲವಾದಾಗ, ಸರೋವರದಲ್ಲಿನ ಕಮಲವನ್ನೆತ್ತಿ ತನ್ನ ಇಷ್ಟದೇವತೆಯಾದ ವಿಷ್ಣುವಿನಲ್ಲಿ ಮೊರೆಯಿಟ್ಟ. ಭಕ್ತನ ಸಂಕಟವನ್ನು ಪರಿಹರಿಸಲೆಂದು ವಿಷ್ಣು ಗರುಡವಾಹನನಾಗಿ ಆ ಸ್ಥಳಕ್ಕೆ ಧಾವಿಸಿ, ಚಕ್ರದಿಂದ ಮೊಸಳೆಯ ಬಾಯಿಯನ್ನು ಸೀಳಿ, ಗಜೇಂದ್ರನಿಗೆ ಮೋಕ್ಷವಿತ್ತ. ಮೊಸಳೆಯಾಗಿದ್ದವನು ಹೂಹೂ ಎಂಬ ಹೆಸರಿನ ಗಂಧರ್ವ; ದೇವಲ ಋಷಿಯ ಶಾಪದಿಂದ ಮೊಸಳೆಯ ರೂಪ ತಾಳಿದ್ದ.

ಮಹಾಭಾರತದಲ್ಲಿರುವ ಪಾಠದ ಪ್ರಕಾರ ಕಥೆ ಹೀಗೆ ಸಾಗುತ್ತದೆ: ಹಾಹಾ ಮತ್ತು ಹೂಹೂ ಎಂಬವರು ಗಾಯನದಲ್ಲಿ ಶ್ರೇಷ್ಠರೆನಿಸಿದ ಗಂಧರ್ವರು.[೩] ತಮ್ಮ ಪಾಂಡಿತ್ಯದ ಬಗ್ಗೆ ವಿವಾದವೆದ್ದು ಅದರ ಪರಿಹಾರಕ್ಕೆಂದು ಇಂದ್ರನ ಬಳಿಗೆ ಹೋದರು. ಇಂದ್ರ ಅವರನ್ನು ದೇವಲ ಋಷಿಯೆಡೆಗೆ ಕಳುಹಿಸಿದ. ಆಗ ಮೌನವ್ರತದಲ್ಲಿದ್ದ ದೇವಲ ಋಷಿ ಇವರ ಸಂಗೀತಪಾಂಡಿತ್ಯದ ಬಗ್ಗೆ ಪ್ರತಿಕ್ರಿಯೆ ತೋರಿಸದಿರಲು ಗಂಧರ್ವರು ಆತನಿಗೆ ಸಂಗೀತ ಜ್ಞಾನವೇ ಇಲ್ಲವೆಂದು ಗೇಲಿಮಾಡಿದರು. ಸಿಟ್ಟಿಗೆದ್ದ ಋಷಿ ಹಾಹಾ ಎಂಬವನಿಗೆ ಗಜಜನ್ಮವೂ ಹೂಹೂ ಎಂಬವನಿಗೆ ಮೊಸಳೆಯ ಜನ್ಮವೂ ಬರುವಂತೆ ಶಪಿಸಿದ. ಕೋಪ ಶಾಂತವಾದ ಮೇಲೆ ವಿಷ್ಣುವಿನಿಂದ ಅವರಿಗೆ ಮೋಕ್ಷ ದೊರೆಯುವದೆಂದು ತಿಳಿಸಿದ. ಮುಂದಿನ ಕಥೆ ಭಾಗವತದಲ್ಲಿರುವಂತೆ ನಡೆಯುತ್ತದೆ.

ಕಥೆಯ ಈ ಎರಡು ಪಾಠಗಳಲ್ಲಿರುವ ವ್ಯತ್ಯಾಸಗಳು ಗಮನೀಯ. ಭಾಗವತದ ಪಾಠದಲ್ಲಿ ಪಾಂಡ್ಯ ಅರಸು ಇಂದ್ರದ್ಯುಮ್ನ ಶಾಪಕ್ಕೀಡಾದ ವ್ಯಕ್ತಿಯಾದರೆ ಮಹಾಭಾರತದಲ್ಲಿ ಆತ ಹಾಹಾ ಎಂಬ ಗಂಧರ್ವ; ಒಂದರಲ್ಲಿ ಶಾಪಕೊಟ್ಟ ಋಷಿಗಳು ಅಗಸ್ತ್ಯ-ದೇವಲರಾದರೆ ಇನ್ನೊಂದರಲ್ಲಿ ಋಷಿ ಒಬ್ಬನೆ-ದೇವಲ. ರಚನಾತ್ಮಕ ದೃಷ್ಟಿಯಿಂದಲೂ ಇವೆರಡೂ ಪಾಠಗಳಲ್ಲಿ ಭೇದವಿರುವುದು ಕಂಡು ಬರುತ್ತದೆ. ಉದಾಹರಣೆಗೆ ಭಾಗವತದಲ್ಲಿರುವ ಪಾಠದಲ್ಲಿ ಸರೋವರ ವರ್ಣನೆಯಲ್ಲಿ ಮಹಾಭಾರತದ ಪಾಠದಲ್ಲಿ ಉಕ್ತವಾಗಿರದ ಕೆಲವು ದಕ್ಷಿಣ ಭಾರತದ ಸಸ್ಯಗಳ ಹೆಸರಿರುವವು.

ಪಾಠಗಳಲ್ಲಿ ಹೀಗೆ ಭೇದವಿದ್ದರೂ ಕೂಡ ಇವೆರಡರಲ್ಲಿ ಒಂದು ಇನ್ನೊಂದರಿಂದ ಪ್ರಭಾವಿತವಾಗಿದೆಯೆಂದು ಅವುಗಳ ರಚನೆಯನ್ನು ಪರೀಕ್ಷಿಸಿದಾಗ ಅನಿಸುತ್ತದೆ. ಎರಡರಲ್ಲೂ ತ್ರಿಕೂಟ, ದೇವಲ ಋಷಿ ಹಾಗೂ ಹೂಹೂ ಗಂಧರ್ವನ ಪ್ರಸ್ತಾಪವಿರುವುದು ಈ ಅಭಿಪ್ರಾಯಕ್ಕೆ ಪುಷ್ಟಿ ಕೊಡುತ್ತದೆ. ಸಾಹಿತ್ಯ ರಚನೆ

ಯಲ್ಲಿಯೂ ಕೆಲವೆಡೆ ಸಾಮ್ಯ ಕಂಡುಬರುತ್ತದೆ. ಮಹಾಭಾರತದ ಪಾಠವು ಮೂಲವಾಗಿರುವ ಸಾಧ್ಯತೆ ಇದೆ. ಭಾಗವತವು ದಕ್ಷಿಣ ಭಾರತ, ಅದರಲ್ಲೂ ದ್ರಾವಿಡ ದೇಶದಲ್ಲಿ ರಚಿತವಾದ ಪುರಾಣವೆಂದು ಕೆಲ ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ. ಮೇಲೆ ಹೇಳಿದ ಇಂದ್ರದ್ಯುಮ್ನನ ಪ್ರಸಂಗವೂ ಈ ಅಭಿಪ್ರಾಯಕ್ಕೆ ಪುಷ್ಟಿಕೊಡುವ ಅಂಶ. ಇಂತಹ ಪುರಾಣದಲ್ಲಿ ದಕ್ಷಿಣ ಭಾರತದ ವ್ಯಕ್ತಿಗಳ, ಸ್ಥಳಗಳ, ಸಸ್ಯಗಳ ಹೆಸರುಗಳನ್ನು ಸೇರಿಸಿಕೊಂಡಿರುವುದು ಸ್ವಾಭಾವಿಕ. ಗಜೇಂದ್ರಮೋಕ್ಷದ ಈ ಎರಡು ಪಾಠಗಳಲ್ಲಿ ಒಂದು ಇನ್ನೊಂದರಿಂದ ಪ್ರಭಾವಿತವಾಗಿಲ್ಲವೆಂದಾದರೆ ಇವೆರಡಕ್ಕೂ ಮೂಲವಾದ, ಗಜೇಂದ್ರಮೋಕ್ಷದ ಕಥೆಯುಳ್ಳ ಮತ್ತೊಂದು ಪಾಠವಿತ್ತೆಂದು ಹೇಳಬೇಕಾಗುತ್ತದೆ.

* * * *

ಪ್ರಾಚೀನ ಭಾರತೀಯ ಶಿಲ್ಪದಲ್ಲಿ ಗಜೇಂದ್ರಮೋಕ್ಷವನ್ನು ವಸ್ತುವಾಗಿರಿಸಿಕೊಂಡ ಶಿಲ್ಪಗಳು ಅಪರೂಪ. ಆದರೆ ಬೇರೆ ಬೇರೆ ಕಾಲದ ಹಾಗೂ ಬೇರೆ ಬೇರೆ ಭಾಗಗಳಲ್ಲಿ ದೊರೆತ ಶಿಲ್ಪಗಳಾದ್ದರಿಂದ ಅವು ನೀಡುವ ವೈವಿಧ್ಯಮಯ ಚಿತ್ರ ಗಮನಾರ್ಹ.

ಇಂತಹ ಶಿಲ್ಪಗಳಲ್ಲಿ ಅತಿ ಪ್ರಾಚೀನವಾದುದೆಂದರೆ ಮಧ್ಯಪ್ರದೇಶದ ದೇವಗಡ ಎಂಬಲ್ಲಿಯ ವಿಷ್ಣುದೇವಾಲಯದ ಗೋಡೆಯೊಂದರಲ್ಲಿರುವ ಶಿಲಾ ಫಲಕ. ಗುಪ್ತರ ಕಾಲದ ಉತ್ತರಾರ್ಧ (ಸು. ಕ್ರಿ. ಶ. ೫ ನೆಯ ಶತಮಾನ) ಕ್ಕೆ ಸೇರುವ ಈ ಶಿಲ್ಪ ಸ್ವಲ್ಪ ಭಿನ್ನವಾಗಿದ್ದರೂ ಅತಿ ಸೊಗಸಾದ ಕಲಾಕೃತಿ. ಇದರಲ್ಲಿ ಪದ್ಮಗಳಿಂದಲೂ ನೀರು ಅಲೆಗಳಿಂದಲೂ ಅಲಂಕೃತವಾದ ಸರೋವರದಲ್ಲಿ ಆನೆಯೊಂದು ತನ್ನ ಸೊಂಡಲಿನಿಂದ ಕಮಲವನ್ನೆತ್ತಿ ಹಿಡಿದಿದೆ. ಭಾರೀ ಸರ್ಪವೊಂದು ಅದರ ಎಲ್ಲ ಕಾಲುಗಳನ್ನೂ ಸುತ್ತಿದೆ. ಸರ್ಪದ ಮುಖ-ಮುಂಡಗಳು ಮಾನವಾಕಾರವಾಗಿದ್ದು ತಲೆಯ ಮೇಲೆ ಏಳು ಹೆಡೆಗಳಿವೆ. ಗಾತ್ರದಲ್ಲಿ ಆನೆಗಿಂತಲೂ ಮಿಗಿಲಾಗಿರುವ ಈ ಸರ್ಪದ ಬದಿಗೆ ನಾಗಿಣಿಯಿದ್ದಾಳೆ. ನಾಗ-ನಾಗಿಣಿ ಇಬ್ಬರ ಕೈಗಳೂ ಅಂಜಲಿ ಮುದ್ರೆಯಲ್ಲಿವೆ. ಆನೆಯ ಮೇಲ್ಗಡೆ ಚತುರ್ಭುಜ ವಿಷ್ಣುವು ಗದೆ, ಚಕ್ರ ಹಾಗೂ ಶಂಖಗಳನ್ನು ಧರಿಸಿ ಗರುಡನ ಮೇಲೆ ಕುಳಿತು ಬರುತ್ತಿದ್ದಾನೆ. ವಿಷ್ಣು ಪ್ರಯೋಗಿಸಿದ ಚಕ್ರ ಸರ್ಪದ ಎದೆಯನ್ನು ಸೀಳುತ್ತಿದೆ. ಫಲಕದ ಮೇಲ್ಭಾಗದಲ್ಲಿ ಎರಡು ಜತೆ ವಿದ್ಯಾಧರ ದಂಪತಿಗಳಿದ್ದಾರೆ.

ಈ ಶಿಲ್ಪ ಗುಪ್ತಕಾಲೀನ ಮಧ್ಯಪ್ರದೇಶದಲ್ಲಿ ಪ್ರಚಲಿತವಿದ್ದ ಗಜೇಂದ್ರಮೋಕ್ಷದ ಕಥೆಯ ವೈವಿಧ್ಯವನ್ನು ಪ್ರತಿಬಿಂಬಿಸುತ್ತದೆ.

ಪಲ್ಲವರ ಕಾಲದ ತಮಿಳ್ನಾಡಿನಲ್ಲಿ ಗಜೇಂದ್ರಮೋಕ್ಷ ಕಥೆ ಸಾಕಷ್ಟು ಜನಪ್ರಿಯವಾಗಿದ್ದಿರಬೇಕು. ಕಂಚಿಯ ಕೈಲಾಸನಾಥ (ರಾಜಸಿಂಹೇಶ್ವರ) ದೇವಾ

ಲಯದ ಫಲಕವೊಂದರಲ್ಲಿ[೮] ಅಷ್ಟಭುಜವಿಷ್ಣು ಗರುಡನನ್ನೇರಿ ಅವಸರವಸರವಾಗಿ ಬರುತ್ತಿರುವಂತೆ ತೋರಿಸಿದೆ. ವಿಷ್ಣುವು ಶಂಖ, ಚಕ್ರಗಳನ್ನಲ್ಲದೆ ಬಿಲ್ಲು ಬಾಣಗಳನ್ನು ಧರಿಸಿದ್ದಾನೆ. ಅವನ ಒಂದು ಹಸ್ತ ಅಭಯಮುದ್ರೆಯಲ್ಲಿರುವುದು ಗಮನಾರ್ಹ (ಸು. ಕ್ರಿ. ಶ. ೭೦೦-೭೨೮). ಸುಮಾರು ಇದೇ ಕಾಲಕ್ಕೆ ಸೇರುವ ಕಂಚಿಯ ವೈಕುಂಠಪೆರುಮಾಳ್ ದೇವಾಲಯದಲ್ಲಿಯೂ ಗಜೇಂದ್ರ ಮೋಕ್ಷವನ್ನು ವಸ್ತುವಾಗಿರಿಸಿಕೊಂಡ ಶಿಲ್ಪಗಳಿವೆ,[೯] ಆದರೆ ಇವುಗಳಲ್ಲಿ ಗಜೇಂದ್ರನ ಕಾಲನ್ನು ಹಿಡಿದಿರುವ ಜಲಚರ ಯಾವುದೆಂದು ಹೇಳುವುದು ಕಷ್ಟ.

ಬಾದಾಮಿ ಚಾಲುಕ್ಯರ ಕಾಲದ ಪಟ್ಟದ ಕಲ್ಲಿನ ಕೆಲವು ದೇವಾಲಯಗಳಲ್ಲಿ ಗಜೇಂದ್ರ ಮೋಕ್ಷವನ್ನು ನಿರ್ದೇಶಿಸುವ ಶಿಲ್ಪಗಳಿವೆ. ವಿರೂಪಾಕ್ಷ (ಲೋಕೇಶ್ವರ) ದೇವಾಲಯದ ಉತ್ತರ ಮುಖಮಂಟಪದ ಎಡಗಡೆಯ ಕಂಬದ ಮೇಲೆ ಇಂತಹ ಶಿಲ್ಪವಿದೆ (ಚಿತ್ರ ನೋಡಿ). ಈ ಶಿಲ್ಪದಲ್ಲಿ ಸರ್ಪ, ಅಥವಾ ಕಥೆಯ ಪ್ರಕಾರ ಮೊಸಳೆ ಇರಬೇಕಾದ ಸ್ಥಳದಲ್ಲಿ ಆಮೆಯನ್ನು ಕೆತ್ತಿರುವುದು ಗಮನೀಯ. ಅದರ ಬೆನ್ನಮೇಲೆ ಚಕ್ರಪ್ರಯೋಗದಿಂದಾದ ಗಾಯದ ಕಲೆಯಿದೆ. ಆನೆಯ ಮೇಲ್ಗಡೆ ಚಕ್ರವನ್ನೆಸೆಯಲು ಸಿದ್ಧನಾಗಿ ಬರುತ್ತಿರುವ ಚತುರ್ಭುಜ ವಿಷ್ಣು ಗರುಡನನ್ನೇರಿ ಬರುತ್ತಿದ್ದಾನೆ. ವಿಷ್ಣುವಿನ ಎಡಬದಿಗೆ ಹಾರುತ್ತಿರುವ ಕಿರೀಟಧಾರಿಯೊಬ್ಬನಿದ್ದಾನೆ. ಇವನ ಕೈ ವಿಸ್ಮಯಮುದ್ರೆಯಲ್ಲಿದೆ. ಈ ವ್ಯಕ್ತಿ ಬಹುಶಃ ಮೋಕ್ಷಹೊಂದಿದ ಗಜೇಂದ್ರನಾಗಿರಬೇಕು. ಇದೇ ತರಹದ ಶಿಲ್ಪವನ್ನು ಮಲ್ಲಿಕಾರ್ಜುನ (ತ್ರೈಲೋಕೇಶ್ವರ) ಹಾಗೂ ಪಾಪನಾಥ ದೇವಾಲಯದ ಕಂಬಗಳ ಮೇಲೂ ಕಾಣಬಹುದು. ಈ ದೇವಾಲಯಗಳ ಕಾಲ ಸುಮಾರು ಕ್ರಿ. ಶ. ೭೪೦.

ಆಲಂಪೂರ್ (ಆಂಧ್ರಪ್ರದೇಶ) ಸಂಗ್ರಹಾಲಯದಲ್ಲಿರುವ ಶಿಲ್ಪವೊಂದರಲ್ಲಿ ಮೂರು ಪಟ್ಟಿಕೆಗಳಿದ್ದು, ಮಧ್ಯದ ಪಟ್ಟಿಕೆಯಲ್ಲಿ ಗರುಡವಾಹನ ವಿಷ್ಣುವನ್ನೂ, ಆನೆಯನ್ನೂ ಹಾಗೂ ಅದರ ಕಾಲನ್ನು ಕಚ್ಚಿ ಹಿಡಿದಿರುವ ಆಮೆಯನ್ನೂ ಕೆತ್ತಿದೆ. ಈ ಪಟ್ಟಿಕೆ ಗಜ - ಕಚ್ಛಪಯುದ್ಧವನ್ನು ನಿರ್ದೇಶಿಸುತ್ತದೆಂದು ಪಂಡಿತರೊಬ್ಬರು ತರ್ಕಿಸಿದ್ದಾರೆ. ಮಹಾಭಾರತದಲ್ಲಿ ಗಜ-ಕಚ್ಛಪ ಯುದ್ಧದ ಪ್ರಸ್ತಾಪ ಹೀಗಿದೆ:[೧೦] ವಿಭಾವಸು ಮತ್ತು ಸುಪ್ರತೀಕ ಎಂಬ ಋಷಿ ಸಹೋದರರಲ್ಲಿ ತಮ್ಮ ತಂದೆಯ ಆಸ್ತಿಯ ಬಗ್ಗೆ ವಿವಾದವೆದ್ದಿತು. ಜಗಳ ತೀರ ಅತಿರೇಕಕ್ಕೆ ಹೋದಾಗ ವಿಭಾವಸು ಸುಪ್ರತೀಕನಿಗೆ ಆನೆಯಾಗುವಂತೆ ಶಾಪಕೊಟ್ಟ; ಸುಪ್ರತೀಕ ವಿಭಾವಸುಗೆ ಆಮೆಯಾಗುವಂತೆ ಶಾಪಕೊಟ್ಟ. ಹೀಗೆ ಆಮೆ - ಆನೆಗಳಾದ ಸಹೋದರರು ಸರೋವರವೊಂದರಲ್ಲಿ ಪರಸ್ಪರ ವೈರಿಗಳಾಗಿ ಜಗಳ ಕಾಯುತ್ತಲೇ ಇದ್ದರು. ಒಮ್ಮೆ ತನ್ನ ತಾಯಿ ವಿನತೆಯನ್ನು ಕದ್ರುವಿನ

ದಾಸ್ಯದಿಂದ ವಿಮೋಚನೆ ಮಾಡಬೇಕೆಂಬ ವಿಚಾರವುಳ್ಳವನಾಗಿ ಗರುಡ ತನ್ನ ತಂದೆಯಾದ ಕಶ್ಯಪನಲ್ಲಿಗೆ ಹೋದ. ಹಸಿವಿನಿಂದ ಬಳಲುತ್ತಿದ್ದ ಆತ ತಂದೆಯಲ್ಲಿ ಅಭಿಪ್ರಾಯ ತಿಳಿಸಿ ಆಹಾರವನ್ನು ಕೊಡುವಂತೆ ಬೇಡಿದ. ಕಶ್ಯಪಋಷಿ ಗರುಡನಿಗೆ ವಿಭಾವಸು - ಸುಪ್ರತೀಕರ ವಿಷಯ ತಿಳಿಸಿ, ಸರೋವರಕ್ಕೆ ಹೋಗಿ ಅವರಿಬ್ಬರನ್ನೂ ಭಕ್ಷಿಸುವಂತೆ ಹೇಳಿದ. ಗರುಡನು ಆಮೆ ಹಾಗೂ ಆನೆಯ ರೂಪದಲ್ಲಿ ಕಚ್ಚಾಡುತ್ತಿದ್ದ ವಿಭಾವಸು ಸುಪ್ರತೀಕರನ್ನು ಭಕ್ಷಿಸಿದ. ಈ ಕಥೆಯನ್ನು ವಸ್ತುವಾಗಿರಿಸಿಕೊಂಡು ಮಾಡಿದ ಕಟ್ಟಿಗೆಯ ಪ್ರತಿಮೆಯೊಂದು ಪಾಳೂರ್ (ತಮಿಳ್ನಾಡು) ನ ಶಿವದೇವಾಲಯದಲ್ಲಿದೆ.[೧೧]

ಪ್ರಸ್ತುತ ಕಥೆಯಲ್ಲಿ ವಿಷ್ಣುವಿನ ಪಾತ್ರವೇನೂ ಇಲ್ಲ. ಆದುದರಿಂದ ಮೇಲೆ ಹೇಳಿದ ಶಿಲ್ಪಕ್ಕೆ ಗಜ–ಕಚ್ಛಪ ಯುದ್ಧ ವಸ್ತುವಾಗಿದ್ದರೆ ಅದರಲ್ಲಿ ವಿಷ್ಣು ಇರುವುದು ಅಸಂಬದ್ಧವಾಗುತ್ತದೆ. ಅಲ್ಲದೆ ಈ ಶಿಲ್ಪದ ಮೇಲಿರುವ ಸುಮಾರು ಕ್ರಿ. ಶ. ೮ ನೆಯ ಶತಮಾನಕ್ಕೆ ಸೇರಬಹುದಾದ ತೆಲುಗು ಶಾಸನದ ಪ್ರಕಾರ ಈ ಪಟ್ಟಿಕೆ ಗಜೇಂದ್ರಮೋಕ್ಷವನ್ನು ನಿರ್ದೇಶಿಸುತ್ತದೆ.[೧೨]

ಮೇಲೆ ಹೇಳಿದ ಶಿಲ್ಪಗಳು ಉತ್ತರಕರ್ನಾಟಕ ಹಾಗೂ ಆಂಧ್ರ ಪ್ರದೇಶಗಳಲ್ಲಿ ಸುಮಾರು ಕ್ರಿ. ಶ. ಎಂಟನೆಯ ಶತಮಾನದಲ್ಲಿ ಪ್ರಚಲಿತವಿದ್ದ ಗಜೇಂದ್ರಮೋಕ್ಷದ ಮತ್ತೊಂದು ಚಿತ್ರವನ್ನು ಬಿಂಬಿಸುತ್ತವೆ.

ಎಲ್ಲೋರಾದ ಶಿಲಾದೇಗುಲಗಳಲ್ಲಿಯೂ ಗಜೇಂದ್ರಮೋಕ್ಷದ ಶಿಲ್ಪಗಳಿವೆ. ಹೆಚ್ಚಿನಮಟ್ಟಿಗೆ ಭಿನ್ನವಾಗಿರುವ ಈ ಶಿಲ್ಪಗಳಲ್ಲಿ ಗಜೇಂದ್ರನ ಕಾಲನ್ನು ಹಿಡಿದಿರುವ ಜಲಚರ ಮೊಸಳೆಯೆಂದು ಹೇಳಲಾಗಿದೆ.[೧೩] ಇವು ಸುಮಾರು ಕ್ರಿ. ಶ. ೮ ನೆಯ ಶತಮಾನದ ಉತ್ತರಾರ್ಧಕ್ಕೆ ಸೇರುತ್ತವೆ.

ಕೊರವಂಗಲ (ಹಾಸನ ಜಿಲ್ಲೆ)ದ ಬೂಚೇಶ್ವರ ದೇವಾಲಯ ಹೊಯ್ಸಳ ಶೈಲಿಯದಾಗಿದ್ದು, ಇಲ್ಲಿ ಗಜೇಂದ್ರಮೋಕ್ಷದ ಶಿಲ್ಪವಿದೆ. (ಕ್ರಿ. ಶ. ೧೧೭೩)[೧೪] ಇದರಲ್ಲಿ ಮೊಸಳೆ ಆನೆಯ ಹಿಂಗಾಲನ್ನು ಕಚ್ಚಿ ಹಿಡಿದಿದೆ. ಮೊಸಳೆಯ ಬೆನ್ನ ಮೇಲೆ ಒಬ್ಬ ವ್ಯಕ್ತಿ ಕೈಮುಗಿದು ಕುಳಿತಿದ್ದಾನೆ. ವಿಷ್ಣು ಎಸೆದ ಚಕ್ರ ಮೊಸಳೆಯ ಕತ್ತನ್ನು ಕತ್ತರಿಸುತ್ತಿದೆ. ಮೊಸಳೆಯ ಮೇಲೆ ಕುಳಿತ ವ್ಯಕ್ತಿ ಮುಕ್ತಿ ಹೊಂದಿದ ಹೂಹೂ ಗಂಧರ್ವ. ಮೇಲ್ಗಡೆ ಮಾಧವನ ರೂಪದಲ್ಲಿರುವ ವಿಷ್ಣು ಚಕ್ರವನ್ನೆಸೆಯಲು ಸನ್ನದ್ಧನಾಗಿದ್ದಾನೆ. ಈ ಶಿಲ್ಪ ರಚನೆಯಲ್ಲಿ ಭಾಗವತದ ಕಥೆಯ ಪ್ರಭಾವವಿರಬಹುದು.

ಗಜೇಂದ್ರಮೋಕ್ಷದ ಕಥೆಯೇ ಮುಂದೆ ವಿಷ್ಣು-ವರದರಾಜನ ಕಲ್ಪನೆಗೆ ಎಡೆಮಾಡಿಕೊಟ್ಟಿರಬೇಕು. ಐಹೊಳೆಯ ಆದಿತ್ಯದೇವಾಲಯ(ದುರ್ಗದಗುಡಿ)ದಲ್ಲಿ ಸುಂದರವಾದ, ವರದ ಹಸ್ತದಲ್ಲಿರುವ ಗರುಡವಾಹನ ವಿಷ್ಣುವಿನ ವಿಗ್ರಹವಿದೆ. (ಕ್ರಿ. ಶ. ೭ನೆಯ ಶತಮಾನದ ಕೊನೆಯ ಭಾಗ).

* * * *

ಇನ್ನು ಈ ವೈವಿಧ್ಯತೆಗೆ ಕಾರಣವೇನು ಎಂಬ ಪ್ರಶ್ನೆಯೇಳುತ್ತದೆ. ಇದಕ್ಕೆ ಕಥೆಯ ಆಯಾಕಾಲದ ಸ್ಥಳೀಯ ಪಾಠದ ನಿರೂಪಣೆ ಕಾರಣವಿರಬಹುದೆ? ಅಥವಾ 'ಮೊಸಳೆ' ಎಂದು ಹೇಳುವದಕ್ಕಾಗಿ ಉಪಯೋಗಿಸಿರುವ ಶಬ್ದದ ಅರ್ಥ ಪ್ರಭೇದ ಕಾರಣವಿರಬಹುದೆ? ಕಥೆಯಲ್ಲಿ ಉಪಯೋಗಿಸಿರುವ 'ಗ್ರಾಹ' ಶಬ್ದಕ್ಕೆ ಮೊಸಳೆ, ಸರ್ಪ, ಇತ್ಯಾದಿ 'ಜಲಚರ'ವೆಂಬ ಅರ್ಥವಿದೆ.[೧೫] ಆದರೂ ಈ ವೈವಿಧ್ಯತೆಗೆ ನಿರ್ದಿಷ್ಟ ಕಾರಣ ಹೇಳುವುದು ಕಷ್ಟತರ.

* * * *

ಟಿಪ್ಪಣೆಗಳು

೧ **ಭಾಗವತ ಪುರಾಣ,** ೮, ೪

೨ ಈ ಗ್ರಂಥ ಗೋರಖ್‌ಪೂರ್‌ನಿಂದ ಪ್ರಸಿದ್ಧಿಸಲ್ಪಟ್ಟವೆಯೆಂದು ತಿಳಿದು ಬರುತ್ತದೆ. ಇಲ್ಲಿ ಒಂದು ಹಸ್ತಪ್ರತಿಯ ಉಪಯೋಗ ತೆಗೆದುಕೊಳ್ಳಲಾಗಿದೆ. ಈ ವಿಷಯದಲ್ಲಿ ಸಹಾಯಮಾಡಿದ ಶ್ರೀ ಪಾ. ವೆಂ. ಆಚಾರ್ಯರಿಗೆ ನನ್ನ ಕೃತಜ್ಞತೆಗಳು.

೨ಅ ಮತ್ಸ್ಯಪುರಾಣ ದುಃಸ್ವಪ್ನ ನಿವಾರಣೆಗಾಗಿ ನಾಗೇಂದ್ರ ಮೋಕ್ಷ (=ಗಜೇಂದ್ರ ಮೋಕ್ಷ) ಕಥೆ ಕೇಳಬೇಕೆಂದು ಹೇಳುತ್ತದೆ. ಆದರೆ ಕಥೆಯ ವಿವರಣೆ ಅದರಲ್ಲಿಲ್ಲ.

೩ ಹಾಹಾ ಮತ್ತು ಹೂಹೂ ಗಂಧರ್ವರು ಗಾಯನ ಶ್ರೇಷ್ಠರೆಂದು ಮಹಾಭಾರತದಲ್ಲಿ ಸಾಕಷ್ಟುಸಲ ಉಲ್ಲೇಖಿಸಲ್ಪಟ್ಟಿದ್ದಾರೆ. ನೋಡಿ, ಹಾಪ್‌ಕಿನ್ಸ್, ಇ. ಡಬ್ಲ್ಯು, ೧೯೬೮ (ಎರಡನೇ ಆವೃತ್ತಿ), **ಎಪಿಕ್ ಮೈಥಾಲಜಿ,** ಪುಟಗಳು ೧೫೩, ೧೬೩ ಇತ್ಯಾದಿ.

೪ ಬ್ಯಾನರ್ಜಿ ಜೆ. ಎನ್., ೧೯೫೧, "ಶ್ರೀಮದ್ಭಾಗವತ- ದಿ ಪ್ಲೇಸ್ ಆಫ್ ಇಟ್ಸ್ ಆರಿಜಿನ್", **ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರ್‌ಲಿ,** ಸಂಪುಟ ೨೭, ಸಂಚಿಕೆ ೨, ಪುಟಗಳು ೧೩೮-೧೪೩.

೫ ಶಿವರಾಮ ಮೂರ್ತಿ, ಸಿ., ೧೯೬೧, **ಇಂಡಿಯನ್ ಸ್ಕಲ್ಪ್ಚರ್,** ಚಿತ್ರ ೧೪.

೬ ರೀ ಅಲೆಕ್ಸಾಂಡರ್, ೧೯೭೦ [ಪುನರ್ಮುದ್ರಣ], **ಪಲ್ಲವ ಆರ್ಕಿಟೆಕ್ಚರ್**, ಚಿತ್ರ ೩೩, ೧.

೭ ಅದೇ, ಚಿತ್ರ ೭೩ ಮತ್ತು ೮೪,೧.

೮ ಖಾನ್, ಅಬ್ದುಲ್‌ವಹೀದ್, ೧೯೭೩, **ಸ್ಟೋನ್ ಸ್ಕಲ್ಪ್ಚರ್ಸ್ ಇನ್ ಆಲಂಪೂರ್ ಮ್ಯೂಜಿಯಮ್**, ಚಿತ್ರ ೬೨ ಬಿ.

೯ ಅದೇ, ಶಿಲ್ಪ ೬೨ ಬಿ. ಯ ವಿವರಣೆ.

೧೦ **ಮಹಾಭಾರತ**, ಆದಿಪರ್ವ, ಅಧ್ಯಾಯ ೨೯–೩೦.

೧೧ ಗೋಪಿನಾಥರಾವ್, ಟಿ. ಎ. ೧೯೭೧ (ಪುನರ್ಮುದ್ರಣ), **ಎಲಿಮೆಂಟ್ಸ್ ಆಫ್ ಹಿಂದೂ ಐಕೊನೋಗ್ರಫಿ**, ಭಾಗ ೧, ಪುಟ ೨೮೭ ಮತ್ತು ಚಿತ್ರ ೮೫,೧

೧೨ ಖಾನ್, ಅಬ್ದುಲ್ ವಹೀದ್, ಅದೇ, ಪುಟ ೧೧೨. ಪಾಠ ಹೀಗಿದೆ: ಪುರುಷನ ಕತ್ರ[೯]ವ್ಯ ಗಜೇಂದ್ರಮೋಕ್ಷ ದರೆಯನಾದಿವರಾಹ ರೂಪದಿ ನೆತ್ತಿನ ವಿಷ್ಟಂಬದಿ.

೧೩ ವರ್ಮಾ, ಡಿ. ಎನ್., ೧೯೭೨, **ಐಕೊನೋಗ್ರಾಫಿ ಆಫ್ ದಿ ಬ್ರಾಹ್ಮನಿಕಲ್ ಕೇವ್ಸ್ ಆಟ್ ಎಲ್ಲೋರ**, [ಥೀಸಿಸ್, ಅಪ್ರಕಟಿತ[?], ಪುಣೆ], ಪುಟ ೨೪೩. ಆದರೆ ಡಾ. ಗುರುರಾಜಭಟ್ಟರು ಮಳಖೇಡದ ರಾಷ್ಟ್ರಕೂಟ ಕಾಲದ ದೇವಾಲಯವೊಂದರಲ್ಲಿಯ ಗಜೇಂದ್ರ ಮೋಕ್ಷ ಶಿಲ್ಪದಲ್ಲಿ ಮೊಸಳೆಯ ಸ್ಥಳದಲ್ಲಿ ಆಮೆಯನ್ನು ತೋರಿಸಿದ್ದಾರೆಂದು ತಿಳಿಸುತ್ತಾರೆ. ಅವರಿಗೆ ನನ್ನ ಕೃತಜ್ಞತೆಗಳು.

೧೪ ಮೈಸೂರು ಆರ್ಕಿಯಾಲಾಜಿಕಲ್ ಡಿಪಾರ್ಟಮೆಂಟ್, ೧೯೨೦ ರ **ವಾರ್ಷಿಕ ವರದಿ**, ಚಿತ್ರ ೩, ೨; ಮತ್ತು ೧೯೩೩ ರ **ವಾರ್ಷಿಕ ವರದಿ**, ಪುಟ ೪೮. ಗೋಪಿನಾಥರಾವ್, ಅದೇ, ಚಿತ್ರ ೮೦, ೧.

೧೫ ಮ್ಯಾಕ್‌ಡೋನೆಲ್, ಎ. ಮತ್ತು ಆಪ್ಟೆಯವರ ಸಂಸ್ಕೃತ-ಇಂಗ್ಲೀಷ್ ಶಬ್ದಕೋಶಗಳು.

——



'ಗಜೇಂದ್ರ ಮೋಕ್ಷ' : ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ಜುಕ್ಕೋಳ ಪದಗಳು :

ಒಂದು ಸಾಮಾಜಿಕ ವಿವೇಚನೆ

● ವೀರಣ್ಣ ಎಸ್. ದಂಡೆ

ಜನಪದ ಸಾಹಿತ್ಯದ ಒಂದೊಂದು ರೂಪವೂ ನಮ್ಮ ಜೀವನದ ಒಂದೊಂದು ಪರಿಯ ಅನುಭವಗಳನ್ನು ಹಿಡಿದು ತೋರಿಸುವ ಬೃಹತ್ ಸಂಸಾರದ ಸಂಪುಟಗಳು. ಅಂತಹವುಗಳಲ್ಲಿ ಮಕ್ಕಳ ಭಾಗ್ಯಜೀವನದ ಸುಂದರ ಸದೃಶಗಳನ್ನು ಚಿತ್ರಿಸುವ ಅವರ ತೊದಲ್ನುಡಿಗಳ ಸಂಗೀತಮಯ ಹಾಡುಗಳೂ ಒಂದು ಭಾಗವಾಗಿ ನಿಲ್ಲುತ್ತವೆ. ಈ ಜೀವನ ಪ್ರಪಂಚದಲ್ಲಿ ಮಕ್ಕಳದೇ ಆದ ಒಂದು ವಿಶಿಷ್ಟ ಪ್ರಪಂಚವಿದೆ. ಸಂಸಾರ ಎನ್ನುವುದು ಕೇವಲ ಪ್ರಬುದ್ಧ ವಯಸ್ಸಿನ ಗಂಡ-ಹೆಂಡರಿಗೇ ಸಂಬಂಧಿಸಿದುದಲ್ಲ. ಅಥವಾ ಸಂಸಾರದಲ್ಲಿ ಕೇವಲ ಗಂಡ–ಹೆಂಡರೆ ಇರಬೇಕೆಂದಿಲ್ಲ. ಒಬ್ಬೊಬ್ಬನ ಅಥವಾ ಒಂದೊಂದು ಜೀವಿಯುದೆ ಒಂದೊಂದು ಸಂಸಾರವಿದೆ. ಬೆಳೆಯುವ ಪ್ರಪಂಚದಲ್ಲಿ ಮಕ್ಕಳೂ ಸಂಸಾರಿಗಳೆ. ಅವರ ಸಂಸಾರದಲ್ಲಿ ಗಂಡು-ಹೆಣ್ಣು ಎಂಬ ಭೇದವಿಲ್ಲ. ಹೆಣ್ಣು–ಹೆಣ್ಣುಗಳೂ ಸಂಸಾರ ಹೂಡುತ್ತವೆ. ಗಂಡು–ಗಂಡುಗಳೂ ಸಂಸಾರ ಹೂಡುತ್ತವೆ, ನಗುತ್ತವೆ, ಅಳುತ್ತವೆ. ಸುಖ-ದುಃಖಗಳ ಸಮ್ಮಿಲನ ಎಲ್ಲಿದೆಯೋ ಅಲ್ಲೆಲ್ಲ ಒಂದು ಸಂಸಾರವಿದೆ ಎಂದು ಹೇಳಬಹುದು. ತಾನು ಆಡುತ್ತಿರುವ ಆಟಿಗೆಯ ವಸ್ತು ನಾಶವಾದರೆ, ಪಾಟ ಕೆಟ್ಟರೆ ಮಗುವಿಗೆ ಅದೊಂದು ದುರಂತವೆ ಸರಿ. ತನ್ನ ಪರಿಶ್ರಮ ಹಾಳಾಯಿತೆಂಬ ಅರಿವೂ, ಅದಕ್ಕಾಗಿ ದುಃಖ-ಮರುಕಗಳನ್ನು ಮಕ್ಕಳು ವ್ಯಕ್ತಪಡಿಸುತ್ತವೆ.

ಆಡುವುದು ಹಾಡುವುದು ಎಂದರೆ ಮಕ್ಕಳಿಗೆ ಎಲ್ಲಿಲ್ಲದ ಸಂತೋಷ. ನಿಜಜೀವನವನ್ನೇ ಅನುಕರಿಸುವ ಮಕ್ಕಳ ಆಟಗಳು ಬೆಳೆಯುವ ಮಗುವನ್ನು ಸಮಾಜೀಕರಣಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇದರಿಂದ ಮಕ್ಕಳು ವಿವಿಧ ವಸ್ತುಗಳ ಬಗ್ಗೆ ಜ್ಞಾನವನ್ನೂ, ಸಾಮಾಜಿಕ ರೀತಿನೀತಿಗಳ ಬಗೆಗಿನ ಪ್ರಜ್ಞೆಯನ್ನೂ ಹೊಂದಲು ಅನುಕೂಲವಾಗುತ್ತದೆ.

ಮಗುವು ತೊಟ್ಟಿಲಲ್ಲಿ ಮಲಗಿದಾಗಿನಿಂದ ತೊಡೆಯ ಮೇಲೆ ಇದ್ದಾಗಲೂ ಅದನ್ನಾಡಿಸುವ ಹಾಡುಗಳಿವೆಯಲ್ಲದೆ, ತಾನು ಬೆಳೆದು ಕೈಕಾಲು ಬಂದು ಆಡಲು ತೊಡಗಿದಾಗ, ಕುಣಿದಾಡಲು ಶಕ್ತಿಬಂದಾಗ ಮೈದಾನದಲ್ಲಾಡುವ ಆಟದ ಹಾಡುಗಳನ್ನೂ ಮಕ್ಕಳು ಹಾಡುತ್ತಿರುತ್ತವೆ. ಮಗುವಿನ ಬಾಯಿಯಿಂದ ರಾಗವಾಗಿ ಬರುವ ಈ ಹಾಡುಗಳು ಪ್ರಾಸಬದ್ಧವಾದ ಸಾಲಿನ ತುಣುಕುಗಳಾಗಿವೆ. ಇಂಗ್ಲೀಷಿನಲ್ಲಿ ಇವುಗಳನ್ನು ನರ್ಸರಿ ಸಾಂಗ್ಸ್, ಲುಲ್ಲುಬಿ ಅಥವಾ ಮದರಗೂಜ ಎಂದು ಕರೆಯುತ್ತಾರೆ. ಇಂತಹ ಮಕ್ಕಳ ತೊದಲ್ನುಡಿಗಳ ಸುಂದರ ಸಮುದಾಯದ ಕೋಶವೇ ಡಾ. ಎಂ. ಎಸ್. ಲಕ್ಷ್ಮಿಯವರು ಇದೀಗ ನಮ್ಮ ಕೈಗಿತ್ತ 'ಚುಕ್ಕೋಳ ಪದಗಳು' ಎಂಬ ಸಂಗ್ರಹವಾಗಿದೆ.

ಈ ಸಂಗ್ರಹದ ತುಂಬ ನಾವು ಅಲ್ಲಲ್ಲಿ ಕಣ್ಣಾಡಿಸಿದಾಗ ಬಹು ವಿಶಿಷ್ಟತೆಗಳಿಂದ ಕೂಡಿದ ಅನೇಕ ಪದಗಳು ನಮ್ಮ ಗಮನಕ್ಕೆ ಬರುತ್ತವೆ. ಮಕ್ಕಳಿಂದ ರಚಿತವಾದ ಈ ಪದಗಳಲ್ಲೂ ಶೃಂಗಾರ, ಹಾಸ್ಯ, ವಿಡಂಬನೆ, ದುರಂತ ಮುಂತಾದವುಗಳ ಪ್ರಜ್ಞೆಗಳಿವೆ, ಸುಖಾಂತ ಚಿತ್ರಣಗಳಿವೆ. ಐತಿಹಾಸಿಕ ಕುರುಹುಗಳನ್ನೂ ಇಲ್ಲಿನ ಕೆಲವು ಹಾಡುಗಳಲ್ಲಿ ಕಾಣಬಹುದು. ಸಮಾಜಶಾಸ್ತ್ರ, ಮಾನವಿಕ ಶಾಸ್ತ್ರ, ಮಾನಸಶಾಸ್ತ್ರಗಳ ದೃಷ್ಟಿಯಿಂದ ಇಲ್ಲಿನ ಹಾಡುಗಳ ಮೇಲೆ ಕಣ್ಣು ಹಾಯಿಸಿದರೆ ಇನ್ನೂ ಹೆಚ್ಚಿನ ಹಲವಾರು ಅಂಶಗಳನ್ನು ಹೊರಹಾಕಲು ಸಾಧ್ಯವಾಗುತ್ತವೆ. ಇವೆಲ್ಲವನ್ನು ನೋಡಿದಾಗ ಜನಪದ ಶಿಶುಸಾಹಿತ್ಯವೂ ಎಷ್ಟೊಂದು ಮಹತ್ವಪೂರ್ಣವಾದುದು ಎಂಬುದು ನಮಗೆ ವೇದ್ಯವಾಗುತ್ತವೆ.

ಮಕ್ಕಳು ಅನುಕರಣೆ ಮಾಡುವ ಸಂಸಾರದ ಸುಖ-ದುಃಖಗಳ ಪರಿಯನ್ನು ತಾನು ಎದುರಿಸಲಿರುವ ಸಂಕೀರ್ಣ ಸಂಸಾರದ ಮೂಲ ಬೇರುಗಳನ್ನು-ಮಕ್ಕಳಿಂದಲೇ ರಚಿತವಾದ ಇಂತಹ ಪದಗಳಲ್ಲಿ-ಅವರ ಆಟದ ನಟನೆಯಲ್ಲಿ-ಕಾಣಬಹುದಾಗಿದೆ.

ಈ ಸಂಗ್ರಹದ 'ಗೊಂಬಿ ಮದ್ವಿ' ಎಂಬ ವಿಭಾಗದ ನಾಲ್ಕೈದು ಹಾಡುಗಳನ್ನು ನೋಡಿದರೆ ಹೆಣ್ಣು ಬೇಡುವುದು ಮೊದಲ್ಗೊಂಡು, ಮದುವೆಯಾಗಿ,

ಹೆಣ್ಣು 'ಕಾರ್‍ಗಾಡಿ'ಯಲ್ಲಿ ಕೂತುಕೊಂಡು ಗಂಡನ ಮನೆಗೆ ಕರೆದೊಯ್ಯುವ ದೃಶ್ಯ ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತದೆ. ಅದೇ ಆಗ ಮದುವೆ ಆಗಿ ಬಂದ ಸೊಸೆ ಅತ್ತೆಯ ಮನೆಯಲ್ಲಿ ನೀರು ತರುವುದು, ಅಕ್ಕಿ ಥಳಿಸುವುದು, ಊಟಕ್ಕೆ ಬಡಿಸುವುದು ಮುಂತಾದ ದೃಶ್ಯಗಳು ಅಲ್ಲದೆ ಬೇಸರಗೊಂಡು ಅತ್ತೆ-ಅತ್ತಿಗೆಯರನ್ನು ಹಿಯ್ಯಾಳಿಸುವ ಹಾಡುಗಳೂ ಈ ಸಂಗ್ರಹದಲ್ಲಿ ನೋಡಲು ಸಿಗುತ್ತವೆ. ಇವೆಲ್ಲವುಗಳನ್ನು ನೋಡಿದಾಗ ಮಕ್ಕಳು ಈಗಲೆ ಸಂಸಾರ ಹೂಡಿ, ಆದಿ ಪರಿಸರದ ಪ್ರಜ್ಞೆಯನ್ನೂ, ಕುಟುಂಬದ ವ್ಯಕ್ತಿ-ವ್ಯಕ್ತಿಗಳ ನಡುವಣ ಸಂಬಂಧದ ಅರಿವನ್ನೂ ಪಡೆಯುತ್ತವೆ ಎಂದು ಹೇಳಬಹುದು.

'ಜಾಣ-ಜಾಣೆ' ವಿಭಾಗದ ಹಾಡುಗಳು ಒಳ್ಳೆ ಸ್ವಾರಸ್ಯಕರ ಸಂಭಾಷಣಾ ಮಾದರಿಯ ಉತ್ತಮ ಹಾಡುಗಳಾಗಿವೆ. ಈ ಸಂಭಾಷಣೆಗಳ ನಡುವೆ ಮಧುರ ಪ್ರೇಮದ-ಶೃಂಗಾರದ ಸುವಾಸನೆ ಹಿತಮಿತವಾಗಿ ಹರಿದಿದೆ. 'ಹಳ್ಳದ ದಂಡಿಗಿ ಕಟ್ಯಾವ ಮೂರೆಮ್ಮಿ' ಎಂಬ ಹಾಡು ಅಸಂಗತ ಸನ್ನಿವೇಶವೊಂದನ್ನು ವಿಡಂಬನಾತ್ಮಕವಾಗಿ ಚಿತ್ರಿಸುತ್ತದೆ. 'ಮುಂಜಾನಾದರ ಎದ್ದಾಳಾಯಿ' 'ಆಯಿ ಆಯಿ ಬಂದಾಳ' 'ಮಾಮಾ ಬಂದಾನ ಮದ್ಯಾಣಕ', 'ಕಾಗಿ ಕಾಗಿ ಕವ್ ಕವ್', 'ಮುತ್ಯಾ ಮುತ್ಯಾ ಮುಗದಾಣಿ' ಮುಂತಾದ ಹಾಡುಗಳೆಲ್ಲ ಅಜ್ಜ-ಅಜ್ಜಿ, ಮಾವರನ್ನು ಗೇಲಿ ಎಬ್ಬಿಸುವ ಹಾಸ್ಯಭರಿತ ಹಾಡುಗಳಾಗಿವೆ.

'ಹತ್ತಿ ಕಟಗಿ ಬತ್ತಿಕಟಗಿ'[೧] ಇದು ನಾಲ್ಕೈದು ಜನ ಮಕ್ಕಳು ಕೂಡಿ ಆಡುವ ಆಟವಾಗಿದೆ. ಹಾಡಿನಲ್ಲಿ ಚಿಕ್ಕದಾದ ಕಥೆಯೊಂದು ತೆಳ್ಳಗೆ ಹರಡಿಕೊಂಡಿದ್ದು, ಕಥೆ ಹಂತ ಹಂತವಾಗಿ ವಿವಿಧ ವಿನ್ಯಾಸಗಳೊಂದಿಗೆ ರೂಪಾಂತರಗಳನ್ನು ಪಡೆಯುತ್ತ ಸಂವಾದ ರೂಪದಲ್ಲಿ ಮುಂದುವರಿಯುತ್ತದೆ. ತಿಳಿಹಾಸ್ಯದೊಂದಿಗೆ ಪ್ರಾರಂಭವಾಗುವ ಈ ಹಾಡು ಹತ್ತೆಂಟು ಪಾಠಗಳಲ್ಲಿ ದೊರೆಯುತ್ತದೆ. ಆಯಾ ಪಾಠಗಳಲ್ಲಿ ಹಲವು ವೈವಿಧ್ಯಗಳೂ ಕಂಡುಬಂದು ಕಥೆ ಬೇರೆ ಬೇರೆ ಆಶಯದೊಂದಿಗೆ ಮುಕ್ತಾಯವಾಗುತ್ತದೆ. ಇಲ್ಲಿಯ ಮುಖ್ಯ ಆಶಯ ವಿನಿಮಯ ಪ್ರಜ್ಞೆ ಎಂದು ಹೇಳಬಹುದಾಗಿದೆ.

ಈ ಹಾಡಿನಲ್ಲಿ ಇನ್ನೂ ಹಲವಾರು ಪ್ರಜ್ಞೆಗಳಿವೆ. 'ಹೂವು ದೇವರಿಗೆ ಏರಿಸುವುದು, ಗಡಿಗೆ ದೇವರ ಗುಡಿಗೆ ಧರ್ಮ ಕೊಡುವುದು' ಇವೆಲ್ಲ ಧಾರ್ಮಿಕ ಪ್ರಜ್ಞೆಯ ಸಂಕೇತಗಳಾಗಿವೆ. 'ತಿಪ್ಪೆ-ಗೊಬ್ಬರ', 'ಹೊಲ-ಜೋಳ', 'ದೇವರು ಬುದ್ಧಿ', 'ಕುಂಬಾರ-ಗಡಿಗೆ', 'ಬಾವಿ-ನೀರು' ಮುಂತಾದ ಜೋಡಿ ಪದ

೧ ಡಾ. ಬಿ. ಎಸ್. ಗದ್ದಗಿಮಠರು ಈ ಆಟ ಒಕ್ಕಲುತನದ ಅನುಕರಣೆಯಾಗಿದೆ ಎನ್ನುತ್ತಾರೆ. ವಿವರಣೆಗಾಗಿ ನೋಡಿ 'ಕನ್ನಡ ಜಾನಪದ ಗೀತೆಗಳು' ೪೪, (೧೯೫೪).

ಪ್ರಯೋಗಗಳಲ್ಲಿ ವಸ್ತು-ವಸ್ತುಗಳ ನಡುವಣ ಸಂಬಂಧದ ದೃಷ್ಟಿ ಎದ್ದು ಕಾಣುತ್ತದೆ. 'ಅಮ್ಮ ಬ್ಯಾಳಿಹಿಟ್ಟು ಕುಡುವದು, ಅಜ್ಜ ಬಜ್ಜ ಕುಡುವುದು' ಇಲ್ಲೆಲ್ಲ ಮಮತೆ ಸೌಹಾರ್ದತೆಯು ಅರಿವಿದೆ. 'ಕಾಕಾ ಕಪಾಳಕ್ಕೆ ಹೊಡೆದ' ಎನ್ನುವಲ್ಲಿ ಭಯದ ಕಲ್ಪನೆಯೂ ಇದೆ. 'ಮಕ್ಕಳಿಗೆ ಕೈಕಾಲ ಕಟ್ಟಿ ಬಾವಿಯಲ್ಲಿ ಹಾಕುವುದು, ಕೈಯೊಳಗಿನ ರೊಟ್ಟಿ ಕಾಗಿ ಕಸಿದುಕೊಂಡು ಹೋಗುವುದು, ಮಡಿಕೆ ಒಡೆಯುವುದು' ಇವೆಲ್ಲ ಮಕ್ಕಳ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುವ ಸಾಮಾನ್ಯ ದುರಂತ ಚಿತ್ರಗಳ ಸಂಕೇತಗಳಾಗಿ ಕಂಡುಬರುತ್ತವೆ. 'ಗುಲಾಮನು ಸಲಾಮು ಕೊಟ್ಟ' ಎನ್ನುವಲ್ಲಿ ಗುಲಾಮಗಿರಿ ಕಾಲದ ಐತಿಹಾಸಿಕ ಅಂಶವೂ ಕಂಡುಬರುತ್ತದೆ. 'ದೇವರು ಗಣ್ಯಗಂಟ ಕೊಟ್ಟ' ಎನ್ನುವಲ್ಲಿ ಸುಂದರ ವಿಡಂಬನೆಯೂ ಇದೆ. ಹೀಗೆ ಇದೊಂದೆ ಹಾಡಿನಲ್ಲಿ ಮಕ್ಕಳ ಮನಸ್ಸಿನ ವಿವಿಧ ಕಲ್ಪನೆಗಳನ್ನೂ ಅವರು ಅನುಕರಿಸುವ ಹಲವಾರು ಅಂಶಗಳನ್ನೂ ನಾವು ಕಾಣುತ್ತೇವೆ.

'ಅನಿಬಂತಾನೆ' ಎಂಬ ಸುಪ್ರಸಿದ್ಧ ಲಾಲಿಯು ಐತಿಹಾಸಿಕ ಅಂಶಗಳನ್ನೊಳಗೊಂಡಿದೆ ಎಂದು ಡಾ. ಬಿ. ಎಸ್. ಗದ್ದಗಿಮಠರು ತಮ್ಮ ಮಹಾ ಪ್ರಬಂಧದಲ್ಲಿ ಬರೆಯುತ್ತಾರೆ.[೧]

ಆನಿ ಮ್ಯಾಲ ಅಂಬಾರಿ
ಬಂತ ನಮ್ಮ ಸವ್ವಾರಿ |

ಇಬ್ಬರು ಕೈಗೆ ಕೈಹಿಡಿದು ಮೇಲೆ ಮಗುವನ್ನು ಕೂಡಿಸಿಕೊಂಡು ಆಡುವ 'ಅವ್ವ-ಅಜ್ಜಿ' ಆಟದ ಈ ಹಾಡಿನಲ್ಲಿ ಆನೆಯ ಮೇಲೆ ಅಂಬಾರಿಯನ್ನಿಟ್ಟು ಮೆರವಣಿಗೆ ಹೊರಡುವ ದೃಶ್ಯದ ಅನುಕರಣೆ ಕಂಡುಬರುತ್ತದೆ. ಇದೇ ಆಟದ ಇನ್ನೊಂದು ಹಾಡು ಹೀಗಿದೆ–

ಗಂಗಾಮುತಿ ಥೇರ
ಬಿಂದಿಗ್ಯಾಗ ಬೇರ
ಗ್ವಾಲಗೇರಿ ಥೇರ
ಗೊಲ್ಲಾಳಪ್ಪನ ಥೇರ |

ಈ ಹಾಡಿನಲ್ಲಿ ಜಾತ್ರೆಯಲ್ಲಿ ದೇವರ ಹೆಸರಿಗೆ ಎಳೆಯುವ 'ರಥ'ದ ದೃಶ್ಯ ಮೂಡಿ ನಿಲ್ಲುತ್ತದೆ. ಹೀಗೆ ವ್ಯಾವಹಾರಿಕ ಜೀವನದ ಸಹಜ ಅನುಕರಣೆಗಳು

೧. ವಿವರಣೆಗಾಗಿ ನೋಡಿ ಡಾ. ಬಿ. ಎಸ್. ಗದ್ದಗಿಮಠರ 'ಕನ್ನಡ ಜಾನಪದ ಗೀತೆಗಳು',– ಪುಟ ೪೩ (೧೯೬೩) (ಇನ್ನೂ ಹಲವಾರು ಅಂಶಗಳನ್ನು ಅದರಲ್ಲಿ ಪ್ರಸ್ತಾಪಿಸಲಾಗಿದೆ.)

ಹೊಂದುವದಿ, ಗತಕಾಲದ ಸಂಗತಿಗಳನ್ನು ಕೆಲವು ಆಟಗಳು ಅನುಕರಿಸಿವೆ. ಇನ್ನು ಕೆಲವು ಸಾಮಾಜಿಕ ಸಂಪ್ರದಾಯ ಹಾಗೂ ನಂಬಿಕೆಗಳನ್ನು ಅನುಕರಿಸುತ್ತವೆ. ಆಷಾಢಮಾಸದಲ್ಲಿ ಮಕ್ಕಳು ಗುಳ್ಳವ್ವನನ್ನು ಮಾಡಿ ಆಡುವುದು ಸಂಪ್ರದಾಯದ ಅನುಕರಣೆಯಾದರೆ, 'ಗುರ್ಜಿ' ನಂಬುಗೆಯ ಮೇಲೆ ಪೂಜಿಸಲ್ಪಡುವ ಆಟ. 'ಗುರ್ಜಿ' ಆಡಿದರೆ ಮಳೆ ಬರುವುದೆಂಬ ನಂಬುಗೆ ನಮ್ಮಲ್ಲಿದೆ.

ನಮ್ಮ ಸಂಪ್ರದಾಯ ಆಚರಣೆಗಳಲ್ಲಿ ಮದುವೆಯೊಂದು ಮಹತ್ವದ ಸಂಗತಿ. ಗೊಂಬೆಗೆ ಲಗ್ನಮಾಡಿ ಆಡುವ ಮಕ್ಕಳ ಆಟ ನಿಜಜೀವನದ ಮದುವೆಯ ಅನುಕರಣೆ ಎನಿಸಿತ್ತು. ಏಕೆಂದರೆ ಗಂಡು-ಹೆಣ್ಣಿನ ಮದುವೆಯಾಗುವಾಗ ಎಳ್ಳುಹಚ್ಚುವ ಸಮಯದಲ್ಲಿ ಹೆಣ್ಣಿನ ಕೈಯಲ್ಲಿ ಅರಿಸಿನದ ಅರಿವೆ ಸುತ್ತಿದ ಗೊಂಬೆಯೊಂದನ್ನು ಕೊಡುವ ರೂಢಿ ಈಗಲೂ ಇದೆ. ಗಂಡ-ಹೆಂಡರ ಮದುವೆಗೂ ಈ ಗೊಂಬೆಗಳಿಗೂ ಏನು ಸಂಬಂಧ? ಬಹುಶಃ ಮದುವೆಯ ಮೂಲ ರಹಸ್ಯವೇ ಇದರಲ್ಲಡಗಿದ್ದಂತೆ ತೋರುತ್ತದೆ.

ಮಾನವನು ಆದಿ ಮಾನವನ ಸ್ಥಿತಿಯಲ್ಲಿದ್ದಾಗ ಪರಸ್ಪರ ಕೂಡಲು ಬಯಸಿದ ಗಂಡ-ಹೆಣ್ಣುಗಳು ತಾವು ದೇವರ ಸಂಕೇತವಾಗಿ ಇಟ್ಟ ಒಂದು ಕಲ್ಲಿನ ಮುಂದೆ ಹೋಗಿ ಅದನ್ನು ಪೂಜಿಸಿ ಸಾಮೂಹಿಕ ಕುಣಿತ ಮಾಡುತ್ತಿದ್ದರು. ನಂತರ ಅಲ್ಲಿಯೇ ಪರಸ್ಪರ ಭೋಗ ಪಡೆಯುತ್ತಿದ್ದರು ಎಂಬ ಸಂಗತಿ ತಿಳಿದು ಬರುತ್ತದೆ. ಭೋಗಿಸುವುದು ಒಂದು ಪವಿತ್ರ ಕಾರ್ಯವೆಂದು ಅವರು ತಿಳಿಯುತ್ತಿದ್ದರು. ಸಂತಾನೋತ್ಪತ್ತಿಯೇ ಅವರಿಗೆ ಸ್ವರ್ಗಕ್ಕೆ ಕೊಂಡೊಯ್ಯುವ ಸಾಧನವಾಗಿತ್ತು.

ಗಂಡು-ಹೆಣ್ಣುಗಳು ಭೋಗ ಪಡೆಯುವ ಮುಂಚೆ ದೇವರಿಗೆ ಪೂಜೆ ಸಲ್ಲಿಸುವ ಈ ಸಂಪ್ರದಾಯ ಈಗಲೂ ಉಳಿದುಬಂದಿದೆ. ಅಕ್ಷತೆಯ ಕಾರ್ಯಕ್ರಮದ ಮುಂಚೆ 'ದೇವರ ಬಾಳೆಗೆ' ಹೋಗಿ 'ದೇವರ ಅಕ್ಷತೆ' ಹಾಕಿ ಅನಂತರ ಗಂಡ-ಹೆಂಡರಾಗಲಿರುವವರಿಗೆ ಅಕ್ಷತೆ ಹಾಕುವ ರೂಢಿ ನಮ್ಮಲ್ಲಿದೆ. ಅಲ್ಲದೆ 'ಹೊಸದಾಗಿ ಮದುವೆಯಾದ ಗಂಡ-ಹೆಂಡರು 'ಕೂಡುವ ದಿನ' ಆ ರಾತ್ರಿ ಹಾಸಿಗೆಗೆ ಪೂಜೆಮಾಡಿ ನಂತರವೇ ಅನುಭೋಗಿಸುವ ಪದ್ಧತಿ ನಮ್ಮಲ್ಲಿದೆ' ಇಲ್ಲಿ ಹಾಸಿಗೆ ದೈವತ್ವದ ಸಂಕೇತವಾಗಿ ನಿಲ್ಲುತ್ತದೆ.

ಆದಿ ಮಾನವನ ಹಂತದಾಚೆ ಸ್ವಲ್ಪ ಮುಂದಕ್ಕೆ ಬಂದರೆ ಮೂರ್ತಿಪೂಜೆ ಮಾಡುವ ಪದ್ಧತಿ ಬಳಕೆಯಲ್ಲಿ ಬಂದಿತು. ಕಲ್ಲಿನ, ಲೋಹದ ಇಲ್ಲವೆ ಕಟ್ಟಿಗೆಯ ಮೂರ್ತಿಗಳು ದೇವರೆಂದು ಪೂಜೆಗೊಳ್ಳತೊಡಗಿದವು. ಮದುವೆಯ

ಕಾಲಕ್ಕೆ ಇವುಗಳ ಪೂಜೆ ಮೊದಲಾಗಿರಬೇಕು. ಮಾನವನ ಬುದ್ಧಿ ಬೆಳೆದಂತೆ, ಅವಶ್ಯಕತೆಗಳು ಹೆಚ್ಚಾದಂತೆ ಗಂಡಿಗೊಂದು ಹೆಣ್ಣು, ಹೆಣ್ಣಿಗೊಂದು ಗಂಡು ಅನಿವಾರ್ಯವೆನಿಸಿ ಪರಸ್ಪರ ಕೂಡಿ ಬಾಳಲು ಇಚ್ಛಿಸಿರಬೇಕು. ಕ್ರಮೇಣ ನಮ್ಮಲ್ಲಿ ಅನೇಕ ಸಂಪ್ರದಾಯಗಳು ರೂಢಿಯಲ್ಲಿ ಬಂದಂತೆ ಮದುವೆಯೂ ಒಂದು ಸಾಮಾಜಿಕ ಸಂಪ್ರದಾಯವಾಗಿ ಮೂಡಿಬಂದು, ಗಂಡು-ಹೆಣ್ಣಿನ ನಿಶ್ಚಯ ಕಾರ್ಯ ಪ್ರಾರಂಭವಾಗಿರಬೇಕು.

ಇಷ್ಟೊತ್ತಿಗೆ ಮೂರ್ತಿಗಳ ಮುಂದೆ ನಡೆಯುತ್ತಿದ್ದ ಸಾಮೂಹಿಕ ಕುಣಿತ, ಭೋಗಗಳು ನಿಂತುಹೋಗಿ, ದೇವರ ಬದಲಾಗಿ ಅವುಗಳ ವಿಶಿಷ್ಟ ಸಂಕೇತಗಳು ಬಳಕೆಯಲ್ಲಿ ಬಂದವೆಂದು ಹೇಳಬಹುದು. ಗಂಡು-ಹೆಣ್ಣಿನ ನಿಶ್ಚಯ ಕಾರ್ಯದಲ್ಲಿ ಗಂಡಿನವರು ಹೆಣ್ಣಿನವರು ತಮ್ಮ ಒಂದೊಂದು ಗೊಂಬೆಯನ್ನು-ಮದುವೆಗೆ ಮುಂಚೆ ಪೂಜೆಗೊಳ್ಳುತ್ತಲಿದ್ದ ದೇವರ ಸಂಕೇತವಾಗಿ ಅಥವಾ ಗಂಡು ಹೆಣ್ಣಿನ ಸಂಕೇತರೂಪವಾಗಿ ಅವುಗಳಿಗೆ-ಒಂದೆಡೆ ಕೂಡಿಸಿಟ್ಟು ಸಿಂಗರಿಸಿ ನಿಶ್ಚಯಕಾರ್ಯ ಮಾಡಿರಬೇಕು. ನಂತರ ಗಂಡಿನವರು ಹೆಣ್ಣು ಗೊಂಬೆಯನ್ನು, ಹೆಣ್ಣಿನವರು ಗಂಡುಗೊಂಬೆಯನ್ನು ತಮ್ಮ ತಮ್ಮ ಮನೆಗೆ ಕೊಂಡೊಯ್ದು, ಮದುವೆಯ ಕಾಲಕ್ಕೆ ಈ ಗೊಂಬೆಗಳನ್ನೇ ತಮ್ಮ ಮಕ್ಕಳ ಕೈಯಲ್ಲಿಟ್ಟು ಧಾರೆ ಎರೆದಿರಬೇಕು. ಅದೇ ಸಂಪ್ರದಾಯ ಈಗಲೂ ಉಳಿದು ಕೊಂಡು ಬಂದಿರಲು ಸಾಧ್ಯತೆ ಇದೆ ಎಂದು ತರ್ಕಿಸಬಹುದಾಗಿದೆ.

ಈಗಿನ ಕಾಲದಲ್ಲಿ ನಾವು ಲಗ್ನ ನಿಶ್ಚಯ ಮಾಡಿದಾಗ ಕೈಬೆರಳಿನ ಉಂಗುರುದ ನಿಶಾನೆ ಕೊಡುವುದನ್ನು ಕಾಣುತ್ತೇವೆ. ಪ್ರೇಮಿಗಳು ಒಂದು ತರದ ಹೊಸ ಮಾದರಿಯ ಗೊಂಬೆಗಳನ್ನು ಕಾಣಿಕೆಯಾಗಿ ಪರಸ್ಪರ ಕೊಡಕೊಳ್ಳುವ ರೂಢಿಗಳಿವೆ. ಬಹುಶಃ ಮೊದಲು ಗಂಡು-ಹೆಣ್ಣುಗಳ ಸಂಕೇತವಾಗಿ ನಡೆದ ಗೊಂಬೆಗಳ ವಿನಿಮಯದ ಬೆಳವಣಿಗೆಯ ರೂಪವೇ ಉಂಗುರು ಅಥವಾ ಈ ಹೊಸ ಗೊಂಬೆಗಳ ವಿನಿಮಯವಾಗಿರಬೇಕು.

ಮೂಲ ಮಾನವನಲ್ಲಿ ನಡೆದುಹೋದ ಗೊಂಬೆಗಳ ಮದುವೆಯ ಈ ಸಂಪ್ರದಾಯ ಕಾರ್ಯ, ಮಾನವನ ತಂದೆ ಎನಿಸಿಕೊಳ್ಳುವ ಮಗುವಿನಲ್ಲಿ ಈಗಲೂ ಉಳಿದುಕೊಂಡು ಬಂದಿದೆ ಎಂದು ಹೇಳಬಹುದಾಗಿದೆ.

ಕೆಲವು ಕಡೆ ಮಳೆ ಬರಲೆಂದು ದೇವರನ್ನು ನೆನೆದು ಗೊಂಬೆಗಳ ಮದುವೆ ಮಾಡುವ ರೂಢಿಯೂ ಇದೆ. ಬಹುಶಃ ಮದುವೆಯು ಪವಿತ್ರ ಕಾರ್ಯವೆಂದು ನಂಬಿದ್ದ ಪ್ರಜ್ಞೆಯ ಪಳಿಯುಳಿಕೆಯೆ ಇದಾಗಿರಬೇಕು. ಈ ದೃಷ್ಟಿಯಿಂದಲೂ ಫಲೋತ್ಪಾದನೆಯ ಸಂಕೇತವಾಗಿ ಗೊಂಬೆಗಳ ಮದುವೆ ನಡೆಯಿತು ಎಂಬುದು ಸ್ಪಷ್ಟವಾಗುತ್ತದೆ.

ಮಕ್ಕಳ ಆಟಗಳಲ್ಲೆಲ್ಲ 'ಕುಂಯಾ' ಮಾಡಿ ಆಡುವುದೊಂದು ಬಹು ವಿಶಿಷ್ಟವಾದುದಾಗಿದೆ. ಗೌರಿ ಆಡಲು ಊರಹೊರಗೆ ಹೋದ ಹೆಣ್ಣುಮಕ್ಕಳು 'ಕುಂಯಾ'ನನ್ನು ಮಾಡಿ ಅಲ್ಲಿಯೆ ಆಡುವರೆ ವಿನಃ ಊರಲ್ಲಿ ಈ ಆಟ ಆಡುವುದಿಲ್ಲ. 'ಕುಂಯಾ'ನ ತಯ್ಯಾರಿಕೆ ನಡೆದಿರುವಾಗಲೆ 'ಕುಂಯಾ' ಸಾಯುವ ಗಳಿಗೆಯಲ್ಲಿ ಇದ್ದಾನೆಂಬ ಸುದ್ದಿ ಹರಡಿಸುವರು. ಆತನ ಆಕಾರ ತಯಾರಾಗುತ್ತಲೆ 'ಕುಂಯಾ' ಸತ್ತನೆಂದು ಸುದ್ದಿ ಕಳಿಸುವರು. ಉಳಿದವರು ಬಂದು ಎದೆ ಎದೆ ಬಡಿದುಕೊಳ್ಳುತ್ತ ಅತ್ತಂತೆ ನಟಿಸಿ ಹಿಯ್ಯಾಳಿಕೆಯ ಹಾಡು ಹಾಡುತ್ತ ಕಂಟಿಗಳಿಂದ ಕಿತ್ತ ಫಳ್ಯಾದಿಂದ ಒಂದೆಸವನೆ 'ಕುಂಯಾ'ನನ್ನು ಬಡಿಯುತ್ತ, ಒಣಗಿದ ಎಲೆಗಳನ್ನು ಆತನ ಮೇಲೆ ತೂರುತ್ತ ಈ ಮೋಜಿನ ಆಟ ಆಡುವರು. ಒಂದು ಥರದಲ್ಲಿ ಕುಂಯಾನನ್ನು ಕಡೆಗಣಿಸಿ ಅಣಕಿಸಿ ತುಚ್ಛ ಭಾವನೆಯಿಂದಲೆ ಕಾಣುವರೇನೊ ಎನ್ನಿಸುವಂತಿರುತ್ತದೆ ಆಗಿನ ನೋಟ !

'ಕುಂಯಾ' ಆಡುವವರು ಕೇವಲ ಹೆಣ್ಣುಮಕ್ಕಳು ಮಾತ್ರ. 'ಕುಂಯಾ' ಒಂದು ಗಂಡಿನ ಸಂಕೇತವಾಗಿರುವಂತೆ ತೋರುತ್ತದೆ. ಹೆಣ್ಣುಗಳ ನಡುವೆ ಈ ಗಂಡು ಅವಮಾನಿತನಾಗುವುದೇಕೆ ? ಹೆಣ್ಣು ಮಕ್ಕಳು ಇದನ್ನು ತುಚ್ಛ ಭಾವನೆಯಿಂದ ಕಂಡ ಕಾರಣವೇನು ? ಎಂಬೆಲ್ಲ ಪ್ರಶ್ನೆಗಳು ನಮಗೆ ಎದುರಾಗುತ್ತವೆ.

ಗಂಡಿಗೆ ಹೆಣ್ಣು ಮಾಯೆಯಾಗಿ, ಹೆಣ್ಣಿಗೆ ಗಂಡು ಮಾಯೆಯಾಗಿ ಕಾಡುವುದು ಈ ಲೋಕದ ರೂಢಿ. ಇಲ್ಲಿ 'ಕುಂಯಾ' ಹೆಣ್ಣಿನ ನಡುವೆ ಮಾಯೆಯಾಗಿ ಕಂಡಂತಿದೆ. ಅಂದರೆ ಬಹುಶಃ 'ಕುಂಯಾ' ವಿಕಾರ ಮನೋವೃತ್ತಿಯ ಸಂಕೇತವಾಗಿರಬೇಕು. ಇಂತಹ 'ವಿಕಾರ ಮನೋವೃತ್ತಿ'ಯನ್ನು ಹತ್ತಿಕ್ಕಿಸಿ, ಆದಷ್ಟು ದೂರವಿಡಲು ಬಯಸಿದ ಮನಸ್ಸು 'ಕುಂಯಾ'ನನ್ನು ಮಾಡಿ, ಆಡಿ, ತುಚ್ಛೀಕರಿಸಿರಬೇಕು. ಅರ್ಥಾತ್ 'ಕುಂಯಾ' 'ಕಾಮದ ಸಂಕೇತ'ವಾಗಿರಬಹುದೆಂದು ತರ್ಕಿಸಬಹುದಾಗಿದೆ. 'ಕುಂಯಾ'ನಿಗೆ ಏರಿಸುವ 'ಹೂ', ಅವನ ತಲೆಗೆ ಚುಚ್ಚುವ 'ಜೇಕು'ಗಳೆಲ್ಲ ಕಾಮದ ಸಂಕೇತಗಳೇ ಆಗಿವೆ. 'ಕುಂಯಾ'ನ ಮೇಲೆ ತೂರುವ 'ಒಣಗಿದ ಎಲೆ', ಅವನಿಗೆ ಬಡಿಯುವ 'ಹಸಿಯ ಫಳ್ಯಾ' ಇವು ಅಪಶಕುನ ಆಶಯದ ಸಂಕೇತಗಳಾಗುತ್ತವೆ. ಒಂದರ್ಥದಲ್ಲಿ ಕುಂಯಾನ ಅಂತೆವನ್ನೇ ಇವು ಸೂಚಿಸುತ್ತಿರುವಂತಿವೆ. ಈ ರೀತಿ ಚುಕ್ಕೋಳ ಪದಗಳಲ್ಲಿಯ ಇಂತಹ ಅನೇಕ ಹಾಡುಗಳು ಮನೋವಿಜ್ಞಾನಿಗಳ ಗಮನ ಸೆಳೆಯುವಂತಿವೆ.

ಮಗುವಿನ ದೈಹಿಕ ಹಾಗೂ ಮಾನಸಿಕ ವಿಕಾಸವು ಒಳ್ಳೆಯ ರೀತಿಯಿಂದ ಆಗಬೇಕಾದರೆ ಮಗುವಿನಲ್ಲಿ ಚಟುವಟಿಕೆ ಹೆಚ್ಚಬೇಕು. ವಯಸ್ಸಿಗೆ ತಕ್ಕಂತೆ

ಅಂಬೆಗಾಲಿಕ್ಕಲು, ಎದ್ದು ನಿಲ್ಲಲು, ಓಡಾಡಲು, ಮಾತನಾಡಲು ಕಲಿಯಬೇಕು. ಅದಕ್ಕಾಗಿ ಮನೋವಿಜ್ಞಾನಿಗಳು ಮಗುವಿನ ಬೆಳವಣಿಗೆಯ ಹಂತ ಹಂತಗಳಲ್ಲೂ ಪ್ರಯೋಗ ನಡೆಸಿ, ಮಗುವು ಚಟುವಟಿಕೆಯಿಂದ ಬೆಳವಣಿಗೆ ಹೊಂದಲು ಸಹಾಯಕವಾಗುವ ಅನೇಕ ಕ್ರಮಗಳನ್ನು ಕೈಕೊಳ್ಳಲು ಹಲವಾರು ಸೂಚನೆಗಳನ್ನು ಕೊಡುತ್ತಾರೆ. ಅಂತಹ ಉಪಯುಕ್ತ ಪ್ರಯೋಗಗಳು ಮಕ್ಕಳ ಆಟಗಳಲ್ಲೂ ಕಂಡು ಬರುತ್ತವೆ.

‘ಆನಿಬಂತಾನಿ’ ಹಾಡು ಹಾಡುತ್ತ ಮಗುವನ್ನು ಕಾಲ ಮೇಲೆ ಹಾಕಿಕೊಂಡು ಮೇಲೆ ಕೆಳಗೆ ಮಾಡುವುದರಿಂದ ಮಗುವಿನಲ್ಲಿ ಧೈರ್ಯ ತರಿಸುವ ಪ್ರಯೋಗ ಇದಾಗಿದೆ. ‘ದಟ್ಟಿ ಮುಟ್ಟಿ ಡಡಸಾಲಿಗೊ’, ‘ತಮ್ಮನ ಕಾಲಾಗ ಗಿಲಗೆಜ್ಜಿ’ ಎಂದು ಹಾಡು ಹೇಳುತ್ತ ಮಗುವಿಗೆ ಹೆಜ್ಜೆ ಹಾಕುವುದನ್ನು ‘ಬಜಾರಕು ಜಪಟ್’ ಎನ್ನುತ್ತ ಹೆಜ್ಜೆಗೆ ಸರಿಯಾಗಿ ಕೈಬೀಸುವುದನ್ನು ಕಲಿಸುವ ಈ ಹಾಡುಗಳು ಒಳ್ಳೆಯ ಪ್ರಯೋಗಗಳಾಗಿವೆ. ‘ಕುರಿಮರಿ ಬೇಕೇನ್ರಿ’, ‘ಬಸ್ಸು ಬಸ್ಸು ಸಣ್ಣಾವ’, ‘ಟುಂ ಟು ಗಾಡಿ’ ಮುಂತಾದವುಗಳೆಲ್ಲ ಮಗುವನ್ನು ಬೆನ್ನ ಮೇಲೆ ಹಾಕಿಕೊಂಡು ಓಡಾಡುತ್ತ ಹಾಡುವ ಹಾಡುಗಳಾಗಿದ್ದು, ಮಗುವಿನಲ್ಲಿ ತಾನು ಕೆಳಗೆ ಬೀಳುತ್ತೇನೆಂಬ ಭಯದ ಕಲ್ಪನೆ ಉಂಟಾಗಿ ಜಿಗುಟಾಗಿ ಹಿಡಿದುಕೊಳ್ಳುವ—ತನ್ನ ರಕ್ಷಣೆ ತಾನು ಮಾಡಿಕೊಳ್ಳುವ—ಪ್ರಜ್ಞೆ ಬೆಳೆದುಬರುತ್ತವೆ.

ತನ್ನ ಉತ್ತರ ಬಾಲ್ಯಾವಸ್ಥೆಯಲ್ಲಿ ಮಗು ಮೈದಾನದಲ್ಲಿ ಆಡುವ ಆಟಗಳಂತೂ ದೇಹಕ್ಕೆ ಒಳ್ಳೆಯ ವ್ಯಾಯಾಮವನ್ನು ಕೊಡುವಂತಹವುಗಳಾಗಿವೆ. ಹೆಣ್ಣುಮಕ್ಕಳು ಕುಪ್ಪಿ ಆಟ ಆಡುವುದರಿಂದ ಅವರ ಗರ್ಭಕೋಶಕ್ಕೆ ವಿಶೇಷ ರೀತಿಯ ವ್ಯಾಯಾಮ ದೊರೆತು, ಮುಂದೆ ಪ್ರಸವ ಸಮಯದಲ್ಲಿ ಯಾವ ತೊಂದರೆಯೂ ಉಂಟಾಗುವುದಿಲ್ಲವೆಂಬ ವೈಜ್ಞಾನಿಕ ಕಾರಣವೂ ಬಂದಿದೆ.

ಮಗುವಿಗೆ ಪಾಠಕಲಿಸಲು ಉಪಯೋಗಿಸುವ ಅನೇಕ ಪ್ರಯೋಗಗಳನ್ನು ಮನೋವಿಜ್ಞಾನಿಗಳು ಹೇಳುತ್ತಾರೆ. ಮಗುವಿಗೆ ಹಾಡು ಎಂದರೆ ಬಲು ಇಷ್ಟ. ರಾಗಬದ್ಧವಾಗಿ ಪ್ರಾಸಬದ್ಧವಾಗಿ ಆಡಿದ ನುಡಿ, ಹಾಡಿದ ಹಾಡು ಹೆಚ್ಚು ಆಕರ್ಷಕವಾಗಿ ಕಂಡು, ಮಗುವಿನ ಮನಸ್ಸಿನಮೇಲೆ ಪರಿಣಾಮ ಬೀರುತ್ತದೆ. ಮಗುವಿಗೆ ಪಾಠ ಹೇಳಿಕೊಡುವ ಹಲವು ಹಾಡುಗಳೂ ಇಲ್ಲಿವೆ.

ಒಂದು ಎರಡು | ಶಾಲೆಗೆ ಹೊರಡು
ಮೂರು ನಾಲ್ಕು | ಪಾಟಿಯು ಬೇಕು
ಐದು ಆರು | ಸೈಕಲ್ಲ ಏರು
ಏಳು ಎಂಟು | ಪೆಪ್ಪರಮೆಂಟು
ಒಂಬತ್ತು ಹತ್ತು | ನದಿ ಹೊತ್ತಾಯ್ತು

ಇವಲ್ಲದೆ ' ಓನಾಮಾಸಿಥಂ ', ' ಸೋಮಾರ ಸೆಂಡಿಗಿ | ಮಂಗಳಾರ ಮಂಡಿಗಿ ', 'ಒಂದಕ ಬಂದ ಬಾಬಾ ಮುಂದ', 'ಒಂದು ಒಂದು ಎರಡು | ಶಾಲೆಗೆ ಹೊರಡು' ಮುಂತಾದ ಹಾಡುಗಳೆಲ್ಲ ಮಕ್ಕಳಿಗೆ ಕಂಠಪಾಠ ಮಾಡಲು ಅನುಕೂಲವಾದವುಗಳಾಗಿವೆ.

೧೯೦೪ರಲ್ಲಿ ರಶಿಯಾದ ಶರೀರವಿಜ್ಞಾನಶಾಸ್ತ್ರಜ್ಞ (Physiologist) 'ಐವಾನ ಪಾವಲೊ' (Ivan Pavlov) ಎನ್ನುವನು 'ಪ್ರತಿಬಂಧಕ ಪ್ರತಿಕ್ರಿಯೆ ಸಿದ್ಧಾಂತ' (conditional reflection theory) ಎಂಬ ಕಲಿಕೆಯ (Learning) ಪ್ರಯೋಗ ಒಂದನ್ನು ನಡೆಸಿದನು. ಒಂದೆಡೆಗೆ ಕಟ್ಟಿದ ನಾಯಿಗೆ ಪ್ರತಿದಿನ ಗೊತ್ತಾದ ವೇಳೆಗೆ ಆಹಾರ ಕೊಡುವುದಕ್ಕಿಂತ ಮುಂಚೆ ಗಂಟೆ ಬಾರಿಸುತ್ತಿದ್ದನು. ಕೆಲವು ದಿನಗಳ ಈ ನಿರಂತರ ಅಭ್ಯಾಸದಿಂದ ನಾಯಿ ಕಲಿತದ್ದೇನಂದರೆ 'ಗಂಟೆ ಬಾರಿಸಿದ ನಂತರ ತನಗೆ ಆಹಾರ ದೊರೆಯುವುದೆಂಬ ಅರಿವು' ಉಂಟಾಗಿ, ಆಹಾರದ ಕಡೆಗೇ ಅದರ ಸಂಪೂರ್ಣ ಮನಸ್ಸು ಕೇಂದ್ರೀಕೃತವಾಗಿ, ಹಸಿವೆಯ ತೀವ್ರತೆಯಿಂದ ಒಂದು ತರದ ಜೊಲ್ಲು ಬಿಡಲು ಪ್ರಾರಂಭಿಸಿತು. ಮುಂದೆ ಕೆಲವು ದಿನ ಗಂಟೆಯಾದ ನಂತರ ಆಹಾರ ಕೊಡುವುದನ್ನು ನಿಲ್ಲಿಸಿ ಬಿಡಲು ಕ್ರಮೇಣ ನಾಯಿಯ ಬಾಯಿಂದ ಸೋರುವ ಜೊಲ್ಲು ಕಡಿಮೆಯಾಗುತ್ತ ಕಡೆಗೆ ನಿಂತುಬಿಟ್ಟಿತು. ಏಕೆಂದರೆ ಗಂಟೆಯಾದ ನಂತರ ಈಗ ತನಗೆ ಆಹಾರ ಪೂರೈಸಲಾಗುವದಿಲ್ಲವೆಂಬ ಪ್ರಜ್ಞೆ ನಾಯಿಯಲ್ಲಿ ಮೂಡಿದುದರ ಕಾರಣವೇ ಆಗಿದೆ. ಈ ಪ್ರಯೋಗದಲ್ಲಿ ನಮಗೆ ಕಂಡುಬಂದ ವಿಶಿಷ್ಟತೆಯೆಂದರೆ ಗಂಟೆ ಹಾಗೂ ನಾಯಿಯ ಬಾಯಿಂದ ಸೋರುವ ಜೊಲ್ಲು ಇವುಗಳ ನಡುವಿನ ಸಂಬಂಧವೇ ಆಗಿದೆ. ಇಲ್ಲಿ 'ಗಂಟೆ' 'ಪ್ರತಿಬಂಧಕ' (condition) ವಾದರೆ, ಗಂಟೆಬಾರಿಸಿದ ನಂತರ ಹಸಿವೆಯ ಪ್ರಜ್ಞೆಯಿಂದ ಸೋರುವ ನಾಯಿಯ ಜೊಲ್ಲು 'ಪ್ರತಿಕ್ರಿಯೆ' (reflection) ಆಗುತ್ತದೆ.[೧]

ಮಕ್ಕಳ ಕಲಿಕೆಯ (Learning) ರೀತಿಯಲ್ಲೂ ಇಂತಹ ಹಲವು ಪ್ರಯೋಗಗಳು ನಮಗೆ ಕಂಡು ಬರುತ್ತವೆ. ಮುಂಜಾನೆ ಶಾಲೆ ಪ್ರಾರಂಭವಾಯಿತೆಂದರೆ ಮಧ್ಯಾಹ್ನ ಉಪಹಾರದ ಗಂಟೆಯಾಗುತ್ತದೆಂಬ ಅರಿವು ಮಕ್ಕಳಲ್ಲಿರುತ್ತದೆ. ನಿಯತವೇಳೆ ಮೀರಿದರೂ ಗಂಟೆ ಹೊಡೆಯದಿದ್ದರೆ ಅವರ ಲಕ್ಷ್ಯ ಊಟದ ಕಡೆಗಿರುವದಿಲ್ಲ. ಗಂಟೆಯನ್ನು ಒಂದು ತಾಸು ಮೊದಲು ಬಾರಿಸಿದರೂ ಕೂಡ ಅವರಿಗೆ ಆಗ ಮಧ್ಯಾಹ್ನವೆ. ಅದೇ ಅವರ ಊಟದ ಸಮಯ. 'ಗಂಟೆ' ಅವರಲ್ಲಿ ಹಸಿವಿನ ಅರಿವನ್ನು ಮೂಡಿಸುತ್ತದೆ. ಉಪಹಾರದ ಗಂಟೆ ಬಾರಿಸಿದಾಗಲೆಲ್ಲ ಮಕ್ಕಳು ಶಾಲೆಯಿಂದ ಹೊರಗೆ ನುಗ್ಗುತ್ತ–

೧ General Psychology-Hans Raj Bhatia, Page 137

'ಬಾರಾ ಬಡೀತು
ಬಾಸಾ ಕುದೀತು
ಸಾಲಿ ಬಿಡುವೊ ಮಾಸ್ತಾರ' ।

'ಸಾಲಿ ಬಿಟ್ಟು ಸರ್ವತ್ತಾತು ।
ಮಂಗ್ಯಾ ಬಂದು ಬಾಳೊತ್ತಾತು' ।

ಎಂಬ ಹಾಡುಗಳನ್ನು ಹಾಡುತ್ತ ಮನೆಗೆ ಓಡುವರು. ಇಲ್ಲಿ 'ಗಂಟೆ' 'ಪ್ರತಿಬಂಧಕ'ವಾದರೆ, ಹಸಿವೆಯು ಅರಿವು ಉಂಟಾಗಿ ಮನೆಯಲ್ಲಿಯ ಅನ್ನದ ಗಡಿಗೆಯನ್ನು ನೆನಸಿ ಹಾಡುವ ಈ 'ಹಾಡು' 'ಪ್ರತಿಕ್ರಿಯೆ'ಯಾಗಿದೆ.

ಅಳುವ ಮಗುವನ್ನು ಚಂದ್ರನಿಗೆ ತೋರಿಸಿ—

'ಚಂದಾ ಮಾಮಾ ಚಾರಿಕಾಯಿ
ಬಟ್ಟಲ ತುಂಬ ಬಾರಿ ಕಾಯಿ'।

'ಚಂದಪ ಚಂದಪ ಚಲುವ
ಚುಂಗಾ ಬಿಟಗೊಂಡು ಬರುವ' ।

ಮುಂತಾಗಿ ಹಾಡಲು ಮಗು ಆಕಾಶದ ಕಡೆಗೆ ನೋಡಿ ಸಂತೋಷದಿಂದ ಹಾರಾಡುತ್ತವೆ. ನಾವು ಕೆಲವು ದಿನಗಳವರೆಗೆ ಇದೇ ಅಭ್ಯಾಸ ಮಗುವಿಗೆ ಮಾಡಿಸಿದರೆ ಅಳುತ್ತಿದ್ದ ಮಗುವನ್ನು ಹೊರಗೆ ತಂದು ಚಂದ್ರನಿಲ್ಲದ ಬರಿ ಆಕಾಶ ತೋರಿಸಿ ಹಾಡು ಹಾಡಿದರೂ ಅದು ಅಳುವುದನ್ನು ನಿಲ್ಲಿಸುವ ಸಾಧ್ಯತೆ ಇದೆ. ಇಲ್ಲಿ ನಾವು 'ಆಕಾಶ ತೋರಿಸಿ ಹಾಡುವುದು' 'ಪ್ರತಿಬಂಧಕ'ವಾದರೆ, ಮಗುವು 'ಅಳುವುದನ್ನು ನಿಲ್ಲಿಸುವುದು' 'ಪ್ರತಿಕ್ರಿಯೆ'ಯಾಗಿದೆ.

ಇಂತಹ ಹಲವಾರು ಗಮನಾರ್ಹ ಅಂಶಗಳಿಂದ ಕೂಡಿದ ಹಾಡುಗಳು 'ಚುಕ್ಕೋಳ ಪದ'ಗಳಲ್ಲಿವೆ. ಇಲ್ಲಿಯವರೆಗಿನ ವಿವೇಚನೆಯಲ್ಲಿ ಈ ಸಂಗ್ರಹದಲ್ಲಿಯ ಹಲಕೆಲವು ಹಾಡುಗಳನ್ನು ವಿಶ್ಲೇಷಿಸಿ ಅವುಗಳಲ್ಲಡಗಿರುವ ಗೂಢತೆಗಳನ್ನು ಅಲ್ಪಮಟ್ಟಿಗೆ ಅರ್ಥೈಸುವ ಪ್ರಯತ್ನ ಮಾಡಲಾಯಿತು. ಕೆಲವು ಕಡೆ ಕಲ್ಪನೆ ಅತಿಯಾಯಿತೆಂದು ಅನಿಸಬಹುದು. ಆದರೂ ಅದರಲ್ಲಿಯೇ ವಾಸ್ತವಿಕ ಸತ್ಯಸಂಗತಿಯನ್ನು ದರ್ಶಿಸುವ ಮನೋಭಾವವಿರುವುದು ಸ್ಪಷ್ಟವಾಗಿದೆ. ಡಾ. ಬಿ. ಎಸ್. ಗದ್ದಗಿಮಠರು ತಮ್ಮ ಮಹಾಪ್ರಬಂಧದಲ್ಲಿ ಇಂತಹ ಪ್ರಯತ್ನಮಾಡಿ ಹಲವಾರು ಅಂಶಗಳನ್ನು ಮೊದಲಬಾರಿಗೆ ಹೊರಹಾಕಿದ್ದಾರೆ.

ಇನ್ನೂ ಈ ಸಂಗ್ರಹದಲ್ಲಿಯ ಅನೇಕ ಹಾಡುಗಳು ಎಷ್ಟೊಂದು ಮಹತ್ವದ ಸಂಗತಿಗಳನ್ನು ಒಳಗೊಂಡಿವೆ ಎಂಬುದು ವಿಚಾರಿಸತಕ್ಕ ಮಾತಾಗಿದೆ.

ವಿದ್ವಾಂಸರು, ವಿಮರ್ಶಕರು ಆಸಕ್ತಿವಹಿಸಿ ಇವುಗಳನ್ನು ಅಭ್ಯಾಸ ಮಾಡಿದರೆ ಹೆಚ್ಚಿನ ಅಂಶಗಳು ಹೊರಬೀಳುವಲ್ಲಿ ಯಾವ ಸಂಶಯವೂ ಇಲ್ಲ.

ಡಾ. ಎಂ. ಎಸ್. ಲಕ್ಷ್ಮಿಯವರು ಇಂತಹ ವಿಶಿಷ್ಟ ರೂಪದ ಸಂಗ್ರಹ ವೊಂದನ್ನು ಮೊಟ್ಟಮೊದಲಬಾರಿಗೆ ಸಮಗ್ರವಾಗಿ ಹೊರತಂದುದು ಸ್ತುತ್ಯರ್ಹ ವಾದ ಕಾರ್ಯವೇ ಸರಿ. ಇಂತಹ ಸಂಗ್ರಹಗಳು ಉತ್ತರ ಕರ್ನಾಟಕದಲ್ಲಿ ಈ ಮೊದಲು ಬೆಳಕು ಕಂಡಿರಲಿಲ್ಲ. 'ಚುಕ್ಕೋಳ ಪದಗಳು' ಆ ಕೊರತೆಯನ್ನು ತುಂಬಿತೆಂದು ಸಂತೋಷದಿಂದ ಹೇಳಬಹುದಾಗಿದೆ.

ಒಂದೆ ಬಗೆಯ ಹಲವಾರು ಪಾಠಗಳನ್ನು ಪರಿಶೋಧಿಸಿ ಮಾಡಿದ ಸಂಪಾ ದನೆ. ಅಟಕ್ಕೆ ತಕ್ಕ ಹಿನ್ನೆಲೆ, ಸಂಪಾದನ ರೀತಿ ವಿಂಗಡನಾಕ್ರಮ ಇವೆಲ್ಲ ಸಂಪಾದಕರ ದಕ್ಷತೆಯನ್ನೂ, ಅನುಭವವನ್ನೂ ತೋರ್ಪಡಿಸುತ್ತವೆ. ಸಂಗ್ರಹಕ್ಕೆ ಬರೆದ ಪ್ರಸ್ತಾವನೆ ಹಾಗು ಬೆಟಗೇರಿ ಕೃಷ್ಣಶರ್ಮರ ಮುನ್ನುಡಿಗಳು ಈ ಸಾಹಿತ್ಯ ರೂಪದ ಮೇಲೆ ಹೆಚ್ಚಿನ ಬೆಳಕನ್ನು ಬೀರಬಲ್ಲವಾಗಿವೆ.

ಮಗುವಿನ ಮಾನಸಿಕ ಹಾಗು ದೈಹಿಕ ಬೆಳವಣಿಗೆಯ ಸಮಗ್ರ ವಿಷಯ ವನ್ನೂ, ಮಕ್ಕಳು ಅನುಕರಿಸುವ ವಿವಿಧ ಅನುಕರಣೆಗಳನ್ನೂ ಇಲ್ಲಿಯ ಹಾಡು ಗಳು ಸ್ಪಷ್ಟವಾಗಿ ವ್ಯಕ್ತಪಡಿಸುತ್ತವೆ. ಸಂಪೂರ್ಣವಾಗಿ ಮಗುವಿನ ಮನಸ್ಸನ್ನೇ ನಾವು ಇಲ್ಲಿ ಕಾಣಬಹುದಾದ್ದರಿಂದ, 'ಚುಕ್ಕೋಳ ಪದಗಳು' ಎಂಬ ಈ ಸಂಗ್ರಹ 'ಮಕ್ಕಳ ಮನೋವಿಜ್ಞಾನಕೋಶವೇ' ಆಗಿದೆ.

ಗ್ರಂಥಋಣ

೧ 'ಕನ್ನಡ ಜಾನಪದ ಗೀತೆಗಳು' — ಡಾ. ಬಿ. ಎಸ್. ಗದ್ದಗಿಮಠ

೨ ವಿಕಾಸ ಮನೋವಿಜ್ಞಾನ — ಎ. ಎಸ್. ಧರಣೇಂದ್ರಯ್ಯ

೩ General Psychology — Hans Raj Bhatia

೪ Child Development — Elizabet

೫ ಕನ್ನಡ ಶಿಶುಪ್ರಾಸಗಳು — ಸಂ. ರಾಗೌ.

——

ಕಲಬುರ್ಗಿ ಜಿಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ಮೂಡಿಬರುತ್ತಿರುವ ಪ್ರಮುಖ ಧುರೀಣತ್ವದ ಮಾದರಿ*

● ಸಿ. ಆರ್. ಬಡಾ

೧. ಪ್ರಸ್ತಾವನೆ :

ಅಸ್ತಿತ್ವದಲ್ಲಿರುವ ರಾಜಕೀಯ ಪದ್ಧತಿಗಳ ಮೂಲಕ ಗ್ರಾಮಾಂತರ ಪ್ರದೇಶಗಳ ಜನಜೀವನ ಮಟ್ಟವನ್ನು ಉತ್ತಮಗೊಳಿಸಲು ಸರಕಾರವು ಪ್ರಾರಂಭಿಸಿದ ಹಲವಾರು ಬೃಹತ್ ಯೋಜನೆಗಳಿಂದ ಉಂಟಾಗುತ್ತಿರುವ ಬದಲಾವಣೆಗಳ ಪರಿಸರದಲ್ಲಿ ಪಂಚಾಯತಿ ರಾಜ್ಯದಲ್ಲಿ ಮೂಡಿಬರುತ್ತಿರುವ ಪ್ರಮುಖ ಧುರೀಣತ್ವದ ಬಗ್ಗೆ ವಿಶ್ಲೇಷಿಸಿ ಅಭ್ಯಸಿಸುವದು ಇಂದು ಅತಿ ಮಹತ್ವವೆನಿಸಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೇವಲ ಗ್ರಾಮ ಪಂಚಾಯತಿಗಳ ಮೂಲಕವೇ ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕಿಳಿಸಬಹುದು. ಆದುದರಿಂದ ಹಳ್ಳಿಗಳ ಅಭಿವೃದ್ಧಿಯ ಪ್ರಮುಖ ಅಂಗವಾದ ಗ್ರಾಮಪಂಚಾಯತಿಯ ನಾಯ

---

* ಈ ಅಧ್ಯಯನದಲ್ಲಿ "ಪ್ರಮುಖ ಧುರೀಣತ್ವ" ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎಂದು ಪ್ರಾಯೋಗಿಕವಾಗಿ ಕಲ್ಪಿಸಿಕೊಳ್ಳಲಾಗಿದೆ. ಇದೇ ಮಾದರಿಯ ಅಧ್ಯಯನಗಳಾದ (ಎಸ್. ಆರ್. ಇನಾಮದಾರ, ಡಾ. ಆರ್. ಸಿ. ಪ್ರಸಾದ) 'ಪ್ರಮುಖ ಧುರೀಣತ್ವ' ಸಿದ್ಧಾಂತವನ್ನು ಸಾಕಷ್ಟು ಆಧಾರಾಂಶಗಳಿಂದ ಸಿದ್ಧಪಡಿಸಿದ್ದಾರೆ).

ಈ ಅಧ್ಯಯನದ ವಿವಿಧ ಹಂತಗಳಲ್ಲಿ ಸಹಾಯ ಮಾಡಿದ ಶ್ರೀ ಬಿ. ಜಿ. ಪಾಟೀಲ, ಆರ್. ಎಂ. ಸಾಸನೂರ, ಆರ್. ವ್ಹಿ. ಬಿರಾದಾರ ಅವರಿಗೆ ಲೇಖಕರು ಋಣಿಯಾಗಿರುವರು. ಈ ಅಧ್ಯಯನವು ವಿಶ್ವವಿದ್ಯಾಲಯ ಧನಸಹಾಯ ಆಯೋಗ, ದೆಹಲಿಯವರ ಪೋಷಣೆಯಿಂದ ಕೈಕೊಂಡ ಬೃಹತ್ ಅಧ್ಯಯನದ ಒಂದು ಅಂಗವಾಗಿರುವುದು.

ಕತ್ವವು ಇಂತಹ ಅಭಿವೃದ್ಧಿಯ ಕಾರ್ಯಗಳಲ್ಲಿ ಪ್ರಮುಖವಾದ ಪಾತ್ರವನ್ನಾಡುತ್ತದೆ. ಮೂಡಿಬರುತ್ತಿರುವ ಧುರೀಣತ್ವವು ಬದಲಾವಣೆಗೆ ಅನುಗುಣವಾಗಿ, ಪ್ರಗತಿಪರವಾಗಿ, ಶಕ್ತಿಯುತವಾಗಿ ಮತ್ತು ಭವಿಷ್ಯತ್ತಿನ ಮುನ್ನೋಟ ಹೊಂದಿದ್ದರೆ ಮಾತ್ರ ಗ್ರಾಮೀಣ ಭಾರತದ ಸಾಮಾಜಿಕ ಮತ್ತು ಆರ್ಥಿಕ ರಂಗಗಳಲ್ಲಿ ಗಣನೀಯವಾದ ಶಾಶ್ವತ ಬದಲಾವಣೆಗಳುಂಟಾಗುವಲ್ಲಿ ಯಾವ ಸಂದೇಹವಿಲ್ಲ.

೨. ಅಧ್ಯಯನದ ಗುರಿ:

ಪಂಚಾಯತ ರಾಜ್ಯದ ಪ್ರಮುಖ ಧುರೀಣತ್ವದ ಅಧ್ಯಯನವು ಕೆಲವು ವರ್ಷಗಳಿಂದ ಸಮಾಜಶಾಸ್ತ್ರಜ್ಞರಿಗೆ ಆಕರ್ಷಣೀಯವಾದ ಒಂದು ಪ್ರಾಯೋಗಿಕ ಅಂಗವಾಗಿದೆ. ಈಗಾಗಲೇ ಸಾಕಷ್ಟು ಪ್ರಾಯೋಗಿಕ ಅಧ್ಯಯನಗಳು (Empirical studies) (ಎ. ಆರ್. ಬೀಲ್ಸ, ೧೯೬೩; ಆರ್. ಸಿ. ಪ್ರಸಾದ, ೧೯೭೦; ವ್ಹಿ. ಎಮ್. ಸಿರಸಿಕರ, ೧೯೭೦; ಕೆ. ನೀಲಾದ್ರಿರಾಜು, ೧೯೭೧; ಎಸ್. ಆರ್. ಮೆಹತಾ, ೧೯೭೨; ಎಂ. ಪಿ. ಸಿಂಗ ಮತ್ತು ಆರ್. ಪಿ. ಮಿಶ್ರಾ ೧೯೭೪) ಗ್ರಾಮೀಣ ನಾಯಕತ್ವದ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ ಅಂಶಗಳಲ್ಲಿ ಕಂಡು ಬಂದಿರುವ ಸ್ಥಿತ್ಯಂತರಗಳ ಬಗ್ಗೆ ಸಾಕಷ್ಟು ದಾಖಲೆಗಳನ್ನು ಒದಗಿಸಿರುವವು. "ಭಾರತೀಯ ಹಳ್ಳಿಗಳಲ್ಲಿಯ ಸಮಾಜ ಅಭಿವೃದ್ಧಿಯ ಜಾಗೃತಿ" ಎಂಬ ಅಖಿಲ ಭಾರತೀಯ ಪ್ರಾರಂಭಿಕ ವರದಿಯಲ್ಲಿ ಶ್ರೀ ಲಲಿತ್ ಕೆ. ಸೇನ್ ಮತ್ತು ಶ್ರೀ ಪ್ರದೀಪರಾಯ ಅವರು ವಿಕಾಸಗೊಳ್ಳುತ್ತಿರುವ ನಾಯಕತ್ವದ ಮುಖ್ಯ ಲಕ್ಷಣಗಳನ್ನೊಳಗೊಂಡ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಿದ್ದಾರೆ. ಡಾ. ಜಿ. ರಾಮರೆಡ್ಡಿ ಮತ್ತು ಕೆ. ಶೇಷಾದ್ರಿಯವರು (೧೯೭೨) ಆಂಧ್ರ ಪ್ರದೇಶದ ವರಂಗಲ್ ಜಿಲ್ಲೆಯಲ್ಲಿ ಸಮೀಕ್ಷಿಸಿದ ವರದಿಯನ್ವಯ ಗ್ರಾಮ ಪಂಚಾಯತದ ನಾಯಕತ್ವವು ಸಾಮಾಜಿಕ ಮತ್ತು ಆರ್ಥಿಕ ಬಲವುಗಳಿಂದ ಕೂಡಿದೆಯೆಂದು ಸಿದ್ಧಪಡಿಸಿದ್ದಾರೆ. ಕರ್ನಾಟಕ ರಾಜ್ಯದ ಮಂಗಳೂರು ಜಿಲ್ಹೆಯಲ್ಲಿ ಅಧ್ಯಯನ ಕೈಕೊಂಡ ಶ್ರೀ ಕೆ. ಎಸ್. ಭಟ್ಟ ಅವರೂ ಸಹ ಮೂಡುತ್ತಿರುವ ಹೊಸ ನಾಯಕ ಪೀಳಿಗೆಯು ಯುವಕರು, ಮತ್ತು ಜನಸಾಮಾನ್ಯರಕ್ಕಿಂತಲೂ ಹೆಚ್ಚು ಶೈಕ್ಷಣಿಕ ಅರ್ಹತೆ ಹೊಂದಿರುವರು ಹಾಗೂ ಆರ್ಥಿಕವಾಗಿ ಮುಂದುವರಿದವರೆಂದು ಉಲ್ಲೇಖಿಸಿದ್ದಾನೆ. ಅವರ ಅಧ್ಯಯನ ಅಥವಾ ಸಮೀಕ್ಷೆಯು ಕೇವಲ ಒಂದು ಜಿಲ್ಲೆಯ ಐದು ಗ್ರಾಮ ಪಂಚಾಯತಿಗಳಿಗೆ ಸೀಮಿತವಾಗಿರುವುದು. ಆದರೆ ರಾಜ್ಯಮಟ್ಟದ ಅಧ್ಯಯನಕ್ಕೆ ಸಾಕಷ್ಟು ಆಧಾರಾಂಶಗಳನ್ನು ಅದು ಒದಗಿಸುವದಿಲ್ಲ.

ಆದುದರಿಂದ ಈ ಸಮೀಕ್ಷೆಯು ಒಂದು ಜಿಲ್ಲೆಯ ಬಗ್ಗೆ ಪರಿಪೂರ್ಣವಾದ ಮತ್ತು ವಿಶಾಲ ದೃಷ್ಟಿಯನ್ನೊಳಗೊಂಡ ಅಧ್ಯಯನದ ಆವಶ್ಯಕತೆಯನ್ನೂ ಪರಿಗಣಿಸಿ ಈ ಒಂದು ಅಧ್ಯಯನವನ್ನು ಕೈಕೊಳ್ಳಲಾಯಿತು. ಗ್ರಾಮ ಪಂಚಾಯತದಲ್ಲಿಯ ಪ್ರಮುಖ ನಾಯಕತ್ವದ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯ ಸಂಬಂಧವನ್ನು ತಿಳಿಸುವದೇ ಈ ಅಧ್ಯಯನದ ಮುಖ್ಯ ಗುರಿ. ಪ್ರಮುಖವಾಗಿ ಕಲಬುರ್ಗಿ ಜಿಲ್ಲೆಯ ಗ್ರಾಮ ಪಂಚಾಯತಿಯ ನಾಯಕತ್ವದಲ್ಲಿ ವಯಸ್ಸು, ಜಾತಿ, ಶಿಕ್ಷಣ, ಭೂ ಹಿಡುವಳಿ, ಆದಾಯ, ಉದ್ಯೋಗ, ಕುಟುಂಬದ ಗಾತ್ರ ಮುಂತಾದವುಗಳು ನಾಯಕತ್ವ ನಿರ್ಮಾಣದಲ್ಲಿ ಯಾವ ರೀತಿಯಿಂದ ಪ್ರಮುಖವಾಗಿರುವವು ಎಂಬುದರ ಬಗ್ಗೆ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

೩. ವೈಧಾನಿಕ ಕ್ರಮ :

(ಅ) **ಕಾರ್ಯರೂಪಕ ವ್ಯಾಖ್ಯೆ :** ಈ ಅಧ್ಯಯನದಲ್ಲಿ ಪ್ರಮುಖ ಧುರೀಣತ್ವವನ್ನೂ ಅಪ್ರತ್ಯಕ್ಷವಾಗಿ ಚುನಾಯಿಸಲ್ಪಟ್ಟ, ನಾಮಕರಣ ಮಾಡಲ್ಪಟ್ಟ ಕಲಬುರ್ಗಿ ಜಿಲ್ಲೆಯ ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎಂದು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗಿದೆ.

(ಬ) **ಅಧ್ಯಯನದ ವ್ಯಾಪ್ತಿ :** ಈ ಅಧ್ಯಯನದಲ್ಲಿ ಕಲಬುರ್ಗಿ ಜಿಲ್ಲೆಯ ಎಲ್ಲ ೧೦ ತಾಲೂಕುಗಳ ಒಟ್ಟು ೭೪ ಗ್ರಾಮ ಪಂಚಾಯತಿಗಳಿಂದ ೭೪ ಪಂಚಾಯತಿ ಅಧ್ಯಕ್ಷರು ಮತ್ತು ೬೦ ಉಪಾಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.[೧] ಈ ಆಯ್ಕೆಯಲ್ಲಿ ಯಾವುದೇ ವಿಶೇಷ ತಾರತಮ್ಯವಿಲ್ಲದ ರೀತಿಯನ್ನು ಅನುಸರಿಸಲಾಗಿದೆ.

ನಿರ್ದಿಷ್ಟ ಅಂಕಿಸಂಖ್ಯೆಗಳ ದಾಖಲೆಗಳನ್ನು ಒದಗಿಸುವುದಕ್ಕೋಸ್ಕರ ಜಿಲ್ಲೆಯ ಎಲ್ಲ ಹತ್ತು ತಾಲೂಕುಗಳನ್ನೂ, ಭೌಗೋಲಿಕ ಸಾಮೀಪ್ಯ, ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನೊಳಗೊಂಡು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.[೨] ಈ ವಿಂಗಡಣೆಯನ್ನೂ ಕೇವಲ ಅಧ್ಯಯನದ ಅನುಕೂಲತೆಗಾಗಿ ಮಾಡಲಾಗಿದೆಯೇ ಹೊರತಾಗಿ ಬೇರೆ ಯಾವ ಸೈದ್ಧಾಂತಿಕ ಆಧಾರವೂ ಇಲ್ಲ.

---

೧. ಉಳಿದ ೧೪ ಉಪಾಧ್ಯಕ್ಷರನ್ನು ವಿವಿಧ ಕಾರಣಗಳಿಂದ ಈ ಅಧ್ಯಯನದಲ್ಲಿ ಸಂದರ್ಶಿಸಲಾಗಿಲ್ಲ. ಅಷ್ಟರಮಟ್ಟಿಗೆ ಈ ಅಧ್ಯಯನದ ನಿರ್ಣಯಗಳು ದೋಷಯುಕ್ತವಾಗಿರುವವು.

೨. ಪ್ರತಿ ತಾಲೂಕಿನಿಂದ ಒದಗಿ ಬಂದ ಸಂಖ್ಯೆ ಚಿಕ್ಕವಾಗಿದ್ದುದರ ಪ್ರಯುಕ್ತ ಸಂಖ್ಯಾಶಾಸ್ತ್ರಜ್ಞರ ಉಪದೇಶದಂತೆ ಜಿಲ್ಲೆಯ ಇಡೀ ೧೦ ತಾಲೂಕುಗಳನ್ನು ಅಧ್ಯಯನದ ಅನುಕೂಲತೆಗೋಸ್ಕರ ನಾಲ್ಕು ಗುಂಪುಗಳನ್ನಾಗಿ ಮಾಡಲಾಗಿದೆ.

ಭಾಗ 'ಅ' –	ಅಫಜಲ್‌ಪೂರ ಆಳಂದ	೧೮ ಅಧ್ಯಕ್ಷರು ೭ ಉಪಾಧ್ಯಕ್ಷರು
ಭಾಗ 'ಬ' –	ಚಿಂಚೋಳಿ, ಚಿತಾಪೂರ ಸೇಡಮ್	೨೪ ಅಧ್ಯಕ್ಷರು ೨೨ ಉಪಾಧ್ಯಕ್ಷರು
ಭಾಗ 'ಕ' –	ಕಲಬುರ್ಗಿ ಜೀವರ್ಗಿ	೧೧ ಅಧ್ಯಕ್ಷರು ೮ ಉಪಾಧ್ಯಕ್ಷರು
ಭಾಗ 'ಡ' –	ಶಹಾಪೂರ, ಶೋರಾಪೂರ ಯಾದಗೀರ	೨೩ ಅಧ್ಯಕ್ಷರು ೨೩ ಉಪಾಧ್ಯಕ್ಷರು

ಕ) ಆಧಾರಾಂಶಗಳ ಸಂಗ್ರಹಣೆ :

ನಾಯಕರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿನ್ನೆಲೆಗಳನ್ನೊಳಗೊಂಡ ವಿಶೇಷ ಮಾಹಿತಿಗಳನ್ನು ಒಂದು ವಿಶಿಷ್ಟವಾದ ಪ್ರಶ್ನೋತ್ತರ ವಿಧಾನದಿಂದ ಸಂಗ್ರಹಿಸಲಾಗಿದೆ. ಈ ಪ್ರಶ್ನೋತ್ತರ ಮಾಲೆಯನ್ನು ಪ್ರಯೋಗ ಪೂರ್ವದಲ್ಲಿ ಚೆನ್ನಾಗಿ ಪರೀಕ್ಷಿಸಿ ಖಚಿತಮಾಡಿಕೊಳ್ಳಲಾಗಿದೆ. ಪ್ರತಿಶತ (Percentage basis) ವಿಂಗಡಣೆಯ ಆಧಾರದ ಮೇಲೆ ಇದನ್ನು ಪೃಥಃಕ್ಕರಣ ಮಾಡಲಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ ಅಂಶಗಳು ಗ್ರಾಮೀಣ ನಾಯಕತ್ವ ನಿರ್ಮಾಣದಲ್ಲಿ ಯಾವ ರೀತಿಯ ಪ್ರಭಾವ ಬೀರುವವು ಮತ್ತು ನಾಯಕತ್ವಕ್ಕೂ ಹಾಗೂ ನಾಯಕರ ಹಿನ್ನೆಲೆ ಅಂಶಗಳಿಗೂ ಯಾವ ರೀತಿಯ ಸಂಬಂಧವಿದೆ ಎಂಬುದನ್ನು ನಿರ್ಧರಿಸಲು ಎರಡು ವಸ್ತುಗಳನ್ನು ಸಂಕಲ್ಪಿಸುವ ಸಂಬಂಧದ ವಿಧಾನದಿಂದ ಚಿ ಸ್ಕ್ಯಾಯರ (Chi squre test of significance) ಪರೀಕ್ಷೆಯನ್ನು ಬಳಸಲಾಗಿದೆ.

೪. ನಿರ್ಣಯಗಳು :

೧. **ನಾಯಕರ ವಯೋಮಾನ :** ಸಾಮಾನ್ಯವಾಗಿ ಮಧ್ಯಮ ವರ್ಗದವರು ಮತ್ತು ವಯೋವೃದ್ಧರು. ಹಳ್ಳಿಗಳಲ್ಲಿ ಗ್ರಾಮಪಂಚಾಯತಿಯ ನಾಯಕತ್ವವನ್ನು ವಹಿಸುವದು ನಮ್ಮ ಭಾರತದ ಸಾಮಾಜಿಕ ಪರಂಪರೆಯಾಗಿ

ಬಂದಿದೆ. ಯೋಜನಾ ಆಯೋಗದ ವರದಿ (೧೯೫೫) ಮತ್ತು ಎಸ್. ಕೆ. ಶ್ರೀವಾಸ್ತವ (೧೯೬೫), ಎಂ. ಪಿ. ಸಿಂಗ ಮತ್ತು ಆರ್. ಪಿ. ಮಿಶ್ರಾ (೧೯೭೩); ಅವರ ವರದಿಗಳು ಸಹ ಪ್ರಾಯೋಗಿಕವಾಗಿ ಈ ವಿಚಾರದ ಬಗ್ಗೆ ಖಚಿತಪಡಿಸಲ್ಪಟ್ಟಿವೆ. ಆದಾಗ್ಯೂ ಡಾ. ಎಂ. ವ್ಹಿ. ಮಾಥೂರ, (೧೯೬೬); ಡಾ. ಕೆ. ರಂಗರಾವ, (೧೯೬೮); ಮತ್ತು ಡಾ. ಜಿ. ರಾಮರೆಡ್ಡಿ ಮತ್ತು ಕೆ. ಶೇಷಾದ್ರಿ, ೧೯೭೩; ಅವರ ವರದಿಗಳು ಗ್ರಾಮ ಪಂಚಾಯತಿಯ ನಾಯಕತ್ವವನ್ನು ಯುವ ನಾಯಕರೇ ವಹಿಸಿರುವರೆಂದು ಎತ್ತಿತೋರಿಸಿವೆ. ಹೆಚ್ಚಾಗಿ ಯುವಕರೇ ನಾಯಕರಾಗಿರುವರೆಂದು ಗ್ರಾಮೀಣ ಜನರ ಅಭಿಪ್ರಾಯವನ್ನು ಡಾ. ಎನ್. ಆರ್. ಇನಾಮದಾರ, (೧೯೭೦); ಡಾ. ಎಲ್. ಕೆ. ಸೇನ್ ಮತ್ತು ಪ್ರದೀಪರಾಯ, (೧೯೬೬); ಅವರು ತಮ್ಮ ವರದಿಗಳಲ್ಲಿ ಈ ಅಂಶವನ್ನೂ ಪ್ರಮಾಣಾಧಾರಗಳಿಂದ ಸಿದ್ಧಪಡಿಸಿದ್ದಾರೆ. ಇವರಿಂದ ಗ್ರಾಮ ಪಂಚಾಯತಿಗಳ ನಾಯಕತ್ವದಲ್ಲಿ ಸಾಕಷ್ಟು ಬದಲಾವಣೆಗಳಾಗಿ ಇಂದು ಒಂದು ಹೊಸ ಮಾದರಿಯ ಧುರೀಣತ್ವ ಪದ್ಧತಿ ಅಸ್ತಿತ್ವದಲ್ಲಿ ಬರುತ್ತಿದೆ ಎಂದು ಹೇಳಬಹುದು. ಆದಾಗ್ಯೂ ಕಲಬುರ್ಗಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ನಾಯಕತ್ವವನ್ನೂ ಕೇವಲ ವಯಸ್ಸಿನ ಆಧಾರದ ಮೇಲೆ ನಿರ್ಣಯಿಸುವುದು ಕಷ್ಟಸಾಧ್ಯ. ನಾಯಕತ್ವ ಮತ್ತು ನಾಯಕರ ವಯಸ್ಸುಗಳಲ್ಲಿ ಯಾವುದೇ ಪೂರಕ ಸಂಬಂಧವನ್ನೂ ಈ ಅಧ್ಯಯನ ಒದಗಿಸುವುದಿಲ್ಲ.

ಪುಟ ೧೫೫ ರಲ್ಲಿಯ ಕೋಷ್ಟಕದ ಅನುಸಾರವಾಗಿ ಪ್ರತಿಶತ ೩೧% ಪ್ರಮುಖ ಧುರೀಣರು ಯುವಕರಾಗಿದ್ದರೆ, ೫೪% ನಾಯಕರು ಮಧ್ಯ ವಯಸ್ಕರು ಮತ್ತು ೧೫% ನಾಯಕರು ೫೧ ವರ್ಷ ಮೇಲ್ಪಟ್ಟವರಿರುವರು. ಮೇಲಿನ ಅಂಕಿಸಂಖ್ಯೆಗಳು, ಇನ್ನೂ ಗ್ರಾಮಾಂತರ ಪ್ರದೇಶಗಳಲ್ಲಿ, ನಾಯಕತ್ವವು ವಯಸ್ಸಿನ ಒಂದು ವಿಶಿಷ್ಟ ಆಧಾರದ ಮೇಲೆ ಅವಲಂಬಿಸಿರುವದು ಎಂದು ತಿಳಿದು ಬರುವದು (ಮಿಶ್ರಾ, ೧೯೭೩). ನಮ್ಮ ಗ್ರಾಮಾಂತರ ಸಮಾಜಗಳಲ್ಲಿಯ ಸಾಂಪ್ರದಾಯಿಕ ವಿಚಾರಗಳಿಂದಾಗಲೀ ಅಥವಾ ಇನ್ನಾವುದೇ ಹಳೆಯ ಪದ್ಧತಿಗನುಗುಣವಾಗಿಯಾಗಲೀ, ಅಥವಾ ಜನರ ಅನುಭವವು ಮತ್ತು ತರಬೇತಿಯ ನ್ಯೂನತೆಗಳಿಂದಾಗಲೀ ಇಂದು ೫೪% ಪ್ರಮುಖ ಧುರೀಣರು ಮಧ್ಯ ವಯಸ್ಕರಾಗಿದ್ದುದು ಸ್ಪಷ್ಟವಾಗಿ ಕಂಡುಬರುವುದು.

೨. **ನಾಯಕರ ಜಾತಿ** : ಸಾಂಪ್ರದಾಯಿಕವಾಗಿ ನಮ್ಮ ಸಮಾಜದ ಗ್ರಾಮಾಂತರ ಪ್ರದೇಶಗಳಲ್ಲಿ ಜಾತಿಯು ಒಂದು ಪ್ರಬಲವಾದ ಮತ್ತು ಶಕ್ತಿಯುತವಾದ ಅಂಗವಾಗಿದೆ. ನಾಯಕತ್ವ ನಿರ್ಧಾರದಲ್ಲಿ ಜಾತಿಯೇ ಒಂದು ಅಗ್ರಗಣ್ಯವಾದ ಶಕ್ತಿಯಾಗಿರುವದೆಂದು ಡಾ. ಎಂ. ಎನ್. ಶ್ರೀನಿವಾಸ್ (೧೯೫೫) ಹೇಳಿದ ವಿಚಾರವನ್ನು ಹೆಚ್ಚಾಗಿ ಎಲ್ಲ ಸಂಶೋಧಕರು ಯಾವುದೇ ತಾರತಮ್ಯವಿಲ್ಲದೆ

ಕೋಷ್ಟಕ ೧: ನಾಯಕರ ವಯಸ್ಸು

(ನಂ. ೧೩೪)

ಕ್ರ. ನಂ.	ನಾಯಕರ ವಯಸ್ಸು	ವಯಸ್ಸು ಆಧಾರದ ಮೇಲೆ ತಾಲೂಕುಗಳಲ್ಲಿ ನಾಯಕರ ವಿಂಗಡಣೆ				
		'ಅ'	'ಬ'	'ಕ'	'ಡ'	ಒಟ್ಟು
೧	೨	೩	೪	೫	೬	೭
೧	ಯುವಕರು ೩೫ (ವರ್ಷ ಕೆಳಗಿನ)	೫(೨೦%)	೧೫(೩೪%)	೭(೩೭%)	೧೪(೩೦%)	೪೧(೩೧)
೨	ಮಧ್ಯ ವಯಸ್ಕರು (೩೬ ರಿಂದ ೫೦)	೧೪(೫೬%)	೨೪(೫೫%)	೮(೪೨%)	೨೬(೫೭%)	೭೨(೫೪)
೩	ವೃದ್ಧರು (೫೧ ವರ್ಷದ ಮೇಲ್ಪಟ್ಟು)	೬(೨೪%)	೫(೧೧%)	೪(೨೧%)	೬(೧೩%)	೨೧(೧೫)
	ಒಟ್ಟು	೨೫(೧೦೦)	೪೪(೧೦೦)	೧೯(೧೦೦)	೪೬(೧೦೦)	೧೩೪(೧೦೦)

(ಪ್ರತಿಶತ ಕಂಸಿನಲ್ಲಿ)

$X^2 = 4.060$ with 6 df, but X^2 $0.05 = 12.592$ with 6 df. (chi squre is not significant at 5% probability level)

ಮತ್ತು ವಿಮರ್ಶೆ ಇಲ್ಲದೇ ಸ್ವೀಕರಿಸಿರುವರು. ಡಾ. ಇಕ್ಬಾಲ ನರಿನ್, ೧೯೬೪; ಡಾ. ವ್ಹಿ. ಎಮ್. ಸಿರಸಿಕರ್, ೧೯೭೨; ಡಾ. ಎಸ್. ಕೆ. ಶ್ರೀವತ್ಸವ, ೧೯೬೫; ಡಾ. ಕಮಲ್ ಕೃಷ್ಟ, ೧೯೬೭; ಡಾ. ಜಿ. ರಾಮರೆಡ್ಡಿ ಮತ್ತು ಡಾ. ಕೆ. ಶೇಷಾದ್ರಿ, ೧೯೭೨; ಹಾಗೂ ಡಾ. ಎಸ್. ಆರ್. ಮೆಹತಾ, ೧೯೭೩; ತಮ್ಮ ವರದಿಗಳಲ್ಲಿ ಮೇಲ್ಜಾತಿಯ ಜನರೇ ಗ್ರಾಮಾಂತರ ಪ್ರದೇಶಗಳಲ್ಲಿ ನಾಯಕತ್ವದ ಏಕಸ್ವಾಮ್ಯತ್ವವನ್ನು ಪಡೆದಿದ್ದಾರೆಂದು ಸಾಕಷ್ಟು ಪುರಾವೆಗಳನ್ನು ಒದಗಿಸಿದ್ದಾರೆ. ಆದರೆ ಡಾ. ಎಸ್. ಸಿ. ದುಬೆ ಮತ್ತು ಡಾ. ಈಶ್ವರನ್ ಅಲ್ಲದೇ ಇನ್ನುಳಿದ ಕೆಲ ಸಂಶೋಧಕ ಪಂಡಿತರು ಟೀಕಿಸಿದ್ದರೂ ಸಹ ಗ್ರಾಮೀಣ ನಾಯಕತ್ವದ ವಿಷಯದಲ್ಲಿ ಈ ವಿಚಾರವು ಇನ್ನೂ ಸಂಶಯಾತೀತವಾಗಿಯೇ ಉಳಿದಿದೆ. ಈ ಅಧ್ಯಯನದಲ್ಲಿಯೂ ಸಹ ನಾಯಕತ್ವದ ನಿರ್ಧಾರದಲ್ಲಿ ಜಾತಿಯೇ ಅತಿ ಪ್ರಾಮುಖ್ಯವೆಂದು ಕಂಡುಬಂದಿದೆ.

ಪುಟ ೧೫೭ ರಲ್ಲಿಯ ಕೋಷ್ಟಕದಲ್ಲಿ ೬೧% ನಾಯಕರು ಮೇಲಿನ ಜಾತಿಯವರು[೧] ಮತ್ತು ೩೯% ನಾಯಕರು ಇನ್ನುಳಿದ ಜಾತಿ[೨]ಯವರು. ಉಳಿದ ೧.೪೯% ನಾಯಕರು ತಮ್ಮ ಜಾತಿಯನ್ನು ಹೊರಗೆಡಹಲಿಲ್ಲ. ಮೇಲಿನ ಅಂಕಿಸಂಖ್ಯೆಗಳಿಂದ ಗ್ರಾಮೀಣ ನಾಯಕತ್ವದ ನಿರ್ಧಾರವು ಪ್ರಬಲವಾಗಿ ಜಾತಿಯನ್ನು ಅವಲಂಬಿಸಿರುವದು ಸ್ಪಷ್ಟವಾಗಿ ವಿದಿತವಾಗುವುದು. ಕಲಬುರ್ಗಿ ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿ ಪ್ರಮುಖ ಧುರೀಣತ್ವ ಮತ್ತು ಅವರ ಜಾತಿ ಪರಸ್ಪರ ನಿಕಟ ಸಂಬಂಧ ಹೊಂದಿದೆ ಎಂಬುದನ್ನು ಚೀ ಸ್ಕ್ವಾಯರ್ (chi squre) ವಿಧಾನದಿಂದಲೂ ಸಾದರಪಡಿಸಲಾಗಿದೆ.

೩. ನಾಯಕರ ಶಿಕ್ಷಣ ಮಟ್ಟ : ನಾಯಕತ್ವ ನಿರ್ಮಾಣದಲ್ಲಿ ಶಿಕ್ಷಣವು ಸಹ ಮುಖ್ಯಾಂಶವೆಂದು ಪರಿಗಣಿಸಲಾಗಿದೆ. ಸಾಮಾಜಿಕ ಸಮಸ್ಯೆಗಳನ್ನೂ ಅರಿಯುವದರಲ್ಲಿ ಮತ್ತು ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ಜನತೆಯ ಮುಂದಿಡಲು ಶಿಕ್ಷಣವು ನಾಯಕರಿಗೆ ಒಂದು ವರದಾನ. ಅಶಿಕ್ಷಿತ

---

೧ ಬ್ರಾಹ್ಮಣರು ಮತ್ತು ಲಿಂಗಾಯತರು ಮೇಲ್ಜಾತಿಯ ಜನರೆಂದು ಬಳಸಿಕೊಳ್ಳಲಾಗಿದೆ.

೨ ಕೋಳಿ, ಕುರುಬ, ಈಳಿಗ, ಮರಾಠಾ, ರಜಪೂತ, ಕ್ಷತ್ರಿಯ, ಆರ್ಯ, ಉಪ್ಪಾರ, ಬೇಡರು, ಅಡ್ಡಿ, ಮುಸ್ಲಿಮರು, ವೈಶ್ಯರು, ಜೈನರು ಮತ್ತು ಹರಿಜನರು ಇವರು ಉಳಿದ ಜಾತಿಯಲ್ಲಿ ಬಳಸಿಕೊಳ್ಳಲಾಗಿದೆ. ಈ ಜಾತಿಗಳ ಸಂಖ್ಯೆ ಕಡಿಮೆ ಇದ್ದ ಕೋಸ್ಕರ ಮತ್ತು ಸಮರ್ಪಕವಾದ ನಿರ್ಣಯಗಳಿಗೋಸ್ಕರ ಸಂಖ್ಯಾಶಾಸ್ತ್ರಜ್ಞರ ಉಪದೇಶದಂತೆ ಮೇಲಿನ ಜಾತಿಗಳನ್ನೂ ಒಂದು ಗುಂಪಾಗಿ ವಿಂಗಡಿಸಿದೆ-ಕೇವಲ ಅಧ್ಯಯನದ ಅವಶ್ಯಕತೆಗಾಗಿ.

ಕೋಷ್ಟಕ ೨ : ನಾಯಕರ ಜಾತಿ

(ನಂ. ೧೩೪)

ಕ್ರ. ನಂ.	ಜಾತಿಗಳು	ಜಾತಿ ಆಧಾರಿತ ನಾಯಕರ ಹಂಚಿಕೆ (ಬ್ಲಾಕಗಳಲ್ಲಿ)				
		'ಅ'	'ಬ'	'ಕ'	'ಡ'	ಒಟ್ಟು
೧	೨	೩	೪	೫	೬	೭
೧	ಮೇಲ್ಜಾತಿ (Upper Caste)	೨೧(೮೪%)	೩೧(೭೨%)	೧೨(೬೩%)	೧೬(೩೬%)	೮೦(೬೧%)
೨	ಇತರ ಜಾತಿ (Other Castes)	೪(೧೬%)	೧೨(೨೮%)	೭(೩೭%)	೨೯(೬೪%)	೫೨(೩೯%)
	ಒಟ್ಟು	೨೫(೧೦೦)	೪೩(೧೦೦)	೧೯(೧೦೦)	೪೫(೧೦೦)	೧೩೨(೧೦೦)

(ಪ್ರತಿಶತ : ಕಂಸಿನಲ್ಲಿ)

$X^2 = 19.980$ with 3 df. ಆದರೆ $X^2 = 0.05 = 7.815$ with (Chi squre is significant at 5% probablity level 3df).

ನಾಯಕನು ಇಂದಿನ ಕ್ಲಿಷ್ಟವಾದ ಸಮಸ್ಯೆಗಳನ್ನು ಗ್ರಹಿಸಲು ಅಸಮರ್ಥನಾಗಬಹುದು. ಡಾ. ಎಸ್. ಆರ್. ಮೆಹತಾ, ೧೯೭೩; ಡಾ. ಎಂ. ಪಿ. ಸಿಂಗ ಮತ್ತು ಆರ್. ಸಿ. ಮಿಶ್ರಾ, ೧೯೭೪; ಅವರು ತಮ್ಮ ವರದಿಗಳಲ್ಲಿ ನಾಯಕತ್ವ ನಿರ್ಧಾರದಲ್ಲಿ ಶಿಕ್ಷಣವು ಗ್ರಾಮಾಂತರ ಪ್ರದೇಶಗಳಲ್ಲಿ ವಿವಾದಾಸ್ಪದ ಸಮಸ್ಯೆ ಮತ್ತು ನಾಯಕತ್ವ ನಿರ್ಧಾರದಲ್ಲಿ ಗೌಣ ವಿಷಯವೆಂಬ ಅಭಿಪ್ರಾಯ ಹೊಂದಿದ್ದಾರೆ. ಅಶಿಕ್ಷಿತ ಅಥವಾ ಅಲ್ಪ ಶಿಕ್ಷಣ ಹೊಂದಿದ ವ್ಯಕ್ತಿಯು ಗ್ರಾಮ ಪಂಚಾಯತಿಯ ಅಧ್ಯಕ್ಷ ಉಪಾಧ್ಯಕ್ಷನಾಗಲೂ ಯಾವುದೇ ಅಡೆತಡೆ ಇಲ್ಲ ಎಂಬ ಅಭಿಪ್ರಾಯವನ್ನು ಸಹ ಹೊಂದಿರುವರು.

ಆದರೆ ಈ ಅಧ್ಯಯನದಲ್ಲಿ ನಾಯಕರ ಶಿಕ್ಷಣ ಮಟ್ಟ ಮತ್ತು ನಾಯಕತ್ವದಲ್ಲಿ ಯಾವುದೇ ಪೂರಕವಾದ ಸಂಬಂಧವಿಲ್ಲವೆಂದು ಕಂಡುಬರುವದು. ಹಿಂದುಳಿದ ಜಿಲ್ಲೆಯಾದ ಇಲ್ಲಿ ಶೈಕ್ಷಣಿಕ ಸೌಲಭ್ಯಗಳ ಕೊರತೆಯಿಂದಾಗಲೀ ಅಥವಾ ಪಾಲಕರಲ್ಲಿ ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಇದ್ದ ಉದಾಸೀನತೆ ಮುಂತಾದವುಗಳ ಕಾರಣದಿಂದಾಗಲಿ ಹೀಗಾಗಿರಬಹುದಾಗಿದೆ. (ಗೆಝಿಟಿಯರ ಆಫ್ ಇಂಡಿಯಾ, ಗುಲಬರ್ಗಾ ಜಿಲ್ಲಾ, ೧೯೬೬)

ಪುಟ ೧೫೯ ರಲ್ಲಿಯ ಕೋಷ್ಟಕದಲ್ಲಿ ೮೮% ನಾಯಕರು ಸುಶಿಕ್ಷಿತರೆಂದು ಮತ್ತು ೨% ನಾಯಕರು ಯಾವುದೇ ಶಿಕ್ಷಣ ಹೊಂದದವರೆಂದು ಕಂಡುಬರುವುದು. ಒಟ್ಟು ೪೬% ನಾಯಕರು ಪ್ರಾಥಮಿಕ ಶಿಕ್ಷಣ ಹೊಂದಿದವರಾದರೆ, ೨೮% ನಾಯಕರು ಮಿಡ್ಲಸ್ಕೂಲವರೆಗೆ ಓದಿದವರಾಗಿರುವರು ಮತ್ತು ಕೇವಲ ೨೫% ನಾಯಕರು ಹೈಸ್ಕೂಲ ಮತ್ತು ಹೆಚ್ಚಿನ ಶಿಕ್ಷಣಾರ್ಹತೆಯನ್ನು ಹೊಂದಿದವರಾಗಿರುವರು. ಇವರಲ್ಲಿ ಕೆಲವರೇ ಮಾತ್ರ ಪದವೀಧರರಾಗಿರುವರು.

ಆದರೆ ಈ ಅಧ್ಯಯನದಲ್ಲಿ ನಾಯಕರ ಶಿಕ್ಷಣಾರ್ಹತೆ ಮತ್ತು ನಾಯಕತ್ವದಲ್ಲಿ ಯಾವುದೇ ಪೂರಕ ಸಂಬಂಧವಿಲ್ಲವೆಂದು ಚಿ ಸ್ಕ್ವಾಯರ್ ಪರೀಕ್ಷಾ ವಿಧಾನವು ತೋರಿಸಿಕೊಡುವುದು. ನಮ್ಮ ಈ ತೀರ್ಮಾನಗಳು ಇದೇ ಮಾದರಿಯ ಅಧ್ಯಯನಗಳಾದ ಡಾ. ಎಂ. ಪಿ. ಸಿಂಗ ಮತ್ತು ಆರ್. ಪಿ. ಮಿಶ್ರಾ ಅವರ ತೀರ್ಮಾನಗಳೊಂದಿಗೆ ("ಬಹುಜನರು ಉಚ್ಚ ಶಿಕ್ಷಣ ಪಡೆಯುವುದು ತೀರ ಇತ್ತೀಚಿನ ಸಂಗತಿ") ನಿಕಟವಾಗಿ ಹೋಲುವವು.

ಆದಾಗ್ಯೂ ಕಲಬುರ್ಗಿ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಪಂಚಾಯತ ರಾಜ್ಯ ಸಂಘ ಸಂಸ್ಥೆಗಳಲ್ಲಿ ಬಹುಸಂಖ್ಯಾತ ಪ್ರಮುಖ ಧುರೀಣರು ಸುಶಿಕ್ಷಿತರಾಗಿರುವದು

ಕೋಷ್ಟಕ ೩ : ನಾಯಕರ ಶೈಕ್ಷಣಿಕ ಮಟ್ಟ

(ನಂ. ೧೩೪)

ಕ್ರ. ನಂ.	ನಾಯಕರ ಶೈಕ್ಷಣಿಕ ಮಟ್ಟ	ಶೈಕ್ಷಣಿಕ ಮಟ್ಟ ಆಧಾರಿತ ತಾಲೂಕುಗಳಲ್ಲಿ ನಾಯಕರ ವಿಂಗಡಣೆ				
		'ಅ'	'ಬ'	'ಕ'	'ಡ'	ಒಟ್ಟು
೧	೨	೩	೪	೫	೬	೭
೧	ಪ್ರೈಮರಿವರೆಗೆ	೧೩(೫೨%)	೧೭(೩೯%)	೭(೩೭%)	೨೫(೫೪%)	೬೨(೪೬%)
೨	ಮಿಡ್ಲಸ್ಕೂಲವರೆಗೆ	೪(೧೬%)	೧೭(೩೯%)	೫(೨೬%)	೧೧(೨೪%)	೩೭(೨೮%)
೩	ಹೈಸ್ಕೂಲ ಮತ್ತು ಹೆಚ್ಚಿನ	೮(೩೨%)	೧೦(೨೩%)	೭(೩೭%)	೧೦(೨೨%)	೩೫(೨೬%)
	ಒಟ್ಟು	೨೫(೧೦೦)	೪೪(೧೦೦)	೧೯(೧೦೦)	೪೬(೧೦೦)	೧೩೪(೧೦೦)

(ಪ್ರತಿಶತ : ಕಂಸಿನಲ್ಲಿ)

$X^2 = 6.874$ with 6 df, but X^2 0.05 = 12.592 with 6 df. (Chi squre is not significant at 5% probability level).

ಒಂದು ಶುಭ ಚಿಹ್ನೆ ಎಂದು ಹೇಳಬಹುದು. ಇದೊಂದು ಭಾರತದ ರಾಜಕೀಯ ಮತ್ತು ಪ್ರಜಾಪ್ರಭುತ್ವದ ತೀವ್ರಗತಿ ಬೆಳವಣಿಗೆಗೆ ಹಿತಕರ ಮತ್ತು ಆರೋಗ್ಯ ವೆಂದು ಹೇಳಬಹುದು.

೪. ನಾಯಕನ ಭೂ-ಹಿಡುವಳಿ ಗಾತ್ರ: ಪ್ರಮುಖ ಧುರೀಣತ್ವ ನಿರ್ಮಾಣದಲ್ಲಿ ಭೂ ಸ್ವಾಮಿತ್ವವು ಮತ್ತು ಭೂ-ಹಿಡುವಳಿಯ ಗಾತ್ರವು ಬಹು ಮುಖ್ಯವಾದ ನಿರ್ಣಾಯಕ ಅಂಶವಾಗಿದ್ದುದು ಈಗಾಗಲೇ ಕೈಕೊಂಡ (ಡಾ. ಎಸ್. ಸಿ. ದುಬೆ, ೧೯೫೫, ಡಾ. ಲೇವಿಸ್ ಆಸ್ಕರ, ೧೯೫೮; ಡಾ. ಎಂ. ಎನ್. ಶ್ರೀನಿವಾಸ) ಅಧ್ಯಯನಗಳಲ್ಲಿ ಆಧಾರಾಂಶಗಳಿಂದ ಖಚಿತಪಡಿಸ ಲ್ಪಟ್ಟ ಸಿದ್ಧಾಂತವಾಗಿವೆ. ಭೂ-ಹಿಡುವಳಿಯ ಗಾತ್ರದೊಂದಿಗೆ, ಅದರ ಆದಾಯ ಮತ್ತು ನಾಯಕನ ಆರ್ಥಿಕ ಮಟ್ಟವೂ ಸಹ ಅದಕ್ಕೆ ನಿಕಟವಾಗಿ ಪೂರಕವಾದ ಅಂಶವೆಂದು ಡಾ. ವ್ಹಿ. ಎಮ್. ಸಿರಸಿಕರ (೧೯೭೦) ತಮ್ಮ ಇತ್ತೀಚಿನ ಗ್ರಂಥ ದಲ್ಲಿ ಸಾದರಪಡಿಸಿದ್ದಾರೆ. ಆದರೆ ಅವರು ಈ ಅಂಶಗಳ ಬಗ್ಗೆ ಹೆಚ್ಚಿನ ದೀರ್ಘ ವಾದ ಸಂಶೋಧನೆ ಮಾಡದೆ ಅಂತಿಮ ತೀರ್ಮಾನಕ್ಕೆ ಬಂದಿಲ್ಲ. ಆದರೆ ಡಾ. ಎಸ್. ಆರ್. ಮೆಹತಾ (೧೯೭೨) ಅವರು ತಮ್ಮ "ಗ್ರಾಮೀಣ ನಾಯಕತ್ವ" ಎಂಬ ಗ್ರಂಥದಲ್ಲಿ ಭೂ ಸ್ವಾಮಿತ್ವದೊಂದಿಗೆ ನಾಯಕನ ಸಮಾಜದಲ್ಲಿಯ ಸಾಮಾ ಜಿಕ ಮತ್ತು ಸಾಂಸ್ಕೃತಿಕ ಸ್ಥಾನಮಾನವೂ ನಾಯಕತ್ವ ನಿರ್ಮಾಣದಲ್ಲಿ ಬಹುಗಣ ನೀಯ ಅಂಶವೆಂದು ಉಲ್ಲೇಖಿಸಿದ್ದಾರೆ. ಆದರೆ ಈ ಅಧ್ಯಯನದಲ್ಲಿ ನಾಯಕರ ಭೂ-ಹಿಡುವಳಿಗಾತ್ರವು ಮತ್ತು ನಾಯಕತ್ವವು ಪರಸ್ಪರ ಯಾವುದೇ ನಿಕಟ ಸಂಬಂಧ ಹೊಂದದಿರುವದು ಕಂಡುಬರುವುದು.

ಪುಟ ೧೬೮ ರಲ್ಲಿಯ ಕೋಷ್ಟಕದಂತೆ ೨೭% ನಾಯಕರು ೨೦ ಎಕರೆ ಯಿಂದ ಕಡಿಮೆ ಭೂಸ್ವಾಮಿತ್ವ ಹೊಂದಿದ್ದರೆ, ೪೬% ನಾಯಕರು ೨೧ ರಿಂದ ೫೦ ಎಕರೆಯುವರೆಗೆ ಭೂಮಿಯನ್ನು ಹೊಂದಿರುವರು. ಆದರೆ ಕೇವಲ ೨೩% ನಾಯಕರ ಭೂಮಿಯು ೫೧ ಎಕರೆ ಮೇಲ್ಪಟ್ಟಿರುವುದು. ಒಟ್ಟಿನಲ್ಲಿ ೪% ನಾಯಕರು ತಮ್ಮ ಭೂಮಿಯ ಬಗ್ಗೆ ಯಾವುದೇ ಮಾಹಿತಿ ಕೊಡಲು ನಿರಾಕರಿ- ಸಿರುವರು. ಹಾಗೂ ೨% ನಾಯಕರು ಭೂಮಿಯನ್ನು ಹೊಂದದ ಭೂಹೀನ ರಾಗಿರುವರು. (ಅಧ್ಯಯನದ ಅನುಕೂಲತೆಗಾಗಿ ಈ ೨% ನಾಯಕರನ್ನು ೨೦ ಎಕರೆಯಿಂದ ಕಡಿಮೆ ವಿಭಾಗದಲ್ಲಿ ಅಳವಡಿಸಿಕೊಳ್ಳಲಾಗಿದೆ.)

ಒಟ್ಟಾರೆ ೭೮% ಪಂಚಾಯತ ರಾಜ್ಯದಲ್ಲಿಯ ಪ್ರಮುಖ ನಾಯಕರು ೫ ರಿಂದ ೫೦ ಎಕರೆಯ ವರೆಗೆ ಭೂಮಿಯನ್ನೂ ಹೊಂದಿದವರಾಗಿರುವರು.

ಕೋಷ್ಟಕ ೪: ನಾಯಕರ ಭೂಹಿಡುವಳಿ ಗಾತ್ರ

(ನಂ. ೧೩೪)

ಕ್ರ. ನಂ.	ಭೂ ಹಿಡುವಳಿ ಗಾತ್ರ	ಭೂ ಹಿಡುವಳಿ ಗಾತ್ರ ಆಧಾರಿತ ತಾಲೂಕುಗಳಲ್ಲಿ ನಾಯಕರ ವಿಂಗಡಣೆ				
		'ಅ'	'ಬ'	'ಕ'	'ಡ'	ಒಟ್ಟು
೧	೨	೩	೪	೫	೬	೭
೧	೨೦ ಎಕರೆ ಮತ್ತು ಕಡಿಮೆ	೮(೨೯%)	೧೨(೨೯%)	೨(೧೨%)	೧೮(೪೩%)	೩೯(೩೧%)
೨	೨೧ ರಿಂದ ೫೦ ಎಕರೆ ವರೆಗೆ	೧೨(೫೦%)	೨೦(೪೮%)	೮(೪೭%)	೧೮(೪೩%)	೫೮(೪೬%)
೩	೫೦ ಎಕರೆ ಮೇಲ್ಪಟ್ಟು	೫(೨೧%)	೧೦(೨೩%)	೭(೪೧%)	೬(೧೪%)	೨೮(೨೩%)
	ಒಟ್ಟು	೨೫(೧೦೦)	೪೨(೧೦೦)	೧೭(೧೦೦)	೪೨(೧೦೦)	೧೨೬(೧೦೦)

(ಪ್ರತಿಶತ ಕಂಸಿನಲ್ಲಿ)

$X^2 = 8.175$ with 6 df, but X^2 $0.05 = 12.592$ with 6 df. (chi square is not significant at 5% probability level)

ನಾಯಕರನ್ನು ಜಿಲ್ಲೆಯ ಸಾಮಾನ್ಯ ಭೂ-ಒಡೆಯರೊಂದಿಗೆ ಹೋಲಿಸಿದಾಗ ಸುಮಾರು ೯೦% ಸಾಮಾನ್ಯ ಜನರು (ಭೂಒಡೆಯರ) ೫ ರಿಂದ ೫೦ ಎಕರೆ ಭೂ-ಒಡೆತನ ಹೊಂದಿರುವರು. (ಕಲಬುರ್ಗಿ ಜಿಲ್ಲೆಯ ಒಟ್ಟು ಭೂ-ಒಡೆಯರು, ನಮೂನೆ—೧, ಜಿಲ್ಲಾ ಅಂಕೆ ಸಂಖ್ಯೆ ವಿಭಾಗ ಆಧಾರಿತ) ಇದರಿಂದ ಭೂ-ಒಡೆತನದಲ್ಲಿ ನಾಯಕರಿಗೂ ಮತ್ತು ಸಾಮಾನ್ಯ ಜನರಿಗೂ (ಉಳಿದ ಭೂ-ಒಡೆಯರಿಗೂ) ಯಾವದೇ ನಿಶ್ಚಳ ವ್ಯತ್ಯಾಸವು ಕಂಡುಬರುವುದಿಲ್ಲ. ಅದಕ್ಕಾಗಿ ಈ ಅಧ್ಯಯನದಲ್ಲಿ, ನಾಯಕತ್ವ ನಿರ್ಮಾಣದಲ್ಲಿ ನಾಯಕರ ಭೂ-ಹಿಡುವಳಿಯ ಗಾತ್ರ ಎಷ್ಟರಮಟ್ಟಿಗೆ ಪೂರಕವಾದ ಅಂಶ ಎಂಬುದು ವಾದಗ್ರಸ್ತವಾಗುಳಿಯುವುದು. ಹೀಗಾಗಿ ಡಾ. ವ್ಹಿ. ಎಮ್. ಸಿರಸಿಕರ್‌ರವರ ಅಧ್ಯಯನದ ನಿರ್ಣಯಗಳು ಇಲ್ಲಿ ಯಾವುದೇ ರೀತಿಯ ಸೈದ್ಧಾಂತಿಕ ಮಾಪನವೆಂದು ಪರಿಗಣಿಸುವುದು ಕಷ್ಟ.

೫. **ನಾಯಕರ ಆದಾಯ** : ಭಾರತದ ಹಲವಾರು ಗ್ರಾಮಾಂತರ ಭಾಗಗಳಲ್ಲಿ ಕೈಕೊಂಡ ಇತ್ತೀಚಿನ ಅಧ್ಯಯನಗಳು ಡಾ. ಎಸ್. ಆರ್. ಮೆಹತಾ, ೧೯೭೨; ಡಾ. ವ್ಹಿ. ಎಮ್. ಸಿರಸಿಕರ, ೧೯೭೦; ಡಾ. ಎಂ. ಪಿ. ಸಿಂಗ ಮತ್ತು ಆರ್. ಪಿ. ಮಿಶ್ರಾ, ೧೯೭೩) ಗ್ರಾಮಾಂತರ ಪ್ರದೇಶಗಳಲ್ಲಿ ನಾಯಕ ವರ್ಗದವರಿಗೆ ಮತ್ತು ಮಧ್ಯಮ ಉಚ್ಚ ವರ್ಗದವರಾಗಿರುವದಾಗಿ ಸಾಕಷ್ಟು ಆಧಾರಾಂಶಗಳಿಂದ ಎತ್ತಿ ತೋರಿಸಿದ್ದಾರೆ. ಜನಸಾಮಾನ್ಯರಿಂದ ನಾಯಕರ ಜೀವನ ಮಟ್ಟವು ಮೇಲ್ಮಟ್ಟದ್ದಾಗಿರುವದಾಗಿಯೂ ಈಗಾಗಲೇ ಕೈಕೊಂಡ ಅನೇಕ ವರದಿಗಳಲ್ಲಿ ಉಲ್ಲೇಖಿಸಲಾಗಿದೆ. "ಭೂ-ಸ್ವಾಮಿತ್ವವು ಗ್ರಾಮಾಂತರ ಜೀವನದಲ್ಲಿ ಶ್ರೇಷ್ಠವಾದ ಮತ್ತು ವಿಭಿನ್ನವಾದ ಆರ್ಥಿಕ ಮಟ್ಟವನ್ನೂ ತೋರಿಸುವಂತೆ, ಭೂ-ಸ್ವಾಮಿತ್ವದೊಂದಿಗೆ ಅವರ ಆದಾಯವು ಒಂದು ಪೂರಕ ಅಂಶವಾಗಿದೆ". (ಡಾ. ಎಸ್. ಆರ್ ಮೆಹತಾ, ೧೯೭೨). ಮೇಲಿನ ಅಧ್ಯಯನಗಳ ನಿರ್ಣಯಗಳಂತೆ, ಕಲಬುರ್ಗಿ ಜಿಲ್ಲೆಯ ಗ್ರಾಮೀಣ ಜನಜೀವನದಲ್ಲಿ ನಾಯಕರು ಒಂದು ವಿಶಿಷ್ಟವಾದ ಸ್ಥಾನಮಾನ ಹೊಂದಿರುವುದು ಬಹುಮಹತ್ವದ್ದಾದ ಅಂಶವಾಗಿರುವುದು. ನಾಯಕನ ಆದಾಯಕ್ಕೂ ಮತ್ತು ನಾಯಕತ್ವಕ್ಕೂ ಪರಸ್ಪರ ನಿಕಟ ಸಂಬಂಧವಿದ್ದುದು ಈ ಅಧ್ಯಯನದಲ್ಲಿಯೂ ಸಹ ಕಾಣಬಹುದು.

ಪುಟ ೧೬೫ರಲ್ಲಿಯ ಕೋಷ್ಟಕದನ್ವಯ ಪ್ರತಿಶತ ೪೬% ನಾಯಕರ ವಾರ್ಷಿಕ ಆದಾಯವು ಸುಮಾರು ೧೨೦೦/— ರೂಪಾಯಿಗಳಿಂದ ಕಡಿಮೆಯಾಗಿದ್ದರೆ, ೪೧% ನಾಯಕರ ಆದಾಯವು ೧೨೦೧/— ರೂಪಾಯಿಗಳಿಂದ ೩೬೦೦/— ರೂಪಾಯಿಗಳ ವರೆಗಿರುವದು. ಆದರೆ ಕೇವಲ ೧೩% ನಾಯಕರ ವಾರ್ಷಿಕ ಆದಾಯವು ಮಾತ್ರ ೩೬೦೧/- ರಿಂದ ಮೇಲ್ಪಟ್ಟಿರುವದು.

ಕೋಷ್ಟಕ ೫ : ನಾಯಕರ ಆದಾಯ

(ನಂ. ೧೩೪)

ಕ್ರ. ನಂ.	ಆದಾಯ ಮಟ್ಟ	ಆದಾಯ ಮಟ್ಟ ಆಧಾರಿತ ತಾಲೂಕಗಳಲ್ಲಿ ನಾಯಕರ ವಿಂಗಡಣೆ				
		'ಅ'	'ಬ'	'ಕ'	'ಡ'	ಒಟ್ಟು
೧	೨	೩	೪	೫	೬	೭
೧	ರೂ. ೧೨೦೦ ರಿಂದ ಕಡಿಮೆ	೧೭(೬೮%)	೧೪(೩೨%)	೯(೪೭%)	೨೩(೫೦%)	೬೩(೪೭%)
೨	ರೂ. ೧೨೦೧ ರಿಂದ ೩೬೦೦ ರ ವರೆಗೆ	೭(೨೮%)	೨೩(೫೨%)	೭(೩೭%)	೧೮(೩೯%)	೫೫(೪೧%)
೩	ರೂ. ೩೬೦೧ ರಿಂದ ಮೇಲ್ಪಟ್ಟು	೧(೦೪%)	೭(೧೬%)	೩(೧೬%)	೫(೧೧%)	೧೬(೧೨%)
	ಒಟ್ಟು	೨೫(೧೦೦)	೪೪(೧೦೦)	೧೯(೧೦೦)	೪೬(೧೦೦)	೧೩೪(೧೦೦)

(ಪ್ರತಿಶತ : ಕಂಸಿನಲ್ಲಿ)

$X^2 = 35.794$ with 6 df, but $X^2 0.05 = 12.592$ with 6 df (Chi square is significant at 5% probablity level).

ಕಲಬುರ್ಗಿ ಜಿಲ್ಲೆಯ ಜನಜೀವನದ ವಾರ್ಷಿಕ ತಲಾ ಆದಾಯವು ರೂ. ೫೪೪/- ಗಳಿಗಿಂತ ಕಡಿಮೆಯಾಗಿರುವುದು. (Estimate of Rural & Urban Income & District Income of Mysore, 1970-71 : Prepared by the State Income Unit, Bureau of Economics & Statistics, Bangalore, 1973). ಜನಸಾಮಾನ್ಯರೊಂದಿಗೆ ನಾಯಕರನ್ನು ಹೋಲಿಸಿದಾಗ, ನಾಯಕರ ಆದಾಯವು ಸಾಮಾನ್ಯ ಜನರಿಂದ ಹೆಚ್ಚಾಗಿರುವುದು. ಮತ್ತು ಅವರ ಜೀವನ ಮಟ್ಟವು ಸಹ ಮೇಲ್ತರಗತಿಯದಾಗಿರುವುದು. ಆದುದರಿಂದ ನಾಯಕತ್ವ ನಿರ್ಮಾಣದಲ್ಲಿ ನಾಯಕರ ಆದಾಯವು ಬಹಳಷ್ಟರ ಮಟ್ಟಿಗೆ ನಿರ್ಣಾಯಕ ಅಂಶವೆಂಬುದು ಯಾವ ವಾದವಿವಾದವಿಲ್ಲದೇ ಒಪ್ಪಿಕೊಳ್ಳಬಹುದಾಗಿದೆ. ನಾಯಕರ ಆದಾಯ ಮತ್ತು ನಾಯಕತ್ವವು ಪರಸ್ಪರ ಒಂದನ್ನೊಂದು ಅವಲಂಬಿಸಿರುವದು ಚಿ. ಸ್ಕ್ಯಾಯರ್ ಪರೀಕ್ಷಾ ವಿಧಾನವು ಸಹ ಸಿದ್ಧಪಡಿಸಿರುವುದು. ಈ ಅಧ್ಯಯನದ ನಿರ್ಣಯಗಳು ಡಾ. ಎಸ್. ಆರ್. ಮೆಹತಾ, ೧೯೭೨; ಮತ್ತು ವ್ಹಿ. ಎಮ್. ಸಿರಸಿಕರ, ೧೯೭೦; ಅವರ ನಿರ್ಣಯಗಳಿಗೆ ಪೂರ ಹೋಲಿಕೆ ಇರುವವು.

೬. ನಾಯಕರ ಉದ್ಯೋಗ : ಭಾರತ ದೇಶವು ಕೃಷಿಪ್ರಧಾನ ರಾಷ್ಟ್ರವಾಗಿದ್ದು ಶೇ. ೭೦ ರಷ್ಟು ಜನರು ಬೇಸಾಯವನ್ನವಲಂಬಿಸಿರುವರು. ಗ್ರಾಮಾಂತರ ಪ್ರದೇಶಗಳಲ್ಲಿ ಬೇಸಾಯವು ಜನಜೀವನದ ಪ್ರಮುಖ ಉದ್ಯೋಗವಾಗಿರುವದು. ಈಗಾಗಲೇ ಕೈಕೊಂಡ ಹಲವಾರು ಅಧ್ಯಯನಗಳು ಗ್ರಾಮ ಪಂಚಾಯತಿಯ ನಾಯಕರು ಹೆಚ್ಚಾಗಿ ಬೇಸಾಯಗಾರರೆಂದು ಸಾದರಪಡಿಸಿರುವವು. (ಡಾ. ಎಸ್. ಆರ್. ಮೆಹತಾ, ಡಾ. ಕೆ. ನೀಲಾದ್ರಿ ರಾಜು ಮತ್ತು ಡಾ. ಎಸ್. ಪಿ. ಸಿಂಗ, ಮತ್ತು ಡಾ. ಆರ್. ಪಿ. ಮಿಶ್ರಾ) ಅಲ್ಲದೇ ಗ್ರಾಮಾಂತರ ಪ್ರದೇಶಗಳಲ್ಲಿ ಬೇಸಾಯವು ಸಾಮಾಜಿಕವಾಗಿ ಶ್ರೇಷ್ಠಸ್ಥಾನವನ್ನೂ ಹೊಂದಿದೆ– ಎಂದು ಡಾ. ಮೆಹತಾ ಅವರು ಅಭಿಪ್ರಾಯಪಟ್ಟಿದ್ದಾರೆ. ಮೇಲಾಗಿ ಬೇಸಾಯದಲ್ಲಿ ತೊಡಗಿದ ಜನರಿಗೆ ನಾಯಕತ್ವದ ಚಟುವಟಿಕೆಗಳಲ್ಲಿ ಭಾಗವಹಿಸಲು ಹೆಚ್ಚಿನ ಸಮಯ ದೊರಕುವದು.

ಆದರೆ ಇತ್ತೀಚೆಗೆ ಕೆಲವು ಅಧ್ಯಯನಗಳು ನಾಯಕರ ಉದ್ಯೋಗಕ್ಕೂ ಮತ್ತು ನಾಯಕತ್ವ ನಿರ್ಮಾಣಕ್ಕೂ ಯಾವುದೇ ಪೂರಕ ಸಂಬಂಧವಿಲ್ಲವೆಂದು ಸಿದ್ಧಪಡಿಸಿರುವವು. ನಮ್ಮ ಈ ಅಧ್ಯಯನದಲ್ಲಿಯೂ ಸಹ ಇಂತಹ ಯಾವುದೇ ಪೂರಕ ಸಂಬಂಧವಿಲ್ಲವೆಂದು ಅಂಕಿಸಂಖ್ಯೆಗಳಿಂದ ಕಂಡುಬಂದಿದೆ.

ಪುಟ ೧೬೬ ರಲ್ಲಿಯ ಕೋಷ್ಟಕದಲ್ಲಿಯ ಅಂಕಿ ಸಂಖ್ಯೆಗಳು ೯೨% ನಾಯಕರ ಮುಖ್ಯ ಉದ್ಯೋಗ ಬೇಸಾಯವಾಗಿದ್ದರೆ ಉಳಿವ ಕೇವಲ ೯% ನಾಯಕರು ಚಿಕ್ಕಪುಟ್ಟ ವ್ಯವಹಾರ ಮತ್ತು ಉಳಿದ ಉದ್ಯೋಗಗಳಲ್ಲಿ ತೊಡಗಿರುವುದು ಕಂಡು ಬರುವದು. ಆದರೆ ನಾಯಕತ್ವ ನಿರ್ಮಾಣದಲ್ಲಿ ಎಷ್ಟರ ಮಟ್ಟಿಗೆ ಪೂರಕವಾಗಿದೆ ಎಂಬುದು ವಿವಾದಾಸ್ಪದವಾದ ವಿಷಯವಾಗಿದೆ. ಈ ಅಧ್ಯಯನಗಲ್ಲಿ ಮಾತ್ರ ನಾಯಕತ್ವಕ್ಕೂ ಅವರ ಉದ್ಯೋಗಕ್ಕೂ ಯಾವುವೇ ರೀತಿಯ ಪೂರಕ ಸಂಬಂಧವಿಲ್ಲವೆಂಬುದಾಗಿ ತಿಳಿದು ಬರುವದು.

೭. ನಾಯಕರ ಕುಟುಂಬ ಗಾತ್ರ : ಅವಿಭಕ್ತ (Joint family) ಕುಟುಂಬಗಳು ಸಾಮಾನ್ಯವಾಗಿ ಭಾರತ ಗ್ರಾಮೀಣ ಜನಜೀವನದ ವಿಶೇಷ ಲಕ್ಷಣವಾಗಿರುವದು. ಆದರಲ್ಲೂ, ಹೆಚ್ಚಾಗಿ ನಾಯಕವರ್ಗದವರು ಇಂತಹ ಅವಿಭಕ್ತ ಕುಟುಂಬಗಳಿಂದಲೇ ಬಂದವರಾಗಿರುವರೆಂದು ಈಗಾಗಲೇ ಸಾಕಷ್ಟು ಅಧ್ಯಯನಗಳು ದಾಖಲೆಗಳನ್ನು ಒದಗಿಸಿರುವವು. ಬೃಹತ್ ಕುಟುಂಬಗಳು ನಾಯಕತ್ವ ನಿರ್ಮಾಣದಲ್ಲಿ ಅತೀ ಪ್ರಾಮುಖ್ಯವಾದ ಪಾತ್ರವನ್ನು ಹೊಂದಿರುವವು. ಇವು ನಾಯಕತ್ವ ಗುಣಗಳನ್ನು ಬೆಳಸಿಕೊಳ್ಳಲು ಮತ್ತು ಇನ್ನಿತರ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಹೆಚ್ಚಿನ ಸಮಯವನ್ನೂ ಮತ್ತು ಅವಕಾಶವನ್ನೂ ಕಲ್ಪಿಸಿಕೊಳ್ಳುವವು ಎಂಬುದಾಗಿ ಡಾ. ಮೆಹತಾ ಮತ್ತು ಸಿರಸಿಕರರು ಅಭಿಪ್ರಾಯಪಟ್ಟಿರುವರು.

ಪುಟ ೧೬೭ ರಲ್ಲಿಯ ಕೋಷ್ಟಕದ ಅನುಗುಣವಾಗಿ ೫೪% ನಾಯಕರ ಕುಟುಂಬಗಳು ೬ ರಿಂದ ೧೦ ಸದಸ್ಯರನ್ನೊಳಗೊಂಡ ಗಾತ್ರದವುಗಳಾಗಿದ್ದರೆ, ೨೧% ನಾಯಕರ ಕುಟುಂಬಗಾತ್ರವು ೧೦ ಸದಸ್ಯರಿಂದ ಮೇಲ್ಪಟ್ಟಿರುವವು. ಮತ್ತು ೨೫% ನಾಯಕರ ಕುಟುಂಬ ಗಾತ್ರವು ೫ರಿಂದ ಕಡಿಮೆ ಸದಸ್ಯರುಳ್ಳವುಗಳಾಗಿರುವವು. ಹೆಚ್ಚಾಗಿ ೭೪% ನಾಯಕರ ಕುಟುಂಬ ಗಾತ್ರಗಳು ೯ ರಿಂದ ಹೆಚ್ಚು ಸದಸ್ಯರನ್ನೊಳಗೊಂಡಿರುವವು. ಆದರೂ ಈ ಅಧ್ಯಯನದಲ್ಲಿ ನಾಯಕತ್ವ ನಿರ್ಮಾಣದಲ್ಲಿ ಕುಟುಂಬ ಗಾತ್ರವು ಎಷ್ಟರ ಮಟ್ಟಿಗೆ ಪೂರಕ ಅಂಶವಾಗಿರುವದೆಂಬುದು ಸಾಕಷ್ಟು ಅಧ್ಯಯನಗಳಿಂದ ಇನ್ನೂ ಖಚಿತಪಡಿಸಬೇಕಾಗುವದು. ಆದರೆ ಸಧ್ಯದ ಪರಿಸರದಲ್ಲಿ ಕಲಬುರ್ಗಿ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ನಾಯಕತ್ವಕ್ಕೂ ಮತ್ತು ನಾಯಕರ ಕುಟುಂಬ ಗಾತ್ರಕ್ಕೂ ಯಾವುದೇ ಪೂರಕ ಸಂಬಂಧವಿಲ್ಲವೆಂದು ಚಿ. ಸ್ಕ್ವಯರ್ ವಿಧಾನದಿಂದ ದೃಢೀಕರಿಸಿಕೊಳ್ಳಲಾಗಿದೆ.

ಕೋಷ್ಟಕ ೬ : ನಾಯಕರ ಉದ್ಯೋಗ

ನಂ. ೧೩೪

ಕ್ರ. ನಂ	ಉದ್ಯೋಗ	ಉದ್ಯೋಗ ಆಧಾರಿತ ತಾಲ್ಲೂಕುಗಳಲ್ಲಿ ನಾಯಕರ ವಿಂಗಡಣೆ				
		'ಅ'	'ಬ'	'ಕ'	'ಡ'	ಒಟ್ಟು
೧	೨	೩	೪	೫	೬	೭
೧	ಬೇಸಾಯ	೨೪(೯೬%)	೪೦(೯೧%)	೧೮(೯೫%)	೪೦(೮೭%)	೧೨೨(೯೧%)
೨	ವ್ಯಾಪಾರ ಮತ್ತು ಇನ್ನಿತರ ಚಿಕ್ಕಪುಟ್ಟ ಉದ್ಯೋಗಗಳು	೧(೪%)	೪(೯%)	೧(೫%)	೬(೧೩%)	೧೨(೯%)
		೨೫(೧೦೦)	೪೪(೧೦೦)	೧೯(೧೦೦)	೪೬(೧೦೦)	೧೩೪(೧೦೦)

(ಪ್ರತಿಶತ ಕಂಸಿನಲ್ಲಿ)

$X^2 = 2.666$ with 3 df. but $X^2 0.005 = 7.815$ with 3 df. (chi square is not significant at 5% probablity level.)

ಕೋಷ್ಟಕ ೭ : ನಾಯಕರ ಕುಟುಂಬ ಗಾತ್ರ

ನಂ. ೧೩೪

ಕ್ರ. ನಂ.	ಕುಟುಂಬ ಗಾತ್ರ	ಕುಟುಂಬ ಗಾತ್ರ ಆಧಾರಿತ ತಾಲೂಕಗಳಲ್ಲಿ ನಾಯಕರ ವಿಂಗಡಣೆ				
		'ಅ'	'ಬ'	'ಕ'	'ಡ'	ಒಟ್ಟು
೧	೨	೩	೪	೫	೬	೭
೧	೫ ಸದಸ್ಯರು ಮತ್ತು ಕಡಿಮೆ	೫(೨೦%)	೯(೨೦%)	೪(೨೧%)	೧೫(೩೩%)	೩೩(೨೫%)
೨	೬ ರಿಂದ ೧೦ ಸದಸ್ಯರು	೧೩(೫೨%)	೨೫(೫೭%)	೧೦(೫೩%)	೨೫(೫೪%)	೭೩(೫೪%)
೩	೧೧ ಸದಸ್ಯರ ಮೇಲ್ಪಟ್ಟು	೭(೨೮%)	೧೦(೨೩%)	೫(೨೬%)	೬(೧೩%)	೨೮(೨೧%)
	ಒಟ್ಟು	೨೫(೧೦೦)	೪೪(೧೦೦)	೧೯(೧೦೦)	೪೬(೧೦೦)	೧೩೪(೧೦೦)

(ಪ್ರತಿಶತ : ಕಂಸಿನಲ್ಲಿ)

$X^2 = 4.180$ with 6 df, but X^2 0.05 = with 6 df (chi square is not significant at 5% probablity level)

೮. ತೀರ್ಮಾನಗಳು :

ಗ್ರಾಮೀಣ ಪ್ರಮುಖ ಧುರೀಣತ್ವ ವಿವಿಧ ಮುಖವಾಗಿದ್ದು ಹಲವಾರು ಸಮ್ಮಿಶ್ರಿತ ಅಂಶಗಳಿಂದ ನಿರ್ಮಿತವಾಗಿರುವದು. ಹೀಗಾಗಿ ಪ್ರಮುಖ ಧುರೀಣತ್ವ ನಿರ್ಣಾಯಕ ಅಂಶಗಳನ್ನು ಈ ಚಿಕ್ಕ ಅಧ್ಯಯನದ ಮುಖಾಂತರ ಗುರುತಿಸುವದು ಕಷ್ಟಸಾಧ್ಯ. ಆದಾಗ್ಯೂ ಈ ಅಧ್ಯಯನದಲ್ಲಿರುವ ಆಧಾರಿತ ಅಂಶಗಳ ಮೇಲೆ ಕಲಬುರ್ಗಿ ಜಿಲ್ಲೆಯ ಗ್ರಾಮಪಂಚಾಯತಿಗಳಲ್ಲಿಯ ಪ್ರಮುಖ ಧುರೀಣತ್ವದ ಕೆಲವು ನಿಶ್ಚಿತವಾದ ಅಂಶಗಳು ಸ್ಪಷ್ಟವಾಗಿ ಕಂಡುಬರುವವು. ಗ್ರಾಮೀಣ ಪ್ರಮುಖ ಧುರೀಣತ್ವ ನಿರ್ಮಾಣದಲ್ಲಿ, ಶಿಕ್ಷಣ ಅರ್ಹತೆ, ಸಾಮಾಜಿಕ ಮತ್ತು ಆರ್ಥಿಕ ಗುಣಮಟ್ಟ, ಉದ್ಯೋಗ ಮತ್ತು ವಯಸ್ಸು ಮುಂತಾದವುಗಳು ಗಣನೀಯ ಅಂಶಗಳೆಂದು ಭಾವಿಸಬಹುದಾಗಿದೆ.

ಪ್ರಾಮುಖ್ಯವಾಗಿ ಜಾತಿ ಮತ್ತು ನಾಯಕರ ಆರ್ಥಿಕ ಸ್ಥಾನಮಾನಗಳು ನಿಚ್ಚಳವಾಗಿ ನಾಯಕತ್ವ ನಿರ್ಮಾಣದಲ್ಲಿ ನಿರ್ಣಾಯಕ ಅಂಶಗಳೆಂಬುದು ಪ್ರಾಯೋಗಿಕವಾಗಿ ಸಿದ್ಧಪಡಿಸಿಕೊಳ್ಳಲಾಗಿದೆ. ಇದರಿಂದ ಗ್ರಾಮೀಣ ಪರಿಸರದಲ್ಲಿ ಇನ್ನೂ ಸಾಂಪ್ರದಾಯಿಕ ವಿಚಾರಗಳು ಪ್ರಬಲವಾಗಿ ಬೇರೂರಿದ್ದು, ಅಸ್ತಿತ್ವದಲ್ಲಿರುವ ಪ್ರಮುಖ ನಾಯಕರು ಸಾಂಪ್ರದಾಯಿಕ ಮೌಲ್ಯಗಳ ಮೇಲೆ ಆಧಾರಿತವಾಗಿರುವರೆಂದು ಕಂಡು ಬರುವದು. ಆದರೂ, ಅನೇಕ ಅಡೆತಡೆಗಳಿಂದಾಗಿ ಈ ಅಧ್ಯಯನದಲ್ಲಿ ಹೆಚ್ಚಿನ ವಿಷಯ ಕುರಿತು ಅಧ್ಯಯನ ಮಾಡಲು ಅವಕಾಶ ದೊರಕಲಿಲ್ಲ. ಆದುದರಿಂದ ಈ ಅಧ್ಯಯನವೂ ಮುಂದಿನ ವಿಶಾಲ ದೃಷ್ಟಿಕೋನದ ಅನೇಕ ಅಧ್ಯಯನಗಳಿಗೆ ತಳಹದಿಯಾಗುವದೆಂದು ಹೇಳಬಹುದು. ಇಲ್ಲಿ ಇನ್ನುಳಿದ ಪ್ರಮಾಣಗಳ ಬಗ್ಗೆ ಅಭ್ಯಸಿಸಲು ಅವಕಾಶ ನೀಡುತ್ತದೆ. ಪ್ರಮುಖ ಧುರೀಣತ್ವವನ್ನು ಜಿಲ್ಲೆಯ ವಿಶಾಲ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿವರ್ತನೆ ಕುರಿತು ದೀರ್ಘ ಅಧ್ಯಯನ ಕೈಕೊಳ್ಳಲು ಪ್ರೋತ್ಸಾಹಿಸುತ್ತದೆ.

ಒಟ್ಟಾರೆ ವಿಶಾಲ ದೃಷ್ಟಿಕೋನ ಹೊಂದಿದ ದೀರ್ಘ ಅಧ್ಯಯನವು ಕಲಬುರ್ಗಿ ಜಿಲ್ಲೆಯ ಗ್ರಾಮೀಣ ಪ್ರಮುಖ ಧುರೀಣತ್ವದ ಅಸ್ತಿತ್ವದ ಬಗ್ಗೆ ಅತೀ ಮಹತ್ವವೆಂದು ಪರಿಗಣಿಸುತ್ತದೆ.

REFERENCES

1 Alan R. Beals — "Change in the Leadership of Mysore Village" in Rural Sociology in India, (Ed) A. R. Desai Bombay : The Indian Society of Agricultural Economics (1961).

2 G. Ram Reddy & K. Seshadri — The Voter & Panchayt Raj– A Study of the Electoral Behaviour during Panchayat Elections in Warangal District, Andhra Pradesh Hyderabad, National Institute of Community Development, Hyderabad (1967)

3 Harijander Singh — Village Leadership, Delhi, Sterling, (1967).

4 Iqbal Narain — "Democratic Decentralisation and Rural Leadership in India : The Rajasthan Experiment." Asian Survey, Vol. IV, No. 8 (1964)

5 K. S. Bhat — "Emerging Pattern of Leadership in Panchayat Raj Set-up, in Mysore State" in Readings on Panchayat Raj (Ed) G. Jacob, Hyderabad (NICD), (1967).

6 K. Neeladri Raju — "The Emerging Elite in Rural India: A Comparative Study of Elites in Andhra Pradesh, Maharastra & West Bengal", Hyderabad, Behavioural Sciences & Community Development, Vol. 5, No. 1, (NICD) (March, 1972).

7	K. Ranga Rao	"Rural Leadership & Conflict: A Study of an Andhra Village" Economic and Political Weekly, Vol. III, No. 17, (April 1968).
8	Lewis Oscar	Village Life in Northern India, University of Illinois, (1958).
9	L. K. Sen & Pradipto Roay	A wareness of Community Development in Village India, Preliminary Report, Hyderabad (NICD) (1966)
10	M. P. Singh & R. P. Mishra	"Characteristics of Emerging Village Leaders in Inter Discipline, Vol. 10, No. 2, Varanasi, Gandhian Institute of Studies, (Summer, 73).
11	M. N. Srinivas	The Social Structure of a Mysore Village in India's Villages (Ed) Asia Publishing House (1966).
12	M. N. Srinivas	Social Change in Modern India, (1960).
13	M. P. Singh & R. P. Mishra	"Scaling the Determinents of the Emerging Leadership", in Inter Discipline, Varanasi, Gandhian Institute of Studies, Vol. 10, No. 3 (Autuman, 1973).
14	M. F. Abraham	"Studies in Leadership : A Critique on Empirical & Conceptual Analysis, in the Indian Journal of Social Work, Bombay, Tata Institute of Social Sciences, Vol. XXXIII, No. 3 (Oct, 1972).

15	N. R. Inamdar	Functioning of Village of Panchayats, Bombay Popular Prakashan, (1972).
16	Planning Commission	Leadership & Groups in a South Indian Villages, Government of India (1955).
17	R. C. Prasad	Development & Democracy : The Grass-Roots Experiences in India, Rachna Prakashan, New Delhi (1972).
18	S. C. Dube	Indian Villages, Routledge & Kegal Paul, London, (1955).
19	S. K. Srivastava	"Direct Social Change and Rural Leadership in India." The Emerging Patterns of Rural Leadership in Southern Asia, Hyderabad, NICD (1965).
20	S. R. Mehta	Emerging Pattern of Rural Leadership, Bombay, Viley Eastern (1972).
21	T. K Ommen	"The Concept of Dominant Caste : Some Queries Contributions to Indian Sociology, Vikas, Delhi, Vol. VI (1970)

REPORTS :

1 Estimate of Rural & Urban Incomes & District Income of Mysore, 1970-1971 : Prepared by the State Income Unit, Bureau of Economics and Stastistics, Bangalore (1973).

2 Mysore State Gazetteer, Gulbarga District, 1966.

3 Census of India, 1971, Mysore State, Population of Villages & Towns, Gulbarga District.

4 Total Land Holders in Gulbarga District (Pro-forma-I)

5 Deputy Commissioner, Gulbarga, Village Panchayat Election Notification No. DEV/VPC/ELN/471 1967–68.

——

ಉತ್ಪಾದನಾ ಸಾಧ್ಯತಾ ರೇಖೆಗಳು[೧]

● ಟಿ. ಆರ್. ಚಂದ್ರಶೇಖರ

ಪ್ರವೇಶ :

ಅರ್ಥಶಾಸ್ತ್ರ ಇಂದು "ಮಾನವಿಕ ವಿಜ್ಞಾನಗಳ ರಾಣಿ" ಎಂದು ಕರೆಸಿಕೊಳ್ಳುತ್ತಿದೆ. ಎಲ್ಲಾ ಜ್ಞಾನಗಳ ಮುಂಚೂಣಿಯಲ್ಲಿರುವ ಈ ಶಾಸ್ತ್ರ ಬೆಳೆದು ಬಂದ ರೀತಿ ಆಕರ್ಷಣೀಯವಾಗಿದೆ. ಅರ್ಥಶಾಸ್ತ್ರದ ಪಿತಾಮಹನೆನಿಸಿಕೊಳ್ಳುತ್ತಿರುವ ಆಡಂಸ್ಮಿತರವರು ಇದನ್ನು "ಸಂಪತ್ತಿನ ಶಾಸ್ತ್ರ" ಎಂದು ವ್ಯಾಖ್ಯಾನಿಸಿದಾಗ ತೀಕ್ಷ್ಣವಾದ ಟೀಕೆಗೆ ಗುರಿಯಾಗಬೇಕಾಯಿತು. ಆದರೆ ಮಾರ್ಷಲ್‌ರವರ ಮರು ವ್ಯಾಖ್ಯಾನದಿಂದಾಗಿ ಅದು ಗೌರವಪೂರ್ಣ ಸ್ಥಾನ ಪಡೆಯಿತು. ಪ್ರಥಮವಾಗಿ ಮನುಷ್ಯನನ್ನು, ಎರಡನೆಯದಾಗಿ ಅವನ ಆರ್ಥಿಕ ಚಟುವಟಿಕೆಗಳನ್ನು ಅಭ್ಯಾಸ ಮಾಡುತ್ತದೆ ಎಂದ ಅವರು ವಿಶಾಲ ಅರ್ಥ ಕೊಟ್ಟರು. ಹೀಗೆ ಕಾಲ ಕಾಲಕ್ಕೆ ವರ್ಧಿಸುತ್ತಾ ಬಂದಿರುವ ಈ ಶಾಸ್ತ್ರ ಇಂದು ಮಾನವನ ಮತ್ತು ಮುಖ್ಯವಾಗಿ ಸಮಾಜದ ಮೂಲಭೂತ ಸಮಸ್ಯೆಗಳಿಗೆ ತನ್ನನ್ನು ಒಳಮಾಡಿಕೊಂಡು ತುಂಬಾ ಸಂಕೀರ್ಣವಾದ ವಿಜ್ಞಾನವಾಗಿದೆ. ಈ ಮೂಲಭೂತ ಸಮಸ್ಯೆಗಳಾವುವೆಂದರೆ :

೧ ವಿರಳತೆಯಿಂದಿರುವ ಉತ್ಪಾದನಾಂಗಗಳನ್ನು ವಿವೇಚನಾತ್ಮಕವಾಗಿ ಬಳಸಿ ಗರಿಷ್ಠ ಪ್ರತಿಫಲ ಪಡೆಯುವುದು, ಮತ್ತು

೨ ಪ್ರಗತಿ — ಮತ್ತು ತತ್ಸಂಬಂಧವಾದ ಸಮಸ್ಯೆಗಳು.

ಈ ಎರಡು ಮೂಲಭೂತ ಸಮಸ್ಯೆಗಳನ್ನು ನಕ್ಷೆಯ ಸಹಾಯದಿಂದ ವಿವರಿಸುವದೇ ಈ ಲೇಖನದ ಉದ್ದೇಶ.

---

೧ ಇಂಗ್ಲಿಷಿನಲ್ಲಿ ಇದನ್ನು "Production Possibility Curves" ಎನ್ನುತ್ತಾರೆ.

ಅರ್ಥಶಾಸ್ತ್ರದ ಮೀಮಾಂಸೆಯಲ್ಲಿ ನಕ್ಷೆಗಳು (ಆಲೇಖಗಳು) ಗಣಿತದ ಸಮೀಕರಣಗಳು ಮತ್ತು ಪ್ರೌಢಗಣಿತದ ತತ್ವಗಳು ಇಂದು ಅಗಣಿತ ಪ್ರಮಾಣದಲ್ಲಿ ಉಪಯೋಗಿಸಲ್ಪಡುತ್ತಿವೆ. ಇಂತಹ ಒಂದು ಸಾಧನ ರೂಪವಾದ ಆಲೇಖ ಅರ್ಥಶಾಸ್ತ್ರದಲ್ಲಿ ಪ್ರಚುರದಲ್ಲಿದೆ. ಇದನ್ನು ನಾವು "ಉತ್ಪಾದನಾ ರೇಖೆ" ಅಥವಾ "ಉತ್ಪಾದನಾ ಸಾಧ್ಯತಾ ಮೇರೆ" ಎಂದು ಕರೆಯುತ್ತೇವೆ. ಈ ಸಾಧನ ಬಹು ಮಹತ್ವ ಪಡೆಯಲು ಕಾರಣ ಇದು ಅರ್ಥಶಾಸ್ತ್ರದ ಮೂಲಭೂತ ಸಮಸ್ಯೆಯನ್ನು ಸುಲಭವಾಗಿ ಗ್ರಹಿಸಲು ಮತ್ತು ವಿವರಿಸಲು ಸಾಧ್ಯ ಮಾಡಿಕೊಟ್ಟಿದೆ.

ಆರ್ಥಿಕತೆಯ ಮೂಲ ಸಮಸ್ಯೆಗಳು[1]

ಪರಿಮಿತಿ ಅಥವಾ ಮೇರೆ ಮಾನವನ ಚಟುವಟಿಕೆಗಳ ಒಂದು ಲಕ್ಷಣ. ಆರ್ಥಿಕ ಸಮಸ್ಯೆ ಉದ್ಭವಿಸುವದು ಈ ಕಾರಣದಿಂದಲೇ ಎಂಬುದನ್ನು ನಾವು ಅರ್ಥ ಮಾಡಿಕೊಂಡೆವಾದರೆ ಈ ಶಾಸ್ತ್ರದ ವಿಷಯ ವ್ಯಾಪ್ತಿ ಅರ್ಥವಾದೀತು. ಮಾನವನ ಬಯಕೆಗಳು, ಬೇಕು — ಬೇಡಗಳು ಅಪರಿಮಿತವಾಗಿರುವುವಲ್ಲದೆ ವೈವಿಧ್ಯಮಯವಾಗಿರುತ್ತವೆ. ಆದರೆ ಈ ಬಯಕೆಗಳನ್ನಿರಿಸಿಕೊಳ್ಳಲು ಬೇಕಾದ ಸಾಧನ ಸಾಮಗ್ರಿಗಳು ವಿರಳವಾಗಿರುತ್ತವೆ. ಈ ಎರಡು ವಿರುದ್ಧ ಅಂಶಗಳನ್ನು ಸಮತೋಲನಕ್ಕೆ ತರುವುದೇ ಅರ್ಥಶಾಸ್ತ್ರದ ಪ್ರಮುಖ ಕಾರ್ಯವಾಗಿದೆ. ಇದರ ಆಧಾರದ ಮೇಲೆ ಅರ್ಥಶಾಸ್ತ್ರವನ್ನು ನಾವು ಹೀಗೆ ವ್ಯಾಖ್ಯಾನಿಸಬಹುದು: "ವಿರಳತೆಯಿಂದಿರುವ ಉತ್ಪಾದನಾಂಗಗಳನ್ನು ವಿವೇಚನಾತ್ಮಕವಾಗಿ ಬಳಸಿ, ಗರಿಷ್ಠ ಪ್ರತಿಫಲ ಪಡೆಯುವುದೇ" ಅರ್ಥಶಾಸ್ತ್ರದ ವಿಷಯವಾಗಿದೆ. ಮೇಲಿನ ವ್ಯಾಖ್ಯೆಯಲ್ಲಿ ಎರಡು ಅಂಶಗಳು ಮುಖ್ಯವಾಗಿವೆ :

೧ ಉತ್ಪಾದನಾಂಗಗಳ ವಿವೇಚನಾತ್ಮಕ ಬಳಕೆ.
೨ ಗರಿಷ್ಠ ಪ್ರತಿಫಲ ಪಡೆಯುವದು. ವಿವರಣೆ ಮತ್ತು ಗರಿಷ್ಠತೆ ಇವು ಅರ್ಥಶಾಸ್ತ್ರದ ಎರಡು ಅಡಿಗಲ್ಲುಗಳಾಗಿವೆ.

ಈ ಎರಡು ಬೃಹತ್ ಕ್ರಿಯೆಗಳು ಒಂದು ಆರ್ಥಿಕತೆಯಲ್ಲಿ ನಡೆಯುತ್ತವೆ. ಯಾವುದೇ ಒಂದು ಆರ್ಥಿಕ ವ್ಯವಸ್ಥೆಯಲ್ಲಿ[2] ಮೂರು ಮುಖ್ಯ ಸಮಸ್ಯೆಗಳು ಉದ್ಭವಿಸುತ್ತವೆ. ಅವುಗಳು ಯಾವವೆಂದರೆ:

೧ ಭಾರತೀಯ ಆರ್ಥಿಕತೆ ಅಥವಾ ಅಮೇರಿಕದ ಆರ್ಥಿಕತೆ ಎಂದು ಸಾಮಾನ್ಯವಾಗಿ ಪದ ಉಪಯೋಗಿಸುತ್ತೇವೆ. ಆರ್ಥಿಕತೆಯ ವ್ಯಾಪ್ತಿ ಬಹಳ ವಿಸ್ತಾರವಾದುದು.

೨ ಒಂದು ದೇಶ ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಹೊಂದಿರುವ ಸಂಘಟನೆ ಮತ್ತು ಸಂಘಸಂಸ್ಥೆಗಳಿಗೆ ಆರ್ಥಿಕ ಪದ್ಧತಿ ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ಮೂರು ಬಗೆಯ ಆರ್ಥಿಕ ಪದ್ಧತಿಗಳಿವೆ: ೧) ಬಂಡವಾಳಶಾಹಿ ೨) ಸಮಾಜವಾದ ೩) ಮಿಶ್ರ ಆರ್ಥಿಕ ಪದ್ಧತಿ.

೧ ಏನನ್ನು ಉತ್ಪಾದಿಸಬೇಕು? ಇದು ಮೊದಲು ನಿರ್ಧಾರವಾಗಬೇಕು. ಏಕೆಂದರೆ ಒಟ್ಟು ಉತ್ಪಾದನೆ ಪರಿಮಿತಿಯಿಂದ ಕೂಡಿರುತ್ತದೆ.

೨ ಹೇಗೆ ವಸ್ತುಗಳನ್ನು ಉತ್ಪಾದಿಸಬೇಕು? ಅಂದರೆ ಯಾರಿಂದ, ಯಾವ ಉತ್ಪಾದನಾಂಗಗಳಿಂದ ಮತ್ತು ಯಾವ ತಂತ್ರದಿಂದ ಎಂಬುದು ನಿರ್ಧಾರವಾಗಬೇಕು.

೩ ಯಾರಿಗಾಗಿ ವಸ್ತುಗಳನ್ನು ಉತ್ಪಾದಿಸಬೇಕು? ಅಂದರೆ ಉತ್ಪಾದನೆ ಹೇಗೆ ವಿತರಣೆಯಾಗಬೇಕು ಎಂಬುದು ನಿರ್ಧಾರವಾಗಬೇಕು.

ಒಂದು ಆರ್ಥಿಕತೆಯ ಸಮಸ್ಯೆಗಳಾದ ಏನನ್ನು, ಹೇಗೆ ಮತ್ತು ಯಾರಿಗಾಗಿ—ಇವುಗಳು ಉದ್ಭವವಾಗುವುದು ಉತ್ಪಾದನಾಂಗಗಳು ಪರಿಮಿತಿಯಿಂದಿರುವುದರಿಂದ ಎಂಬುದು ನಮ್ಮ ಮೂಲ ನಿರ್ಣಯ.

ಉತ್ಪಾದನೆ ಮತ್ತು ಅದರ ಸಾಧ್ಯತೆ

ಒಂದು ಆರ್ಥಿಕತೆಯ ಉತ್ಪಾದನಾ ಸಾಧ್ಯತೆ—ಆ ದೇಶದ ಉತ್ಪಾದನಾಂಗಗಳ ಪೂರೈಕೆ ಮೇಲೆ ಅವಲಂಬಿಸಿರುತ್ತದೆ. ಈ ಉತ್ಪಾದನಾ ಸಾಧ್ಯತೆಯನ್ನು ನಾವು ಒಂದು ಆಲೇಖದ ಸಹಾಯದಿಂದ ವಿವರಿಸಬಹುದು. ಇದನ್ನು ನಾವು "ಉತ್ಪಾದನಾ ಸಾಧ್ಯತಾ ರೇಖೆಗಳು" ಅಥವಾ "ಉತ್ಪಾದನಾ ಸಾಧ್ಯತಾ ಮೇರೆ" ಎಂದು ಕರೆಯುತ್ತೇವೆ. ಒಂದು ಅರ್ಥವ್ಯವಸ್ಥೆಯ ಉತ್ಪಾದನಾ ಸಾಧ್ಯತೆ ಮತ್ತು ಅದರ ರಚನೆಯನ್ನು ಈ ರೇಖೆಗಳು ತೋರಿಸುತ್ತವೆ.

ಈ ಸಾಧನವ ನಿರೂಪಣೆಗೆ ಒಂದು ವಿನೂತನ ಆರ್ಥಿಕತೆಯನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ಈ ಕೆಳಗಿನ ಕಲ್ಪನೆಗಳ ಮೇಲೆ ನಾವು ಉ. ಸಾ. ರೇ. ನಿರೂಪಿಸಬಹುದು.

೧ ನಮ್ಮ ಆರ್ಥಿಕತೆ ಪೂರ್ಣ ಉತ್ಪಾದನೆ ಮತ್ತು ಪೂರ್ಣ ಉದ್ಯೋಗ ಸ್ಥಿತಿಯಲ್ಲಿರಲಿ.

೨ ಸಂಭವನೀಯ ಉತ್ಪಾದನಾಂಗಗಳ ಪೂರೈಕೆ ಸ್ಥಿರವಾಗಿರಲಿ.

೩ ಉತ್ಪಾದನಾ ತಂತ್ರ ಒಂದೇ ರೀತಿಯಲ್ಲಿರಲಿ.

೪ ಈ ಆರ್ಥಿಕತೆ ಕೇವಲ ಎರಡು ವಸ್ತುಗಳನ್ನು ಮಾತ್ರ ಉತ್ಪಾದಿಸುತ್ತದೆ.

ಈ ಪರಿಕಲ್ಪನೆಗಳನ್ನು ಸೂಕ್ಷ್ಮವಾಗಿ ನೋಡಿದರೆ, ನಮ್ಮ ಆರ್ಥಿಕತೆ ಅರ್ಥ ಶಾಸ್ತ್ರದ ಮೂಲ ಸಮಸ್ಯೆಯನ್ನು ಎದುರಿಸುತ್ತಿದೆ ಎಂಬುದು ವೇದ್ಯವಾಗುತ್ತದೆ. ಉತ್ಪಾದನಾಂಗಗಳ ಪೂರೈಕೆ ಮಿತಿಯಿಂದ ಕೂಡಿರುತ್ತದೆ; ಎಂದಾಗ ಉತ್ಪಾದನೆಗೆ ಒಂದು ಮಿತಿ ಇದೆ— ಎಂದಂತಾಯಿತು.

ಉತ್ಪಾದನಾ ಸಾಧ್ಯತಾ ಪಟ್ಟಿ :


ನಮ್ಮ ಆರ್ಥಿಕತೆ ಕೃಷಿ ಯಂತ್ರ (T) ಮತ್ತು ಗೋಧಿ (W) ಈ ವಸ್ತುಗಳನ್ನು ಉತ್ಪಾದಿಸುತ್ತಿರಲಿ. ಇಲ್ಲಿ "T" ಬಂಡವಾಳ ಸರಕನ್ನು ಮತ್ತು "W" ಅನುಭೋಗಿ ವಸ್ತುವನ್ನು ಪ್ರತಿನಿಧಿಸುತ್ತವೆ. ಉತ್ಪಾದನೆಗೆ ಒಂದು ಮಿತಿ ಇದೆ ಎಂದಾಗ ಒಂದು ವಸ್ತುವಿನ ಉತ್ಪಾದನೆ (ಉದಾ : T) ಹೆಚ್ಚಿಸಬೇಕಾದರೆ ಮತ್ತೊಂದರ (ಉದಾ : W) ಉತ್ಪಾದನೆಯನ್ನು ಇಳಿಸಬೇಕಾಗುತ್ತದೆ. ಏಕೆಂದರೆ ಮೇಲಿನ ಕ್ರಿಯೆಯಲ್ಲಿ ಉತ್ಪಾದನಾಂಗಗಳು ವರ್ಗಾಯಿಸಲ್ಪಟ್ಟಾಗ ಒಂದು ವಸ್ತುವಿನ ಪ್ರಮಾಣ ಕಡಿಮೆಯಾದರೇನೇ ಮತ್ತೊಂದರ ಉತ್ಪಾದನೆ ಹೆಚ್ಚಿಸಲು ಸಾಧ್ಯ. ಈ ಅಂಶಗಳನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

ಉತ್ಪಾದನಾ ಸಾಧ್ಯತಾ ಪಟ್ಟಿ

ವಸ್ತುಗಳು	ಉತ್ಪಾದನಾ ಸಾಧ್ಯತಾ ಪರ್ಯಾಯಕೂಟಗಳು				
	A	B	C	D	E
ಕೃಷಿ ಯಂತ್ರಗಳು (ಲಕ್ಷಗಳಲ್ಲಿ)	೦	೧	೨	೩	೪
ಗೋಧಿ (ಸಾವಿರ ಕೇಜಿಗಳಲ್ಲಿ)	೧೦	೯	೭	೪	೦

ಮೇಲಿನ ಪಟ್ಟಿಯು ನಮ್ಮ ಆರ್ಥಿಕತೆಯ ಎರಡು ವಸ್ತುಗಳ ವಿವಿಧ ಪರ್ಯಾಯಕೂಟಗಳ ಉತ್ಪಾದನಾ ಸಾಧ್ಯತೆಗಳನ್ನು ತೋರಿಸುತ್ತದೆ. ಸಂಭವನೀಯ ಉತ್ಪಾದನಾಂಗಗಳೆಲ್ಲವನ್ನೂ ಗೋಧಿ ಉತ್ಪಾದನೆಗೆ ಬಳಸಿದರೆ ೧೦,೦೦೦ ಕೇ. ಜಿ. ಉತ್ಪಾದಿಸಬಹುದು. ಬದಲಾಗಿ ಕೃಷಿ ಯಂತ್ರಗಳಿಗೇ ಬಳಸಿದರೆ ೪ ಲಕ್ಷ ಯಂತ್ರಗಳನ್ನು ಉತ್ಪಾದಿಸಬಹುದು. ಇವು ಉತ್ಪಾದನಾ ಸಾಧ್ಯತೆಯ ಎರಡು ಅಂತ್ಯಗಳು. ಇವೆರಡು ಅಂತ್ಯಗಳ ನಡುವೆ ವಿವಿಧ ಪರ್ಯಾಯ ಕೂಟಗಳನ್ನು ಗುರುತಿಸಿದ್ದೇವೆ. "A" ಮತ್ತು "E" ಗಳನ್ನು ಬಿಟ್ಟು ಮಿಕ್ಕ B, C, D ಗಳು ಎರಡು ವಸ್ತುಗಳ ಸಂಯುಕ್ತ ಕೂಟಗಳಾಗಿವೆ.

ಮೇಲಿನ ಪಟ್ಟಿಯ ವಿವರಗಳನ್ನು ಒಂದು ನಕ್ಷೆಯಲ್ಲಿ ತೋರಿಸಬಹುದು. ನಮ್ಮ ನಕ್ಷೆಯಲ್ಲಿ ಕೃಷಿ ಯಂತ್ರಗಳನ್ನು “X” ಅಕ್ಷದ ಮೇಲೆ, ಗೋಧಿಯನ್ನು “Y” ಅಕ್ಷದ ಮೇಲೆ ಅಳೆಯುತ್ತಿದ್ದೇವೆ. “X” ಮತ್ತು “Y” ಅಕ್ಷಗಳಿಗೆ ಲಂಬಗಳನ್ನು ಎಳೆಯುವುದರ ಮುಖಾಂತರ ನಾವು ಉತ್ಪಾದನಾ ಕೂಟಗಳನ್ನು ಗುರುತಿಸಬಹುದು.



ಚಿತ್ರ : 1


ಮೇಲಿನ ಚಿತ್ರದಲ್ಲಿ (ಚಿತ್ರ: ೧ರಲ್ಲಿ) A, B, C, D ಮತ್ತು E ಉತ್ಪಾದನಾ ಕೂಟಗಳನ್ನು ಗುರುತಿಸಿದೆ. ಇವುಗಳನ್ನು ಒಂದು ರೇಖೆಯಿಂದ ಕೂಡಿಸಿದರೆ ನಮಗೆ ಒಂದು ರೇಖೆ ದೊರೆಯುತ್ತದೆ. ಇದನ್ನು ನಾವು ಉತ್ಪಾದನಾ ಸಾಧ್ಯತಾ ರೇಖೆ ಎಂದು ಕರೆಯುತ್ತೇವೆ. ಇದನ್ನು ಚಿತ್ರ ೨ರಲ್ಲಿ ಕಾಣಬಹುದು. ಪೂರ್ಣ ಉದ್ಯೋಗ ಮತ್ತು ಪೂರ್ಣ ಉತ್ಪಾದನೆಯಲ್ಲಿರುವ ಆರ್ಥಿಕತೆಯ ಉತ್ಪಾದನಾ ಕೂಟದ ಸ್ಥಾನ ಈ ರೇಖೆಯ ಮೇಲೆ ಇರಬೇಕು. ಈ ರೇಖೆಯಿಂದ ಮುಂದೆ ಅಂದರೆ ಚಿತ್ರದ ‘N’ ನಲ್ಲಿ ಇರಲು ಸಾಧ್ಯವಿಲ್ಲ.

ಏಕೆಂದರೆ ಈ ಆರ್ಥಿಕತೆಯ ಉತ್ಪಾದನಾಂಗಗಳ ಪೂರೈಕೆ ಮಿತಿಯಿಂದ ಕೂಡಿರುವುದರಿಂದ ಉತ್ಪಾದನೆಯ ಸಾಧ್ಯತೆ ಈ ರೇಖೆಯು ಆಕ್ರಮಿಸಿರುವ

ಪ್ರದೇಶಕ್ಕೆ ಸೀಮಿತವಾಗಿದೆ. ಬದಲಾಗಿ ಉತ್ಪಾದನಾ ಸ್ಥಾನ ಈ ರೇಖೆಯ ಒಳಭಾಗದಲ್ಲಿದ್ದರೆ, ಅಂದರೆ ಚಿತ್ರದ 'u' ನಲ್ಲಿದ್ದರೆ, ಈ ಆರ್ಥಿಕತೆ ಅನಭಿವೃದ್ಧಿ ಸ್ಥಿತಿಯಲ್ಲಿದೆ ಎಂದು ತಿಳಿಯಬಹುದು. 'u' ಸ್ಥಾನದಿಂದ ಉತ್ಪಾದನೆಯನ್ನು ವರ್ಧಿಸಿಕೊಳ್ಳಬಹುದು. ಈ ಅಭಿವರ್ಧನೆ ಚಿತ್ರದಲ್ಲಿ ತೋರಿಸಿರುವಂತೆ 'u' ನಿಂದ ಯಾವ ದಿಕ್ಕಿಗಾದರೂ ನಡೆಯಬಹುದು.

ಆದರ್ಶ ಉತ್ಪಾದನಾಕೂಟ

ಚಿತ್ರದಲ್ಲಿ ತೋರಿಸಿರುವ ಉತ್ಪಾದನಾ ಸಾಧ್ಯತಾ ರೇಖೆ ಎರಡು ವಸ್ತುಗಳ ಗರಿಷ್ಠ ಉತ್ಪಾದನಾ ಸ್ಥಿತಿಯನ್ನು ತೋರಿಸುತ್ತದೆ. ಈಗ ಮುಖ್ಯ ಪ್ರಶ್ನೆ ಎಂದರೆ ನಮ್ಮ ಆರ್ಥಿಕತೆ ಯಾವ ಉತ್ಪಾದನಾ ಕೂಟವನ್ನು ಆರಿಸಿಕೊಳ್ಳ



ಚಿತ್ರ: 2

ಬೇಕು? ಈ ಪ್ರಶ್ನೆ ತುಂಬಾ ಜಟಿಲವಾದುದು. ಕಾರಣ ಈ ಪ್ರಶ್ನೆ ಆರ್ಥಿಕ, ಸಾಮಾಜಿಕ ಮತ್ತು ನೈತಿಕ ಅಂಶಗಳಿಂದೊಡಗೂಡಿದೆ. ಉದಾ: ಸೋವಿಯಟ್ ರಷ್ಯವು ಅಧಿಕ ಪ್ರಮಾಣದ ಕೃಷಿಯಂತ್ರ ಮತ್ತು ಕಡಿಮೆ ಪ್ರಮಾಣದ ಗೋದಿಯ ಉತ್ಪಾದನಾ ಕೂಟವನ್ನು ಆರಿಸಿಕೊಳ್ಳುತ್ತದೆ. ಆದರೆ ಅಮೇರಿಕಾ

ಕಡಿಮೆ ಪ್ರಮಾಣದ ಕೃಷಿ ಯಂತ್ರ ಮತ್ತು ಅಧಿಕ ಪ್ರಮಾಣದ ಗೋಧಿಯ ಉತ್ಪಾದನಾ ಕೂಟವನ್ನು ಆರಿಸಿಕೊಳ್ಳುತ್ತದೆ. ಇವುಗಳಲ್ಲಿ ಆದರ್ಶ ಉತ್ಪಾದನಾ ಕೂಟ ಯಾವುದು? ಇದು ಒಂದು ದೇಶದ ಅನುಭೋಗಿಗಳ ಒಲವು, ಆರ್ಥಿಕ ಪದ್ಧತಿ ಮತ್ತು ಸಾಮಾಜಿಕ ಮೌಲ್ಯಗಳ ಮೇಲೆ ಅವಲಂಬಿಸಿರುತ್ತದೆ. ಚಿತ್ರ : ೨ರ ಉತ್ಪಾದನಾ ಸಾಧ್ಯತಾ ರೇಖೆಯಲ್ಲಿ 'B' ಸ್ಥಾನವನ್ನು ಒಂದು ಆರ್ಥಿಕತೆ ಆರಿಸಿಕೊಂಡರೆ ಅದು ವರ್ತಮಾನಕ್ಕೆ ಹೆಚ್ಚು ಆಸಕ್ತಿಯನ್ನು ಮತ್ತು ಭವಿಷ್ಯದ ಔದಾಸೀನ್ಯವನ್ನು ತೋರಿಸುತ್ತದೆ. ಬದಲಾಗಿ 'D' ಸ್ಥಾನ ಆರಿಸಿಕೊಂಡೆವೆಂದರೆ ಅದು ವರ್ತಮಾನಕ್ಕೆ ಕಡಿಮೆ ಸರಕುಗಳು ಮತ್ತು ಭವಿಷ್ಯಕ್ಕೆ ಅದು ಮಾಡಿಕೊಂಡಿರುವ ಸಿದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ಉತ್ಪಾದನಾ ಸಾಧ್ಯತಾ ರೇಖೆಗಳ ಉಪಯೋಗ

ಉತ್ಪಾದನಾ ಸಾಧ್ಯತಾ ರೇಖೆ ಅರ್ಥಶಾಸ್ತ್ರದಲ್ಲಿ ಬಹುಪಯೋಗಿ ಸಾಧನವಾಗಿದೆ. ಅರ್ಥಶಾಸ್ತ್ರದ ಹಲವಾರು ನಿಯಮಗಳನ್ನು ವಿವರಿಸಲು ಸುಲಭ ಸಾಧನವಾಗಿದೆ. ಮುಖ್ಯವಾಗಿ ಅರ್ಥಶಾಸ್ತ್ರದ ವ್ಯಾಖ್ಯೆಯನ್ನು ಈ ಸಾಧನದ ಸಹಾಯದಿಂದ ಸುಲಭವಾಗಿ ಗ್ರಹಿಸಬಹುದು. ಉತ್ಪಾದನಾಂಗಗಳು ವಿರಳವಾಗಿರುವದರಿಂದ ಉತ್ಪಾದನಾ ಸಾಧ್ಯತೆಗೆ ಒಂದು ಪರಿಮಿತಿಯುಂಟಾಗುತ್ತದೆ. ಈ ಅಂಶವನ್ನು ಉತ್ಪಾದನಾ ಸಾಧ್ಯತಾ ರೇಖೆ ಸ್ಪಷ್ಟವಾಗಿ ನಿರೂಪಿಸುತ್ತದೆ.


ಎರಡನೆಯದಾಗಿ ಒಂದು ಆರ್ಥಿಕತೆಯ ಮೂರು ಸಮಸ್ಯೆಗಳಾದ ಏನನ್ನು, ಹೇಗೆ ಮತ್ತು ಯಾರಿಗಾಗಿ—ಎಂಬುವುಗಳನ್ನು ವಿವರಿಸಲು ಸಹಾಯ ಮಾಡುತ್ತದೆ.

ಏನನ್ನು ಉತ್ಪಾದಿಸುತ್ತದೆ ಎಂಬುದನ್ನು ಉತ್ಪಾದನಾ ಸಾಧ್ಯತಾ ರೇಖೆಯ ಮೇಲೆ ಉತ್ಪಾದನಾ ಕೂಟವನ್ನು ಗುರುತಿಸುವದರಿಂದ ಹೇಳಬಹುದು.

ಹೇಗೆ ಉತ್ಪಾದಿಸುತ್ತಿದೆ ಎಂಬುದು ಉತ್ಪಾದನಾಂಗಗಳ ವಿವೇಚನೀಯ ಮತ್ತು ಪರಿಣಾಮಕಾರಿ ಬಳಕೆಯಲ್ಲಿರುತ್ತದೆ. ಯಾರಿಗಾಗಿ ಉತ್ಪಾದಿಸುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಈ ಸಾಧನದ ಆಧಾರದಿಂದ ಹೇಳಲು ಸಾಧ್ಯವಿಲ್ಲ.


ಈ ಮುಂದಿನ ಚಿತ್ರಗಳು ಉತ್ಪಾದನಾ ಸಾಧ್ಯತಾ ರೇಖೆಗಳ ಹಲವು ಉಪಯೋಗಗಳನ್ನು ತಿಳಿಸುತ್ತವೆ.*

* ಚಿತ್ರ ೩, ೪ ಮತ್ತು ೫ರ X ಅಕ್ಷ ಮತ್ತು Y ಅಕ್ಷಗಳ ಮೇಲೆ ನಮೂದಿಸಿರುವ ವಸ್ತುಗಳಿಗೆ ಸಂದರ್ಭಕ್ಕೆ ತಕ್ಕುದಾದ ಅಳತೆ ಉಪಯೋಗಿಸಬೇಕು.




ಚಿತ್ರ:3 A,B

ಚಿತ್ರ : ೩ರಲ್ಲಿ 'A' ಮತ್ತು 'B' ಎರಡು ಭಾಗಗಳಿವೆ. 'A' ಅಭಿವೃದ್ಧಿ ಶೀಲ ದೇಶ. ಇದರ ಉತ್ಪಾದನಾಕೂಟ 'A' ಯಲ್ಲಿದೆ. 'A' ಯಲ್ಲಿ ಅಧಿಕ ಪ್ರಮಾಣದ ಉತ್ಪಾದನಾಂಗಗಳನ್ನು ಆಹಾರ ಸಾಮಗ್ರಿಗಳನ್ನು ಒದಗಿಸಿ, ಐಷಾರಾಮಗಳಿಗೆ ಅಧಿಕ ಪ್ರಮಾಣದಲ್ಲಿ ಪೂರೈಸಲು ವಿಫಲವಾಗಿದೆ. ಆದರೆ 'B' ಚಿತ್ರದಲ್ಲಿ ಅಭಿವರ್ಧಿತ ದೇಶದ ಉತ್ಪಾದನಾಕೂಟ 'B' ಯಲ್ಲಿದೆ. ಈಗ ದೇಶ ಐಷಾರಾಮಗಳಿಗೂ ಉತ್ಪಾದನಾಂಗಗಳನ್ನು ಪೂರೈಸಲು ಸಮರ್ಥವಾಗಿದೆ. ಅಭಿವೃದ್ಧಿಶೀಲ ದೇಶ ಅಧಿಕ ಆಹಾರ ಧಾನ್ಯಗಳನ್ನು ಅಭಿವರ್ಧಿತದೇಶ ಐಷಾರಾಮ ಮತ್ತು ಆಹಾರ ಧಾನ್ಯಗಳೆರಡನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸುತ್ತದೆ. ಈ ಅಂಶವನ್ನು ಮೇಲಿನ ಚಿತ್ರದಲ್ಲಿ ಕಾಣಬಹುದು.



ಚಿತ್ರ:4 A,B

ಚಿತ್ರ : ೪ ಉತ್ಪಾದನಾ ಸಾಧ್ಯತಾ ರೇಖೆಯು ಮತ್ತೊಂದು ಉಪಯೋಗವನ್ನು ತಿಳಿಸುತ್ತದೆ. ಇಲ್ಲಿ ಒಂದು ದೇಶ 'A' ತಾಂತ್ರಿಕವಾಗಿ ಮತ್ತು ವೈಜ್ಞಾನಿಕವಾಗಿ ಹಿಂದುಳಿದದ್ದು, ಅಧಿಕ ಬಂಡವಾಳ ವಿನಿಯೋಗಿಸುತ್ತಾ ತನ್ನ ಉತ್ಪಾದನಾ ಸಾಧ್ಯತಾ ರೇಖೆಯನ್ನು ಹಿಗ್ಗಿಸುತ್ತಾ ನಡೆದಿದೆ. ಆದರೆ 'B' ದೇಶ ತಾಂತ್ರಿಕ ಮತ್ತು ವೈಜ್ಞಾನಿಕ ಆವಿಷ್ಕಾರಗಳಿಗೆ ಆದ್ಯತೆ ಕೊಟ್ಟಿರುವುದರಿಂದ ನಿರ್ದಿಷ್ಟ ಅವಧಿಯಲ್ಲಿ ತನ್ನ ಉತ್ಪಾದನಾ ಸಾಧ್ಯತಾ ರೇಖೆಯ ವರ್ಧತೆಯನ್ನು 'A' ದೇಶಕ್ಕಿಂತ ದೊಡ್ಡ ಪ್ರಮಾಣದಲ್ಲಿ ಮಾಡಿಕೊಂಡಿದೆ.



ಚಿತ್ರ: 5 A,B

ಚಿತ್ರ ೫ರಲ್ಲಿ 'A' ದೇಶ ಉತ್ಪಾದನಾ ಸಾಧ್ಯತಾ ರೇಖೆ ಜನಸಂಖ್ಯೆ ಮತ್ತು ಭೂಮಿಯು ವೃದ್ಧಿಯಿಂದಾಗಿ 'A' ಯಿಂದ 'B' ಗೆ ಹಿಗ್ಗಿದೆ. ಆದರೆ ಭೂಮಿ ಮತ್ತು ಕಾರ್ಮಿಕರ ವೃದ್ಧಿಯ ಪರಿಮಾಣ ಸ್ಥಿರವಾಗಿದೆ. 'B' ಯಲ್ಲಿ ಉತ್ಪಾದನೆ ಎರಡು ವಸ್ತುಗಳದ್ದು ಒಂದು ಪಟ್ಟು ಜಾಸ್ತಿಯಾಗಿದೆ. ಉತ್ಪಾದನಾ ರೇಖೆ ಮತ್ತು 'C'ಗೆ ವರ್ಧಿಸಲಿ. ಮತ್ತೆ ಎರಡು ವಸ್ತುಗಳ ಉತ್ಪಾದನೆ ಒಂದು ಪಟ್ಟು ಜಾಸ್ತಿಯಾಗಿದೆ. ಇದು ಸಮತೋಲನ ಅಭಿವೃದ್ಧಿಗೆ ಒಂದು ಉದಾಹರಣೆಯಾಗಿದೆ.

'B' ದೇಶದ ಉತ್ಪಾದನಾ ಸಾಧ್ಯತಾ ರೇಖೆಗಳು ಹಿಗ್ಗುತ್ತಾ ನಡೆದಿವೆ. ಆದರೆ ಇಲ್ಲಿ ಭೂಮಿಯು ಪೂರೈಕೆ ಸ್ಥಿರವಾಗಿದೆ. ಜನಸಂಖ್ಯೆಯು ಏರಿಕೆಯಿಂದಾಗಿ ಪ್ರತಿ ಕಾರ್ಮಿಕನಿಗೆ ದೊರೆಯುವ ಭೂಮಿ ಕಡಿಮೆಯಾಗುತ್ತಾ ನಡೆದಿದೆ. ಆದ್ದರಿಂದಲೇ 'B_1' ರೇಖೆ 'A' ದೇಶದ 'B' ರೇಖೆಗಿಂತ ಕಡಿಮೆ ಪ್ರಮಾಣದಲ್ಲಿವೆ. ಕುಗ್ಗುತ್ತಾ ಏರುತ್ತಿರುವ ಉತ್ಪಾದನಾ ಪ್ರಮಾಣವನ್ನು ನಾವು 'B' ಚಿತ್ರದ

೧, ೨, ೩ ಬಾಣಗಳ ಗುರುತಿನಿಂದ ತಿಳಿಯಬಹುದು. ಇದಕ್ಕೆ ಕಾರಣವನ್ನು ನಾವು ಸೀಮಾಂತ ಇಳಿಕೆ ಪ್ರತಿಫಲ ನಿಯಮದಲ್ಲಿ ತಿಳಿಯಬಹುದು. ಹೀಗೆ ಉತ್ಪಾದನಾ ಸಾಧ್ಯತಾ ರೇಖೆಗಳು ಅರ್ಥಶಾಸ್ತ್ರದಲ್ಲಿ ಬಹುಪಯೋಗಿ ಸಾಧನ ವಾಗಿದೆ.

ಉಪಸಂಹಾರ :

ಅರ್ಥಶಾಸ್ತ್ರದಲ್ಲಿ ಗೌರವಯುತ ಸ್ಥಾನವನ್ನು ಹೊಂದಿ, ಪ್ರಮುಖ ನಿಯಮಗಳ ವಿವರಣೆಗೆ ಸಾಧನ ರೂಪವಾಗಿರುವ ಉತ್ಪಾದನಾ ಸಾಧ್ಯತೆ ರೇಖೆ ಗಳು ಅರ್ಥಶಾಸ್ತ್ರದ ಇತರ ತತ್ವಗಳ ಹಾಗೆ ಸಂಕೀರ್ಣವಾಗಿಲ್ಲ. ಸಂಕೀರ್ಣ ತೆಯು ಅರ್ಥಶಾಸ್ತ್ರದ ಲಕ್ಷಣವಾಗಿರುವ ಇಂದು ಉತ್ಪಾದನಾ ಸಾಧ್ಯತಾ ರೇಖೆ ಆದಕ್ಕೊಂದು ಅಪವಾದ.

***

ಗ್ರಂಥಋಣ :

1 Samuelson, Economics, Ed. 9. pp. 19-26.
2 McConnell, Economics — Principles, Problems and Prices. Ed. 4. pp. 21 - 30.
3 Ferguson and Kreps, Principles of Economics Ed. pp. 24-27.
4 ಡಾ|| ಜಿ. ಟಿ. ಹುಚ್ಚಪ್ಪ, ಎಸ್. ಶರಣಪ್ಪ : ಅರ್ಥಶಾಸ್ತ್ರದ ತತ್ವಗಳು, ಆವೃತ್ತಿ -1 ಪುಟಗಳು 1-13.

——

ವೇಶ್ಯಾ ಸಮಸ್ಯೆ

● ಎಸ್. ಎಸ್. ಪಾಟೀಲ

ಮಾನವನ ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ, ಅವನ ಸಾಮಾಜಿಕ ಜೀವನದ ಜೊತೆ ಜೊತೆಗೆ ವೇಶ್ಯಾ ಸಮಸ್ಯೆಯು ಬೆಳೆದು ಬಂದಿದೆ ಎಂದು ತಿಳಿಯುತ್ತದೆ. ಇದು ಭೂಖಂಡದ ಎಲ್ಲೆಡೆಯಲ್ಲೂ ಇತ್ತೆಂದು ತಿಳಿದು ಬರುತ್ತದೆ. ಭಾರತದಲ್ಲಿ ವೇಶ್ಯಾಸಮಸ್ಯೆಯ ಇತಿಹಾಸವು ಪ್ರಾಚೀನ ಕಾಲಕ್ಕೆ ಹೋಗುತ್ತದೆ. ವೇಶ್ಯಾವೃತ್ತಿಯು ಒಂದು ಕಾಯ್ದೆಬದ್ಧ ಸಂಸ್ಥೆಯಾಗಿ ವೇದ ಪೂರ್ವ ಕಾಲದಲ್ಲಿ ನಡೆದು ಬಂದಿತ್ತೆಂಬುದರ ಬಗ್ಗೆ ಸಾಕಷ್ಟು ಆಧಾರಗಳು ಸಿಕ್ಕುತ್ತವೆ. ಸ್ಕಂದ ಪುರಾಣದಲ್ಲಿ, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಮತ್ತು ವಾತ್ಸಾಯನನ ಕಾಮಸೂತ್ರಗಳಲ್ಲಿಯೂ ಕೂಡಾ ಇದರ ಬಗ್ಗೆ ಸಾಕಷ್ಟು ಸಾಕ್ಷಿ ಪುರಾವೆಗಳು ಸಿಕ್ಕುತ್ತವೆ. ಹಿಂದೆ ದಕ್ಷಿಣ ಸಮುದ್ರದ ನಡುಗಡ್ಡೆಗಳಲ್ಲಿ ಬಂಜೆಯರನ್ನು ಅಡವಿಯಲ್ಲಿ ಬಿಡುವ ಪದ್ಧತಿಯು ಇದ್ದಿತು. ಇಂಥವರೊಂದಿಗೆ ಬೇಕಾದವರು ಲೈಂಗಿಕ ಸಂಪರ್ಕವನ್ನು ಹೊಂದುವ ರೂಢಿ ಇದ್ದಿತಂತೆ! ಇದು ಬಹು ಪುರಾತನ ಕಾಲದ ವೇಶ್ಯಾ-ಸಮಸ್ಯೆಯ ಇತಿಹಾಸಕ್ಕೆ ಸಾಕಷ್ಟು ಆಧಾರ ಸಂಗತಿಗಳನ್ನು ಒದಗಿಸುತ್ತದೆ.

ಇತ್ತಿತ್ತಲಾಗಿ ನಾಗರಿಕತೆ ಬೆಳೆದಂತೆ, ಸಾರಿಗೆ-ಸಂಪರ್ಕಗಳು ಹೆಚ್ಚಿ ವೇಶ್ಯಾವೃತ್ತಿ ತಾಂತ್ರಿಕತೆ ಬೆಳೆದಂತೆ ವೇಶ್ಯೆಯರ ಸಾಮಾಜಿಕ ಜಟಿಲ ಪ್ರಶ್ನೆಯಾಗಿ, ಸಮಾಜ ಶಾಸ್ತ್ರಜ್ಞರ ಲಕ್ಷವನ್ನು ಆಕರ್ಷಿಸಿತು. ಇಂದು ಈ ಸಾಮಾಜಿಕ ಪ್ರಶ್ನೆಯು ಪರಿಹರಿಸಲಸಾಧ್ಯವಾದ ಒಂದು ಕ್ಲಿಷ್ಟ ಪ್ರಶ್ನೆಯಾಗಿದೆ.

ಆಕಸ್ಮಿಕ ಅವಕಾಶ ಸಿಕ್ಕಾಗ, ವೇಶ್ಯಾಸಮಸ್ಯೆಯ ಅಭ್ಯಾಸದ ವಿಚಾರದಿಂದ, ಮುಂಬೈನಗರದಲ್ಲಿ ಕೆಂಪು ದೀಪದ ಕೆಳಗೆ ಭಾವ-ಭಂಗಿಯಲ್ಲಿ, ಅಂಗವಿನ್ಯಾಸ ಗಳಿಂದ ಕೂಡಿನಿಂತ ವೇಶ್ಯೆಯರ ಜೀವನ ಸಮಸ್ಯೆಯನ್ನೇಕೆ ಅಭ್ಯಸಿಸಬಾರ ದೆಂಬುದು ಈ ಲೇಖನದ ಬರೆಹಕ್ಕೆ ಪೂರ್ವ ಪೀಠಿಕೆ ಹಾಕಿದೆ.

ಮೊತ್ತಮೊದಲು ಯಾವ ವಿಚಾರವಿಲ್ಲದೆ ಅನಾಯಾಸವಾಗಿ ಮುಂಬೈ ನಗರದಲ್ಲಿ ಕಾಲಿಟ್ಟದ್ದರಿಂದ ಯಾವ ಪ್ರಶ್ನೆಗಳ ಪಟ್ಟಿಯನ್ನು ಮಾಡಿಕೊಂಡಿರಲಿಲ್ಲ. ಆದರೂ ಆ ಜನರನ್ನು ನೋಡಿ ಇವರ ಸಮಸ್ಯೆಗಳೇನು? ಇವರು ವೇಶ್ಯೆಯರೇ-ಕಾದರು ? ಎಂದು ತಿಳಿದುಕೊಳ್ಳುವ ಹಂಬಲ ಬೆಳೆದು ಹೆಮ್ಮರವಾಯಿತು.

ಅಲ್ಪ ಕಾಲದ ಅವಧಿಯಲ್ಲಿ, ಸಾಧ್ಯವಾದಷ್ಟು ವೇಶ್ಯೆಯರ ಜೀವನ ಕಥೆ ಯನ್ನು ಕೇಳಿ ಅವರ ಸಮಸ್ಯೆಗಳನ್ನು ತಿಳಿದುಕೊಂಡರಾಯಿತೆಂದು, ವೇಶ್ಯಾ ಸಮಸ್ಯೆಯ ಅಭ್ಯಾಸಕ್ಕೆ ಧುಮಿಕಿದ್ದಾಯಿತು. ಕೆಲವೇ ಅವಶ್ಯ ಪ್ರಶ್ನೆಗಳನ್ನು ಅವಸರದಲ್ಲಿ ರಚಿಸಿದ್ದಾಯಿತು. ನನ್ನ ವಯಸ್ಕರೇ ಆದ ಇನ್ನೂ ನಾಲ್ಕು ಜನ ರೊಂದಿಗೆ, ಕಾಗದ ಪೆನ್ನುಗಳೊಂದಿಗೆ ಅವರ ಕೆಲವು ಮುಖ್ಯಸ್ಥರನ್ನು ಹಾಗೂ ಹೆಗ್ಗಡತೆಯರನ್ನು ಭೆಟ್ಟಿಯಾಗಿ, ಅಪ್ಪಣೆ ಪಡೆದು ಅಭ್ಯಾಸದ ಕಾರ್ಯಕ್ಕೆ ಕೈಹಾಕಲಾಯಿತು. ಆ ಮುಖ್ಯವಾದ ಪ್ರಶ್ನಾವಳಿಯಲ್ಲಿ ಹೆಸರು, ಜಾತಿ, ವಿವಾಹಿತ, ಅವಿವಾಹಿತ, ವಯಸ್ಸು, ಶಿಕ್ಷಣ, ಉದ್ಯೋಗ, ಪ್ರಾರಂಭದಲ್ಲಿದ್ದ ವಯಸ್ಸು ಹೀಗೆ ಅನೇಕ ವಿಷಯಗಳ ಬಗ್ಗೆ ಅವಸರದಲ್ಲಿ ಪ್ರಶ್ನಾವಳಿಯನ್ನು ರಚಿಸಲಾಗಿತ್ತು. ಆದರೆ ಏಕೆ ಹಾಗೂ ಹೇಗೆ ನೀವು ಈ ವೃತ್ತಿಗಿಳಿದಿರಿ ಎಂಬ ಮುಖ್ಯ ಪ್ರಶ್ನೆ ಕೊನೆಯದಾಗಿದ್ದರೂ ಅಲ್ಲಲ್ಲಿ ಪ್ರಸಂಗಾನುಸಾರವಾಗಿ ಪ್ರಶ್ನೆಗಳನ್ನು ಕೇಳದೇ ಬಿಡಲಿಲ್ಲ.

ಪ್ರತಿಯೊಬ್ಬ ವೇಶ್ಯೆಯ ಜೀವನವು ಬಹು ಚಿಂತಾಜನಕ, ಸಾಹಸದ ಜೀವನ ಕಥೆಯಾಗಿದೆ. ಪ್ರತಿಯೊಬ್ಬರ ಜೀವನದ ಬಗ್ಗೆ ನಾಟಕ, ಚಿತ್ರಗಳನ್ನು ಚಿತ್ರಿಸಿ ಜನಮನಕ್ಕೆ ಬಿತ್ತರಿಸುವಂಥ ಕರುಣಾಜನಕ ಕಥೆಗಳಾಗಿವೆ. ಅವಸರದಲ್ಲಿ ಒಂದುನೂರಾ ಇಪ್ಪತ್ತೆಂಟು ವೇಶ್ಯೆಯರ ಜೀವನ ಕಥೆಗಳನ್ನು ಆಧಾರವಾಗಿಟ್ಟು-ಕೊಂಡು ಈ ಸಾಮಾಜಿಕ ಪ್ರಶ್ನೆಯನ್ನು ವೈಜ್ಞಾನಿಕ ದೃಷ್ಟಿಯಿಂದ ಪರೀಕ್ಷಿಸಲು ಪ್ರಯತ್ನಪಟ್ಟಿದ್ದಾಗಿದೆ.

ಅವಸರದಲ್ಲಿ ಅಳವಡಿಸಿಕೊಂಡ ಜೀವನ ಕಥೆಯ ರೀತಿಯು ಸರಿಯಾದದ್ದೇ ಎಂದು ವಿಚಾರ ಮಾಡುತ್ತಿದ್ದಾಗ ಥಾಮಸ್ ಹಾಗೂ ಝ್ನಾನಿಯಸ್ಕಿಯವರ ಹೇಳಿಕೆಯು ನನಗೆ ಈ ವಿಷಯದಲ್ಲಿ ಮುಂದುವರಿಯಲು ಪ್ರೋತ್ಸಾಹ ನೀಡಿತು.

ಅವರ ಮಾತಿನಲ್ಲಿ ಹೇಳಬೇಕಾದರೆ: "Personal life records as complete as possible, constitute the perfect type of sociological material, since they represent a more enlightening and fundamentally more real record of personal experience, with a wealth of concrete details, vivid memories which escape the attention of the most skilled investigators using other techniques......social science has to resort to the use of other than life history data, it is only because of the practical difficulty of obtaining..and of the enormous amount of work demanded for an adequate analysis of all the personal material necessary to characterise the life of the social group" (Thomas and Znaniecki; "The Polish Peasant;" pp. 1832–1836). ಜೀವನ ಇತಿಹಾಸ ಅಭ್ಯಾಸವು ಸರಿಯಾದ ಅಭ್ಯಾಸರೀತಿ. ಆದರೆ ಸಮಾಜ ಶಾಸ್ತ್ರಜ್ಞರು ಇದನ್ನು ಹೆಚ್ಚು ಅನುಸರಿಸುತ್ತಿಲ್ಲ. ಏಕೆಂದರೆ ಇದು ಶ್ರಮದಾಯಕ ವೈಜ್ಞಾನಿಕ ಕ್ರಮವಾಗಿದೆ.

ವೇಶ್ಯೆಯರಾರು? ಅನೇಕ ಸಮಾಜ ಶಾಸ್ತ್ರಜ್ಞರು ಅನೇಕ ವಿಧವಾಗಿ ವೇಶ್ಯೆಯರ ಬಗ್ಗೆ ವ್ಯಾಖ್ಯೆಗಳನ್ನು ನೀಡಿದ್ದಾರೆ. ಸರ್ವಸಾಮಾನ್ಯವಾಗಿ ವೇಶ್ಯೆಯರೆಂದರೆ- ವೈವಾಹಿಕ ಜೀವನಕ್ಕೆ ನಿಷೇಧಿಸಿದ ಹೊರ ಲೈಂಗಿಕ ಸಂಪರ್ಕವನ್ನು ಹೊಂದಿದವರು ಎಂಬ ಕಲ್ಪನೆಯನ್ನು ತಿಳಿಸಿದ್ದಾರೆ. ಶಾಸ್ತ್ರಬಾಹಿರವಾದ ಲೈಂಗಿಕ ಸಂಬಂಧವನ್ನು ಹೊಂದಿದವರು ಎಂದೂ ತಿಳಿಯಬಹುದಾಗಿದೆ.

ವೇಶ್ಯೆಯರೆಂದರೆ–ಹೆಣ್ಣುಮಗಳು ತಾತ್ಪೂರ್ತಿಕ ಹಣಸಂಪಾದನೆಗಾಗಿ, ತನ್ನ ದೇಹವನ್ನು ಗಂಡಸರಿಗೆ ಉದಾರವಾಗಿ ಕೊಡುವವಳು ಎಂಬ ಕಲ್ಪನೆಯು ಸಂಕುಚಿತ ದೃಷ್ಟಿಕೋನದ ವ್ಯಾಖ್ಯೆಯೆನಿಸುತ್ತದೆ.

ವೇಶ್ಯಾವೃತ್ತಿಯು ಗಂಡು ಹೆಣ್ಣುಗಳೆಂಬ ಭೇದವಿಲ್ಲದೇ, ಸ್ವಂತ ಆರ್ಥಿಕ ಲಾಭ ಅಥವಾ ದೈಹಿಕ ತೃಪ್ತಿಗಾಗಿ ನಡೆಯಬಹುದಾಗಿದೆ. ಇದು ಸಲಿಂಗಿಗಳಲ್ಲಿಯೂ ನಡೆಯಬಹುದು ಎಂಬ ವಿಚಾರವನ್ನು ಜಿ. ಆರ್. ಸ್ಕೊಟರು ತಮ್ಮ ಗ್ರಂಥ "ವೇಶ್ಯೆಯರ ಇತಿಹಾಸ"ದಲ್ಲಿ ತಿಳಿಸಿದ್ದಾರೆ. ಈ ಅಭಿಪ್ರಾಯವನ್ನು ನಾವು ವೈಜ್ಞಾನಿಕ ಹಾಗೂ ಸಮರ್ಪಕವೆಂದು ಪರಿಗಣಿಸಬಹುದು.

ಇದರಿಂದ ನಮಗೆ ತಿಳಿದು ಬರುವದೇನೆಂದರೆ, ವೇಶ್ಯೆಯು ಕೇವಲ ವೇಶ್ಯಾಗೃಹಗಳಲ್ಲಿಯೇ ಅಲ್ಲ, ಸಮಾಜದ ಪ್ರತಿಯೊಂದು ಮೂಲೆಯಲ್ಲಿಯೂ ಈ ಪ್ರಕಾರದ

ಜನರು ಕಣ್ಣಿಗೆ ಬೀಳುತ್ತಾರೆ. ಅನೇಕ ದೊಡ್ಡ ನಗರಗಳಲ್ಲಿಯು ಜನರಿಗೆ ಇಂಥ ಕಣ್ಣುಮುಚ್ಚಾಟದ ವೇಶ್ಯಾವೃತ್ತಿಯು ಎಲ್ಲರ ಗಮನಕ್ಕೆ ಬಂದಿರಲು ಸಾಕು.

ಈ ವ್ಯಾಖ್ಯೆಗಳನ್ನು ಪರಿಶೀಲಿಸಲಾಗಿ, ವೇಶ್ಯಾವೃತ್ತಿಗೆ ಆರ್ಥಿಕ ಸಂಪಾದನೆ ಹಾಗೂ ಲೈಂಗಿಕ ತೃಪ್ತಿ ಎಂಬೆರಡು ಗುರಿಗಳಿವೆ ಎಂದು ತಿಳಿದು ಬರುತ್ತದೆ.

ಮುಂಬೈ ನಗರದ ವೇಶ್ಯೆಯರ ಜೀವನದ ಕಥೆಗಳನ್ನು ವೈಜ್ಞಾನಿಕ ನಿರೀಕ್ಷಣೆಯಿಂದ ಅಭ್ಯಾಸಮಾಡಿದರೆ, ಸಮಾಜಶಾಸ್ತ್ರದ ಜ್ಞಾನ ಬೊಕ್ಕಸಕ್ಕೆ ಅನೇಕ ಹೊಸ ವಿಷಯಗಳ ಸೇರ್ಪಡೆಯಾದಂತಾಗುತ್ತದೆ. ಅವರ ಸತ್ಯ ಕಥೆಗಳನ್ನು ಕೂಲಂಕಷವಾಗಿ ವಿಚಾರಿಸಿ, ಅವಶ್ಯ ಸಂಗತಿಗಳನ್ನು ಸಂಕ್ಷೇಪವಾಗಿ ಈ ಕೆಳಗಿನಂತೆ ವಿವರಿಸಬಹುದು.

ಜಾತಿ :

ವೇಶ್ಯಾ ಸಮಸ್ಯೆಗೆ ಜಾತಿ ಗಣನೀಯವಾದ ಅಂಶವಾಗಿದೆ. ಏಕೆಂದರೆ ಯಾವ ಹೆಣ್ಣು ಅಥವಾ ಗಂಡು ಇಂತಹ ಜಾತಿಯಲ್ಲಿ ಹುಟ್ಟಿದೆ ಎಂದಾಗ ಆ ಜಾತಿಯ ಸಂಸ್ಕಾರಗಳು ಬಲವತ್ತರವಾದ ಪರಿಣಾಮಗಳನ್ನುಂಟು ಮಾಡುತ್ತವೆ. ಆದ್ದರಿಂದ ಈ ಆಧಾರದ ಮೇಲೆ ಕೆಳಗಿನಂತೆ ಅಂಕೆ ಸಂಖ್ಯೆಗಳನ್ನು ಪರಿಶೀಲಿಸಬಹುದು :

ಸೂಚಿಪತ್ರ ಕ್ರಮಾಂಕ – ೧.

ಕ್ರಮಾಂಕ	ಜಾತಿ	ವೇಶ್ಯೆಯರ ಸಂಖ್ಯೆ	ಪ್ರತಿಶತದಲ್ಲಿ
೧	ಬ್ರಾಹ್ಮಣರು	೩೭	೨೧.೧೦
೨	ಮರಾಠರು	೭	೫.೪೪
೩	ಇತರ ಹಿಂದುಗಳು	೭೩	೫೭.೦೩
೪	ಕ್ರೈಸ್ತರು	೯	೭.೦೩
೫	ಮುಸ್ಲಿಮರು	೧೨	೯.೪೦
	ಒಟ್ಟು	೧೩೮	೧೦೦.೦೦

ಈ ಮೇಲಿನ ಅಂಶಗಳಿಂದ ತಿಳಿದು ಬರುವದೇನೆಂದರೆ ವೇಶ್ಯಾಸಮಸ್ಯೆಗೆ ಕಡಿಮೆ ಅಂತಸ್ತಿನ ಜನರು ಹೆಚ್ಚಾಗಿ ತುತ್ತಾಗುವರು. ಅತಿ ಗಂಭೀರ ಆರ್ಥಿಕ,

ಸಾಮಾಜಿಕ ಪರಿಸ್ಥಿತಿಗೊಳಗಾದ ಕಡಿಮೆ ಅಂತಸ್ತಿನ ಬಡವ, ಅಶಿಕ್ಷಿತ ಹಿಂದು ಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಉದ್ಯೋಗಕ್ಕೆ ಇಳಿಯುತ್ತಾರೆ ಎಂದು ತಿಳಿದು ಬರುವದು.

ವಯಸ್ಸು :

ಹೆಣ್ಣೇಯಿರಲಿ, ಗಂಡೇಯಿರಲಿ ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆಗೆ ವಯಸ್ಸು ಬಹು ಮುಖ್ಯವಾದ ಪಾತ್ರವನ್ನು ವಹಿಸಿದೆ. ತನ್ನ ವಯಸ್ಸಿನ ೧೨ ರಿಂದ ೨೨ ವರ್ಷವು ಪ್ರತಿ ಹೆಣ್ಣಿಗೆ ಬಹು ಮುಖ್ಯವಾದ ವಯಸ್ಸು. ಈ ಸಮಯದಲ್ಲಿ ವ್ಯಕ್ತಿಯನ್ನು ಒರೆಗಲ್ಲಿಗೆ ಹಚ್ಚಿನೋಡಲು ಅನೇಕ ಲೈಂಗಿಕ ಸಮಸ್ಯೆಗಳು ಪ್ರಬುದ್ಧವಾಗಿ ಕಾಣುತ್ತಿರುತ್ತವೆ. ಈ ವಯಸ್ಸಿನಲ್ಲಿಯೇ ವ್ಯಕ್ತಿಯ ಮಹತ್ವದ ಘನತೆ ಹಾಗು ಬೆಳವಣಿಗೆಯನ್ನು ನಾವು ಕಾಣುತ್ತೇವೆ. ಸ್ವೇಚ್ಛೆಯಿಂದಲೂ, ನಿರಂಕುಶದಿಂದಲೂ ಕೂಡಿದ ಲೈಂಗಿಕ ಇಚ್ಛೆಯುಳ್ಳ ವ್ಯಕ್ತಿಯು ಅಡ್ಡಹಾದಿ ಹಿಡಿದು ತಾನು ತನ್ನ ಕೀರ್ತಿಯನ್ನು ನೆಲಸಮಮಾಡಿ ಕೊಳ್ಳುತ್ತಾನೆ. ಈ ಮಾತು ವೇಶ್ಯೆಯರ ಜೀವನಕ್ಕೆ ಅರ್ಥಪೂರ್ಣವಾಗಿ ಹೊಂದುತ್ತದೆ. ಈ ವಿಷಯವನ್ನು ಕೆಳಗಿನ ಅಂಶಗಳಿಂದ ಸಮರ್ಥಿಸಬಹುದು :

ಸೂಚಿಪತ್ರ ಕ್ರಮಾಂಕ – ೨.

ಕ್ರಮಾಂಕ	ವಯಸ್ಸು	ವೇಶ್ಯೆಯರ ಸಂಖ್ಯೆ	ಪ್ರತಿಶತದಲ್ಲಿ
೧	೧೨–೧೪	೧೮	೧೪.೦೬
೨	೧೫–೧೭	೬೧	೪೭.೯೬
೩	೧೮–೨೦	೪೬	೩೫.೬೩
೪	೨೧ ಕ್ಕಿಂತ ಹೆಚ್ಚು	೩	೨.೩೫
	ಒಟ್ಟು	೧೨೮	೧೦೦.೦೦

ಮೇಲಿನ ಸೂಚಿಪತ್ರವು ಹೆಣ್ಣು ಮಕ್ಕಳ ಜೀವನದಲ್ಲಿ ವಯಸ್ಸು ಎಷ್ಟು ಮಹತ್ವದ್ದೆಂದು ತಿಳಿಸಿಕೊಡುವ ಸಂಪೂರ್ಣ ಸ್ವಚ್ಛಗನ್ನಡಿಯಾಗಿದೆ. ಹನ್ನೆರಡ ರಿಂದ ಇಪ್ಪತ್ತೊಂದು ವಯಸ್ಸು ಹೆಣ್ಣುಗಳನ್ನು ಸುಮಾರ್ಗದಿಂದ ದುರ್ಮಾರ್ಗಕ್ಕೆ ಸರಳವಾಗಿ ಎಳೆಯಬಹುದಾಗಿದೆ. ಈ ಸಮಯದಲ್ಲಿ ಹೆಣ್ಣು ಹಾದಿ ಬಿಟ್ಟರೆ ಜಗತ್ತೇ ಅವಳಿಂದ ದೂರಾಗುತ್ತದೆ. ಆಗ ಅವಳ ಪಾಡು ವೇಶ್ಯಾಂಗನೆಯರ ಸೆರೆಮನೆ ಸೇರುವದು ಇಲ್ಲವೇ ಮರಣವನ್ನಪ್ಪುವುದು ಆಗಿರುತ್ತದೆ. ಇವು

ಅವಳ ಮುಂದಿರುವ ಎರಡು ಪರಿಹಾರ ಮಾರ್ಗಗಳಾಗಿರುತ್ತವೆ. ಮರಣ ಬಹು ದುರ್ಧರ. ಯಾರಿಗೂ ಜೀವ ಬೇಕಾಗಿರದೇ ಇಲ್ಲ. ಆದ್ದರಿಂದ ಎಂಥ ಜೀವನವೇ ಆಗಲಿಯೆಂದು ಕೊನೆಗೆ ಈ ಮನೆಗಳಿಗೆ ಶರಣು ಹೊಡೆದು, ಒಮ್ಮೆ ಒಳಗೆ ಕಾಲಿಟ್ಟರೆ ಎಂದೆಂದಿಗೂ ಹೊರಬರಲಾರದ ನಗರಕ್ಕೆ ಬಂದು ಬೀಳುವರು. ಹೀಗೆ ೧೫ ರಿಂದ ೨೦ ವರ್ಷದ ವಯಸ್ಸಿನ ಪರಿಧಿಯಲ್ಲಿ ಈ ವೃತ್ತಿಗಿಳಿದವರು ೮೩.೫೯ ಪ್ರತಿಶತ ಇದ್ದಾರೆ. ಇದರಿಂದ ವಯಸ್ಸು ವೇಶ್ಯೆಯರ ಜೀವನಕ್ಕೆ ಮುಖ್ಯಕಾರಣವೆಂದು ಸ್ಪಷ್ಟವಾಗುತ್ತದೆ.

ವೈವಾಹಿಕ ಅಂತಸ್ತು :

ಸಾಮಾನ್ಯವಾಗಿ ಹೆಣ್ಣು ಎಲ್ಲ ನಾಗರಿಕ ಸಮಾಜಗಳಲ್ಲಿ, ಮದುವೆಯಾಗಿ ಪತಿಯ ಮನೆಯನ್ನು ಪುನೀತ, ಪವಿತ್ರ ಹಾಗು ಸ್ವರ್ಗಪ್ರಾಯವಾಗಿ ಮಾಡಲು ಕಾಲಿಡುವಳು. ಒಂದು ವೇಳೆ ಪತಿಯ ಮನೆಯ ಅಂತಸ್ತು ಅದರಲ್ಲೂ ಆರ್ಥಿಕ ಹಾಗೂ ಸಾಮಾಜಿಕ ಅಂತಸ್ತು ಸರಿಯಾಗಿರದೇ ಹೋದರೆ ಹೆಣ್ಣು ಅನೇಕ ಆಸೆ, ಆಕಾಂಕ್ಷೆ ಹಾಗು ಫಲಗಳಿಗಾಗಿ ಕಾಲು ಜಾರುವ ಸಂಭವ ಹೆಚ್ಚು. ಹೀಗೆ ಕಾಲು ಜಾರಿದ ಹೆಣ್ಣುಗಳನ್ನು ಸರ್ವ ಸಮಯದಲ್ಲಿ ದೇಹವ್ಯಾಪಾರವನ್ನೇ ಜೀವನದ ಗುರಿಯನ್ನಾಗಿಟ್ಟುಕೊಂಡವರು, ಹಸನ್ಮುಖರಾಗಿ ಬರಮಾಡಿಕೊಳ್ಳುವರು. ಈ ಮಾತಿಗೆ ಸಂಬಂಧ ಪಟ್ಟ ಅಂಕಿಸಂಖ್ಯೆಗಳ ಪರಿಶೀಲನೆ ಇಂತಿದೆ:

ಸೂಚಿಪತ್ರ ಕ್ರಮಾಂಕ – ೩.

ಕ್ರಮಾಂಕ	ಅಂತಸ್ತು	ವೇಶ್ಯೆಯರ ಸಂಖ್ಯೆ	ಪ್ರತಿಶತದ
೧	ಅವಿವಾಹಿತ ಕಡಿಮೆ ದರ್ಜೆ	೨೭	೧೬.೪೦
೨	ವಿವಾಹಿತ ಕಡಿಮೆ ದರ್ಜೆ	೬೧	೫೨.೩೮
೩	ಪರಾವಲಂಬನ	೭	೫.೪೪
೪	ದೇವದಾಸಿ	೩೩	೨೫.೭೮
	ಒಟ್ಟು	೧೨೮	೧೦೦.೦೦

ಮೇಲ್ಕಂಡ ಅಂಶಗಳಿಂದ ನಮಗೆ ತಿಳಿದು ಬರುವದೇನೆಂದರೆ ಪತಿಯ ಆರ್ಥಿಕ ಹಾಗು ಸಾಮಾಜಿಕ ಅಂತಸ್ತು ಸರಿ ಇಲ್ಲದ್ದರಿಂದ ಹಾಗು ಧಾರ್ಮಿಕ ಮೂಢನಂಬಿಕೆಯಿಂದ ಹೆಚ್ಚು ಜನರು ಈ ವೃತ್ತಿಗಿಳಿದಿರುವವರೆಂದು ಸ್ಪಷ್ಟ

ವಾಗುವದು. ಇದರಲ್ಲಿ ೫.೪೪ ಪ್ರತಿಶತ ಪರಾವಲಂಬನೆಯಿಂದ, ೨೫.೭೮ ಪ್ರತಿಶತ ವೇಶ್ಯೆಯರು ಧಾರ್ಮಿಕ ಬಲೆಗೆ ಸಿಲುಕಿಯಾಗಲಿ, ಸಾಮಾಜಿಕ ಶೃಂಖಲೆಗೆ ಸಿಲುಕಿಯಾಗಲಿ, ಇಚ್ಛೆಯಿಂದಲೋ ಇಲ್ಲದೆಯೋ ದೇವದಾಸಿಯರಾಗಿ ಈ ವೇಶ್ಯಾಗೃಹಗಳನ್ನು ಸೇರಿದ್ದಾರೆಂದು ತಿಳಿದು ಬರುವದು.

ತಂದೆ-ತಾಯಿಗಳ ಅಂತಸ್ತು :

ತಂದೆ-ತಾಯಿಗಳ ಆರ್ಥಿಕ, ಸಾಮಾಜಿಕ ಹಾಗು ನೈತಿಕ ಪರಿಸ್ಥಿತಿಯು ಮಕ್ಕಳಿಗೆ ಅನೇಕ ಪ್ರಶ್ನೆಗಳನ್ನು ಹುಟ್ಟಿಸಲು ಕಾರಣೀಭೂತವಾಗುತ್ತದೆ. ವೇಶ್ಯಾವೃತ್ತಿಯೂ ಇದಕ್ಕೆ ಅಪವಾದವಲ್ಲ. ಕುಟುಂಬವು ಅನೇಕ ಸಾಮಾಜಿಕ ಪ್ರಶ್ನೆಗಳಿಗೆ ತವರುಮನೆ. ಈ ಮನೆಯಲ್ಲಿ ತಂದೆ-ತಾಯಂದಿರು ಒಳ್ಳೆಯವರಾದರೆ ಸಮಾಜದಲ್ಲಿ ಯಾವ ಸಮಸ್ಯೆಗಳೂ ಉದ್ಭವವಾಗುತ್ತಿರಲಿಲ್ಲವೆಂಬ ಸಮಾಜ ಶಾಸ್ತ್ರಜ್ಞರ ತರ್ಕ ಸತ್ಯವೆಂಬ ಮಾತು ನಂಬಲರ್ಹವಾದದ್ದು. ಈ ಮಾತಿಗೆ ಕೆಳಗಿನ ಅಂಕಿಸಂಖ್ಯೆಗಳು ಸಾಕಷ್ಟು ಪುರಾವೆ ನೀಡುತ್ತವೆ.

ಸೂಚಿಪತ್ರ ಕ್ರಮಾಂಕ – ೪.

ಕ್ರಮಾಂಕ	ತಂದೆ ತಾಯಂದಿರ ಅಂತಸ್ತು (ಗುಣಗಳು)	ವೇಶ್ಯೆಯರ ಸಂಖ್ಯೆ	ಪ್ರತಿ ಶತದಲ್ಲಿ
೧	ತಂದೆ-ತಾಯಿ ಇಲ್ಲದವರು	೪೧	೩೨.೦೨
೨	ತಂದೆ ಇಲ್ಲದವರು	೧೭	೧೩.೩೦
೩	ಕೆಟ್ಟ ನಡತೆಯ ತಾಯಿ	೧೨	೯.೩೮
೪	ದುರ್ನಡತೆಯ ತಂದೆ-ತಾಯಂದಿರು	೧೦	೭.೮೧
೫	ಮಧ್ಯಮ ವರ್ಗದ ತಂದೆ ತಾಯಂದಿರು	೨೧	೧೬.೪೦
೬	ಕಡಿಮೆ ದರ್ಜೆಯ ತಂದೆ ತಾಯಂದಿರು	೨೭	೨೧.೦೯
	ಒಟ್ಟು	೧೨೮	೧೦೦.೦೦

ಒಂದಿಲ್ಲೊಂದು ರೀತಿಯ ಆರ್ಥಿಕ, ಸಾಮಾಜಿಕ ಹಾಗು ನೈತಿಕ ಕೊರತೆಗಳು ವೇಶ್ಯಾ ಸಮಸ್ಯೆಗೆ ಕಾರಣವೆಂಬ ಮಾತನ್ನು ಈ ಮೇಲಿನ ಸೂಚಿ ಪತ್ರದಿಂದ

ಸರಿಯಾಗಿ ಕಂಡುಕೊಳ್ಳಬಹುದಾಗಿದೆ. ಸಾಮಾನ್ಯವಾಗಿ ಎಲ್ಲ ವೇಶ್ಯೆಯರ ತಂದೆ-ತಾಯಂದಿರ ಕೊರತೆಗಳೇ ಈ ಸಮಸ್ಯೆಗೆ ಮೂಲವೆಂದು ಬಹುಮಟ್ಟಿಗೆ ಹೇಳಬಹುದು.

ವೈವಾಹಿಕ ಪೂರ್ವೋತ್ತರ ಸಂಬಂಧಗಳು :

ಹಿಂದು ಸಮಾಜದಲ್ಲಿ ಹೆಣ್ಣನ್ನು ದೇವರೆಂದು ಪೂಜಿಸಲಾಗುತ್ತದೆ. ಅನೇಕ ಹೆಣ್ಣು ದೇವತೆಗಳಲ್ಲಿ ಸರಸ್ವತೀ, ಲಕ್ಷ್ಮೀ ಮುಂತಾದವರನ್ನು ಹಿಂದು ಸಮಾಜ ದಲ್ಲಿ ಇಂದಿಗೂ ಪ್ರಮುಖ ದೇವತೆಗಳೆಂದು ಪೂಜೆ ಸಲ್ಲಿಸಲಾಗುತ್ತದೆ.

ತನು-ಮನ ನೈರ್ಮಲ್ಯವು ಹೆಣ್ಣು ಜೀವನಕ್ಕೆ ಬಹು ಮುಖ್ಯವಾದ, ಗೌರವಕ್ಕೆ ಮೀಸಲಿರುವ ಗುಣ. ಅಂತೆಯೇ ತನು-ಮನ ನೈರ್ಮಲ್ಯತೆಯನ್ನು ಹೆಣ್ಣು ಕಾಪಾಡಲು ಅನುಕೂಲವಾಗುವಂತೆ ವೇದ, ಸ್ಮೃತಿ ಹಾಗು ಪುರಾಣಕಾ-ರರು ಹೆಣ್ಣು ಜೀವನದ ಮೇಲೆ ಅನೇಕ ನಿರ್ಬಂಧಗಳನ್ನು ಹಾಕಿದ್ದರೇ ಹೊರತು ಬೇರಾವ ಉದ್ದೇಶದಿಂದಲ್ಲ. ಹೆಣ್ಣು ಚಂಚಲೆ, ಕೋಮಲ ಹೃದಯಿ ಮತ್ತು ದಾಕ್ಷಿಣ್ಯಮಯಿ. ಆದ್ದರಿಂದ ಹೆಣ್ಣು ಮಕ್ಕಳು ಸುಲಭವಾಗಿ ಆಸೆ ಆಕಾಂಕ್ಷೆಗಳಿಗೆ ಬಲಿಬೀಳುವರು ಎಂಬ ವಿಚಾರದಿಂದ ಈ ನಿರ್ಬಂಧಗಳನ್ನು ಇತ್ತರು. ಹೆಣ್ಣು ಲೈಂಗಿಕ ಪ್ರವೃತ್ತಿಯತ್ತ ಸರಳವಾಗಿ ಒಲಿಯುವ ಗುಣವನ್ನು ನೈಸರ್ಗಿಕವಾಗಿ ಹೊಂದಿದ್ದಾಳೆಯಾದ್ದರಿಂದ ಅವರು ಈ ನಿರ್ಬಂಧಗಳನ್ನು ಹಾಕಿದ್ದರು. ಈ ಮಾತಿನ ಹೆಚ್ಚಿನ ಅರ್ಥಕ್ಕೆ ಕೆಳಗಿನ ವಿವರವನ್ನು ನೋಡಬಹುದು :

ಸೂಚಿಪತ್ರ ಕ್ರಮಾಂಕ – ೫.

ಕ್ರಮಾಂಕ	ವೈವಾಹಿಕ ಪೂರ್ವೋತ್ತರ ಲೈಂಗಿಕ ಸಂಬಂಧ	ವೇಶ್ಯೆಯರ ಸಂಖ್ಯೆ	ಪ್ರತಿ ಶತವಲ್ಲಿ
೧	ವಿವಾಹಕ್ಕೂ ಪೂರ್ವದ ಲೈಂಗಿಕ ಸಂಬಂಧ	೪೭	೩೬.೭೦
೨	ವಿವಾಹದ ನಂತರದ ಲೈಂಗಿಕ ಸಂಪರ್ಕದಿಂದ	೬೧	೪೭.೭೦
೩	ಒತ್ತಾಯದ ಲೈಂಗಿಕ ಸಂಬಂಧದಿಂದ	೭	೫.೪೪
೪	ಇಚ್ಛೆ ಇಲ್ಲದ ವೈವಾಹಿಕ ಪೂರ್ವೋತ್ತರದ ಲೈಂಗಿಕ ಸಂಪರ್ಕದಿಂದ	೧೩	೧೦.೧೬
	ಒಟ್ಟು	೧೨೮	೧೦೦.೦೦

ಈ ಮೇಲಿನ ವಿವರಣಾತ್ಮಕ ಸೂಚಿಪತ್ರದಿಂದ ನಮಗೆ ತಿಳಿದುಬರುವದೇನೆಂದರೆ, ವಿವಾಹಕ್ಕೂ ಮುಂಚೆ ಅಥವಾ ವಿವಾಹ ನಂತರದ ಲೈಂಗಿಕ ಸಂಬಂಧವು ಇಚ್ಛೆ, ಆಸೆ, ಆಕಾಂಕ್ಷೆ ಹಾಗು ಫಲಗಳಿಂದಾಗಿ ತನ್ನ ಇಚ್ಛೆಯಿಂದಲೇ ತನುವನ್ನು ಬೇರೆಯವರಿಗೆ ಕೊಟ್ಟು ಮುಂದೆ ಇದು ಬದಲಾಗಿ, ದಿಕ್ಕು ಕಾಣದಾಗಿ, ಅವಮಾನಿತರಾಗಿ, ಅಪಕೀರ್ತಿಗೊಳಗಾಗಿ ಈ ವೇಶ್ಯಾ ಗೃಹಗಳನ್ನು ಸೇರಿದವರ ಸಂಖ್ಯೆ ೮೪.೪ ಪ್ರತಿಶತ ಇದೆಯೆಂದು ತಿಳಿದ ಮೇಲೆ ಈ ವೈವಾಹಿಕ ಪೂರ್ವೋತ್ತರ ಸಂಬಂಧಗಳು ಗುಪ್ತವಾಗಿ ನಡೆಯುವಷ್ಟು ಕಾಲ ನಡೆದು ಮುಂದೆ ಬಯಲಿಗೆ ಬಂದಾಗ, ಅವರು ಕಂಗೆಟ್ಟು ಇಂಥ ಸ್ಥಳಗಳಿಗೆ ಧಾವಿಸಿದ್ದಾರೆಂದು ತಿಳಿಯುತ್ತದೆ. ಇದರೆ ಇಚ್ಛೆಯಿಲ್ಲದೆ ಮೋಸತನದಿಂದ, ಕಾಪಟ್ಯ ವಿವಾಹವನ್ನು ರಚಿಸಿ, ಗಂಡನಾದವನು ಬೇರೆಯವರಿಗೆ ತನ್ನ ಹೆಂಡತಿಯನ್ನು ಕೊಟ್ಟ ಪ್ರಸಂಗಗಳು ಉಂಟು. ಇಂಥವರ ಗಂಡನು ಮುಂದೆ ಎಲ್ಲಿಗೋ ಹೋಗಲು, ನಿರ್ಗತಿಕರಾಗಿ ಈ ಸ್ಥಳಗಳಿಗೆ ಬಂದವರು ೧೫.೬ ಪ್ರತಿಶತ ಇದ್ದಾರೆ. ಇದರಿಂದ ನಮಗೆ ತಿಳಿದುಬರುವದೇನೆಂದರೆ ಇಚ್ಛಾಪೂರಿತ ಪೂರ್ವೋತ್ತರ ಲೈಂಗಿಕ ಸಂಪರ್ಕವನ್ನು ಹೊಂದಿದವರು ಹೆಚ್ಚು ಪ್ರಮಾಣದಲ್ಲಿ ಇದ್ದಾರೆ. ಆದರೆ ಇಚ್ಛೆಯಿರದೆ ಸಮಾಜದ ಹಾಗು ಗಂಡಸಿನ ಒತ್ತಾಯಕ್ಕೆ ಒಳಪಟ್ಟು ಇಂಥ ವೃತ್ತಿಗಿಳಿದವರು ಬಹು ಕಡಿಮೆ ಎಂಬುದು ತಿಳಿದುಬರುತ್ತದೆ.

ವೇಶ್ಯೆಯರು ತಮ್ಮ ಜೀವನ
ಕಥೆಗಳಲ್ಲಿ ಹೊರತಪಡಿಸಿದ ಕೆಲವು ಕಾರಣಗಳು :

ವೇಶ್ಯೆಯರು ತಮ್ಮ ಕರುಣಾಜನಕ ಕಥೆಯನ್ನು ಹೇಳುವಲ್ಲಿ ಬಹು ಸೂಕ್ಷ್ಮವಾಗಿ ಅವಲೋಕಿಸಿ ತೆಗೆದುಕೊಂಡ, ಅವರು ತಮ್ಮ ಕಥೆಯಲ್ಲಿ ಸ್ಪಷ್ಟವಾಗಿ ಹೊರಪಡಿಸಿದ ಅನೇಕ ಕಾರಣಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು. ಈ ಬಗ್ಗೆ ಪರಿಶೀಲಿಸಿದ ವಿವರಗಳನ್ನು ಕೆಳಗೆ ಕ್ರೋಢೀಕರಿಸಲಾಗಿದೆ.

ಪುಟ ೧೪೮ ರಲ್ಲಿರುವಸೂಚಿ ಪತ್ರವು, ವೇಶ್ಯೆಯರು ತಮ್ಮ ಜೀವನ ಕಥೆಗಳಲ್ಲಿ ಹೊರಪಡಿಸಿದ ಕಾರಣಗಳನ್ನು ನಿಚ್ಚಳವಾದ ಸ್ಫಟಿಕದಂತೆ ತೋರಿಸಿ ಕೊಡುವ ಕೈಗನ್ನಡಿಯಾಗಿದೆ. ದುಶ್ಚಟಕ್ಕೊಳಗಾದ ಪತಿಗಳು ತಮ್ಮ ಸತಿಯರ ದೇಹ ವ್ಯಾಪಾರದಿಂದ ಜೀವಿಸುವಂಥವರು ೧೬.೪ ಪ್ರತಿಶತ ಇದ್ದಾರೆ. ತನ್ನ ಲೈಂಗಿಕ ಕಿಚ್ಚಿನ ದಾಹವನ್ನು ತಾಳಲಾರವೆ, ತೃಪ್ತಿಗೋಸುಗ ಅಮಾನುಷ ಲೈಂಗಿಕ ತೃಪ್ತಿಯನ್ನು ಹೊಂದಿ ಅವನ್ನು ಸಮಾಜದಲ್ಲಿ ತೀರಿಸಿಕೊಳ್ಳಲು ಸಾಧ್ಯವಾಗದೇ, ಇಂಥ ದೇಹ ವ್ಯಾಪಾರ ಗೃಹಗಳಲ್ಲಿ ಅತೀ ಅಥವಾ ಸತತ ಲೈಂಗಿಕ ತೃಪ್ತಿಗೋಸುಗ ಬಂದು ಸೇರಿದವರು ಇಲ್ಲಿರುವರು.

ಸೂಚಿಪತ್ರ ಕ್ರಮಾಂಕ – ೬.

ಕ್ರಮಾಂಕ	ಕಾರಣಗಳು	ವೇಶ್ಯೆಯರ ಸಂಖ್ಯೆ	ಪ್ರತಿ ಶತಕದಲ್ಲಿ
೧	ಸೌಂದರ್ಯ	೨೨	೧೭.೨೦
೨	ಪತಿಯಿಂದಲೆ ಪರರಿಗೆ ಅರ್ಪಿತರು	೨೧	೧೬.೪೦
೩	ಸ್ವಂತ ಲೈಂಗಿಕ ಇಚ್ಛೆಯಿಂದ	೧೯	೧೪.೮೪
೪	ಮನೆಯ ಮಾಲಿಕ ಇಲ್ಲವೆ ನೆರೆಹೊರೆಯವರಿಂದ ಕೆಡಿಸಲ್ಪಟ್ಟವರು	೩೫	೨೭.೩೪
೫	ವಯಸ್ಸಾದ ಅಥವಾ ರೋಗಿ ಪತಿಯನ್ನು ಹೊಂದಿದ್ದರಿಂದ	೧೯	೧೪.೮೪
೬	ಒತ್ತಾಯದ ಅಥವಾ ಇಚ್ಛೆಯಿಲ್ಲದ ಸಂಬಂಧದಿಂದಾಗಿ	೭	೫.೪೪
೭	ನವೀನಿಕರಣ ಹಾಗು ಸಿನೇಮಾಗಳಲ್ಲಿ ಕೆಲಸ ಮಾಡುವ ಅಭಿರುಚಿಯಿಂದ	೫	೩.೪೪
	ಒಟ್ಟು	೧೨೮	೧೦೦.೦೦

ಅನೇಕ ಹೆಣ್ಣು ಮಕ್ಕಳು, ಅದರಲ್ಲೂ, ದೊಡ್ಡ ದೊಡ್ಡ ನಗರಗಳಲ್ಲಿ, ಈ ವೃತ್ತಿಗೆ ಬಲಿ ಬೀಳುವ ಪ್ರಸಂಗಗಳು ಹೆಚ್ಚು. ಏಕೆಂದರೆ ಸ್ವಂತ ಮನೆ ಇರುವದಿಲ್ಲ. ಬಾಡಿಗೆ ಮನೆಯಲ್ಲಿ ಇರಬೇಕಾಗುತ್ತದೆ. ಬಡವ ಹಾಗು ಚಿಕ್ಕ ನೌಕರದಾರರ ಹೆಂಡಂದಿರು ಅಥವಾ ಪ್ರಾಯಕ್ಕೆ ಬಂದ ಅವಿವಾಹಿತ ತರುಣಿಯರು, ಇಂಥಲ್ಲಿ ಮಾಲಿಕರ ವೈಭವ, ಆರ್ಥಿಕ ಅಂತಸ್ತು, ವಿವಿಧ ರೀತಿಯ ಪೋಷಾಕುಗಳ ಮೆರಗಿಗೆ, ರೂಪಕ್ಕೆ, ವಿಲಾಸಿ ಜೀವನಕ್ಕೆ ಮನಸೋತು ಗೌಪ್ಯವಾಗಿ ಸಂಪರ್ಕವನ್ನು ಇಟ್ಟುಕೊಂಡು ಮುಂದೆ ಅದು ಬಯಲಾಗಲು ಗಂಡ ಅಥವಾ ತಂದೆ ತಾಯಂದಿರು ಮನೆಯಿಂದ ಹೊರಹಾಕುವ ಪ್ರಸಂಗ ಬರುತ್ತದೆ. ಅಂಥವರು ಮುಂದೆ ಸಮಾಜದಲ್ಲಿ ಅವಮಾನಿತರಾಗಿ, ನಿರ್ಗತಿಕರಾಗಿ, ನಿಸ್ಸಹಾಯಕರಾದ ಪ್ರಸಂಗದಲ್ಲಿ ಏಕಮೇವ ಮಾರ್ಗವೆಂದರೆ ಇಂಥ ವೇಶ್ಯಾ ಗೃಹಗಳಲ್ಲಿ ಬಂದು ಸೇರುವದಾಗಿರುತ್ತದೆ.

ಇದರಂತೆ ಸಮವಯಸ್ಕ, ಸುರೂಪಿ ಹುಡುಗನನ್ನು ಯೌವನದಲ್ಲಿ ಕಾಲಿಟ್ಟ ಹುಡುಗಿಯರು ಕಿಚ್ಚಿಟ್ಟ ಲೈಂಗಿಕ ತೃಪ್ತಿಗಾಗಿ, ಮನಸಾ ಪ್ರೀತಿಸಿ ತನು ಮನವನ್ನೇ ಅರ್ಪಿಸಿ ಮುಂದೆ ಆತನು ಮೋಸಗೊಳಿಸಿದ ನಂತರ ಪಿಂಡವು

ಉದರದಲ್ಲಿ ಬೆಳೆದು, ಸಮಾಜಕ್ಕೆ ತಿಳಿದು ಅವಮಾನಿತರಾಗಿ ಇಂಥ ಗೃಹಗಳೇ ಗತಿಯೆಂದು ಬಂದು ಸೇರುವ ಪ್ರಸಂಗಗಳು ಇರುತ್ತವೆ. ಇದರಂತೆಯೇ ಪಾಪಿ ಸಂಪರ್ಕದಿಂದ ಹುಟ್ಟಿದ ಕೂಸನ್ನು ಯಾವುದೋ ಅನಾಥಾಶ್ರಮದಲ್ಲಿಟ್ಟು ಅವಕ್ಕೆ ತನ್ನ ನೆರಳು ತಗಲದಂತೆ ಈ ಗೃಹಗಳಲ್ಲಿದ್ದು .ನಿರ್ನಾಮಿಯಂತೆ ಮಗುವಿಗೆ ಹಣವನ್ನು ಕಳಿಸಿ ಬಾಳಿ ಬದುಕಿದ ಉದಾಹರಣೆಗಳು ಇಲ್ಲಿ ಸಿಕ್ಕುತ್ತವೆ.

ಇದರ ಜೊತೆಗೆ ಇನ್ನು ಕೆಲವರು ಪಟ್ಟಣಗಳಲ್ಲಿ ವೇಶ್ಯಾಗೃಹಗಳಿಗೆ ಹೆಣ್ಣನ್ನು ಕರೆದೊಯ್ಯುವ, ಗಂಡು ಗಿರಾಕಿಗಳನ್ನೊಯ್ದು ಕೊಡುವ ಹೇಡಿ ಜೀವನವನ್ನು ನಡೆಸುವ ಜನ, ಅಂಥ ವ್ಯಾಪಾರ ಸರಿಯಾಗಿ ನಡೆಯದ ಕಾಲದಲ್ಲಿ ಕೆಲವು ಸುಂದರ ವಯಸ್ಕ ನಿಸ್ಸಹಾಯಕ ಸ್ತ್ರೀಯರನ್ನು ಕೆಲವೊಮ್ಮೆ ಕಾಪಟ್ಯ ವಿವಾಹ ಮಾಡಿಕೊಳ್ಳುವರು. ಇಂತಹ ಪ್ರಸಂಗದಲ್ಲಿ ಕೆಲವು ದಿನ ಅವರೊಂದಿಗೆ ಸರಿಯಾಗಿದ್ದು ಮುಂದೆ ಒಯ್ದು ಇಂಥ ಸ್ವೈಮಾರಾಟದ ಗೃಹಗಳಲ್ಲೆಸೆ-ಯುವರು.

ಇದಲ್ಲದೆ, ಇತ್ತಿತ್ತಲಾಗಿ ಸಿನೇಮಾಪ್ರಿಯ, ಸಂಗೀತಪ್ರಿಯ ನವ ತರುಣಿಯರು, ಸಿನೇಮಾ ತಾರೆಯರಾಗಬೇಕೆಂಬ ಹಂಬಲದಿಂದ ಒಯ್ಯಲ್ಪಟ್ಟವರು ಕಡೆಗೆ ಇಲ್ಲಿ ಬಂದು ಸೇರಿದ್ದು ಉಂಟು. ತಾರೆಯಾಗುವ ಹಂಬಲದಿಂದ ದೊಡ್ಡ ನಗರಕ್ಕೆ ಹೋಗಿ, ಅಲ್ಲಿಯೇ ಇದ್ದು, ತಾರೆಯನ್ನಾಗಿ ಮಾಡುವ ಆಸೆ ತೋರಿಸಿದವರಿಗೆಲ್ಲರಿಗೆ ಸರ್ವಸ್ವವನ್ನು ಅರ್ಪಿಸುವರು. ಕಡೆಗೆ ಎಲ್ಲ ಸೌಖ್ಯವನ್ನುಂಡು ಇಂಥವರನ್ನು ನಿಸ್ಸಹಾಯಕ, ನಿರ್ಗತಿಕರನ್ನಾಗಿ ಮಾಡಿ ಎಲ್ಲ ಬಾಗಿಲುಗಳು ಮುಚ್ಚಲು ಕಡೆಗೆ ಇಂಥವರಿಗಾಗಿ ನಿರಂತರವೂ ತೆರೆದ ಈ ಬಾಗಿಲಿಗೆ ಧಾವಿಸಿ ಬಂದವರು ಇಲ್ಲುಂಟು.

ವೇಶ್ಯೆಯರ ಜೀವನ ಕಥೆಯ ವೈಜ್ಞಾನಿಕ ಅಭ್ಯಾಸದ ಮೇಲಿಂದ, ವೇಶ್ಯಾ ಸಮಸ್ಯೆಯ ಬಗ್ಗೆ ನಾವು ಕೆಲವು ಸ್ಥೂಲವಾದ ನಿರ್ಣಯಗಳನ್ನು ಹೊರಪಡಿಸಬಹುದು. ಹೆಚ್ಚು ಜನ ವೇಶ್ಯೆಯರು ಕೆಳದರ್ಜೆಯ, ಕೆಳಅಂತಸ್ತಿನ, ಬಡವ, ಅಬಲ, ಅವಿದ್ಯಾವಂತ ಹಿಂದು ಸ್ತ್ರೀಯರಿರುತ್ತಾರೆ ಎಂದು ಹೇಳಬಹುದು.

ಹೀಗೆ ಬಂದು ವೇಶ್ಯೆಯರಾದ ಜನರ ವಯಸ್ಸು ಸಾಧಾರಣ ಹದಿನೈದರಿಂದ ಇಪ್ಪತ್ತು ಆಗಿರುತ್ತದೆ. ಇವರು ತಮ್ಮ ಈ ವಯಸ್ಸಿನಲ್ಲಿ ವೇಶ್ಯಾವೃತ್ತಿಗೆ ಇಳಿದವರು ಹೆಚ್ಚು ಎಂದೆನ್ನುವ ಇನ್ನೊಂದು ಮುಖ್ಯವಾದ ನಿರ್ಣಯವನ್ನು ನಿರೂಪಿಸಬಹುದು.

ಬಡ ಕುಟುಂಬದವರು, ಸಾಮಾನ್ಯವಾಗಿ ಗುಮಾಸ್ತರ, ರಿಕ್ಷಾ ಚಾಲಕರ, ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಹೆಂಡಂದಿರು ಅಥವಾ ವಯಸ್ಕ ಹೆಣ್ಣು ಮಕ್ಕಳು ಯಾವುದೋ ಆಸೆಗಾಗಿ ನೆರೆಹೊರೆಯ ಅಥವಾ ಮನೆಯ ಮಾಲಕನ ಅಥವಾ ವಯಸ್ಕ ಮಾಲಿಕನ ಮಗನ ಸೆರೆಗೆ ಸಿಕ್ಕು ವಿಷಯ ಬಹಿರಂಗ ವಾದಾಗ ಮನೆಯಿಂದ ಹೊರತಳ್ಳಲ್ಪಟ್ಟು ದಿಕ್ಕುಕಾಣದೆ ಈ ವೃತ್ತಿಗಿಳಿದವರು ಹೆಚ್ಚೆಂದು ತಿಳಿಯಬಹುದಾಗಿದೆ.

ಕೆಲವರು ಪರದೇಶಿತನದಿಂದ, ಹಲವರು ತಮ್ಮ ತಂದೆ-ತಾಯಂದಿರ ದುಶ್ಚಟ-ದುರ್ನಡತೆಯ ಕಾರಣದಿಂದ ಈ ವೃತ್ತಿಗೆ ಇಳಿದುದು ಹೆಚ್ಚು. ಗಂಡನ ಮನೆಯ ಅಥವಾ ತಂದೆ ತಾಯಂದಿರ ಮನೆಯ ಆರ್ಥಿಕ ಅಥವಾ ಸಾಮಾಜಿಕ ಅಂತಸ್ತು ಸರಿ ಇಲ್ಲದ ಕುಟುಂಬಗಳ ಮಕ್ಕಳೂ ಇಂತಹ ವೃತ್ತಿಗಿಳಿದುದು ಹೆಚ್ಚೆಂದು ತಿಳಿಯುವದು.

ಇದಕ್ಕೂ ಮುಖ್ಯ ವಿಷಯವೆಂದರೆ ಸ್ತ್ರೀಯರ ವೈವಾಹಿಕ ಪೂರ್ವೋತ್ತರ ಸಂಬಂಧಗಳು ಈ ವೇಶ್ಯಾ ಸಮಸ್ಯೆಗೆ ಬಹು ಮುಖ್ಯವಾಗಿದೆ. ಸರ್ವಸಾಮಾನ್ಯ ವಾಗಿ ಎಲ್ಲ ವೇಶ್ಯೆಯರು ಈ ಪ್ರಕಾರದ ಸಂಬಂಧದಿಂದ ಸಮಾಜದಲ್ಲಿ ಯಾವುದೇ ಸ್ಥಾನ ಸಿಗದಾದ ಪಕ್ಷದಲ್ಲಿ ಈ ಅಮಾನುಷ ಸಮಾಜಕ್ಕೆ ಬಂದು ಸೇರಿದ್ದಾರೆ. ಸರ್ವಸಾಧಾರಣವಾಗಿ ಕಡೆಗೆ ತಮ್ಮ ಇಚ್ಛೆಯಿಂದಲೇ ಈ ಗೃಹಗಳಲ್ಲಿ ಬಂದವ ರಾಗಿದ್ದಾರೆ. ಆದರೆ ಕೇವಲ ೧೫.೬ ಪ್ರತಿಶತ ಹೆಣ್ಣು ಮಕ್ಕಳು ತಮ್ಮ ಇಚ್ಛೆ ಇಲ್ಲದೇ ಮೋಸ, ಬಲಾತ್ಕಾರ ಮುಂತಾದ ಕಾರಣಗಳ ಮೂಲಕ ಈ ವೃತ್ತಿಗಿಳಿ ದಿದ್ದಾರೆ-ಎಂಬ ನಿರ್ಣಯಗಳು ಬಹು ಮುಖ್ಯವಾದವುಗಳು.

ವ್ಯಕ್ತಿಗಳನ್ನು ದುರ್ಮಾರ್ಗಕ್ಕೆ ಹೋಗಗೊಡದಂತೆ ಕುಟುಂಬ, ಜಾತಿ ಮತ್ತು ವರ್ಗಗಳು ಎಷ್ಟು ಪ್ರಯತ್ನಿಸಿದರೂ ಈ ದುರ್ಮಾರ್ಗಕ್ಕೆ ಇಳಿಯುವವರ ಸಂಖ್ಯೆ ಅಷ್ಟು ಕಡಿಮೆಯಾದಂತೆ ಕಾಣುತ್ತಿಲ್ಲ. ವ್ಯಕ್ತಿಗಳು, ಮಂಡಳಿಗಳು ಹಾಗೂ ಸರಕಾರ ಅನೇಕ ರೀತಿಯ ಪ್ರಯತ್ನವನ್ನು ಮಾಡಿದ್ದರೂ ಈ ಸಮಸ್ಯೆ ಕಡಿಮೆಯಾಗುವ ಯಾವ ಚಿಹ್ನೆಯೂ ತೋರುತ್ತಿಲ್ಲ. ಹಾಗಾದರೆ ಈ ಪ್ರಶ್ನೆಯನ್ನು ಬಗೆಹರಿಸುವದು ಹೇಗೆ? ಈ ಪ್ರಶ್ನೆಗೆ ಪರಿಹಾರವೇ ಇಲ್ಲವೇ? ಎಂಬುವು ನಿಗೂಢವಾದ ಪ್ರಶ್ನೆಗಳಾಗಿವೆ.

ವೇಶ್ಯಾ ಸಮಸ್ಯೆಯ ಪರಿಹಾರದ ಗುರಿಯನ್ನು ಮುಂದಿಟ್ಟುಕೊಂಡು ಯೋಚಿಸುವಲ್ಲಿ ನಮಗೆ ಅನೇಕ ಶತಮಾನಗಳ ಪೂರ್ವದಲ್ಲಿ ಸೇಂಟ ಅಗಷ್ಟಿನನು ಸಮಾಜಕ್ಕೆ ವೇಶ್ಯೆಯರು ಅವಶ್ಯವೆಂದು ಹೇಳಿದ ಮಾತು ನೆನಪಿಗೆ ಬರುತ್ತದೆ. ಅವರ ಅಭಿಪ್ರಾಯದಂತೆ ವೇಶ್ಯಾವರ್ಗ ಸಮಾಜದಲ್ಲಿ ಇದೆಯಾದ್ದರಿಂದ, ಸಮಾಜ

ವಲ್ಲಿ ಕುಲೀನ ಸ್ತ್ರೀಯರ ಮೇಲೆ ಲೈಂಗಿಕ ಒತ್ತಾಯದ ಪ್ರಕರಣಗಳು ಕಡಿಮೆಯಾಗಿವೆಯಂತೆ. ಇಂದಿನ ಸಮಾಜವಲ್ಲಿ ಹೆಣ್ಣುಗಳಿಗೆ ನೀತಿನಿಯಮಗಳನ್ನು ಪಾಲಿಸಲು, ಗಂಡಸರಿಗೆ ಏಕಪತ್ನಿತ್ವವನ್ನು ಪಾಲಿಸಲು ಹಾಗು ಲೈಂಗಿಕ ಅಪರಾಧಗಳನ್ನು ಕಡಿಮೆ ಮಾಡಲು ಕಾರಣೀಭೂತರೆಂದು, ಹಾಗು ಮಾನವೀಯ ಸಮಾಜವು ವೇಶ್ಯಾ ಸಮಾಜಕ್ಕೆ ಕೃತಜ್ಞತೆಗಳನ್ನು ಸಲ್ಲಿಸಬೇಕೆಂದು ತಿಳಿಸುತ್ತಾರೆ.

ವೇಶ್ಯಾ ಸಮಸ್ಯೆಗೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಮನೆಯ ಕರುಣಾಜನಕ ಸ್ಥಿತಿ, ಲೈಂಗಿಕ ಬಲಾತ್ಕಾರ, ಹೊಸ ವಾತಾವರಣ, ತಾಂತ್ರೀಕರಣ, ನಿರಕ್ಷರತೆ, ಬಾಲವಿವಾಹ, ದುಃಖಮಯ ವೈವಾಹಿಕ ಜೀವನ, ಧಾರ್ಮಿಕ ಜೀವನಗಳು ಬಹು ಮುಖ್ಯವಾದವುಗಳಾಗಿವೆ. ಇವುಗಳಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಬಡತನವು ಮುಖ್ಯವೆಂದು ತಿಳಿದುಬರುತ್ತದೆ. ಇದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಇದು ಹಾಗಲ್ಲ. ಒಂದು ವೇಳೆ ಹಾಗೆ ಆದರೆ ಎಲ್ಲ ಬಡ ಹುಡುಗೆಯರು ಸಮಾಜದಲ್ಲಿ ವೇಶ್ಯೆಯರಾಗಬೇಕಿತ್ತು. ಇವುಗಳ ಜೊತೆಗೆ, ಅತೀ ಪ್ರಮಾಣದ ಲೈಂಗಿಕ ಸಂಪರ್ಕಗಳು ಗಮನಾರ್ಹವಾಗಿವೆ.

ವೇಶ್ಯಾ ವೃತ್ತಿಯಲ್ಲಿ ಗಂಡು-ಹೆಣ್ಣುಗಳೀರ್ವರೂ ಒಳಗೊಂಡಿದ್ದರೂ ಹೆಣ್ಣನ್ನು ಹೆಚ್ಚಾಗಿ ತಪ್ಪಿತಸ್ಥರೆಂದು ಏಕೆ ಪರಿಗಣಿಸುವರು? ಗಂಡಸರಿಂದಲೇ ವೇಶ್ಯೆಯರು ಸಮಾಜದ ನೀತಿನಿಯಮಗಳನ್ನು ಕಿತ್ತೊಗೆದು ಅಮಾನುಷ ದೇಹ ವ್ಯಾಪಾರಕ್ಕೆ ಬಂದಿರಲಿಲ್ಲವೆ? ಗಂಡಸು ಸಮಾಜದ ರೀತಿ, ನೀತಿ, ನಿಯಮುಗಳನ್ನು ಮಾಡುವ ಹಕ್ಕನ್ನು ಪಡೆದಿದ್ದಾನಾದ್ದರಿಂದ ಆತನು ತಪ್ಪಿತಸ್ಥನಲ್ಲವೆಂದು ವಿಮುಕ್ತನಾಗಿರುವನು. ಹಿಂದೆ ಹೆಬ್ರು ಧರ್ಮಗುರುಗಳು ಹೆಣ್ಣು ಮಕ್ಕಳು ವೇಶ್ಯೆಯರಾದರೆ ಅವರಿಗೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸುತ್ತಿದ್ದರಂತೆ. ಅಂಥ ಕಾಯ್ದೆ ಕಾನೂನುಗಳನ್ನು ಒಂದು ವೇಳೆ ಸರಕಾರವು ಜಾರಿಯಲ್ಲಿ ತಂದುದಾದರೆ ಈ ಪ್ರಶ್ನೆ ಕಡಿಮೆಯಾಗಬಹುದು. ಜೊತೆಗೆ ಆ ಕಾಯ್ದೆಯು ಹೆಂಗಸರಿಗೆ ಹಾಗು ಗಂಡಸರಿಗೆ ಜೀವಾವಧಿ ಶಿಕ್ಷೆ ಕೊಡುವಂತೆ ಮಾಡಿದರೆ ಈ ವೇಶ್ಯಾ ಸಮಸ್ಯೆಯು ಇನ್ನಷ್ಟು ಕಡಿಮೆಯಾಗಬಹುದು. ಜೊತೆ ಜೊತೆಗೆ ಈಗಾಗಲೇ ವೇಶ್ಯಾ ವೃತ್ತಿಯಲ್ಲಿದ್ದವರನ್ನು ಪ್ರಗತಿಪರ ವಿಚಾರವುಳ್ಳ ತರುಣರು ಆರೋಗ್ಯಸಂಪತ್ತನ್ನು ಹೊಂದಿದ ನಿರಪರಾಧಿಗಳಾದ ವೇಶ್ಯೆಯರನ್ನು ಮದುವೆಯಾಗಿ ಅವರಿಗೆ ಗೃಹಿಣಿ ಸ್ಥಾನವನ್ನು ಕಲ್ಪಿಸಿ ಕೊಡುವ ಕಾಲ ಮೃಗಜಲವಾಗದಂತೆ ನೋಡಿಕೊಂಡರಂತೂ ಈ ಪ್ರಶ್ನೆ ಸಾಕಷ್ಟು ಪರಿಹಾರವಾಗಬಹುದೆಂದು ಧಾರಾಳವಾಗಿ ಊಹಿಸಬಹುದು.

ಗ್ರಂಥ ಋಣ

1. Mabel A. Elliott and Francis E. Merrill, '**Social Disorganization**' (Third Edition), New York; Harper & Brothers, 1950.
2. **Kautilya's Arthasastra**, Dr. R. Shamasastry's Translation,(7th Edition) Mysore Publication House, 1961.
3. **Manu-Smriti**, English Translation by Ganganath Jha, Calcutta, Calcutta University Press, 1926.
4. G. R. Scott, '**A History of Prostitution**', Torcstrem Boots, London, 1954.
5. Geoffrey, ' Prostitution ' in **Encyclopaedia of the Social Sciences**, Vol XII, 1935.
6. Westermark, Edward, '**A Short History of Marriage**' New York, Macmillan, 1926.
7. Terman, Lewis & Others; '**Psychological factors in Marital Happiness**' New York, McGraw-Hill, 1938.
8. Dr. G. R. Madan, **Indian Social Problems**, Vol. I Allied Publishers Private Ltd. (Printed in India) (2nd Edition) 1969.
9. Kingsley, Davis, ' The Sociology of Prostitution ' **American Sociological Review** (October), 1937.
10. Paul C. Click, 'First Marriages and Remarriages' **American Sociological Review** Vol. XIV, December, 1949.
11. Middleton, Russell, 'Brother-Sister & Father-Daughter Marriage in Ancient Egypt.' **American Sociological Review**, October 27, 1962.
12. Dr. G. R. Banerjee, 'Prostitution Requires Prohibition', **Indian Journal of Social Work**, Vol. XXIX No. 1, 1958.

——

ಪುಸ್ತಕ ವಿಮರ್ಶೆ :

ಕಿತ್ತೂರು ನಾಡಿನ ಇತಿಹಾಸ ಹಾಗು ಸಂಸ್ಕೃತಿ

● **ವಸಂತ ಪಾಟೀಲ**

ವಿಶೇಷ ವಾಙ್ಮಯ ಪ್ರಸಾರ ಪುಸ್ತಕ ಮಾಲೆ-೧೭

ಏಳು ಉಪನ್ಯಾಸಗಳು

ಪ್ರಕಾಶಕರು : ಸಿ. ಎಸ್. ಕಣವಿ, ನಿರ್ದೇಶಕರು,
ವ್ಯಾಸಂಗ ವಿಸ್ತರಣ ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

© ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರತಿಗಳು ೨೦೦೦, ಅಕ್ಟೋಬರ ೧೯೭೬
ಪುಟ ೨೧೬+೧೦ ಬೆಲೆ ರೂ. ೮-೦೦

ಮುದ್ರಕರು : ಫ. ಶಿ. ಭಾಂಡಗೆ, ವಿದ್ಯಾವಾಹಿನಿ,
ವಿದ್ಯುನ್ಮುದ್ರಣ, ಗಂಗಾಪೂರಪೇಟೆ, ಗದಗ

ಅಂತರರಾಷ್ಟ್ರೀಯ ಮಹಿಳಾ ವರ್ಷ (೧೯೭೫)ದ ಸವಿನೆನಪಿಗಾಗಿ ಕಿತ್ತೂರ ನಾಡ ರಾಣಿ ಚೆನ್ನಮ್ಮಾಜಿಯ ೧೫೧ನೆಯ ವಿಜಯೋತ್ಸವದ ಅಂಗವಾಗಿ ಕಿತ್ತೂರಿನ ಯುವಕ ಸೇವಾ ಸಂಘದವರು ಹಮ್ಮಿಕೊಂಡ ಹೆಮ್ಮೆಯ ಕಾರ್ಯವು ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ಮಹಿಳಾ ವರ್ಷ ದಿನಾಚರಣೆ ಸಮಿತಿಯ

ಸಂಯುಕ್ತ ಆಶ್ರಯದಲ್ಲಿ ಕಿತ್ತೂರಿನ ಕೋಟೆಯ ಆವರಣದಲ್ಲಿ ಔಚಿತ್ಯಪೂರ್ಣವಾಗಿ ನೆರವೇರಿತು. ಆ ಸಂದರ್ಭದಲ್ಲಿ ಕಿತ್ತೂರು ನಾಡಿನ ಇತಿಹಾಸ ಹಾಗು ಸಂಸ್ಕೃತಿಯ ವಿಷಯಗಳಲ್ಲಿ ತಜ್ಞರಾದವರಿಂದ ಪೂಜ್ಯ ಶ್ರೀಮತಿ ಜಯದೇವಿತಾಯಿ ಲಿಗಾಡೆಯವರ ಅಧ್ಯಕ್ಷತೆಯಲ್ಲಿ ಉಪನ್ಯಾಸಮಾಲೆ ಏರ್ಪಡಿಸಲಾಗಿತ್ತು. ಆಗಿನ ಏಳು ಉಪನ್ಯಾಸಗಳ ಲಿಖಿತ ಮಾಲೆಯೇ ಈಗಿನ ವಿಶೇಷವಾದ ಗ್ರಂಥ "ಕಿತ್ತೂರು ನಾಡಿನ ಇತಿಹಾಸ ಹಾಗು ಸಂಸ್ಕೃತಿ"

ಇದಕ್ಕೆ ಒಪ್ಪ ಎನ್ನುವಂತೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಆರ್. ಸಿ. ಹಿರೇಮಠರ "ಮುನ್ನುಡಿ" ಮೂಡಿ ಬಂದಿದೆ. "ಕಿತ್ತೂರಿನ ಇತಿಹಾಸ ಹಾಗೂ ಸಂಸ್ಕೃತಿಯ ಬಗ್ಗೆ ಲಭ್ಯವಿರುವ ಸಾಮಗ್ರಿಯನ್ನು ಸಾಧ್ಯವಿದ್ದಷ್ಟು ಆಧಾರಪೂರ್ವಕವಾಗಿ ಅದರ ಎಲ್ಲ ಮಹತ್ವದ ಅಂಶಗಳೊಂದಿಗೆ ನಿರೂಪಿಸುವ ವಿವಿಧ ವಿದ್ವಾಂಸರ ಈ ಉಪನ್ಯಾಸ ಸಂಗ್ರಹವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುವರೆಂದು" (ಪು. ೭) ಅವರು ಆಶಿಸುವರು.

ಈ ಮಾಲೆಯ ಮೊದಲ ಲೇಖನವು - ಎಸ್. ಎಲ್. ಶಾಂತಕುಮಾರಿ ಅವರ "ಪ್ರಾಚೀನ ಕಿತ್ತೂರು ನಾಡು". ಲೇಖನಗಳನ್ನು ಸಂಪಾದಿಸುವಲ್ಲಿಯೂ ಒಂದು ವೈಶಿಷ್ಟ್ಯತೆ ಇದ್ದಂತೆ ಕಾಣುತ್ತದೆ. ಅಂತರರಾಷ್ಟ್ರೀಯ ಮಹಿಳಾ ವರ್ಷಕ್ಕೆ ಔಚಿತ್ಯವೆನ್ನುವಂತೆ ಗ್ರಂಥದ ಕೇಂದ್ರ ವ್ಯಕ್ತಿ ಕಿತ್ತೂರು ರಾಣಿ ಚೆನ್ನಮ್ಮ. ಇದಲ್ಲದೆ ಈ ಮಾಲೆಯ ಮೊದಲನೆಯ ಹಾಗೂ ಕೊನೆಯ ಲೇಖನಗಳು ಮಹಿಳೆಯರವು.

ಶಾಂತಕುಮಾರಿಯವರ ಲೇಖನ ಒಟ್ಟು ೪೫ ಪುಟಗಳಷ್ಟಿದ್ದು ಅದರಲ್ಲಿ ಲೇಖನದ ಶಿರೋನಾಮ "ಪ್ರಾಚೀನ ಕಿತ್ತೂರು ನಾಡು"ಕ್ಕೆ ಸಂಬಂಧಿಸಿದ್ದು ಕೇವಲ ೧೫ ಪುಟ, ಅದರಲ್ಲಿಯೂ ಕೇವಲ ಕಿತ್ತೂರಿಗೆ ಸಂಬಂಧಿಸಿದ್ದು ಎರಡು ಪುಟಗಳು (ಪು. ೫ ಮತ್ತು ೧೨), ಉಳಿದುವೆಲ್ಲ ಪ್ರಸ್ತಾವನೆ ರೂಪದಲ್ಲಿರುವ ಸಾಮಾನ್ಯ ಕರ್ನಾಟಕದ ಇತಿಹಾಸ. ಈ ಪ್ರಸ್ತಾವನೆಯು ಉತ್ತರ ಕರ್ನಾಟಕದ ಯಾವ ಊರಿಗಾದರೂ ಅಥವಾ ನಾಡಿಗಾದರೂ ಅನ್ವಯಿಸುವಂಥದು—ಕೇವಲ ಕಿತ್ತೂರು ಅಥವಾ ಕಿತ್ತೂರು ನಾಡಿಗಷ್ಟೇ ಅಲ್ಲ. ಕೇವಲ ಕಿತ್ತೂರು ಮತ್ತು ಕಿತ್ತೂರು ನಾಡಿಗಷ್ಟೇ ಸೀಮಿತವಾದ ಸಂಗತಿ ಇನ್ನೂ ಹೆಚ್ಚು ಬೇಕಾಗಿತ್ತು, ಎನ್ನಿಸಬಹುದು ಆಕಾಂಕ್ಷಿತ ಓದುಗನಿಗೆ.

ಲೇಖನದ ಹೆಚ್ಚು ಭಾಗವನ್ನು (ಸುಮಾರು ೨೨ ಪುಟ) ಕೆಲವು ಶಾಸನಗಳು (ಕಿತ್ತೂರು, ಬೆಳಗಾವಿ, ಕಾದರೊಳ್ಳಿ, ಹಲಸಿ, ನೇಸರಗೆ, ಸೌಂದತ್ತಿಯವು),

ಕೆಲವು ಅಗ್ರಹಾರಗಳು (ದೇಗಾವೆ, ವೇಣುಗ್ರಾಮ, ಹೂಲಿ), ಕೆಲವು ದೇವಾಲಯಗಳು (ಬೆಳಗಾಂವಿ, ಕಾದರೊಳ್ಳಿ, ಬೈಲಹೊಂಗಲ, ಸವದತ್ತಿ, ಹೂಲಿ, ದೇಗಾವೆಯಲ್ಲಿಯವು) ಆವರಿಸಿರುವವು. ಕೊನೆಯಲ್ಲಿ ಸಹಾಯ ಗ್ರಂಥಪಟ್ಟಿ ಇರುವುದಲ್ಲದೆ ಒಂದು ದೀರ್ಘ ಅನುಬಂಧ (Inscriptions fixed into the left wall of Aondad-gudi at Kittur) ಇರುವದು.

'ಕಿತ್ತೂರು' ಶಬ್ದದ ಉತ್ಪತ್ತಿಯ ಬಗೆಗೆ ಹೇಳಲು ಶ್ರಮವಹಿಸದೆ ಲೇಖಕಿಯರು ಇದು "ದುಸ್ತರ" (ಪು. ೨) ಎಂದು ಕೈಕೊಡವಿರುವರು. "ಸುಮಾರು ಗೋವೆ ಕದಂಬರಾಜ ಜಯಕೇಶಿಯ ಕಾಲದ ಒಂದು ಶಾಸನದಲ್ಲಿ ಈ ಊರಿನ ಹೆಸರು ಕಿತ್ತೂರು ಎಂದೇ ಬರುತ್ತದೆ" (ಪು. ೨) ಎಂದು (ಪ್ರಥಮ) ಉಲ್ಲೇಖವನ್ನು ತೋರಿಸಿರುವರು. ಧಾರವಾಡ ಗೆಜೆಟಿಯರಿನಲ್ಲಿ ಕಿತ್ತೂರಿಗೆ 'ಗಿಜಗನ ಹಳ್ಳಿ' ಎಂಬ ಹೆಸರು ಇದ್ದಿತು ಎಂಬುದಕ್ಕೆ ಇವರು ಆಧಾರ ಕೇಳುವರು. "೯ನೆಯ ಶತಮಾನಕ್ಕೆ ಸೇರಿದ ರಾಷ್ಟ್ರಕೂಟರ ಶಾಸನಗಳೊಂದೆರಡು ಇಲ್ಲಿ ದೊರೆತಿರುವುದರಿಂದ ಈ ಹೊತ್ತಿಗಾಗಲೇ ಈ ಊರು ಅಸ್ತಿತ್ವದಲ್ಲಿದ್ದಿತೆಂದು" (ಪು. ೨) ಊಹಿಸಿರುವರು. ಆ ಶಾಸನಗಳು ಒಂದೋ ಅಥವಾ ಎರಡೋ ಅವನ್ನೂ ಲೇಖಕಿಯರು ಖಚಿತಪಡಿಸಿಕೊಂಡಂತಿಲ್ಲ.

ಈಗಿನ ಊರಿನ ಹೆಸರುಗಳಿಗೆ ಹಳೆಯ ಹೆಸರುಗಳನ್ನು ಅಲ್ಲಲ್ಲಿ ಶೋಧಿಸಿರುವರು. ಉದಾ-ಬೆಳಗಾಂವ (ವೇಣುಗ್ರಾಮ, ಇಕ್ಷುಗ್ರಾಮ), ಅಳ್ನಾವರ (ಅಸಿಲಾಪುರ), ಅಂಬಡಗಟ್ಟಿ(ಅಂಬರವಣ್ಣಿಹಳ್ಳಿ),ಸೌಂದತ್ತಿ (ಸುಗಂಧವರ್ತಿ), ಮಾದನಬಾವಿ (ಅತ್ತಿಯಬಾವಿ).

"ಹದಿನಾರನೆಯ ಶತಮಾನದ ಕೊನೆಯಲ್ಲಿ ಕಲಬುರ್ಗಿ ಸೀಮೆಯಿಂದ ವಿಜಾಪುರದ ಸೈನ್ಯದೊಡನೆ ಬಿನಿವಾರರಂತೆ" (ಪು. ೧೨) ಹಿರೇಮಲ್ಲ, ಕಿರೇಮಲ್ಲ ಸಹೋದರರು ಸಂಪಗಾಂವಿಗೆ ಬಂದು ನೆಲಸಿದರೆಂದು ಮೂಲ ಪುರುಷರ ಬಗೆಗೆ ಉಲ್ಲೇಖಿಸಲಾಗಿದೆ. "ಸುಮಾರು ಹದಿನೇಳನೆಯ ಶತಮಾನದ ಅಂತ್ಯ ಭಾಗದಲ್ಲಿ ಪೇದಿ ಮಲ್ಲಪ್ಪ" (ಪು. ೧೩) ಪ್ರಬಲ ದೇಸಾಯಿಯರಾದರು. ಮುಂದೆ ಸಂಪಗಾಂವ ಕೇಂದ್ರಾಡಳಿತವನ್ನು 'ಕಿತ್ತು' ಈಗಿನ 'ಕಿತ್ತೂರಿಗೆ' ಈ ದೇಸಾಯಿ ಮನೆತನದವರು ಸ್ಥಳಾಂತರಿಸಿರಬಹುದು. ಈ ವಿಷಯ ಸಿ. ವ್ಹಿ. ಮಠದ ಅವರ "ಕಿತ್ತೂರು ನಾಡಿನ ವೀರರು" ಎಂಬ ಲೇಖನದಲ್ಲಿ ಬರುವದು. (ಪು. ೮೪).

ಕಿತ್ತೂರಿನ ಒಂದು ಶಾಸನದಲ್ಲಿ (ಕ್ರಿ. ಶ. ೧೧೮೮) ಜಮೀನಿನ ಸಂಬಂಧದ ವ್ಯಾಜ್ಯದಲ್ಲಿ ದೇಗಾವೆಯ ಮಹಾಜನರ ಸಮ್ಮುಖದಲ್ಲಿ ವಾದಿ, ಪ್ರತಿವಾದಿಗಳಿಬ್ಬರೂ

ಕಾದ ಕಬ್ಬಿಣವನ್ನು ಕೈಯಲ್ಲಿ ಹಿಡಿದು ಜಮೀನು ತಮ್ಮದೆಂದು ಸಾಧಿಸುವರು. ಅವರಲ್ಲಿ ಒಬ್ಬರ ಕೈ ಸುಡದ್ದಕ್ಕೆ ಆತನಿಗೆ ಜಮೀನು ಕೊಡಲಾಯಿತು ಎಂದು ಉಲ್ಲೇಖಿತವಾದ ವಿಷಯ ತಿಳಿದುಬರುವದು. ಅಂದಬಳಿಕ ಪವಾಡಗಳನ್ನು ಐತಿಹಾಸಿಕವಾಗಿ ಮತ್ತು ಶಾಸ್ತ್ರೀಯವಾಗಿ ಸಿದ್ಧಮಾಡಲು ಬರುವುದೆಂದಂತಾಯಿತು.

ಮಾಲೆಯ ಎರಡನೆಯ ಲೇಖನವು ಪ್ರೊ. ಎ. ಎಂ. ರಾಜಶೇಖರಯ್ಯನವರ "ಕರ್ನಾಟಕದಲ್ಲಿ ಬ್ರಿಟಿಶರ ಆಳಿಕೆಯ ಆರಂಭ". ಇದು ಸುಮಾರು ೨೫ ಪುಟಗಳಷ್ಟಿದೆ. ಇದರಲ್ಲಿ ಕರ್ನಾಟಕದ ಭವ್ಯ ಪರಂಪರೆ, ಬ್ರಿಟಿಶರ ಆಗಮನ, ಸಾಮಾಜಿಕ ಜೀವನ, ಕರ್ನಾಟಕದ ಮೇಲೆ ಪಾಶ್ಚಾತ್ಯರ ಪ್ರಭಾವ, ಬ್ರಿಟಿಶರ ಪ್ರಾಬಲ್ಯ, ಉತ್ತರ ಕರ್ನಾಟಕ, ಕರ್ನಾಟಕದ ವಿಭಜನೆ, ರಾಣಿ ಲಕ್ಷ್ಮಮ್ಮಣ್ಣಿ, ಮತ್ತೆ ಬ್ರಿಟಿಶರ ಆಳಿಕೆ, ೧೮೫೭ರ ಸಿಪಾಯಿ ದಂಗೆ ಮತ್ತು ಕಿತ್ತೂರು ಕಿಡಿ ಎಂದು ಉಪಭಾಗಗಳನ್ನು ಮಾಡಲಾಗಿದೆ.

ಕರ್ನಾಟಕದಲ್ಲಿ ಬ್ರಿಟಿಶರ ಆಳಿಕೆಯ ಆರಂಭಕಾಲದ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಯನ್ನು ವಿಶ್ಲೇಷಿಸುವದು ಈ ಲೇಖನದ ಉದ್ದೇಶವೆಂಬುದು ಪ್ರಥಮದಲ್ಲಿಯೇ ಸ್ಪಷ್ಟವಾಗಿದೆ.

ಕರ್ನಾಟಕದ ಭವ್ಯ ಪರಂಪರೆಯನ್ನು ವಿವರಿಸುತ್ತ ಕನ್ನಡಿಗರ ಸ್ವಾತಂತ್ರ್ಯಪ್ರಿಯತೆಯನ್ನು ಆಧಾರಗಳೊಂದಿಗೆ ಇಲ್ಲಿ ಉಲ್ಲೇಖಿಸಲಾಗಿದೆ. "ಬಂಧನವು ಹೊಲ್ಲ" ಎಂದು ಸರ್ವಜ್ಞನು ಬಂಧನವನ್ನು ತುಚ್ಛೀಕರಿಸಿ ಸ್ವಾತಂತ್ರ್ಯವನ್ನು ಹೊಗಳಿದ್ದಾನೆ. ಆ ದಿಶೆಯತ್ತ ಸ್ವಾಮಿಕಾರ್ಯಕ್ಕೆ ಮಡಿಯಲೂ ಸನ್ನದ್ಧರಾಗಬೇಕೆಂದು ಆತ ಹೇಳುತ್ತಾನೆ.

> "ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ
> ಅಡಿಗಶ್ವಮೇಧ ಫಲ, ಸ್ವಾಮಿ ಕಾರ್ಯಕ್ಕೆ
> ಮಡಿಯಲೇಬೇಕು ಸರ್ವಜ್ಞ" (ಪು. ೪೦)

ಕರ್ನಾಟಕ ರಾಜವಂಶೀಯರು "ಕರ್ನಾಟಕ ಕ್ಷತ್ರಿಯ ಕುಲ"ದವರು (ಪು. ೩೨) ಮತ್ತು "ಏಳರಿಂದ ಹದಿಮೂರನೆಯ ಶತಮಾನದ ವರೆಗೆ ರಾಷ್ಟ್ರಕೂಟರು ಇಡೀ ಭಾರತದ ಮೇಲೆ ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಿದ ಸಂಗತಿಯನ್ನು" ಲೇಖಕರು ಸ್ಮರಿಸಿರುವರು (ಪು. ೩೨).

"ಆಳರಸರು ಕೇವಲ ತಮ್ಮ ಅಧಿಕಾರ ಹಾಗು ಪ್ರತಿಷ್ಠೆಗಾಗಿ ಹೋರಾಡುತ್ತಿದ್ದರಲ್ಲದೆ ಇದಕ್ಕಾಗಿ ಅವಶ್ಯವೆನಿಸಿದರೆ ಪರದೇಶದವರೊಡನೆ ಸಖ್ಯ"

(ಪು. ೪೦) ಬೆಳೆಸುತ್ತಿದ್ದುದು ಸ್ಪಷ್ಟವಾಗಿದೆ. "ಮರಾಠರು ಮತ್ತು ಹೈದರಾಬಾದಿನ ನಿಜಾಮ ಇವರು ಟಿಪ್ಪುವಿನ ವಿರುದ್ಧ ಬ್ರಿಟಿಷರೊಡನೆ ಸಹಕರಿಸಿದರು" (ಪು. ೯೧). ಆದರೆ ಟಿಪ್ಪುವು ಫ್ರೆಂಚರ ಸಹಕಾರ ಕೋರಿದ್ದು-ಬ್ರಿಟಿಶರನ್ನು ಭಾರತದಿಂದ ತೊಲಗಿಸಲು–ಕೇವಲ ದೇಶೀ ಆಳರಸರ ಸೊಕ್ಕು ಮುರಿಯಲು ಅಲ್ಲ.

"ಮರಾಠರು ಹಾಗು ನಿಜಾಮನು ಹೈದರಾಲಿ ಅಥವಾ ಟಿಪ್ಪುವಿಗೆ ಬ್ರಿಟಿಶರ ವಿರುದ್ಧ ಹೋರಾಡಲು ಸಹಾಯ ಮಾಡಿದ್ದರೆ ಭಾರತದ ಚರಿತ್ರೆಯೇ ಬೇರೆಯಾಗುತ್ತಿದ್ದಿತೇನೋ" (ಪು. ೪೧)—ಎಂದು ಲೇಖಕರು ಹೊಸತನ್ನು ನಿರೀಕ್ಷಿಸಿದಂತಿದೆ. ಅಂಥ ಸಂದರ್ಭವೂ ಆಗಿಹೋಯಿತಲ್ಲ ೧೮೫೭ರಲ್ಲಿ? ಬಲಾಢ್ಯ ಬ್ರಿಟಿಶರೆದುರಿಗೆ ಈ ತ್ರಿಕೋನದ ಸಹಕಾರವೂ ನಿರುಪಯುಕ್ತವಾಗುತ್ತಿದ್ದುದರಲ್ಲಿ ಸಂಶಯವಿಲ್ಲ.

ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮವನ್ನು ಮೂರು ವಿಭಾಗದಲ್ಲಿ ವಿಂಗಡಿಸಿದುದರಲ್ಲಿ ಔಚಿತ್ಯವಡಗಿದೆ— ೧) ಅಂತರರಾಷ್ಟ್ರೀಯ ಮಟ್ಟದಲ್ಲಿ ಟಿಪ್ಪುವಿನ ಹೋರಾಟ ೨) ೧೮೫೭ರ ವರೆಗಿನ ಬ್ರಿಟಿಶರ ವಿರುದ್ಧ ಚಿಕ್ಕ, ದೊಡ್ಡ ಪ್ರಮಾಣದ ಸಶಸ್ತ್ರ ಹೋರಾಟ ಮತ್ತು ೩) ೨೦ನೆಯ ಶತಮಾನದ ಅಹಿಂಸಾತ್ಮಕ ಹೋರಾಟ (ಪು. ೪೨).

ಹಳ್ಳಿ ಪಟ್ಟಣಗಳ ಸಾಮಾಜಿಕ ಜೀವನವನ್ನು ನಿರೂಪಿಸುತ್ತ "ಭಾರತೀಯ ಶ್ರೀಸಾಮಾನ್ಯನು ಮೊದಲಿನಿಂದಲೂ ಕಷ್ಟಕಾರ್ಪಣ್ಯಗಳಿಗೆ ಈಡಾಗಿ ಪ್ರಾರಬ್ಧವಾದಿಯಾಗಿ"ರುವದನ್ನು ಸಿದ್ಧ ಮಾಡಿರುವರು.

ಕರ್ನಾಟಕದ ಹೈದರಾಲಿ, ಟಿಪ್ಪುಸುಲ್ತಾನರು ಬ್ರಿಟಿಶರಿಗೆ ಪ್ರಥಮವಾಗಿ ಪ್ರಬಲ ವಿರೋಧ ತೋರಿದ ಕನ್ನಡಿಗರು. ಇದೇ ರೀತಿ ಭಾರತದ ಉದ್ದಗಲಕ್ಕೂ ಸಾಮಾನ್ಯವಾಗಿ ಹದಿನೇಳು, ಹದಿನೆಂಟನೆಯ ಶತಮಾನಗಳಲ್ಲಿ ಪತನವಾಗುವ ಪ್ರಾರಂಭಕ್ಕೆ ಎಲ್ಲ ರಾಜವಂಶೀಯರೂ ಬ್ರಿಟಿಶರಿಗೆ ವಿರೋಧ ಒಡ್ಡಿರುವರು. ೧೭೫೭ರಲ್ಲಿ ಬಂಗಾಲದ ನವಾಬ ಸಿರಾಜ ಉದ್ದೌಲನೂ ಈ ರೀತಿ ವಿರೋಧ ಒಡ್ಡಿದ್ದ. ಪಂಜಾಬದ ಒಕ್ಕಣ್ಣ ರಣಜಿತಸಿಂಗನಿಗೆ ಬ್ರಿಟಿಶರು ಅಂಜಿದ್ದರು.

೧೮೫೭ರ ಸಿಪಾಯಿ ದಂಗೆಗಿಂತಲೂ ಪೂರ್ವದಲ್ಲಿ ೧೮೨೪ ಅಕ್ಟೋಬರ ೨೩ ರಂದು "ಕಿತ್ತೂರ ಕಿಡಿ" ಹಾರಿ—೧೯೪೨ರ ಚಲೇಜಾವ ಚಳವಳಿಯ ವರೆಗೆ ನಿಗಿನಿಗಿಯಾಗಿದ್ದು, ೧೯೪೭ರಲ್ಲಿ ಸ್ವಾತಂತ್ರ್ಯದ ಪ್ರಕಾಶ ನೀಡಿದ ವರೆಗೆ ಈ ಲೇಖನ ಓದುಗನನ್ನು ಕೈಹಿಡಿದು ಕರೆತರುತ್ತದೆ.

ಮೂರನೆಯ ಲೇಖನವು ಸೂರ್ಯನಾಥ ಕಾಮತ್‌ರ "ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಆರಂಭ." ಇದು ಸುಮಾರು ೨೧ ಪುಟಗಳಷ್ಟಿರು

ವದು. ಲೇಖನದ ಪ್ರಾರಂಭದಲ್ಲಿ ಇಡೀ ಭಾರತವು ಬ್ರಿಟಿಶರಿಗೆ ಹೇಗೆ ಪತನವಾಯಿತು ಎಂಬ ಸಂಕ್ಷಿಪ್ತ ವಿವರಣೆ ಇವೆ. ಪ್ರತಿ ಭಾಗದ ಪತನದ ಹಿಂದೆಯೇ ಆಯಾ ಭಾಗವು ಪುನಃ ಆಗಾಗ್ಗೆ ಪುಟಿದೆದ್ದು ಬ್ರಿಟಿಶರ ಆಳ್ವಿಕೆಗೆ ವಿರೋಧಿಸಿದುದು ಕಂಡುಬರುವದು.

"ಹದಿನೆಂಟನೆಯ ಶತಮಾನದ ಕೊನೆಗೇನೇ ಬಂಗಾಳದಲ್ಲಿ ಸಂನ್ಯಾಸಿ ಬಂಡಾಯವು ನಡೆದ ಸಂಗತಿ ಸರ್ವವಿದಿತ" (ಪು. ೬೨). ಬಂಕಿಮಚಂದ್ರರ "ಆನಂದ ಮಠ"ದಲ್ಲಿ ಇದರ ಚಿತ್ರಣವಿದೆ. ೧೮೨೪ರಲ್ಲಿ ಉತ್ತರ ಭಾರತದ ಪ್ರತಿಯೊಂದು ಭಾಗ ಒಂದಲ್ಲ ಒಂದು ರೀತಿಯಲ್ಲಿ ಬ್ರಿಟಿಶ ವಿರೋಧಿಯಾಗಿದ್ದಿತು. ಅದೇ ವರ್ಷ ಕಿತ್ತೂರಲ್ಲಿ ಕಿಡಿಹಾರಿತು.

ಚಿಕ್ಕ ದೊಡ್ಡ ಸಂಸ್ಥಾನಗಳು ಭಾರತದ ನಾನಾ ಮೂಲೆಯಿಂದ ಬ್ರಿಟಿಶರ ವಿರುದ್ಧ ಭುಗಿಲೆಂದು ಆಗಾಗ್ಗೆ ಮುಗಿಬಿದ್ದುದರ ಹಲವಾರು ಉದಾಹರಣೆಗಳನ್ನು ಹೊಂದಿರುವದೇ ಈ ಲೇಖನದ ಮೂಲ ವೈಶಿಷ್ಟ್ಯ. ಭಾರತ ಇತಿಹಾಸದಲ್ಲಿ ಇವೆಲ್ಲ ಹೆಚ್ಚಾಗಿ ನಿಷ್ಕಾಳಜಿಸಲ್ಪಟ್ಟಂತಿವೆ. "ಪ್ರತ್ಯಕ್ಷ ದೇವರೇ ಎನಿಸಿಕೊಂಡ ರಾಜವಂಶಗಳ ನಿರ್ನಾಮ ಅಥವಾ ಅಧಿಕಾರ ನಷ್ಟ ಆದಾಗ" ಸ್ವಾಮಿನಿಷ್ಠ "ಪ್ರಜೆಗಳೂ, ನೌಕರರೂ, ಸೈನಿಕರು" ದಂಗೆ ಏಳುವದು ಸ್ವಾಭಾವಿಕವೆಂದು – ಕಾರಣವನ್ನಿತ್ತಿರುವರು. (ಪು. ೬೫). ಇನಾಮು ರದ್ಧತಿಯೂ (ಕ್ರಿ. ಶ. ೧೮೫೨) ದಂಗೆ ಏಳುವಲ್ಲಿ ಎರಡನೆಯ ಕಾರಣವು. ಭೂಕಂದಾಯ ರೂಪದಲ್ಲಿ ರೈತರ ಸುಲಿಗೆ ಮಾಡಿದ್ದು ಮತ್ತೊಂದು ಕಾರಣ.

ಕಾರ್ನವಾಲಿಸನು ಪ್ರಥಮವಾಗಿ ಭಾರತದಲ್ಲಿ ಪೋಲೀಸ ಪದ್ಧತಿಯನ್ನು ತಂದನು. ಗ್ರಾಮಸ್ಥರು ಇವರಿಂದ ಭಯಭೀತರಾದರು. ತಮ್ಮ ಮನೆಗೆ ಕನ್ನ ಬಿದ್ದರೂ–ತಾವೇ ಅದನ್ನು ಮುಚ್ಚಿ ಆ ಬಾತ್ಮಿ ಪೋಲೀಸರಿಗೆ ಮುಟ್ಟದಂತೆ ಲಂಚಕೊಡುತ್ತಿದ್ದರು ಎಂದು ಕಲಕತ್ತಾ ಗೆಜೆಟ್ (೨೦-೬-೧೮೨೭)ನಲ್ಲಿ ಬರೆಯಲಾಗಿದೆ. ಮೊದಲು ರೆವೆನ್ಯೂ ಖಾತೆಯಲ್ಲಿದ್ದ ಲಂಚಗುಳಿತನ, ಪೋಲೀಸ ಖಾತೆಗೂ ಸೋಂಕಿತು. ಇನ್ನೂವರೆಗೂ ಈ ಎರಡೂ ವಿಭಾಗಗಳು ಲಂಚತನದಲ್ಲಿ ಪೈಪೋಟಿ ನಡೆಸುತ್ತಿರುವವು. "ಲಂಚದ ವಿಭಾಗಕ್ಕೆ"–ಎಂದು ಯಾರಾದರೂ ಪತ್ರ ಹಾಕಿದರೆ ನೇರವಾಗಿ ಅದು ಪೋಲೀಸು ಅಥವಾ ರೆವೆನ್ಯೂ ವಿಭಾಗಕ್ಕೇ ಸರಿಯಾಗಿ ಹೋಗಿ ಮುಟ್ಟುವದು !

"ಮಸ್ಲಿನ್ ಮತ್ತು ಕ್ಯಾಲಿಕೊ ಬಟ್ಟೆಗಳ ಮೇಲೆ ಹದಿನೆಂಟನೆಯ ಶತಮಾನದಲ್ಲಿ ೨೭% ರಿಂದ ೭೧%ರ ವರೆಗೆ ಆಮದು ತೆರಿಗೆ ಹೇರಲಾಗು

ತ್ತಿತ್ತು" (ಪು. ೬೯). ಇದು ವಿರೋಧಕ್ಕೆ ಮತ್ತೊಂದು ಕಾರಣವು. ಪೈಸ್ಲೆ ಮತ್ತು ಮ್ಯಾಂಚೆಸ್ಟರ ಗಿರಣಿಗಳು ಬೆಳೆದವು—ಭಾರತವನ್ನು ಕೇವಲ ಕಚ್ಚಾ ಮಾಲು ಪೂರೈಸುವ ದೇಶವನ್ನಾಗಿ ಮಾಡಿ. "೧೭೮೭ರಲ್ಲಿ ಢಾಕಾದಿಂದ ೩೦ ಲಕ್ಷ ರೂ. ಬೆಲೆಯ ಮಸ್ಲಿನ್ ಇಂಗ್ಲಂಡಿಗೆ ಹೋಗುತ್ತಿತ್ತು. ೧೮೧೭ರಲ್ಲಿ ಅದು ಪೂರ್ತಿ ನಿಂತಿತು." (ಪು. ೭೦). ಬಹುಶಃ ಭಾರತೀಯರ ಅಸಂತೋಷ ಎಲ್ಲೆ ಮೀರಿರಬೇಕು. ನೇಕಾರರ ಗೋಳು ಇಂದು ನಿನ್ನಿನದಲ್ಲ. ಬ್ರಿಟಿಶರೇ ಅದನ್ನು ಬಳುವಳಿಯಾಗಿ ಹಾಕಿಕೊಟ್ಟಂತಾಗಿದೆ.

"ಕ್ರೈಸ್ತ ಧರ್ಮದ ಜ್ಞಾನ ನೀಡುವದೇ ಭಾರತದ ಶಿಕ್ಷಣದ" ಗುರಿಯಾಗಿತ್ತು. (ಪು. ೭೧). ಭಾರತ ಸಂಸ್ಕೃತಿಯನ್ನು ಬಿಟ್ಟು ಪಾಶ್ಚಾತ್ಯ ಸಂಸ್ಕೃತಿ ಅನುಕರಣೆ ಮಾಡುವದೇ ಪ್ರಗತಿಯ ಲಕ್ಷಣ ಆಗಿಹೋಯಿತು! ಈಗಲೂ ಕಾನ್ವೆಂಟ್ ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಬಳೆ, ಕುಂಕುಮ ಮುಂತಾದವುಗಳನ್ನು ನಿಷೇಧಿಸುತ್ತಿರುವದನ್ನು ಇಲ್ಲಿ ಸ್ಮರಿಸಬಹುದು.

"ಸ್ವಾತಂತ್ರ್ಯ ಯೋಧರನ್ನು ಬ್ರಿಟಿಶರು ದರೋಡೆಕೋರರೆಂದೇ ಭಾವಿಸುತ್ತಿದ್ದರು." (ಪು. ೭೪). ಜನರನ್ನು ಅವರ ವಿರುದ್ಧ ಕಟ್ಟುವ–ಒಡೆದು ಆಳುವ ಬ್ರಿಟಿಶ್ ನೀತಿಯನ್ನು ಇದು ತೋರಿಸುವದು. ಶಿಕಾರಿಪುರದಿಂದ ಬಂಡಾಯವೆದ್ದ ಧೊಂಡಜಿಯ ನಿರೂಪಣೆ ಇಲ್ಲಿ ಬರುವದು. ಅವನಲ್ಲಿ "೯೧,೦೦೦ ಅಶ್ವ ಸೈನ್ಯ, ಒಂದ ಲಕ್ಷ ಕಾಲ್ದಳ ಇತ್ತೆಂದು ಬ್ರಿಟಿಶ್ ದಾಖಲೆಗಳು ತಿಳಿಸುತ್ತವೆ." (ಪು. ೭೭).

೧೮೨೪ ರಿಂದ ೧೮೫೮ ರ ವರೆಗೆ ಕಿತ್ತೂರಿನ ಬಂಡಾಯಗಳ ದಾಖಲೆ ಇದೆ. ಇಪ್ಪತ್ತನೆಯ ಶತಮಾನದ ಚಲೇಜಾವ ಚಳುವಳಿ ಮುಂತಾದವಕ್ಕೆ ಕಿತ್ತೂರಿನ ಕೇಸರಿಗಳೇ ಸ್ಫೂರ್ತಿ ನೀಡಿರುವರು. ಬಂಡಾಯಗಳಿಗೆ ಕಾರಣಗಳೇನು? ಬಂಡಾಯಗಳೆಲ್ಲೆಲ್ಲಿ ಎದ್ದವು? -ಎಂಬ ಸಂಕ್ಷಿಪ್ತ ವಿವರಣೆಗಳನ್ನು ಈ ಲೇಖನ ಕೊಡುವದು. ಕಿತ್ತೂರಿಗಷ್ಟೇ ವಿಶೇಷವಾಗಿ ಸಂಬಂಧಿಸಿರದೇ–ಸಾಮಾನ್ಯವಾಗಿ ಭಾರತಕ್ಕೆ ಸಂಬಂಧಿಸಿದ ವಿವರಣೆಗಳಿಲ್ಲಿವೆ.

ನಾಲ್ಕನೆಯ ಲೇಖನ ಸಿ. ಬ್ರಿ. ಮಠದ ಅವರ "ಕಿತ್ತೂರ ನಾಡಿನ ವೀರರು." ಇದು ಸುಮಾರು ೨೭ ಪುಟಗಳಷ್ಟಿದೆ. ಭೌಗೋಲಿಕ ಪ್ರಸ್ತಾವನೆಯೊಂದಿಗೆ ಲೇಖನ ಪ್ರಾರಂಭವಾಗುವದು. ಕಿತ್ತೂರಿನ ಕೀರ್ತಿ ಉಳಿದಿದು ಅದರ ವೀರರಿಂದ. "ಬ್ರಿಟಿಶರ ರುಂಡಗಳು ಭೂಮಿಗೆ ಬೀಳುವವರೆಗೆ ನಾವು ಹೋರಾಡುತ್ತೇವೆ. ತಾಯಿ, ನಿನ್ನ ಉಪ್ಪನ್ನು ನಾವು ಉಂಡಿದ್ದೇವೆ, ನಿನ್ನನ್ನು

ನಾವು ಎಂದಿಗೂ ತೊರೆಯಲಾರೆವು." (ಪು. ೮೨). ಸ್ವಾಮಿನಿಷ್ಠೆ ಪುಟಿದೇಳುವುದಿಲ್ಲ. ಅಂಥ ವೀರರಲ್ಲಿ "ಸಂಗೊಳ್ಳಿ ರಾಯಣ್ಣ...ಸರ್ದಾರ ಗುರುಸಿದ್ದಪ್ಪ, ಅಮಟೂರ ಬಾಳಪ್ಪ, ಗಜವೀರ, ಬಿಚ್ಚಗತ್ತಿ ಚನ್ನಬಸಪ್ಪ, ಮಡಿವಾಳಪ್ಪ ಕುಂಬಾರ" (ಪು. ೮೨), ಅವರಾದಿ ವೀರಪ್ಪ ಮುಂತಾದವರು ಅಗ್ರಗಣ್ಯರು.

ವೀರರ ವಿವರಣೆಗೆ ಮುಂಚೆ ಕಿತ್ತೂರ ಸಂಸ್ಥಾನದ ಸ್ಥಾಪನೆಯ ವಿವರಣೆ ಇದೆ. "೧೬೦೨ ರ ಸುಮಾರಿಗೆ ಮಲ್ಲಸರ್ಜನಿಗೆ ನಾಲ್ಕು ಲಕ್ಷ ರೂಪಾಯಿಗಳ ಕಂದಾಯ ಉತ್ಪನ್ನವಿದ್ದಿತು" (ಪು. ೮೫). "ಇವನು ಅರವತ್ತು ಸಾವಿರದಿಂದ ಎಪ್ಪತ್ತು ಸಾವಿರ ರೂಪಾಯಿಗಳ"ನ್ನು "ಪೇಶ್ವೆಗೆ ವರ್ಷಾಶನ" ಕೊಡುತ್ತಿದ್ದನು. (ಪು. ೮೫). ೧೮೦೯ ರಲ್ಲಿ ಅದು ೧ ಲಕ್ಷ ೭೫ ಸಾವಿರಕ್ಕೇರಿತು. ಅದಕ್ಕೆ ಪ್ರತಿಯಾಗಿ "ಪ್ರತಾಪರಾವ್" ಬಿರುದು ದೇಸಾಯರಿಗೆ. ಇದರ ಸಂಸ್ಮರಣೆಗಾಗಿ ನಂದಗಡ ಬಳಿ ಪ್ರತಾಪಗಡ ಕಟ್ಟಿಸಿದನು ಎಂಬುದನ್ನು ನಂಬುವದು ಕಷ್ಟ. ಅಷ್ಟೊಂದು ಹೃದಯ ವೈಶಾಲ್ಯತೆ ಪೇಶ್ವೆಯಲ್ಲಿ ವಿರಳ.

ಕಿತ್ತೂರ ಖಳನಾಯಕರಿಗೂ ಕೊರತೆಯಿಲ್ಲ. ಕಿತ್ತೂರ "ಮಲ್ಲಪ್ಪಶೆಟ್ಟಿ, ಕಲ್ಲೂರ ಕರಬಸಪ್ಪ, ಹುರಕಡ್ಲಿ ಶಿವಬಸಪ್ಪ, ವೆಂಕಟರಾವ್, ಶಿವಲಿಂಗಸ್ವಾಮಿ, ಗೋವಿಂದಭಟ್ಟ, ಗೆಜ್ಜಿ ಮಹಾಂತವ್ವ" (ಪು. ೯೭). ಸಂಗೊಳ್ಳಿ ರಾಯಣ್ಣನನ್ನು ಹಿಡಿದುಕೊಟ್ಟ ಖೋದಾನಪುರದ ಲಿಂಗನಗೌಡ ಮತ್ತು ನೇಗಿನಹಾಳದ ವೆಂಕನಗೌಡರೂ ಈ ಪಟ್ಟಿಗೆ ಸೇರುವರು–ರಾಯಣ್ಣನ ಸೋದರಮಾವ ಲಕ್ಕಣ್ಣ ಸಹಿತ.

ಹಲವು ವೀರರ (ಗುರುಸಿದ್ದಪ್ಪ, ಬಾಳಪ್ಪ, ಗಜವೀರ, ಚನಬಸಪ್ಪ, ರಾಯಣ್ಣ) ಸಂಕ್ಷಿಪ್ತ ಚಿತ್ರಣಗಳಲ್ಲಿವೆ. ಇನ್ನೂ ಹೆಚ್ಚಿಚ್ಚು ವಿವರಣೆಗಳಿರಬೇಕಿತ್ತು ಎನ್ನಿಸುತ್ತದೆ ಓದುಗನಿಗೆ. ಗುರುಸಿದ್ದಪ್ಪನು "ಅಸಾಮಾನ್ಯ ಸಂಘಟಕ"ನಾಗಿದ್ದನೆಂಬ ಸಂಗತಿಯನ್ನು ಆಗಿನ ಧಾರವಾಡದ ಕಲೆಕ್ಟರನೇ ಹೇಳುತ್ತಾನೆ (ಎಪ್ರಿಲ್ ೧೮೨೬) (ಪು. ೯೦).

ಅಮಟೂರ ಬಾಳಪ್ಪನೇ ಥ್ಯಾಕರೆನನ್ನು ಗುಂಡಿಕ್ಕಿದ (೨೩–೧೦–೧೮೨೪) ಎಂದು ಈ ಲೇಖಕರು ಒಪ್ಪುತ್ತಾರೆ. ಈತ ಹಿಂದುವೋ, ಮುಸ್ಲಿಮನೋ–ಎಂಬ ಸಂಶಯದ ಸುಳಿ ಬಿಚ್ಚುವರು. ಇವನು "ಸಾಧುನವರ (ಸೈದನವರ) ಮನೆತನದವನು...ಸಾಧುನವರ ಬಾಳಪ್ಪನ ಮನೆತನದವರು ಅಮಟೂರ, ದೇವಲಾಪುರ, ಮುಗಟಖಾನ ಹುಬ್ಬಳ್ಳಿ, ಹಟ್ಟಿಹೊಳಿ"ಯಲ್ಲಿದ್ದಾರೆ (ಪು. ೯೧). ಇವರೆಲ್ಲ ಲಿಂಗಾಯತರು. ದೊಡ್ಡ ಭಾವೆಪ್ಪ ಮೂಗಿಯವರ ಅಭಿಪ್ರಾಯದಲ್ಲಿಯೂ ಬಾಳಪ್ಪ ಲಿಂಗಾಯತ.

'ಗಜವೀರ' ಹೆಸರೋ ಅಥವಾ ಉಪನಾಮವೋ (Nickname) ಎಂಬ ಸಂಶಯು ಲೇಖಕರೇ ಸೂಚಿಸಿರುವರು. ಈಗಲೂ "ಗಂಡ ಗಜವೀರ" ಎಂಬ ಬಿರುದುಗಳು ಮಾತಿನಲ್ಲಿ ಬರುವವು—"ಗಾಮಾ ಗೂಂಗಾ" ತರಹ. ಗಾಮಾ ಗೂಂಗಾ ಪೈಲವಾನರಿದ್ದಂತೆ. ಗಜವೀರ ಕಿತ್ತೂರಿನ ವೀರ ಸಿಪಾಯಿ. ಅದುವೇ ಆತನ ಮೂಲ ಹೆಸರು ಇರಬೇಕು. "ಹಬಸ್ಯಾರ ಗಜವೀರಾ" (ಪು. ೯೩). ರಾಯಣ್ಣ ಸತ್ತ ಸುದ್ದಿ ಕೇಳಿ ಗಜವೀರ ಆತ್ಮಹತ್ಯೆ ಮಾಡಿಕೊಂಡ(೨೮-೧೨-೧೯೩೦) ಎಂಬುದು ಜಾನಪದದ ಅಭಿಪ್ರಾಯ. (ಪು. ೯೪-೯೫)

ಬಿಚ್ಚುಗತ್ತಿ ಚೆನ್ನಬಸಪ್ಪ "ನೆಲಕ್ಕೆ ಕಿವಿ ಹಚ್ಚಿ ಎಷ್ಟು ಅಂತರದ ಮೇಲೆ ಎಷ್ಟು ಸೈನ್ಯವು ಬರುತ್ತದೆಂದು ಹೇಳುತ್ತಿದ್ದ" (ಪು. ೯೬). ೧೮೨೪ ರ ಕ್ರಾಂತಿಯಲ್ಲಿ ರಾಜಮನೆತನದವರು ಮುಂದಾಳ್ತನ ವಹಿಸಿದ್ದರೆ, "೧೯೨೯ರ ಕ್ರಾಂತಿಯಲ್ಲಿ ಬರೀ ಜನತೆಯೇ ಒಂದಾಗಿ" ಹೋರಾಡಿದರು. (ಪು. ೯೭) ಇದು ಜನತಾ ಕ್ರಾಂತಿ.

ಸಂಗೊಳ್ಳಿ ರಾಯಣ್ಣ – ನಿಜವಾಗಿಯೂ ರಾಯಣ್ಣ! ನೇಸರಗಿ ಚೌಬಾರಿ ಅಡಿವೆಪ್ಪಗೌಡ ಆತನ ಬಗೆಗೆ ಲಾವಣಿ ಬರೆದಿರುವನು. ಈತನ ಅಜ್ಜ, ರಾಗಪ್ಪ "ಸಾವಿರ ಒಂಟಿ ಸರದಾರ" ಆಗಿದ್ದ (ಪು. ೯೯). ಅಜ್ಜನ ಹೆಸರು, "ರಾಗಪ್ಪ"-ನಿಂದ ಮನೆತನಕ್ಕೆ 'ರಾಗಣ್ಣವರ' ಎಂದು ಬಂದಿತು. ಈಗ ಅದು 'ರೋಗಣ್ಣವರ' ಆದುದರಲ್ಲಿ ತಪ್ಪೇನಿಲ್ಲ! ಕುಲಕರ್ಣಿ ಬಾಳಪ್ಪನ ರೈತರ ಶೋಷಣೆಯೇ ರಾಯಣ್ಣನ ರೋಷಕ್ಕೆ ಮೂಲ ಕಾರಣ. ಕಿತ್ತೂರಿನ ಲಿಂಗವಂತ ಸಂಸ್ಥಾನ ಹಾಳಾದುದಕ್ಕೆ ಬ್ರಾಹ್ಮಣರ ಕುಹಕತನದ ಕೈವಾಡವೂ ಇದ್ದಿರಬೇಕು. ಆಗಿನ ಶಾನುಭೋಗ (ಉದಾ–ಕುಲಕರ್ಣಿ ಬಾಳಪ್ಪ), ಶಿರಸ್ತೆದಾರ (ಉದಾ—ನರಸಿಂಹರಾವ್), ಗೋಪಿಂದಭಟ್ಟ ಮುಂತಾದವರು ಕಿತ್ತೂರ ನಾಟಕದ ಖಳನಾಯಕರು.

ದೇಶನೂರ ಭಾವಿ ಬಸವಣ್ಣನ ಗುಡಿಯಲ್ಲಿ ಶಪಥಮಾಡಿ ಸಹಪಂಕ್ತಿಯಲ್ಲಿ ಕುಳಿತು ಊಟ ಮಾಡುವಲ್ಲಿ ಕರ್ನಾಟಕದ ಸೈನಿಕರು ಪ್ರಥಮರೆನಿಸಿದರು. "ಸಹನೌಭುನಕ್ತು" ಪ್ರಯೋಗದಲ್ಲಿ ಬಂದಿತು. (ಪು. ೧೦೩-೪)

ತಾನು ಸತ್ತ ಮೇಲೆ ನಿರ್ಧಿಷ್ಟ ಸ್ಥಳದಲ್ಲಿ ದಫನ ಮಾಡಬೇಕು ಮತ್ತು ಅಲ್ಲಿ ಒಂದು ಗಿಡ ನೆಡಬೇಕು ಎಂದು ರಾಯಣ್ಣ ಹೇಳಿರಬೇಕು. ಆದರೆ ತನ್ನನ್ನು ದಫನ ಮಾಡಿದಲ್ಲಿ ಒಂದು ಗಿಡ ಬೆಳೆಯುವದೆಂದು (ಪು. ೧೦೫) ಭವಿಷ್ಯ

ನುಡಿದಿರಲಿಕ್ಕಿಲ್ಲ. ಬಹುಶಃ ಇಲ್ಲಿ ಲೇಖಕರು ತಪ್ಪಿರಬಹುದು. ರಾಯಣ್ಣ ಒಬ್ಬ ವೀರಯೋಧ, ಪ್ರವಾದಿಯಲ್ಲ. ಆತನ ಗದ್ದುಗೆಗೆ ನಡೆದುಕೊಳ್ಳುವುದು-ಬೇರೆ ವಿಚಾರ.

ಐದನೆಯ ಲೇಖನ ಪ್ರೊ. ಎಸ್. ಶೆಟ್ಟರ ಅವರ "ಕಿತ್ತೂರ ಸಂಸ್ಥಾನದ ಇತಿಹಾಸ". ಇದು ಮಾಲೆಯಲ್ಲಿಯೇ ಸುದೀರ್ಘವಾದ ಲೇಖನ. ಸುಮಾರು ೮೧ ಪುಟಗಳಷ್ಟಿದೆ. ಈ ಲೇಖನವು ಸಂಪೂರ್ಣ ವಿವಾದಾತ್ಮಕವಿದೆ. ಇಲ್ಲಿಯವರೆಗೆ ಕಿತ್ತೂರಿನ ಬಗೆಗೆ ಪ್ರಚಲಿತವಿದ್ದ ಎಲ್ಲ ಇತಿಹಾಸವನ್ನೇ ಆಹ್ವಾನಿಸುವ ಎದೆಗಾರಿಕೆ ತೋರಿಸುವ ಲೇಖನವಿದ್ದಂತಿದೆ. ಲೇಖಕರು ಇದನ್ನು ಪ್ರತ್ಯೇಕವಾಗಿ ಸ್ವತಃ ಪ್ರಕಾಶನಗೊಳಿಸಿದ್ದರೆ ಮುಕ್ತ ವಿಮರ್ಶೆಗೆ ಅನುವಾಗುತ್ತಿದ್ದಿತು. ಈಗ ವಿಶ್ವವಿದ್ಯಾಲಯದಿಂದ ಇದು ಪ್ರಕಟನೆಗೊಂಡಿರುವುದರಿಂದ ಮುಕ್ತ ವಿಮರ್ಶೆಗೆ ಸ್ವಲ್ಪ ಮಟ್ಟಿಗೆ ಆತಂಕ ಬರಬಹುದು.

ಲೇಖನವು ಪ್ರಾರಂಭಕ್ಕೇ- ಮತ್ತೊಬ್ಬರ ಮೇಲೆ ದೋಷಾರೋಪಣೆ ಮಾಡ ಹೊರಟಂತಿದೆ. "ಇತಿಹಾಸದಲ್ಲಿ ದೊರಕಬೇಕಾದ ಸ್ಥಾನ ಇನ್ನೂ ಕಿತ್ತೂರಿಗೆ ದೊರಕಿಲ್ಲ. ಹಲವರು ಈ ನಾಡಿನ ಇತಿಹಾಸವನ್ನು ಪೂರ್ಣ ನಿರ್ಲಕ್ಷಿಸಿದರೆ, ಇನ್ನು ಹಲವರು ಅದನ್ನು ಹಿಗ್ಗಿಸಿ ಹಿರಿದು ಮಾಡಿ ಹೆಣೆದು ತೋರಿಸಿದ್ದಾರೆ." (ಪು. ೧೦೮). "ಆಡುಮಾತು, ಕತೆ, ಕವನ, ಲಾವಣಿಯ ತೆಕ್ಕೆಗೆ ಸಿಕ್ಕು ಇತಿಹಾಸದ ಅಂಶ ರೂಪಾಂತರ ಹೊಂದಿ ಜನಪ್ರಿಯ ವೇಷ ತಾಳಿದೆ." (ಪು. ೧೦೮) ಇದು ಸ್ವಾಭಾವಿಕ.

ಮಲ್ಲಸರ್ಜನು, ಒಂದೆಡೆ ಮರಾಠರು, ಮತ್ತೊಂದೆಡೆ ನಿಜಾಮ, ಮಗುದೊಂದೆಡೆ-ಟಿಪ್ಪು ಸುಲ್ತಾನ ಹಾಗೂ ಬ್ರಿಟಿಶರ ಮಧ್ಯದಲ್ಲಿ "ರಾಜಕೀಯ ಚದುರಂಗದ ಆಟ" ಆಡಿ ಸಮಯ ಸಾಧಿಸಿ ಸಂಸ್ಥಾನ ದಕ್ಕಿಸಿಕೊಂಡ-ಎಂದು ಲೇಖಕರು ಮಲ್ಲಸರ್ಜನ ಚರಿತ್ರೆಯನ್ನು ನಿಕೃಷ್ಟಗೊಳಿಸಿರುವರು. ಸಾಮೋಪಾಯ, ದಂಡೋಪಾಯ ಮುಂತಾದ ರಾಜಕೀಯ ಮುತ್ಸದ್ದಿತನ ತಳೆಯಬೇಕಾದುದು ರಾಜಕಾರಣಿಗಳ ಕರ್ತವ್ಯ. ಸಮಯಸಾಧಕತನ ಮಾಡಿ ಮಲ್ಲಸರ್ಜನು ಎರಡನೆಯವರದನ್ನೇನೂ ಅಪಹರಿಸಲಿಲ್ಲವಲ್ಲ? ಬ್ರಿಟಿಶರಿಗೆ ನೆರವಾದರೂ (೧೮೦೨ – ೧೮೧೮ ರಲ್ಲಿ)-ಅವರಿಗೆ ಕೊಡಬೇಕಾದ ಕಾಣಿಕೆಯನ್ನು ಕೊಡಲು ಒಡಂಬಡಿಕೆ ಮಾಡಿಕೊಂಡಿದ್ದನು. "ವಂಶಪಾರಂಪರಾಗತವಾಗಿ, ಮಕ್ಕಳಿಂದ ಮಕ್ಕಳಿಗೆ, ಈ ಸಂಸ್ಥಾನವು ಮುಂದುವರಿಯುವದು ಹಾಗೂ ನಿಮ್ಮಿಂದ ವರ್ಷಂಪ್ರತಿ ರೂ. ೧,೭೦,೦೦೦ ಕಾಣಿಕೆಯನ್ನು ನಾವು ಪಡೆದುಕೊಳ್ಳುವೆವು." (ಪು. ೧೧೨)

ಶಿವಲಿಂಗರುದ್ರಸರ್ಜನ ಚರಿತ್ರೆಯನ್ನಂತೂ ಪೂರ್ತಿ ಮುಗಿಸಿಬಿಟ್ಟಿರುವರು! ಉಪಯೋಗಿಸಿದ ಶೈಲಿ, ಬಳಸಿದ ಶಬ್ದಗಳಂತೂ-ತೀರ ಕನಿಷ್ಟ. ಒಬ್ಬ ಬಡ ಕೂಲಿಕಾರನ ಮನೆತನದ ಚಿತ್ರಣವಿದ್ದಂತಿದೆ. "ಈ ರೋಗಪೀಡಿತ ದೇಸಾಯಿಗೆ ಹನ್ನೊಂದು ವರ್ಷದ ಹೆಂಡತಿ, ಮಕ್ಕಳಿಲ್ಲದ ಮನೆ, ವಿಧವೆಯರಾದ ಮಲತಾಯಿ ಮತ್ತು ಅತ್ತಿಗೆಯರೇ ಅರಮನೆಯಲ್ಲಿಯ ಸ್ನೇಹ ಸ್ವತ್ತು... ಈ ದೇಸಾಯಿ ತನ್ನ ಜೀವಿತಾವಧಿಯಲ್ಲಿ ದೃಢಮನಸ್ಸಿನ ಹೆಜ್ಜೆಯನ್ನೇ ಇಡಲಿಲ್ಲ. ಅವನು ಸಾಯಲು ಐದು ತಿಂಗಳು ಮುಂಚೆ....ತನಗೆ ಬೇಕಾದ ಔಷಧಿ ಕಳಿಸಿಕೊಡಿ ಎಂದು ಥ್ಯಾಕರೆಗೆ ಆತುರದ ಪತ್ರ ಬರೆದ... ತನ್ನ ಆರೊಗ್ಯದ ಕಳಕಳಿಯ ಮಾತು ಬಿಟ್ಟು ತನ್ನ ಮರಣಾನಂತರದ ಕಿತ್ತೂರಿನ ಭವಿಷ್ಯದ ಬಗ್ಗೆ ಪ್ರಸ್ಥಾಪಿಸ ಲಿಲ್ಲ" (ಪು. ೧೧೩-೧೪). ಬಹುಶಃ ಕೊನೆಯ ಮಾತಂತೂ ಸತ್ಯಕ್ಕೆ ದೂರ. ಎಂಥ ಕನಿಷ್ಟ ವ್ಯಕ್ತಿಗೂ ಮೃತ್ಯುಶಯ್ಯೆಯಲ್ಲಿದ್ದಾಗ ತನ್ನ ಮಡದಿ, ಆಸ್ತಿಯ ಬಗೆಗೆ ಭವಿಷತ್ತಿನ ಚಿಂತೆ ಇದ್ದೇ ಇರುತ್ತದೆ. ಹೀಗಿರುವಾಗ ಒಬ್ಬ ಸಂಸ್ಥಾನಿಕ ನಿಗೆ ಈ ಚಿಂತೆ ಇರಲಿಲ್ಲವೆಂದರೆ—ನಂಬಲಸದಳ!

ಮತ್ತೆ, "ದೇಸಾಯಿ ಸಾಯಲು ಎರಡು ತಿಂಗಳಿರುವಾಗ" (ಪು. ೧೧೪) ಎಂದು ತೀರ ಕನಿಷ್ಟ ರೀತಿಯಲ್ಲಿ ಶಬ್ದ ಬಳಸಿರುವರು.

ಇಡೀ ಲೇಖನದಲ್ಲಿ-ಒಂದಕ್ಕೊಂದು ತದ್ವಿರುದ್ಧ ವಿಚಾರಗಳು ಬರುವವು. ಹಿಂದೆ ಭವಿಷತ್ತಿನ ಚಿಂತೆ ಇರಲಿಲ್ಲ ಎಂದು ಹೇಳಿದ ಲೇಖಕರು—"ಸಾವಿನ ಹಾಸಿಗೆಯಲ್ಲಿದ್ದ ದೇಸಾಯಿಯು ಸಿಂದೊಳ್ಳಿ ಹಾಗೂ ಮಸ್ತಾನಮರಡಿಯಲ್ಲಿದ್ದ ಚಿಕ್ಕಮಲ್ಲಶೆಟ್ಟಿಯ ಮಗನನ್ನು ಕರೆತರಲು ಹೇಳಿದ" (ಪು. ೧೧೪). ಅಂದರೆ ದತ್ತಕ ಕಾರ್ಯ ದೇಸಾಯಿಯವರ ಜೀವಿತಕಾಲದಲ್ಲಿಯೇ ಆಗಿರಬೇಕು—ಎನ್ನು ವಂತೆ ಬರೆದಿರುವರು. ಮುಂದೆ "ದೇಸಾಯಿಯ ಮರಣಾನಂತರವೇ ಈ ಕಾರ್ಯವಾಯಿತೆಂದು ಥ್ಯಾಕರೆ ಊಹಿಸಿದುದರಲ್ಲಿ ತಪ್ಪಿಲ್ಲ" - (ಪು. ೧೨೦) ಎಂದು ಥ್ಯಾಕರೆಯ ಪರವಾಗಿ ಲೇಖಕರು ವಾದಿಸಿರುವರು.

ಬಹುಶಃ ಇಡೀ ಲೇಖನದ ಉದ್ದೇಶವೆಂದರೆ ಥ್ಯಾಕರೆಯನ್ನು ನಾಯಕ ಪಟ್ಟಕ್ಕೇರಿಸುವುದು. ಕಾರಣವೆಂದರೆ ಇಲ್ಲಿಯವರೆಗಿನ ಇತಿಹಾಸ ಅವನನ್ನು ಖಳನಾಯಕನನ್ನಾಗಿ ಮಾಡಿದೆ—ಎಂದು ಲೇಖಕರ ದೋಷಾರೋಪಣೆ. ಅದರ ಲ್ಲಿಯೂ ಲೇಖಕರ ಮುಖ್ಯ ದೋಷಾರೋಪಣೆ ಇರುವದು "ಹಿಸ್ಟ್ರಿ ಆಫ್ ಫ್ರೀಡಮ್ ಮೂವಮೆಂಟ ಇನ್ ಕರ್ನಾಟಕ" (History of Freedom Movement in Karnataka)ದ ಸಂಪಾದಕರಾದ ಡಾ. ಎಮ್. ವಿ. ಕೃಷ್ಣರಾವ್ ಮತ್ತು ಪ್ರೊ. ಜಿ. ಎಸ್ ಹಾಲಪ್ಪರ ಮೇಲಿರುವದು. ಈ ಲೇಖನದ

ಅಡಿಯಲ್ಲಿ ಒಟ್ಟು ೧೩೨ ಟಿಪ್ಪಣಿಗಳಿವೆ. ಅವೆಲ್ಲವೂ ಹೆಚ್ಚಾಗಿ ಇದೊಂದೇ ಪುಸ್ತಕಕ್ಕೆ ಸಂಬಂಧಿಸಿದವು. ಬಹುಶಃ ಲೇಖಕರ ಮನದಲ್ಲಿ ಈ ಸಂಪಾದಕರ ಬಗೆಗೆ ಆದೇನೋ ವೈಮನಸ್ಸು ಇದ್ದಂತೆ ಕಾಣಿಸುತ್ತದೆ. ಅದನ್ನು ಅವರು ಹೊರಗೆಡವಿಯೂ ಬಿಟ್ಟಿರುವರು. "ನಾಯಕ ಇಲ್ಲವೇ ಖಳನಾಯಕನೆನ್ನುವ ಇಬ್ಬಗೆಯ ಚಿತ್ರದ ಮಧ್ಯದಲ್ಲಿ ನಿಲ್ಲುವ ವ್ಯಕ್ತಿತ್ವದ ಗಣನೆ ಭಾರತೀಯರಿಗಿಲ್ಲ" (ಪು. ೧೨೦ ಟಿಪ್ಪಣಿ). ಈ ಗಣನೆ ಈ ಲೇಖಕರಿಗೂ ಇಲ್ಲವೆಂಬುದು ಸುಸ್ಪಷ್ಟ. ಕಾರಣವೆಂದರೆ ಇವರೂ ಥ್ಯಾಕರೆಯನ್ನು ಇಲ್ಲಿ ನಾಯಕ ಪಟ್ಟಕ್ಕೇರಿಸಿರುವರು. "ಇಲ್ಲಿ ಕಂಡು ಬರುವ ಉತ್ಪ್ರೇಕ್ಷಿತ ವ್ಯಕ್ತಿಚಿತ್ರ, ಉಬ್ಬಿದ ಹುಮ್ಮಸ್ಸಿನಿಂದ ಇತಿಹಾಸ ಬರೆಯಲು ಆಸಕ್ತರಾದವರ ಆವೇಶಪೂರ್ಣ ರೂಪವೆಂದು ಮಾತ್ರ ತಿಳಿಯಬಹುದು." (ಪು. ೧೨೦ ಟಿಪ್ಪಣಿ). ಈ ಆವೇಶಕ್ಕೆ ಇಲ್ಲಿ ಲೇಖಕರೂ ಹೊರತಾಗಿಲ್ಲ. ಬಹುಶಃ ಪ್ರೊ. ಗ. ಸ. ಹಾಲಪ್ಪನವರು ಇತಿಹಾಸ ವಿಷಯಕ್ಕೆ ಸಂಬಂಧವಿಲ್ಲದವರು—ಇಂಥ ಕಾರ್ಯ ಮಾಡಿರುವರೆಂಬ ಆರೋಪ ಲೇಖಕರ ಮನದಲ್ಲಿ ಹೆಪ್ಪುಗಟ್ಟಿರಬೇಕು. ಹಾಲಪ್ಪನವರು ಸಂಪಾದಕರು ಮಾತ್ರ. ಸಂಪಾದಕರ ಬದಲು ಸಂಪಾದಿಸಿದ ಕೃತಿಯನ್ನು ಪರಾಮರ್ಶಿಸಬೇಕು. ಇಲ್ಲಿ ಲೇಖಕರು ಸಂಪಾದಕರ ಮೇಲೆಯೇ ಅಭಿಯೋಗ ಮಾಡಿದಂತಿದೆ.

ಥ್ಯಾಕರೆ ಸಂಸ್ಥಾನಿಕರ ಹಿತಕ್ಕಾಗಿಯೇ ಭಂಡಾರಕ್ಕೆ ಮುದ್ರೆಹಾಕಿದ—ಅವರ ಹಿತರಕ್ಷಣೆ ಮಾಡಿದ—ಎಂಬ ಲೇಖಕರ ವಾದಸರಣಿಗೆ ಆಧಾರಗಳಿಲ್ಲ. "ಕಿತ್ತೂರಿನ ಸ್ವಲ್ಪ ಸಂಪತ್ತು ಪೂನಾಕ್ಕೆ ರವಾನೆಯಾದ ಬಗ್ಗೆ ಥ್ಯಾಕರೆಯಲ್ಲಿ ಬಲವಾದ ಆಧಾರ ಇದ್ದಂತೆ ಕಾಣುವದು" (ಪು. ೧೨೩). ಥ್ಯಾಕರೆ ಪರ ಲೇಖಕರ ಊಹೆ.

ಅಮಟೂರ ಬಾಳಪ್ಪನ ಮನೆತನದವರ ಹೆಸರನ್ನು ಕೆಲವರು "ಸೈದನವರ" ಎಂದರೆ, ಹಲವರು "ಸಾಧನವರ" ಎಂದಿರುವರು. ಡಾ. ಶೆಟ್ಟರರು ಇಲ್ಲಿ ಅದನ್ನು 'ಸಿದ್ಧಣ್ಣವರ' ಮಾಡಿಬಿಟ್ಟಿರುವರು. (ಪು. ೧೨೬) ಅಂದರೆ ಇನ್ನು ಮೇಲೆ ಅದರ ಬಗೆಗೆ ಗುದ್ದಾಡಬಾರದು ಎನ್ನುವ ರೀತಿಯಲ್ಲಿ!

" ಯಾವುದನ್ನು ರಾಜ್ಯಕೌಶಲ್ಯದಿಂದ ಉಳಿಸಿಕೊಳ್ಳಬಹುದಾಗಿತ್ತೋ ಅದನ್ನು ಕಿತ್ತೂರಿನ ಕಾರಭಾರಿಗಳು ತಮ್ಮ ಭಾವುಕ ಕ್ರಿಯೆಯಿಂದ ಕಳೆದುಕೊಂಡರು" (ಪು. ೧೨೬). ಇದು ಲೇಖಕರ ಉಪದೇಶ. ಭಂಡಾರಕ್ಕೆ ಮುದ್ರೆ ಹಾಕಿ, ಕೋಟೆಯ ದ್ವಾರವನ್ನು ಮುರಿಯಲು ಎರಡು ಫಿರಂಗಿಗಳೊಡನೆ ಸನ್ನದ್ಧನಾಗಿ ನಿಂತ ಥ್ಯಾಕರೆಯೊಡನೆ ಇನ್ನೆಂಥ ರಾಜ್ಯಕೌಶಲ್ಯ ತೋರಿಸಬೇಕು? ಸ್ಟೀವನ್‌ಸನ್, ಈಲಿಯಟ್‌ರನ್ನು ಸನ್ಮಾನಪೂರ್ವಕವಾಗಿ ಬಿಡುಗಡೆ ಮಾಡಿ

ವರೂ ಕಮಿಷನರ ಚಾಪ್ಲಿನ್ನನು ಆದಷ್ಟು ಬೇಗ ಸಂಸ್ಥಾನ ಕೆಡವಲು ಕರ್ನಲ್ ಡೀಕನ್ನನಿಗೆ ಆಜ್ಞೆ ಕೊಡುವನು. ಇಂಥ ಬಿಳಿಯರ ಮುಂದೆ ಇನ್ನೂ ಅದೆಂಥ ರಾಜ್ಯಕೌಶಲ್ಯ ತೋರಿಸಬೇಕು?

ಥ್ಯಾಕರೆಯನ್ನು ನಾಯಕನನ್ನಾಗಿ ಮಾಡುವ ಭರದಲ್ಲಿ ಲೇಖಕರು ಚೆನ್ನಮ್ಮ ರಾಣಿಯನ್ನು ಖಳನಾಯಕಿಯನ್ನಾಗಿ ಮಾಡಿರುವರು. "ರಾಜತಂತ್ರವಲ್ಲಿ ಅನುಭವವಾಗಲೀ, ಅದರ ಅಭ್ಯಾಸದ ಅನುಕೂಲತೆಯಾಗಲಿ, ಅಂತಃಪುರದ ನಾಲ್ಕು ಗೋಡೆಗಳಲ್ಲಿ ಕಾಲಕಳೆದ ಈ ಮಹಾಮಾತೆಗೆ ದೊರೆತುದರ ಬಗೆಗೆ ನಮಗೆ ಆಧಾರಗಳಿಲ್ಲ" (ಪು. ೧೩೨). ಥ್ಯಾಕರೆಯ ಬಗೆಗೆ ಲೇಖಕರು ಆಧಾರ ಕಲ್ಪಿಸುವರು. ಆದರೆ ಚೆನ್ನಮ್ಮನ ಬಗೆಗೆ ತಮ್ಮ ಕಲ್ಪನೆಗೆ ಕಡಿವಾಣ ಹಾಕುವರು. "ಕದನ ಕೌಶಲ್ಯದಲ್ಲಿ ಅವಳು ನುರಿತವಳಾಗಿದ್ದಳೆನ್ನಲು ಬೇಕಾದ ಆಕರಗಳು ನಮಗೆ ದೊರಕಬೇಕಾಗಿವೆ" (ಪು. ೧೩೨). ಲೇಖಕರ ಹೇಳಿಕೆಗಳು ಒಂದಕ್ಕೊಂದು ಸಂಬಂಧವಿಲ್ಲ. ರಾಜತಂತ್ರದಲ್ಲಿ ಅನುಭವವಿಲ್ಲದವಳೆಂದು ಹೇಳಿದ ಲೇಖಕರು ಮುಂದೆ "ಪೂನಾ ಮುಂಬೈ ಬ್ರಿಟಿಷ್ ಅಧಿಕಾರಿಗಳೊಡನೆ ನೇರ ಸಂಪರ್ಕ ಬೆಳೆಸಿ ಮಾತುಕತೆ ನಡೆಸಲು ಮುಂದೆ ಬಂದಳು" (ಪು. ೧೩೪) ಎಂದು ಹೇಳುವರು.

ಅಕ್ಟೋಬರ ೧೧, ೧೮೨೪, ರ ತರುವಾಯದ ಘಟನೆಗಳು "ಹುಚ್ಚು ಮನಸ್ಸು ... ಹುಂಬತನ"ದವೆಂದು ಲೇಖಕರ ಅಭಿಪ್ರಾಯ. ಲೇಖಕರು ಬಿಳಿಯರಲ್ಲಿ ಅಪಾರ ಹಿರಿಮೆ, ಮತ್ತು ಭರವಸೆ ಕಂಡಿರುವರು! "ಆ ಶತಮಾನದ ಬಿಳಿಯರಲ್ಲಿದ್ದ ಹಿರಿಮೆಯ ಭಾವನೆ ಹಾಗೂ ಭರವಸೆ" (ಪು. ೧೪೧) ಎಂದು ಮುಂತಾಗಿ ಬರೆದಿರುವರು. ದತ್ತಕ ಕಲಮನು ಮುಂದೆ ಮಾಡಿ ದೇಶೀ ಸಂಸ್ಥಾನಗಳನ್ನೆಲ್ಲ ಕಬಳಿಸಿರುವಲ್ಲಿ–ಬಹುಶಃ ಲೇಖಕರು ಬಿಳಿಯರಲ್ಲಿ ಹಿರಿಮೆ, ಭರವಸೆಯನ್ನು ಕಂಡಿರಬಹುದು! ಇದೂ ಒಂದು ಹೊಸ ಇತಿಹಾಸವೇ ಎನ್ನೋಣವೇ?

ಒಟ್ಟಿನಲ್ಲಿ ಚೆನ್ನಮ್ಮನ ಚರಿತ್ರೆಯ ಬಗೆಗೇ ಲೇಖಕರಲ್ಲಿ ಒಮ್ಮನಸ್ಸಿದ್ದಂತಿಲ್ಲ. ಒಮ್ಮೆ ಹೊಗಳುವರು, ಮತ್ತೊಮ್ಮೆ ತೆಗಳುವರು. ಬಹುಶಃ ಹಗಲು ರಾತ್ರಿಗಳ ಕಾಲಚಕ್ರ ಕಾರಣವಿರಬೇಕು! "ಚೆನ್ನಮ್ಮನ ಸಾಹಸ, ದೂರದೃಷ್ಟಿ, ಕಲಿತನದ ಕೆಚ್ಚು (ಹಿಂದೆ ಖಡ್ಗ ಹಿಡಿದುದಕ್ಕೆ ಆಧಾರ ಕೇಳಿದ್ದರು) (ಪು. ೧೩೨) ಮೆಚ್ಚುಗೆಗೆ ಯೋಗ್ಯವಾಗಿದೆ". (ಪು. ೧೪೩) ಮತ್ತೆ ಹಿಂದೇಟು. "ಅವಳ ಕಾರ್ಯ ಸಂಸ್ಥಾನದ ಅಳಿವಿಗೆ ದಾರಿಮಾಡಿಕೊಟ್ಟರೂ ಅನಿವಾರ್ಯ ಕಾರಣಗಳಿಂದ ಒಳಗೂಡಿದ್ದು." (ಪು. ೧೪೩). ಸಂಸ್ಥಾನದ ಅಳಿವಿಗೆ ಕಾರಣರು ಚೆನ್ನಮ್ಮನಲ್ಲ, ಮುಖ್ಯವಾಗಿ–ಲಿಂಗಾಯತ ಸಂಸ್ಥಾನವನ್ನು ಹಾಳುಮಾಡ

ಬೇಕೆಂಬ ಉದ್ದೇಶವಿಟ್ಟುಕೊಂಡ, ಬ್ರಾಹ್ಮಣರಾದ ಶ್ಯಾನುಭೋಗರು, ಶಿರಸ್ತೇದಾರರು, ಜಮಖಂಡಿಯ ಗೋಪಾಲರಾವ್ ಮುಂತಾದವರು. ಇವರ ಕುಹಕ ತನಕ್ಕೆ ಮಲ್ಲಪ್ಪಶೆಟ್ಟಿಯಂಥ ವೀರಶೈವರೂ ಅನುಕೂಲರಾದರು. ಒಡೆದು ಆಳುವ ನೀತಿಯ ಬಿಳಿಯರಿಗೆ ಮುಂದೆ ಮಾರ್ಗ ಸುಗಮವಾಯಿತು. ಜಮಖಂಡಿಯ ಗೋಪಾಲರಾವ್ "ತನ್ನ ೨೫೦ ಅಶ್ವದಳದೊಂದಿಗೆ ತಡ್ಯೋಡ್ ಕ್ಯಾಂಪ್‌ದಲ್ಲಿ ಬೀಡು" ಬಿಟ್ಟಿದ್ದ (ಪು. ೧೫೭)- ಬ್ರಿಟಿಶರಿಗೆ ನೆರವಾಗಲು. "ಕೋಟೆಯಲ್ಲಿ ಸೆರೆಯಾಗಿದ್ದ ಶಿರಸ್ತೇದಾರ ಶ್ರೀನಿವಾಸರಾವ್" ನನ್ನು ಚೆನ್ನಮ್ಮ ಕೊಲ್ಲದೆ ಬಿಡುಗಡೆ ಮಾಡಿದರೂ "ಅವನು ಚಾಪ್ಲೀನ್‌ನನ್ನು ಕಂಡು ಕೋಟೆಯ ಒಳಗಿದ್ದ ಸ್ಥಿತಿಗತಿಯ ಚಿತ್ರ ಕೊಟ್ಟ" (ಪು. ೧೭೦).

ಡಿಶಂಬರ ೨, ೧೮೨೪ ರಲ್ಲಿ ಚೆನ್ನಮ್ಮ, ವೀರಮ್ಮರು ಚಾಪ್ಲಿನ್ನನಿಗೆ ಬರೆದ ಕೊನೆಯ ಪತ್ರದಲ್ಲಿ "ಪುರಾತನ ಕಾಲದಿಂದ ಬಂದ ಸಂಸ್ಥಾನವನ್ನು ಮುಂದು ವರಿಸಿಕೊಳ್ಳುವ ಬಯಕೆಯನ್ನು ನಿಮ್ಮಿಂದ ಈಡೇರಿಸಿಕೊಳ್ಳುವ ಆಶೆ ನಮಗಿತ್ತು... ನಿಮ್ಮ ಗೃಹಸ್ಥರನ್ನು ಮುಕ್ತ ಮಾಡಿದರೆ, ಯುದ್ಧ ನಿಲ್ಲಿಸುವು ದಾಗಿ ನೀವು ಹೇಳಿದ್ದಿರಿ. ಈ ಭರವಸೆಯಿಂದ ಅವರನ್ನು ಬಿಡುಗಡೆ ಮಾಡಿ ದೆವು... ನೀವು ಮೊದಲು ದಾಳಿ ನಡೆಸುವವರೆಗೂ ನಾವು ಮುಂದೆ ಹೆಜ್ಜೆ ಇಡಲಿಲ್ಲ... ಹತ್ತು ಗಂಟೆಯೊಳಗಾಗಿ ಶರಣಾಗದಿದ್ದರೆ ದಾಳಿ ನಡೆಸುವುದಾಗಿ ತಿಳಿಸಿರುವಿರಿ... ಥ್ಯಾಕರೆಯ ಕಾರ್ಯದ ಬಗ್ಗೆ ವಿಚಾರ ನಡೆಸಿ, ನಮ್ಮ ಸಂಸ್ಥಾನ ಮುಂದುವರಿಸುವಿರೆಂದು ನಾವು ತಿಳಿದು ತೃಪ್ತರಾಗಿದ್ದೆವು.... ನೀವು ನಮಗಿಂತ ದೊಡ್ಡವರು.... ಯುದ್ಧ ನಮಗೊಗ್ಗದ್ದೆಂದು ನಾವಾಗಲೇ ಹೇಳಿರುವೆವು. ... ನಿಮ್ಮ ಖುಷಿಯಂತೆ ಅಗಲಿ"—(ಪು. ೧೭೨). ಈಗ ಲೇಖಕರು ಹೇಳಬೇಕು ಯಾರಲ್ಲಿ ಹಿರಿಮೆ ಇದೆ—ಯಾರಲ್ಲಿ ಭರವಸೆ ಇಡುವರೆಂಬುದನ್ನು.

ಯುದ್ಧದ ಅವಸರದಲ್ಲಿ ತಪ್ಪಿಸಿಕೊಂಡವರಲ್ಲಿ ಹೆಚ್ಚಾಗಿ ಬ್ರಾಹ್ಮಣರು. "ದಿನಾಂಕ ೪-೫ ರಂದು ತಪ್ಪಿಸಿಕೊಂಡವರಲ್ಲಿ ಅವರಾದಿ ರುದ್ರಪ್ಪ, ಕಿಂಕೇರಿ ವೆಂಕಣ್ಣನಲ್ಲದೇ ಗೋವಿಂದಯ್ಯ, ನಾರಾಯಣ, ಯಶವಂತರೆಂಬ ಗುಮಾಸ್ತರು ಮುಖ್ಯ" (ಪು. ೧೮೭). ಚೆನ್ನಮ್ಮನಿಂದಲೇ ಸಂಸ್ಥೆ ಹಾಳಾಯಿತು ಎಂದು ಹಿಂದೆ ಹೇಳಿದ ಲೇಖಕರೇ "ಶಾಂತಿ ಮಾರ್ಗದಿಂದ ಸಂಸ್ಥಾನವನ್ನು ಉಳಿಸಿಕೊಳ್ಳಲು ಸತತವೂ ಪ್ರಯತ್ನಿಸಿದ ಚೆನ್ನಮ್ಮನ ಘನ ವ್ಯಕ್ತಿತ್ವಕ್ಕೆ" (ಪು. ೧೮೪)—ಎಂದು ಬಹುಶಃ ಕಿತ್ತೂರಿನ ತರುಣ ಸಂಘದವರ ಮುಖದ ಮೇಲೆ ಲೇಖಕರು ಕೈ ಎಳೆಯುವ ಪ್ರಯತ್ನಮಾಡಿದಂತಿವೆ! ಇನ್ನೂ ಮುಂದೆ ಹೋಗಿ, ಚೆನ್ನಮ್ಮ, ಜಾನಕಿಬಾಯಿ, ವೀರಮ್ಮ "ಈ ತ್ರಿಮೂರ್ತಿಗಳ ಜೀವನದ ಒಂದೊಂದು ಪದರೂ,

ಮುಂದೆ ಬಂದ ರಾಷ್ಟ್ರೀಯ ಹೋರಾಟಗಾರರ ಮನಃ ಪರದೆಯ ಮೇಲೆ ಅಚ್ಚಳಿಯದೆ ನಿಂತು, ಆಶ್ಚರ್ಯಕರ ಸ್ಫೂರ್ತಿಯ ಸೆಲೆಯಿತ್ತು" (ಪು. ೧೮೭) ಎಂದು ಭಾಷಣ ಮುಕ್ತಾಯ ಮಾಡುವಲ್ಲಿ ಚಪ್ಪಾಳೆ ಪಡೆಯುವ ಆಶೆ ಎದ್ದು ಕಾಣುತ್ತಿದೆ!

ಆರನೆಯ ಲೇಖನ ಸೋಮಶೇಖರ ಇಮ್ರಾಪೂರ–ಅವರ "ಕಿತ್ತೂರನ್ನು ಕುರಿತು ಲಾವಣಿಗಳು ಹಾಗೂ ಇತರ ಸಾಹಿತ್ಯ." ಸುಮಾರು ಹದಿನೆಂಟು ಪುಟಗಳಷ್ಟಿರುವದು. ಇದರಲ್ಲಿ ಲೇಖನದ ವಿಷಯಕ್ಕೆ ಸಂಬಂಧಿಸಿರುವದು ಕೇವಲ ಅರ್ಧದಷ್ಟು ಅಂದರೆ ಸುಮಾರು ಒಂಬತ್ತು ಪುಟ. ಉಳಿದುದೆಲ್ಲ 'ದೇಶಾವರಿ' ರೂಪದ ಭಾಷಣದಂತಿರುವದು. ಕಿತ್ತೂರ ನಾಡಿಗೆ ಸಂಬಂಧಿಸಿದ, ಚೆನ್ನಮ್ಮ, ರುದ್ರಮ್ಮ, ವೀರಮ್ಮ ಮುಂತಾದ ಕಿತ್ತೂರು ರಾಣಿಯರಿಗೆ ಸಂಬಂಧಿಸಿದ ಮತ್ತು ಕಿತ್ತೂರು ಸ್ವಾತಂತ್ರ್ಯ ಸಮರದಲ್ಲಿ ಹೋರಾಡಿ ಮಡಿದ ವೀರರ ಜೀವನವನ್ನು ಬಿಂಬಿಸುವಂಥ ಲಾವಣಿ ಹಾಗೂ ಇತರ ಸಾಹಿತ್ಯದ ನೆರವಿನೊಂದಿಗೆ ಮೊದಲಿನಿಂದ ಕೊನೆಯ ಪುಟದವರೆಗೆ ವಿಷಯವನ್ನು ವಿಶ್ಲೇಷಿಸಬೇಕಿತ್ತು.

"ಕಿತ್ತೂರಿನ ಸಂಸ್ಥಾನದಲ್ಲಾದ ಥ್ಯಾಕರೆಯ ದುಡುಕುತನಗಳೇ ಅವನ ಇತಿಶ್ರೀಗೆ ಕಾರಣವಾದದ್ದು ನಿಜ" (ಪು. ೧೯೪). ಸಂಸ್ಥಾನದ ಇತಿಹಾಸದ ಬಗೆಗೆ ತಮ್ಮ ಖಚಿತ ಅಭಿಪ್ರಾಯ. ಇದು ಪ್ರೊ. ಶೆಟ್ಟರರ ಅಭಿಪ್ರಾಯಕ್ಕೆ ತೀರ ವಿರುದ್ಧ. ಜನಪದದ ದೃಷ್ಟಿಯಿಂದ ರಾಯಣ್ಣನ ಬಂಧನಕ್ಕೆ ಆತನ ಸೋದರ ಮಾವ ಲಕ್ಕಣ್ಣನೇ ಕಾರಣ ಎಂಬಂಶ ತೋರಿಸುತ್ತಾರೆ. ಪ್ರೊ. ಗ. ಸ. ಹಾಲಪ್ಪ ಅವರ "ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿ"ಯನ್ನು ಪ್ರಶಂಸಿಸಿದ್ದಾರೆ.

"ಕಿತ್ತೂರಿನ ಬಗ್ಗೆ ಜನಪದದಲ್ಲಿದ್ದ ವಸ್ತುನಿಷ್ಠ ಸಂಗತಿಗಳು ಶಿಷ್ಟ ಸಾಹಿತ್ಯದಲ್ಲಿ ಅಷ್ಟು ಶಕ್ತಿಯುತವಾಗಿ ಪ್ರಕಟವಾಗಿಲ್ಲ" ಎಂಬುದು ಲೇಖಕರ ಅಭಿಪ್ರಾಯ. (ಪು. ೧೯೬). ಅಂದರೆ ಜನಪದದಲ್ಲಿ ಸರಿಯಾದ ಇತಿಹಾಸವಿಲ್ಲವೊ? ಅಥವಾ ಶಕ್ತಿಯುತವಾದ ಸಾಹಿತ್ಯ, ಶೈಲಿಯಿಲ್ಲವೊ?–ಕೇವಲ ಪ್ರಾಸಬದ್ದ ಶಬ್ದಗಳುಳ್ಳ ವಾಕ್ಯಗಳನ್ನು ಹೆಣೆಯುವಲ್ಲಿ ಲೇಖಕರು ಪ್ರಯಾಸಪಟ್ಟಿರುವರು.

"ಜನಪದದಲ್ಲಿ ಬಂದುದೆಲ್ಲವೂ ಸತ್ಯಪೂರ್ಣ"ವಲ್ಲ. "ಆದರಂತೆ ಈ ವರೆಗೆ ದಾಖಲೆಯಾಗಿ ಬೆಳೆದು ಬಂದ ಐತಿಹಾಸವೂ (ಇತಿಹಾಸ–ಶಬ್ದ ಬೇಕು) ಸತ್ಯಪೂರ್ಣವೆಂದು ಭಾವಿಸಬೇಕಾಗಿಲ್ಲ" (ಪು. ೨೦೫)–ಎಂದು ಏನೋ ಸಂಶೋಧನೆ ಮಾಡಿರುವಂತೆ ತಮ್ಮ ವಿಚಾರ ಹೊರಹಾಕಿರುವರು.

ಕೊನೆಯ ಹನ್ನೆರಡನೆಯ ಲೇಖನ ಸರೋಜಿನಿ ಶಿಂತ್ರಿ ಅವರ "ವಿಶ್ವದ ಆಡಳಿತ ಗಾರ್ತಿಯರಲ್ಲಿ ಕಿತ್ತೂರ ರಾಣಿ ಚೆನ್ನಮ್ಮನ ಸ್ಥಾನ." ಈ ಮಾಲೆಯಲ್ಲಿಯ ಅತಿ ಚಿಕ್ಕ ಲೇಖನ. ಕೇವಲ ಹತ್ತು ಪುಟಗಳಷ್ಟಿರುವದು. ಇದರಲ್ಲಿ ಅರ್ಧದಷ್ಟು ಅಂದರೆ ಐದು ಪುಟಗಳಲ್ಲಿ—ಹೆಣ್ಣೂ ಮಾನವಳು, ಅವಳಿಗೂ ಪುರುಷರಿಗೆ ಸರಿ ಸಮಾನ ಹಕ್ಕುಗಳಿವೆ ಎಂಬ ತೀರ ಸಾಮಾನ್ಯ ವಿಷಯವನ್ನೇ ಚರ್ವಿತಚರ್ವಣ ಗೊಳಿಸಿದ್ದಾರೆ. ಲೇಖಕಿಯರಿಗೆ ಆ ವಿಷಯಗಳಲ್ಲಿ ಇನ್ನೂ ಸಂಶಯವಿದ್ದಂತೆ ಕಾಣುವದು!

"ಒಂಬತ್ತನೆಯ ಶತಮಾನದಲ್ಲಿ ಜರುಗಿದ Synodದಲ್ಲಿ ಮಹಿಳೆ ಮಾನವಳು ಹೌದೋ ಅಲ್ಲವೋ ಎಂಬುದನ್ನು ಚರ್ಚಿಸಲಾಯಿತಂತೆ!" (ಪು. ೨೦೭). ಈ ಅಂತೆ-ಕಂತೆಯನ್ನು ಇಪ್ಪತ್ತನೆಯ ಶತಮಾನದಲ್ಲಿ ಒಂದು ಅಚ್ಚರಿ ಎನ್ನುವಂತೆ ಲೇಖಕಿಯರು ಸಂಶೋಧಿಸಿದ್ದಾರೆ.

"ಇಸ್ರಾಯಿಲದ ಗೋಲ್ಡ ಮೇಯರ್, ಶ್ರೀಮತಿ ಇಂದಿರಾ ಗಾಂಧಿ ಮತ್ತು ಶ್ರೀಮತಿ ಬಂಡಾರನಾಯಕೆ ಇವರು ಪ್ರತಿಭೆಯ ಜೊತೆಗೆ ವಂಶದ ಖ್ಯಾತಿಯ ಲಾಭವನ್ನೂ ಪಡೆದಿದ್ದಾರೆ" (ಪು. ೨೦೮). ಇದು ಭಾರತದಲ್ಲಿ ತುರ್ತುಪರಿಸ್ಥಿತಿ ಯಿದ್ದಾಗ ಬರೆದ ಲೇಖನ!

"ಅಸಾಧಾರಣ ಮಹಿಳೆ ಪುರುಷನಿಗೆ ಒಂದು ಸಮಸ್ಯೆ." (ಪು. ೨೧೦) Correct. ಏಕೆಂದರೆ Too much is too bad! "ಆಕೆಯನ್ನು ದೇವತೆ ಯೆಂದು ಗದ್ದಿಗೆಯ ಮೇಲೆ ಕೂಡ್ರಿಸಿದ್ದಾನೆ; ಅಥವಾ ದೆವ್ವ ಅಥವಾ ಪಿಶಾಚಿ ಯೆಂದು ಆಕೆಯನ್ನು ಸುಟ್ಟುಬಿಟ್ಟಿದ್ದಾನೆ" (ಪು. ೨೧೦). ವಿಚಾರಿಸುವಂಥ ಮಾತು!

ಇಷ್ಟೆಲ್ಲ 'ಜಾಪಾಳ' ಆದನಂತರ ಇಂಗ್ಲಂಡಿನ ಮೊದಲನೆಯ ರಾಣಿ ಎಲಿಜಬೆಥ್, ರಶಿಯಾದ ಕ್ಯಾಥರೀನ್ ದಿ ಗ್ರೇಟ್ ಮತ್ತು ಮಹಾರಾಣಿ ವಿಕ್ಟೋರಿಯಾರ ಬಗೆಗೆ ಸಂಕ್ಷಿಪ್ತ ಚಿತ್ರಣಗಳಿವೆ. ಇಷ್ಟೆಲ್ಲ ಗುಡ್ಡ ಸುತ್ತಿದ ಮೇಲೆ ನೇರ ವಿಷಯಕ್ಕೆ ಬಂದುದು ಕೊನೆಯಲ್ಲಿ—ಅದೂ ಕೇವಲ ಮೂರೂವರೆ ಪುಟಗಳಲ್ಲಿ! ಅಂತರರಾಷ್ಟ್ರೀಯ ಮಹಿಳಾ ವರ್ಷವೆಂದು—ಇಂಥ ವಿಷಯವನ್ನು ("ವಿಶ್ವದ ಆಡಳಿತಗಾರ್ತಿಯರಲ್ಲಿ....") ಆಯ್ಕೆಮಾಡಿರಲು ಸಾಕು. ಶಿವಲಿಂಗ ಸರ್ಜ ದೇಸಾಯಿಯವರು ಸಪ್ಟಂಬರ ೧೧ ಅಥವಾ ೧೨, ೧೮೨೪ರಂದು ಶಿವಾಧೀನರಾದರು. "ಡಿಸೆಂಬರ ೫ ರಂದು ಕಿತ್ತೂರ ಕೋಟೆ ಬಿದ್ದಿತು. ಅದೇ ತಿಂಗಳು ೧೨ ರಂದು ಸಂಸ್ಥಾನ ಬ್ರಿಟಿಶರ ಸ್ವಾಧೀನವಾಯಿತು." (ಪು. ೧೮೭).

ಅಂದರೆ ಮಧ್ಯಂತರ ಅವಧಿ ಸುಮಾರು ಕೇವಲ ಮೂರು ತಿಂಗಳು. ಚೆನ್ನಮ್ಮನ ಆಡಳಿತ ನಡೆದದ್ದು ಕೇವಲ ಈ ಮೂರು ತಿಂಗಳು ಎಂದಂತಾಯಿತು. ಒಂದು ವೇಳೆ ಶಿವಲಿಂಗಸರ್ಜ ದೇಸಾಯಿಯು—ಚಿಕ್ಕವನಿದ್ದ, ರೋಗಿಯಾಗಿದ್ದ ಅಥವಾ ಮಲತಾಯಿಯ ಮಾತು ಕೇಳುತ್ತಿದ್ದ ಎಂದು ಇಟ್ಟುಕೊಂಡರೆ, (೧೮೧೬–೧೮೨೪) ಎಂಟು ವರ್ಷ ಚೆನ್ನಮ್ಮನೇ ಆಡಳಿತ ನಡೆಸಿದಳು ಎಂದು ಇಟ್ಟುಕೊಳ್ಳಬಹುದೇ ? ಅಥವಾ ಇನ್ನೂ ಅದಕ್ಕಿಂತ ಮೊದಲು ಪತಿಯ ಹಿಂದೆ ಸ್ವತಃ ತಾನೇ ನಿಂತು (೧೮೦೨–೧೮೧೬) ಆಡಳಿತ ನಡೆಸಿದಳು ಎಂದು ಊಹಿಸಬೇಕೇ ? ಏಕೆಂದರೆ ಕೆಲವರ್ಷ ಮರಾಠರ ದಿಗ್ಬಂಧನದಲ್ಲಿ ಮತ್ತು ಕೆಲ ವರ್ಷ ಟಿಪ್ಪುವಿನ ಸೆರೆಮನೆಯಲ್ಲಿ ಮಲ್ಲಸರ್ಜ ಇದ್ದರು. ಹೇಗಿದ್ದರೂ ಕೇವಲ ಅಭಿಮಾನದ ಗಾಳಿಯಲ್ಲಿ ಅವಳನ್ನು ಆಡಳಿತದ ದೃಷ್ಟಿಯಿಂದ ಜಾಗತಿಕ ಮಟ್ಟಕ್ಕೆ ಏರಿಸುವದು ಉಚಿತವೆನಿಸಲಾರದು.

"ಅನೇಕ ವೀರರು ಆಕೆಯ ವೀರಜೀವನದಿಂದ ಪ್ರೇರಿತರಾಗಿ ಪುಲಕಿತರಾಗಿ ಒಂದಿಲ್ಲೊಂದು ರೀತಿಯಲ್ಲಿ ಇತಿಹಾಸವನ್ನೇ ನಿರ್ಮಿಸಿದರು... ಆಕೆಯಂತೆ ಶೌರ್ಯಪರಂಪರೆಯನ್ನು ಯಾರು ಕಟ್ಟಿದ್ದಾರೆ? ವಿಶ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಅಗ್ರಗಣ್ಯರಲ್ಲಿ ಈಕೆಗೆ ಅಗ್ರಸ್ಥಾನ ದೊರೆಯಬೇಕು." (ಪು. ೨೧೬). ಇದಿಷ್ಟು ಮಾತ್ರ ಸತ್ಯ ಸಂಗತಿ.

"ರಾಣಿ ಚೆನ್ನಮ್ಮ....ಸ್ವತಃ ಖಡ್ಗ... ಹಿಡಿದು—ಜೀವನವನ್ನೇ ಪಣಕ್ಕೆ ಹಚ್ಚಿ ಹೋರಾಡಬೇಕಾಯಿತು." (ಪು. ೨೧೫–೬). ಆದರೆ ಇದಕ್ಕೆ ಪ್ರೊ. ಶೆಟ್ಟರರ ಇತಿಹಾಸ ಒಪ್ಪಬೇಕಲ್ಲ ?

ಒಟ್ಟಿನಲ್ಲಿ "ಕಿತ್ತೂರು ನಾಡಿನ ಇತಿಹಾಸ"ದ ಬಗೆಗೆ- ಕೆಲ ಸಾಮಗ್ರಿ ಇಲ್ಲಿ ಸಂಕಲನವಾಗಿದೆ. ಆದರೆ ಅದರ ಬಗೆಗೆ ಹೊಸ ಬೆಳಕು ಬೀರುವ ಬದಲು ಪ್ರೊ. ಶೆಟ್ಟರರ ಕೈಯಲ್ಲಿ ಹೊಸ ಮುಸುಕು ಬಿದ್ದಿದೆ! "ಸಂಸ್ಕೃತಿ"ಯ ಬಗೆಗೆ ಇಲ್ಲಿ ಅವಕಾಶವೇ ಸಿಕ್ಕಿಲ್ಲವೆಂದು ಹೇಳಬಹುದು.

——

ಈ ಸಂಚಿಕೆಯ ಲೇಖಕರು

೧. ಶ್ರೀ ಎಸ್. ಎ. ಅವರಾದಿ
ಮಾನವಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಡಾ. ಎನ್. ಎ. ಪಾಟೀಲ
ಲೆಕ್ಚರರ್, ರಾಜ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩. ಶ್ರೀ ಹಾ. ವೆಂ. ನಾಗೇಶ
ರೀಡರ್ ಮತ್ತು ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ,
ಜೆ. ಎಸ್. ಎಸ್. ಬನಶಂಕರಿ ಆರ್ಟ್ಸ ಕಾಲೇಜ,
ವಿದ್ಯಾಗಿರಿ, ಧಾರವಾಡ

೪. ಡಾ. ಕೆ. ಜಿ. ಗುರುಮೂರ್ತಿ
ರೀಡರ್, ಮಾನವಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಡಾ. ಎ. ಎಮ್. ರಾಜಶೇಖರಯ್ಯ
ಪ್ರೊಫೆಸರ ಮತ್ತು ಮುಖ್ಯಸ್ಥರು,
ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬. ಶ್ರೀ ವ್ಹಿ. ಎಸ್. ಪಾಟೀಲ
ಲೆಕ್ಚರರ್, ರಾಜ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿದ್ಯಾಲಯ, ಧಾರವಾಡ

೭. ಶ್ರೀ ಎ. ಎಸ್. ಧರಣೇಂದ್ರಯ್ಯ
ಲೆಕ್ಚರರ್, ಮನೋವಿಜ್ಞಾನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮತ್ತು
ಕುಂ. ಇಂದಿರಾ ಆರ್. ಪಾಟೀಲ
(ಹಳೆಯ ವಿದ್ಯಾರ್ಥಿನಿ)

೮. ಶ್ರೀ ಎಮ್. ಸಿ. ಕೊಡ್ಲಿ
ಲೆಕ್ಚರರ್, ಅರ್ಥಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೯. ಡಾ. ಅ. ಸುಂದರ
ರೀಡರ್, ಪ್ರಾಚೀನಭಾರತ ಇತಿಹಾಸ ಮತ್ತು ಶಾಸನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೦. ಶ್ರೀ ಕೆ. ರಘುಪತಿ ಭಟ್ಟ
ಲೆಕ್ಚರರ್, ಕನ್ನಡ ವಿಭಾಗ,
ಜ್ಯೂನಿಯರ್ ಕಾಲೇಜ, ಮಣಿಪಾಲ

೧೧. ಶ್ರೀ ಶ್ರೀನಿವಾಸ ಪಾಡಿಗಾರು
ಪ್ರಾಚೀನಭಾರತ ಇತಿಹಾಸ ಮತ್ತು ಶಾಸನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨. ಶ್ರೀ ವೀರಣ್ಣ ಎಸ್. ದಂಡೆ
ಸಹಾಯಕ ಸಂಶೋಧಕ, ಕನ್ನಡ ವಿಭಾಗ,
ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ

೧೩. ಶ್ರೀ ಸಿ. ಆರ್. ಬಡಾ
ಲೆಕ್ಚರರ್, ವ್ಹಿ. ಜಿ. ಮಹಿಳಾ ಕಾಲೇಜು,
ಕಲಬುರ್ಗಿ

೧೪. ಶ್ರೀ ಟಿ. ಆರ್. ಚಂದ್ರಶೇಖರ
ಲೆಕ್ಚರರ್, ಅರ್ಥಶಾಸ್ತ್ರ ವಿಭಾಗ,
ವಿಜಯನಗರ ಕಾಲೇಜು, ಹೊಸಪೇಟೆ

೧೫. ಶ್ರೀ ಎಸ್. ಎಸ್. ಪಾಟೀಲ
ರೀಡರ್ ಮತ್ತು ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ,
ಎಸ್. ಎಸ್. ಮಾರಗೋಳ ಕಾಲೇಜು, ಶಹಾಬಾದ

ಮಾನವಿಕ ಭಾರತಿ

ಪ್ರಥಮ ಸಂಚಿಕೆ : ಜನವರಿ
ದ್ವಿತೀಯ ಸಂಚಿಕೆ : ಜುಲೈ

ವಾರ್ಷಿಕ ಚಂದಾ : ರೂ. ೬-೦೦ (ಅಂಚೆ ವೆಚ್ಚ ಸಹಿತ)
ಬಿಡಿ ಪ್ರತಿಯ ಬೆಲೆ : ರೂ. ೩-೫೦ (,, ,, ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ ದರ ರೂ. ೪-೦೦

ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಫಾಯನಾನ್ಸ್ ಆಫೀಸರ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೫೮೦೦೦೩

ಇವರಿಗೆ ಕಳುಹಿಸಬೇಕು.